5. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯ ಮುಂದಿರುವ ರಾಜ್ಯಪಾಲರ ಭಾಷಣದ ಪ್ರಸ್ತಾಪದ ವಿಷಯಗಳನ್ನು ನೋಡಿದಾಗ, ಹಿಂದಿನ ಹಾಗೂ ಇವತ್ತಿನ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ವ್ಯತ್ಯಾಸವಿಲ್ಲವೆಂದು ನಾವು ಹೇಳಬಹುದು. ಸರ್ಕಾರ ಗೊತ್ತುಗುರಿ ಏನು ಇರಬೇಕು, ಸರ್ಕಾರದ ನೀತಿ, ಇವತ್ತು ರಾಜ್ಯದಲ್ಲಿರುವ ಪ್ರಚಲಿತ ಸಮಸ್ಯೆಗಳು ಹಾಗೂ ರಾಜ್ಯ ಅನುಭವಿಸುತ್ತಿರುವ ಕಷ್ಟಗಳು, ಜನರು ಅನುಭವಿಸುತ್ತಿರುವ ಕಷ್ಟಗಳು, ಈ ಬಗ್ಗೆ ಸ್ಪಷ್ಟವಾದ ಪರಿಹಾರವನ್ನು ರಾಜ್ಯ ಸರ್ಕಾರ ಹೇಳಬೇಕಾಗಿತ್ತು. ಆದರೆ ಅದ್ಯಾವುದಕ್ಕೂ ರಾಜ್ಯಪಾಲರ ಭಾಷಣದಲ್ಲಿ ಪರಿಹಾರ ಹಾಗೂ ಉತ್ತರವಿಲ್ಲವೆಂದು ಹೇಳಬೇಕಾಗುತ್ತದೆ. ಇಲ್ಲಿ ಪ್ರಮುಖವಾಗಿ ಪ್ರಸ್ತಾಪ ಮಾಡುವುದೇನೆಂದರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಅವರ ಹಲವಾರು ಹೇಳಿಕೆಗಳು, ಘೋಷಣೆಗಳು, ಅವೆಲ್ಲಾ ಕೇವಲ ಹೇಳಿಕೆ ಹಾಗೂ ಘೋಷಣೆಯಾಗಿ ಉಳಿದಿರುವುದನ್ನು ಇವತ್ತು ನಾವು ನೋಡುತ್ತಿದ್ದೇವೆ. ಇವತ್ತು ಅಧಿಕಾರಿಗಳ ಬಗ್ಗೆ ಸಾಕಷ್ಟು ಸಾರಿ ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ, ಸಾಕಷ್ಟು ಸಾರಿ ಅಧಿಕಾರಿಗಳ ಅದಕ್ಷತೆ ಬಗ್ಗೆ ಅಧಿಕಾರಿಗಳ ಭ್ರಷ್ಟತೆ ಬಗ್ಗೆ ಅಧಿಕಾರಿಗಳ ಮಂದಗತಿಯ ಕೆಲಸದ ಬಗ್ಗೆ ಸಾಕಷ್ಟು ಸಾರಿ ಎಚ್ಚರಿಕೆಯನ್ನು ಕೊಟ್ಟರು ಸಾಕಷ್ಟು ಹೆದರಿಕೆಯನ್ನು ಹಾಕಿದ್ದಾರೆ. ಆದರೆ ಅದರ ಪರಿಣಾಮ ಫಲವೃತಿ ಏನಾಗಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಇವತ್ತು ಯಾವ ಐಎಎಸ್ ಕೆಎಎಸ್ ಅಧಿಕಾರಿಗಳು, ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಸೂಚನೆಯನ್ನು ಕೊಡುತ್ತಿದ್ದಾರೆ, ಅಧಿಕಾರಿಗಳು ಯಾವ ರೀತಿ ಅವುಗಳನ್ನು ಅನುಸರಿಸುತ್ತಿದ್ದಾರೆ, ಅವು ಅನುಷ್ಠಾನವಾಗುತ್ತಿವೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಇವತ್ತು ವಿಚಾರ ಮಾಡಬೇಕಾಗಿದೆ. ಮಂತ್ರಿಗಳ ಮಾತನ್ನು ಅಧಿಕಾರಿಗಳು ಇವತ್ತು ಕೇಳುತ್ತಿದ್ದಾರೋ ಇಲ್ಲವೋ ಎನ್ನುವ ಬಗ್ಗೆಯೂ ಸಹ ವಿಚಾರ ಮಾಡಬೇಕಾಗಿದೆ. ಯಾವ ರೀತಿ ಇವತ್ತು ಮಂತ್ರಿಗಳೇ ಅಧಿಕಾರಿಗಳಿಗೆ ಡೊಂಕು ಸಲಾಮು ಮಾಡುವ ಪರಿಸ್ಥಿತಿಯನ್ನು ಇವತ್ತು ನೋಡುತ್ತಿದ್ದೇವೆ ನಿಮಗೆ ಒಂದು ಉದಾಹರಣೆ ಕೊಡುವುದಾದರೆ, ಮೊನ್ನೆ ಮಾನ್ಯ ಬಿ.ಎಸ್. ಪಾಟೀಲರು, ಎಪಿಎಂಸಿ ಸಚಿವರು, ಅವರ ಅಳಲನ್ನು ವಿಧಾನಪರಿಷತ್ತಿನ ಸದನದಲ್ಲೇ ತೋಡಿಕೊಂಡರು. ಅದರಲ್ಲಿ ಪ್ರಮುಖವಾಗಿ ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮಾನ್ಯ ಎಪಿಎಂಸಿ ಸಚಿವರು ಆ ರೈತರ ಸಂತೆಯೋಜನೆ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಸಬೇಕೆಂದು ಉದ್ದೇಶಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಆ ಕಾರ್ಯಕ್ರಮಕ್ಕೆ ಬಂದಿದ್ದರು, ದೊಡ್ಡಪ್ರಮಾಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಜನರ ಮುಂದೆ, ರೈತರ ಮುಂದೆ ಆ ರೈತರ ಸಂತೆ ಉದ್ಘಾಟನೆಯಾಯಿತು. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ? ಯಾವ ಉದ್ದೇಶವನ್ನಿಟ್ಟುಕೊಂಡು ಆ ರೈತ ಸಂತೆಯನ್ನು ಮಾಡಿದೆವು ಆದರ ಫಲಶೃತಿ ರೈತರಿಗೆ ಇವತ್ತು ಮುಟ್ಟುತ್ತಿಲ್ಲ, ಆದರ ಅನುಕೂಲ ರೈತರಿಗೆ ಸಿಗುತ್ತಿಲ್ಲ, ಆ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ, ಅದರಲ್ಲಿ ಏನು ಕೊರತೆ ಇದೆ ಎನ್ನುವುದನ್ನು ವಿಚಾರ ಮಾಡುವುದಕ್ಕೆ ನಮ್ಮ ಎಪಿಎಂಸಿ ಸಚಿವರು ಹುಬ್ಬಳ್ಳಿ-ಧಾರವಾಡಕ್ಕೆ ಬಂದಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ ಹೇಳಿ ಕಳುಹಿಸಿದರು ಬರಲಿಲ್ಲ ಅದರ ಬಗ್ಗೆ ಚರ್ಚೆ ಮಾಡಲಿಲ್ಲ, ಅವರೆಲ್ಲಿದ್ದಾರೆಂಬುದು ನನಗೆ ಗೊತ್ತಾಗಲಿಲ್ಲ ಎನ್ನುವ ಮಾತನ್ನು ಹೇಳುವುದಾದರೆ, ಇವತ್ತು ಮಂತ್ರಿಗಳ ಕೈಗೆ ಅಧಿಕಾರಿಗಳು ಸಿಗುತ್ತಿಲ್ಲವೆಂದಾದರೆ. ಇವತ್ತು ನಾವು ಯಾವ ವ್ಯವಸ್ಥೆಗೆ ಹೋಗುತ್ತಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕು. ಪತ್ರಿಕೆಯಲ್ಲಿ ಈ

ವಿಷಯದ ಬಗ್ಗೆ ಪ್ರಕಟವಾಗಿದೆ ಅದು ಈ ರೀತಿ ಇದೆ "ಜಿಲ್ಲಾಧಿಕಾರಿಗಳ ಅಸಹಕಾರದ ಬಗ್ಗೆ ಸಚಿವರ ಅಳಲು ಧಾರವಾಡ ಜಿಲ್ಲಾಧಿಕಾರಿಗಳು ಸ್ಪಂದಿಸುತ್ತಿಲ್ಲ ಸರ್ಕಾರದ ಯೋಜನೆಗಳ ಜಾರಿಯಲ್ಲಿ ಸಹಕಾರ ಮಾಡುತ್ತಿಲ್ಲ, ಹೇಳಿ ಕಳುಹಿಸಿದರು ಬರುತ್ತಿಲ್ಲ, ಹೀಗೆಂದು ತಮ್ಮ ಅಸಹಾಯಕತೆಯನ್ನು ವಿಧಾನ ಪರಿಷತ್ತಿನಲ್ಲಿ ಕೃಷಿ ಮಾರುಕಟ್ಟೆ ಸಚಿವರ ಬಿ.ಎಸ್.ಪಾಟೀಲ್ ಸಾಸನೂರುರವರು ಹೇಳಿದರು" ಎನ್ನುವಂಥ ಮಾತನ್ನು ನಾವು ಕೇಳುತ್ತಿದ್ದೇವೆ. ಇವೊತ್ತು ಮಂತ್ರಿಗಳ ಪರಿಹಾರ ಈ ರೀತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ ಸದನದಲ್ಲಿ ಕ್ರೀಡೆಯ ಬಗ್ಗೆ ಬಂದಂಥ ಪ್ರಶ್ನೆಗೆ ಉತ್ತರವನ್ನು ಹೇಳುವಂತ ಸಂದರ್ಭದಲ್ಲಿ, ಇಲ್ಲ ಇಂತಹ ಒಂದು ಕ್ರೀಡಾ ಅಭಿವೃದ್ಧಿಯ ಸಲುವಾಗಿ, ಅಥವಾ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಕೊಡುವಾಗ, ಅಥವಾ ಹೆಚ್ಚಿನ ಆ ಜಿಲ್ಲೆಯಲ್ಲಿ ಅಭಿವೃದ್ಧಿಯನ್ನು ಮಾಡುವ ಬಗ್ಗೆ ಅಲ್ಲಿ ಜಿಲ್ಲಾಧಿಕಾರಿಗಳು ಸಹಕಾರ ಕೊಡುತ್ತಿಲ್ಲವೆನ್ನುವ ಮಾತನ್ನು ಕೇಳಿದರು. ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಚಿವರ ಗಮನಕ್ಕೆ ಈ ರೀತಿ ಬಂದಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳೇ ಸರಿಯಾಗಿ ನಡೆದುಕೊಳ್ಳುತ್ತಿಲ್ಲವೆಂದಾಗ ಏನು ಮಾಡಬೇಕು? ಏಕೆಂದರೆ, ಇವತ್ತು ಐಎಎಸ್ ಅಧಿಕಾರಿಗಳು ಜಿಲ್ಲಾಧಿಕಾರಿಗಳಾಗಿರುತ್ತಾರೆ, ಇವತ್ತು ಇಡೀ ಜಿಲ್ಲೆಯನ್ನು ನಿಯಂತ್ರಣ ಮಾಡುವಂಥವರು ಇಡೀ ಜಿಲ್ಲೆಗೆ ಅಧಿಪತಿಗಳು ಅವರು ಇವತ್ತು ಅವರೇ ಸರ್ಕಾರದ ನಡವಳಿಗಳನ್ನು, ನೀತಿಗಳನ್ನು ಜಾರಿ ಮಾಡುವುದಿಲ್ಲವೆಂದಾದರೆ, ಇನ್ನು ಜನಪ್ರತಿನಿಧಿಗಳಾದ ಶಾಸಕರ ಪರಿಸ್ಥಿತಿ ಏನಾಗಿರಬಹುದು, ಜನಸಾಮಾನ್ಯರ ಪರಿಸ್ಥಿತಿ ಏನಾಗಿರಬಹುದು, ಇದನ್ನು ಇವತ್ತು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು, ನನಗೆ ತಿಳಿದಂತೆ ಮೂರು ನಾಲ್ಕು ಭಾರಿ ಐಎಎಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಸಭೆಯನ್ನು ಮಾಡಿದ್ದಾರೆ, ಆ ಸಭೆಯಲ್ಲಿ ಯಾರು ಅದಕ್ಷರಿದ್ದಾರೆ, ಯಾರು ಭ್ರಷ್ಟರಿದ್ದಾರೆ, ಯಾರು ಮಂದಗತಿಯಲ್ಲಿ ಕೆಲಸ ಮಾಡುತ್ತಾರೆ, ಯಾರು ಸರ್ಕಾರದ ಕಾರ್ಯವಾಹಿನಿಯನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಿಲ್ಲ, ಅಂಥವರ ಮೇಲೆ ಯಾವುದೇ ಮುಲಾಜಿಗೆ ಒಳಗಾಗದೆ ಕಾನೂನು ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಸಾಕಷ್ಟು ಸಲ ಹೇಳಿದ್ದಾರೆ, ಆದರೆ ಎಷ್ಟು ಅಧಿಕಾರಿಗಳ ಮೇಲೆ ತಾವು ಕಾನೂನು ಕ್ರಮವನ್ನು ಕೈಗೊಂಡಿದ್ದೀರಿ? ಇದು ಕೇವಲ ಒಂದು ಹೇಳಿಕೆ, ಕೇವಲ ಒಂದು ಮಾತ್ರವಾಗಿದೆಯೇ ಹೊರತು ನಿಜವಾಗಿ ಯಾವುದೂ ಅನುಷ್ಠಾನವಾಗಿಲ್ಲವೆನ್ನುವುದನ್ನು ಹೇಳಬೇಕಾಗುತ್ತದೆ. ಏಕೆಂದರೆ, ಇವತ್ತು ನೀವು ಕಚ್ಚುವ ಹಾವಾಗಬೇಕು. ಕೇವಲ ಬುಸ್ ಎನ್ನುವ ಹಾವಾಗ ಬಾರದು. ನೀವು ಕೇವಲ ಬುಸ್ ಎಂದು ಹೇಳುತ್ತಿದ್ದೀರಿ. ಆದರೆ, ಈ ಒಂದು ಭ್ರಷ್ಟ ಮತ್ತು ಅದಕ್ಷ ಅಧಿಕಾರಿಗಳ ಮೇಲೆ ನೀವು ಕಚ್ಚುವ ಹಾವಾಗಿ ನೀವು ಕಚ್ಚುವುದಕ್ಕೆ ಹೋಗಿಲ್ಲ. ನಾನು ಹಾವನ್ನು ಏಕೆ ಹೋಲಿಕೆ ಮಾಡುತ್ತಿದ್ದೇನೆಂದರೆ ಇವತ್ತು ಯಾರು ಅದಕ್ಷ ಭ್ರಷ್ಟರಿದ್ದಾರೆ ಅಂಥವರಿಗೆ ಮುಖ್ಯಮಂತ್ರಿಗಳು ಕಚ್ಚುವ ಹಾವಾಗಬೇಕು. ಇಲ್ಲದಿದ್ದರೆ, ಅದು ನಡೆಯುವುದಿಲ್ಲ. ಕೇವಲ ಬುಸು ಎನ್ನುವ ಹಾವಾದರೆ ಆ ಅಧಿಕಾರಿಗಳು ಯಾಂತ್ರಿಕವಾಗಿ ಪರಿಸ್ಥಿತಿ ಹೀಗೇ ಇರುವುದು, ಹೀಗೇ ನಡೆದುಕೊಂಡು ಹೋಗುವುದು ಎನ್ನುವ ಮತ್ತು ಜನರ ಕಲ್ಯಾಣಕಾರಿ ಕಾರ್ಯಕ್ರಮ ಅನುಷ್ಠಾನ ಮಾಡಲಾಗದೆ ಇದೇ ರೀತಿ ಪರಿಸ್ಥಿತಿ ಮುಂದುವರೆಯುವ ಸಾಧ್ಯತೆ ಇದೆ. ಅದಕ್ಕಾಗಿ ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಹೇಳಬೇಕಾಗುತ್ತದೆ. ನೀವು ಅಧಿಕಾರಿಗಳ ಸಭೆಯಲ್ಲಿ ಯಾವ ರೀತಿ ಹೆದರಿಕೆ ಹಾಕಿದ್ದೀರಿ, ಎಷ್ಟು ಜನ ಅಧಿಕಾರಿಗಳ ಮೇಲೆ

ಕ್ರಮ ಕೈಗೊಂಡಿದ್ದೀರಿ? ಎಷ್ಟು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ? ಧಾರವಾಡ ಜಿಲ್ಲಾಧಿಕಾರಿ ಬಗ್ಗೆ ಮಂತ್ರಿಗಳು ಅಳಲು ಹೇಳಿದ್ದಾರೆ. ಅದರ ಬಗ್ಗೆ ಏನಾದರೂ ಕ್ರಮ ಕೈಗೊಂಡಿದ್ದೀರಾ, ಹೇಗೆ? ದಾವಣಗೆರೆ ಜಿಲ್ಲಾಧಿಕಾರಿ ಬಗ್ಗೆ ಕ್ರಮ ಕೈಗೊಂಡಿದ್ದೀರಾ, ಹೇಗೆ? ಬೇರೆ ಬೇರೆ ಅಧಿಕಾರಿಗಳು ಇವತ್ತು ಏನು ಬೇರೆ ಬೇರೆ ರೀತಿಯ ವ್ಯವಹಾರಗಳಲ್ಲಿ ತೊಡಗಿದ್ದಾರೆ, ಅಂಥವರ ಬಗ್ಗೆ ಏನಾದರೂ ಕ್ರಮ ಕೈಗೊಂಡಿದ್ದೀರಾ? ಹೇಗೆ? ಇವತ್ತು ಅದು ಸದನಕ್ಕೆ ಜನತೆ ಮುಂದೆ ಬರಬೇಕಾಗಿದೆ. ಅದೇ ರೀತಿ ನ್ಯಾಯಮೂರ್ತಿ ವೆಂಕಟಾಚಲರವರು ಲೋಕಾಯುಕ್ತರಾದ ಮೇಲೆ ಇವತ್ತು ಲೋಕಾಯುಕ್ತರಿಗೆ ಶಕ್ತಿ ಬಂದಿದೆ. ಈಗಾಗಲೇ ಸಾಕಷ್ಟು ಹಗರಣಗಳನ್ನು ಅವರು ಬಯಲಿಗೆಳೆದಿದ್ದಾರೆ. ಸಾಕಷ್ಟು ವಿಷಯಗಳು ಹೊರಗೆ ಬರುತ್ತಿವೆ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳು ಹೊರಗೆ ಬರುತ್ತಿವೆ. ಭ್ರಷ್ಟತೆಯನ್ನು ಹೊರಗೆ ಹಾಕುತ್ತಿದ್ದಾರೆ. ಪ್ರತಿಯೊಂದು ಕಛೇರಿಗೆ ಭೇಟಿ ಕೊಡುತ್ತಿದ್ದಾರೆ. ಅವರು ಬಹಳ ರೆಕಮೆಂಡ್ ಮಾಡಿದ್ದಾರೆ, ತಮ್ಮ ಹತ್ತಿರ ಫೈಲ್ ಕಳುಹಿಸಿದ್ದಾರೆ. ಎಷ್ಟು ಜನ ಅಧಿಕಾರಿಗಳನ್ನು ನೀವು ಸಸ್ಪೆಂಡ್ ಮಾಡಿದ್ದೀರಿ? ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೀರಿ? ಇದು ಇವತ್ತು ಹೊರಗೆ ಬರಬೇಕಾಗಿದೆ. ಇಲ್ಲದಿದ್ದರೆ, ಲೋಕಾಯುಕ್ತರು ಹೋಗುತ್ತಾರೆ, ನೋಡುತ್ತಾರೆ. ಟಿವಿ ಮಾಧ್ಯಮದ ಮುಂದೆ ಪ್ರದರ್ಶನವಾಗುತ್ತದೆ, ನಾಳೆ ಪತ್ರಿಕೆಯಲ್ಲಿ ಬರುತ್ತದೆ, ಕೋಟ್ಯಾಂತರ ರೂಪಾಯಿ ಅವ್ಯವಹಾರವಾಗಿದೆ ಎಂದು ಜನರಿಗೆ ಗೊತ್ತಾಗುತ್ತದೆ. ಆದರೆ, ಅವರಿಗೆ ಯಾವುದೇ ಕಾನೂನು ಕ್ರಮವಿಲ್ಲ, ಯಾವುದೇ ಶಿಕ್ಷೆ ಇಲ್ಲವೆಂದರೆ, ಲೋಕಾಯುಕ್ತರಿಗೆ ನೀವು ಅಧಿಕಾರ ಕೊಟ್ಟು ಏನು ಪ್ರಯೋಜನ? ಬಿಟ್ಟರೆ ಏನು ಪ್ರಯೋಜನ? ಯಾಂತ್ರಿಕವಾಗಿ ಹಾಗೇ ವ್ಯವಸ್ಥೆ ಮುಂದುವರೆದಿದೆ. ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಲೋಕಾಯುಕ್ತರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಹೆಚ್ಚಿನ ಅಧಿಕಾರವನ್ನು ನಾವು ಕೊಡುತ್ತೇವೆನ್ನುವ ಮಾತನ್ನು ಹೇಳಿದರು. ಆದರೆ, ಎಲ್ಲಿದೆ ಅಧಿಕಾರ? ಅವರು ಸಾಕಷ್ಟು ಸೂಚನೆಗಳನ್ನು ತೆಗೆದುಕೊಂಡು ಬಂದರು. ಇವತ್ತು ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ಕೊಡಬೇಕು ಎಂದು ಅವರು ಸಾಕಷ್ಟು ಸಲ ಹೇಳಿದರು. ಆದರೆ, ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡುವ ವಿಚಾರವನ್ನು ಮುಖ್ಯಮಂತ್ರಿಗಳು ಇಲ್ಲಿಯವರೆಗೆ ಮಾಡಲಿಲ್ಲ. ಇದೇಕೆ? ಕೇವಲ ಮುಖ್ಯಮಂತ್ರಿಗಳು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವೆಂದರು. ಧರ್ಮ ಯುದ್ಧ ಘೋಷಣೆ ಮಾಡಿದರು. ಭ್ರಷ್ಟಾಚಾರದ ವಿರುದ್ಧ ಧರ್ಮ ಯುದ್ಧ ಎಲ್ಲಿದೆ? ಆ ಘೋಷಣೆ ಎಲ್ಲಿ ಹೋಯಿತು? ಏನಾಯಿತು? ಎಷ್ಟು ಜನ ಅಧಿಕಾರಿಗಳ ವಿರುದ್ಧ ನೀವು ಧರ್ಮ ಯುದ್ಧದ ಘೋಷಣೆ ಮಾಡಿದ್ದೀರಿ? ಅದರ ಪರಿಣಾಮ ಎಷ್ಟು ಜನ ಅಧಿಕಾರಿಗಳ ಮೇಲಾಗಿದೆ. ಎನ್ನುವುದನ್ನು ಹೇಳಬೇಕಾಗುತ್ತದೆ. ನೀವು ಕೇವಲ ಲೋಕಾಯುಕ್ತ ಉದಾಹರಣೆ ಹೇಳಿದಿರಿ. ಲೋಕಾಯುಕ್ತ ಎಷ್ಟೊಂದು ಕೇಸ್‌ಗಳನ್ನು ನಿಮ್ಮ ಕಡೆ ರೆಫರ್, ರೆಕಮೆಂಡ್ ಮಾಡಿದ್ದಾರೆ. ಅದರ ಮೇಲೇನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ಸದನದ ಮುಂದಿಟ್ಟರೆ ನೀವು ನಿಜವಾಗಿ ಲೋಕಾಯುಕ್ತಕ್ಕೆ ಗೌರವ ಕೊಟ್ಟ ಹಾಗಾಗುತ್ತದೆ. ಭ್ರಷ್ಟಾಚಾರದ ವಿರುದ್ಧ ಏನು ಧರ್ಮ ಯುದ್ಧ ಘೋಷಣೆ ಮಾಡಿದಿರಿ, ಆಗ ಅದಕ್ಕೆ ಅರ್ಥಪೂರ್ಣ ಬರಲಿಕ್ಕೆ ಸಾಧ್ಯವಾಗುತ್ತದೆ. ಆದರೆ, ಅದಕ್ಕೆ ಹೊರತಾಗಿ ಇವತ್ತು ಯಾರು ಭ್ರಷ್ಟ ಅದಕ್ಷ ಅಧಿಕಾರಿಗಳಿದ್ದಾರೆ, ಅವರಿಗೆ ಮಣೆ ಹಾಕುವ ಕೆಲಸ ರಾಜ್ಯದಲ್ಲಿ ನಡೆಯುತ್ತಿದೆ. ಯಾರು ಪ್ರಾಮಾಣಿಕರಿದ್ದಾರೆ, ಅಭಿವೃದ್ಧಿ ಕೆಲಸವನ್ನು ನಿಷ್ಠೆಯಿಂದ ಮಾಡಲಿಕ್ಕೆ ಯಾರು ಹೊರಟಿದ್ದಾರೆ,

ಅಂಥವರಿಗೆ ಬೇರೆ ಕಡೆ ವರ್ಗಾವಣೆ ಮಾಡುವುದು ನಡೆಯುತ್ತಿದೆ. ನಾನು ಯಾವಾಗಲೂ ಹೇಳುತ್ತಿದ್ದೇನೆ, ಈ ವರ್ಗಾವಣೆ ಎನ್ನುವುದು ಒಂದು ಕ್ಯಾನ್ಸರ್ ಇದ್ದ ಹಾಗೆ. ಆ ವರ್ಗಾವಣೆಗೆ ಸ್ಪಷ್ಟವಾದ ನೀತಿಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದೆವು. ನಾವು ಪ್ರತಿ ಸದನದಲ್ಲಿ ಹೇಳುತ್ತಿದ್ದೇವೆ. ವರ್ಗಾವಣೆಗೆ ಸರಿಯಾದ ನೀತಿಯನ್ನು ತನ್ನಿ. ಇವತ್ತು ಪ್ರತಿಯೊಬ್ಬ ಅಧಿಕಾರಿಯನ್ನು ನೀವು ಕೇಳಿದರೆ, ಪ್ರತಿಯೊಬ್ಬ ಸರ್ಕಾರಿ ನೌಕರರನ್ನು ಕೇಳಿದರೆ, ಆ ಒಂದು ಇನ್‌ಸೆಕ್ಯುರಿಟಿಯಿಂದ ಕೇವಲ 6 ತಿಂಗಳು ಇರುತ್ತಾನೆ, ಸರ್ವಿಸ್ ಮಾಡಿ ವರ್ಷ ಆಗಿರಬಹುದು, ಅಲ್ಲಿಂದ ಎತ್ತಂಗಡಿಯಾಗುತ್ತಾನೆ. ಯಾವುದಕ್ಕೆಂದರೆ, ಅವನು ಅದಕ್ಷ, ಇದ್ದಾನೆ, ಅವನ ಮೇಲೆ ಸಾರ್ವಜನಿಕ ಕಂಪ್ಲೇಂಟ್ಸ್ ಇದೆಯೆಂದಲ್ಲ. ಅಲ್ಲಿಯ ರಾಜಕೀಯಿ ವ್ಯಕ್ತಿಗಳು ಒತ್ತಡ ತರುತ್ತಾರೆ. ಇವತ್ತು ಮಂತ್ರಿಗಳು ಒತ್ತಡ ತರುವ ಕೆಲಸ ನಡೆಯುತ್ತಿದೆ. ಮಂತ್ರಿಗಳೇ ಇಂಥ ಅಧಿಕಾರಿಗಳನ್ನು ಇಲ್ಲಿಂದ ಎತ್ತಂಗಡಿ ಮಾಡಿ ಎಂದು ಹೇಳುವುದು ನಡೆಯುತ್ತಿದೆ. ಇವತ್ತು ಹುಬ್ಬಳ್ಳಿ ಧಾರವಾಡದ ಉದಾಹರಣೆ ಕೊಡುವುದಾದರೆ, ಅಲ್ಲಿನ ಮಹಾನಗರಸಭೆಗೆ ಒಬ್ಬ ಉತ್ತಮ ಅಧಿಕಾರಿಯನ್ನು ಕೊಟ್ಟಿದ್ದೀರಿ. ಐಎಎಸ್ ಅಧಿಕಾರಿ ಬೇಕೆಂದು ನಾವು ಬಹಳ ದಿವಸದಿಂದ ಕೇಳಿದ್ದು ಪೆಂಡಿಂಗ್ ಇತ್ತು. ನೀವು ಐಎಎಸ್ ಅಧಿಕಾರಿಯನ್ನು ಕೊಟ್ಟಿದ್ದೀರಿ. ಕೇವಲ 8 ತಿಂಗಳಲ್ಲೇ ಸಾಕಷ್ಟು ಬದಲಾವಣೆ ಮಾಡಲು ಪ್ರಯತ್ನ ಮಾಡಿದರು. ಆದರೆ, ಅಂಥ ಅಧಿಕಾರಿ ಉಳಿಯಲಿಲ್ಲ. ಅಂಥ ಅಧಿಕಾರಿಯನ್ನು ಎತ್ತಂಗಡಿ ಮಾಡಿದಿರಿ. ನಾವು ಮುಖ್ಯಮಂತ್ರಿಗಳಿಗೆ ಇಂಥ ಅಧಿಕಾರಿ ಇರಬೇಕೆಂದು ಹೇಳಿದ್ದೆವು. ಒಬ್ಬ ಪ್ರಾಮಾಣಿಕ, ದಕ್ಷ ಅಧಿಕಾರಿ ಇರಬೇಕೆಂದು ತಮ್ಮ ಮೇಲೆ ಒತ್ತಡ ತಂದರೆ, ಇದಕ್ಕೆ ತಾವು ಮಣೆ ಹಾಕಲಿಲ್ಲ. ಆದರೆ, ಯಾರು ಅಲ್ಲಿಯ ಅಧಿಕಾರಿ ಅಲ್ಲಿಂದ ಎತ್ತಂಗಡಿಯಾಗಬೇಕು, ಅವನನ್ನು ಹೊರತುಪಡಿಸಿ, ತಮಗೆ ಅಡ್ಜಸ್ಟ್ ಆಗುವ ವ್ಯಕ್ತಿಗಳು ಇರಬೇಕು. ಅದಕ್ಕೆ ಬಹಳ ವಿಶಾಲವಾದ ಅರ್ಥವಿದೆ. ಆ ಅಡ್ಜಸ್ಟ್‌ಮೆಂಟ್ ಯಾರಾಗುತ್ತಾರೆ ಅಂಥ ಅಧಿಕಾರಿಗಳು ಬೇಕು. ಯಾರು ಆ ಅಡ್ಜಸ್ಟ್‌ಮೆಂಟ್ ಆಗುವುದಿಲ್ಲ ಅಂಥ ಅಧಿಕಾರಿಗಳು ಎತ್ತಂಗಡಿಯಾಗುವುದನ್ನು ಇವತ್ತು ನಾವು ನೋಡುತ್ತಿದ್ದೇವೆ. ರಾಜ್ಯದಲ್ಲಿ ಇದು ಸರ್ವೇಸಾಮಾನ್ಯವಾಗುತ್ತಿದೆ. ಹಾಗಾದರೆ, ಇದಕ್ಕೆ ನಿಮ್ಮ ಉತ್ತರವೇನು? ಈ ವರ್ಗಾವಣೆಗೆ ಏನಾದರೂ ನೀತಿಯನ್ನು ಇವತ್ತಿನವರೆಗೂ ಮಾಡಿದ್ದೀರಾ? ನೀತಿಯನ್ನು ಘೋಷಣೆ ಮಾಡಿದ್ದೀರಿ. 3 ವರ್ಷ ಯಾರೂ ಡಿಸ್ಟರ್ಬ್ ಮಾಡಬಾರದು ಮತ್ತು ಅತ್ಯಂತ ಜರೂರು ಪ್ರಸಂಗಗಳಲ್ಲಿ ಮಾತ್ರ ಕೆಲವೊಂದು ಸಾರ್ವಜನಿಕ ಕಂಪ್ಲೆಂಟ್ ಇದ್ದಾಗ ಮಾತ್ರ ಮಾಡಬೇಕೆನ್ನುವುದಿತ್ತು. 3 ವರ್ಷಗಳವರೆಗೆ ಯಾವುದೇ ವರ್ಗಾವಣೆ ಮಾಡಬಾರದೆಂದು ಹೇಳಿದಿರಿ. ಒಂದು ನೀತಿಯನ್ನು ಘೋಷಣೆ ಮಾಡಿದಿರಿ. ಆದರೆ, ಇವತ್ತು ಸಾವಿರಾರು ಸಂಖ್ಯೆಯಲ್ಲಿ ಆದ ಅಂಥ ವರ್ಗಾವಣೆಯನ್ನು ನಾವು ನೋಡಿದರೆ, 6 ತಿಂಗಳು, 8 ತಿಂಗಳು, ಒಂದು ವರ್ಷಕ್ಕೆ ಇವತ್ತು ವರ್ಗಾವಣೆ ಆಗುವುದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ, ಇಲ್ಲೀವರೆಗೂ ಸ್ಪಷ್ಟವಾದ ವರ್ಗಾವಣಾ ನೀತಿಯನ್ನು ಏಕೆ ತರಲಿಲ್ಲ? ಅದರ ಅನುಷ್ಠಾನ ಏಕೆ ಆಗುತ್ತಿಲ್ಲ. ಇದಕ್ಕೆ ಮುಖ್ಯಮಂತ್ರಿಗಳು ಉತ್ತರಿಸಬೇಕಾಗುತ್ತದೆ. ಹೀಗಾದರೆ, ಇವತ್ತು ಯಾವುದೇ ಅಧಿಕಾರಿಗಳನ್ನು ತೆಗೆದುಕೊಳ್ಳಿ, ಒಂದು ವರ್ಷವಾದ ಮೇಲೆ ಮತ್ತೆ ಬೆಂಗಳೂರಿಗೆ ಬರುತ್ತಾನೆ, ಬೆಂಗಳೂರಿನಲ್ಲಿ 3 ತಿಂಗಳು ವಾಸ ಇರುತ್ತಾನೆ. 9 ತಿಂಗಳು ತನ್ನ ಕ್ಷೇತ್ರದಲ್ಲಿ ಇರುತ್ತಾನೆ. ಅವರಿವರ ಕೈಕಾಲು ಹಿಡಿಯುವುದು, ರಾಜಕಾರಣಿಗಳ ಕೈ ಕಾಲಿಗೆ ಬೀಳುವುದು, ಶಾಸಕರ ಕೈಕಾಲಿಗೆ ಬೀಳುವುದು, ಮಂತ್ರಿಗಳ ಮನೆಗೆ ಅಡ್ಡಾಡುವುದು ನನ್ನನ್ನು ಇಲ್ಲೇ ಉಳಿಸಿ ಎಂದು

ವಸೂಲಿ ಮಾಡುವುದು. ಇಲ್ಲದಿದ್ದರೆ, ಒಳ್ಳೆಯ ಸ್ಥಳಕ್ಕೆ ಕಳುಹಿಸಿ ಎಂದು ವಸೂಲಿ, ಇನ್‌ಫ್ಲೂಯೆನ್ಸ್ ಮಾಡುವುದು. ಈ ಇನ್‌ಸೆಕ್ಯುರಿಟಿಯಿಂದ ಇವತ್ತು ಅವನು ಬಳಲುತ್ತಿದ್ದಾನೆ. ಇದು ಇವತ್ತಿನ ಅಧಿಕಾರಿಗಳ ಪರಿಸ್ಥಿತಿ. ಈ ರೀತಿಯಾದ ಅಧಿಕಾರಿಗಳು ತಮ್ಮ ಸರ್ವೀಸ್‌ನಲ್ಲಿ 3 ತಿಂಗಳೂ ಬೆಂಗಳೂರಿನಲ್ಲಿ ಕಳೆದರೆ 9 ತಿಂಗಳು ಅಲ್ಲಿ ಕಳೆದರೆ ಇನ್ನು ಜನಸಾಮಾನ್ಯರಿಗೆ ಯಾವ ರೀತಿ ಸೇವೆಯನ್ನು ಕೊಡಲಿಕ್ಕೆ ಸಾಧ್ಯ? ಎನ್ನುವುದರ ಬಗ್ಗೆ ಇವತ್ತು ವಿಚಾರ ಮಾಡಬೇಕಾಗಿದೆ. ಈ ಕ್ಯಾನ್ಸರ್ ಅನ್ನು ತೊಡೆದುಹಾಕಲು ಸಂಪೂರ್ಣವಾಗಿ ತೊಡೆದು ಹಾಕಿ ಎಂದು ನಾನು ಕೇಳುತ್ತಿಲ್ಲ, ಆದರೆ, ಕಂಟ್ರೋಲ್ ಮಾಡಬಹುದಿತ್ತು. ಆ ಕ್ಯಾನ್ಸರ್ ಅನ್ನು ಕಂಟ್ರೋಲ್ ಮಾಡಲು ಆಗುತ್ತಿಲ್ಲ ಅಂದರೆ ನೀವು ಯಾವ ರೀತಿಯಾದ ಸರ್ಕಾರವನ್ನು ನಮ್ಮ ಜನತೆಗೆ ಕೊಟ್ಟಿದ್ದೀರೆನ್ನುವುದು ಇದರ ಮೇಲೆ ಅರ್ಥವಾಗುತ್ತದೆನ್ನುವ ಮಾತನ್ನು ಹೇಳುತ್ತಿದ್ದೇನೆ. ಅದೇ ರೀತಿ, ಭ್ರಷ್ಟ ವ್ಯವಸ್ಥೆ ಮುಂದುವರೆದಿದೆ. ಈ ಭ್ರಷ್ಟ ವ್ಯವಸ್ಥೆ ಕಂಟಿನ್ಯೂಯಸ್ ಆಗಿದೆ. ಇವತ್ತು ಯಾವ್ಯಾವ ಸಮಾಜ ವಿರೋಧಿ ಕೆಲಸಗಳಿವೆ, ಆ ಸಮಾಜ ವಿರೋಧಿ ಚಟುವಟಿಕೆ ಏನು ಮಾಡುತ್ತಿದ್ದಾರೆ, ಅಂಥ ಶಕ್ತಿಗಳು ಮುಂದುವರಿದಿವೆ. ಆ ಭ್ರಷ್ಟ ವ್ಯವಸ್ಥೆ ಮುಂದುವರೆದಿದೆ. ಗೂಂಡಾ ಶಕ್ತಿಗಳು ತಮ್ಮ ಕೆಲಸ ಮುಂದುವರೆಸಿವೆ. ಗೂಂಡಾ ಶಕ್ತಿಗಳಿಗೆ ಕಡಿವಾಣವಿಲ್ಲ. ಯಾರು ಸಮಾಜ ವಿರೋಧಿ ಚಟುವಟಿಕೆ ಮಾಡುತ್ತಿದ್ದಾರೆ ಅವರಿಗೆ ಕಡಿವಾಣವಿಲ್ಲ. ಲಾಟರಿ ಇರಬಹುದು ಮಟ್ಕಾ ಇರಬಹುದು. ಮಟ್ಕಾ ಬಗ್ಗೆ ಹೇಳಬೇಕಾದರೆ ಅನಧಿಕೃತವಾಗಿ ಮಟ್ಕಾ ನಡೆಯುತ್ತಿದೆ. ಆನ್‌ಲೈನ್ ಲಾಟರಿಗೆ ಕಾನೂನಿನ ರಕ್ಷಣೆ ಇದೆ. ಮುಖ್ಯಮಂತ್ರಿಗಳಿರಬಹುದು, ನಮ್ಮ ಲಾಟರಿ ಮಂತ್ರಿಗಳಿರಬಹುದು, ಇವತ್ತು ಲಾಟರಿ ಮಂತ್ರಿಗಳಾದ ಚಿಂಚನಸೂರ್‌ರವರು ಆಟ ಆಡು ಕೋಟಿ ಗೆಲ್ಲು" ಎನ್ನುತ್ತಾರೆ. ಆ ಆನ್‌ಲೈನ್ ಬಗ್ಗೆ ಪ್ರತಿನಿತ್ಯ ವಿಷಯಗಳು ಹೊರಗೆ ಬರುತ್ತಿವೆ. ಮೊನ್ನೆ ನಡೆದ ಸದನದಲ್ಲಿ ಇದರ ಬಗ್ಗೆ ಚರ್ಚೆಯಾಯಿತು. ಆಗ ಪ್ರಶ್ನೋತ್ತರ ಕಾಲದಲ್ಲಿ ಆನ್‌ಲೈನ್ ಲಾಟರಿ ಬಗ್ಗೆ ಚಿಂತನೆ ಆಯಿತು. ಚರ್ಚೆಯಾಯಿತು. ಆದರೆ, ಅದಕ್ಕೆ ಅಂತಿಮವಾಗಿ ಏನಾದರೂ ತೀರ್ಪು ಬರಲಿಲ್ಲ, ಒಂದು ಘಟ್ಟ ಬರಲಿಲ್ಲ. ಇವತ್ತು ಮುಖ್ಯಮಂತ್ರಿಗಳು ಆನ್‌ಲೈನ್ ಲಾಟರಿ ಬಗ್ಗೆ ಡಿಫೆಂಡ್ ಮಾಡುತ್ತಿದ್ದಾರೆ. ಮನೆಯಲ್ಲಿನ ಹೆಣ್ಣುಮಕ್ಕಳು ಹೆಂಗಸರು ಇದನ್ನು ಕಂಟ್ರೋಲ್ ಮಾಡಬೇಕು, ತಮ್ಮ ಗಂಡಂದಿರನ್ನು ಕಂಟ್ರೋಲ್ ಮಾಡಬೇಕೆನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆದರೆ, ನಮ್ಮ ಸಚಿವರಾದ ಮೋಟಮ್ಮರವರು, ಆನ್‌ಲೈನ್ ಲಾಟರಿಯನ್ನು ನಿಷೇಧಿಸಬೇಕೆಂದು ನಾನು ಸರ್ಕಾರದ ಮೇಲೆ ಒತ್ತಾಯ ತರುತ್ತೇನೆಂದರು. ಒಂದು ಎಮೋಷನ್‌ನಲ್ಲಿ ಹೇಳುತ್ತಾರೆ. ಆದರೆ, ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟ್ ಬೇರೆ ಇದೆ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಸಚಿವರು):- ನಾನು ಅದನ್ನು ಬ್ಯಾನ್ ಮಾಡುವ ದೃಷ್ಟಿಯಿಂದ ಹೇಳಲಿಲ್ಲ. ಹೆಣ್ಣು ಮಕ್ಕಳು ತಮಗೆ ಯಾವುದು ಸರಿಯಲ್ಲವೆನ್ನುತ್ತಾರೆ ಅಂಥದ್ದರ ಪರವಾಗಿ ನಾನಿದ್ದೇನೆ. ನಾನು ಇದನ್ನು ಮುಖ್ಯಮಂತ್ರಿಗಳ ಜೊತೆ ಚರ್ಚಿಸುತ್ತೇನೆಂದು ಹೇಳಿದೆ. ಕೇವಲ ಹೆಣ್ಣು ಮಕ್ಕಳ ಮೇಲೆ ಏಕೆ ಹಾಕುತ್ತೀರಿ? ಗಂಡಸರಿಗೆ ಇದರ ಬಗ್ಗೆ ನಿಗ್ರಹ ಇರಬೇಕಲ್ಲವೆ?

ಶ್ರೀ ಡಿ.ವಿ. ಸದಾನಂದಗೌಡ:- ತಾವು ಹೆಣ್ಣು ಮಕ್ಕಳ ಪರವಾಗಿದ್ದೀರಾ ಅಥವಾ ಮುಖ್ಯಮಂತ್ರಿಗಳ ಪರವಾಗಿದ್ದೀರಾ ಎಂಬುದನ್ನು ಸ್ಪಷ್ಟೀಕರಣ ಮಾಡಿ. ನೀವು ಯಾರ ಪರವಾಗಿದ್ದೀರಿ ಎಂಬುದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀಮತಿ ಮೋಟಮ್ಮ :- ಮಾನ್ಯ ಮುಖ್ಯಮಂತ್ರಿಗಳು ಯಾವ ಒಳ್ಳೆಯ ಕೆಲಸ ಹೆಣ್ಣುಮಕ್ಕಳಿಗಾಗಿ ಮಾಡುತ್ತಾರೆ, ಆಗ ಮುಖ್ಯಮಂತ್ರಿಗಳ ಪರವಾಗಿ, ಹೆಣ್ಣುಮಕ್ಕಳ ಪರವಾಗಿ ನಾವು ಕೆಲಸ ಮಾಡುತ್ತಿದ್ದೇವೆ.

1.00 ಪಿ.ಎಂ.

ಶ್ರೀ ಜಗದೀಶ್ ಶೆಟ್ಟರ್:- ಇವತ್ತು ಆನ್‌ಲೈನ್ ಲಾಟರಿ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳವರಿಗೆ ಲಾಟರಿ ಸಚಿವರಾದ ಚಿಂಚನಸೂರ್‌ರವರಿಗೆ ಏಕೆ ಇಷ್ಟೊಂದು ಪ್ರೀತಿ ವಿಶ್ವಾಸವಿದೆ ಎಂದು ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ, ಸಮಾಜದ ಅನಿಷ್ಟಗಳಲ್ಲಿ ಲಾಟರಿ, ಜೂಜು ಒಂದು ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಮತ್ತೊಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಕ್ರಿಕೆಟ್‌ನಿಂದ ಸಾಕಷ್ಟು ಜನರು ಹುಚ್ಚು ಹಿಡಿಸಿಕೊಂಡಿದ್ದಾರೆ, ಕ್ರಿಕೆಟ್ ಬೆಟ್ಟಿಂಗ್‌ನಿಂದ, ಕ್ರಿಕೆಟ್ ಆಟದಿಂದಲೇ ಎಷ್ಟೋ ಜನ ಹುಚ್ಚು ಹಿಡಿಸಿಕೊಂಡಿದ್ದಾರೆ. ಪ್ರತಿಪಕ್ಷದ ನಾಯಕರು ಕ್ರಿಕೆಟ್ ಅನ್ನು ನಿಷೇಧಿಸಬೇಕೆಂಬ ಮಾತನ್ನು ಏಕೆ ಕೇಳಬಾರದೆಂದು ಕೇಳಿದರು. ಕ್ರಿಕೆಟ್ ನಿಷೇಧಿಸಬೇಕೆಂದು ನೀವೂ ಕೇಳಿ, ನಾವೂ ಕೇಳೋಣ. ಅದರಿಂದ ಏನಾದರೂ ಸಮಾಜದ ಮೇಲೆ, ಯುವಕರ ಮೇಲೆ ದುಷ್ಪರಿಣಾಮವಾದರೆ ನಿಷೇಧಿಸಬೇಕೆಂದು ನೀವೂ ಹೇಳಿ, ನಾವೂ ಹೇಳೋಣ. ಆದರೆ ನಾನಿಲ್ಲಿ ಕೇಳುವುದು ಕ್ರಿಕೆಟ್ ಅನ್ನು ಏಕೆ ನಿಷೇಧ ಮಾಡಬಾರದೆಂದು ಕೇಳಿ ಎಂದು ಹೇಳುವ ಮಾನ್ಯ ಮುಖ್ಯಮಂತ್ರಿಗಳು ಆನ್‌ಲೈನ್ ಲಾಟರಿಯನ್ನು ವರ್ಷದಲ್ಲಿ 365 ದಿವಸವೂ ಆಡುತ್ತಾರೆ. ಕ್ರಿಕೆಟ್ ಅನ್ನು 365 ದಿವಸಗಳೂ ಆಡುತ್ತಾರೆಯೇ? 365 ದಿವಸಗಳೂ ನಾವು ನೋಡುತ್ತೇವೆಯೇ? ಅಷ್ಟು ದಿವಸಗಳೂ ಬೆಟ್ಟಿಂಗ್ ಆಗುತ್ತಿದೆಯೇ? ಅಂದರೆ ಇವತ್ತು ಹೋಲಿಸುವುದು, ಡಿಫೆಂಡ್ ಮಾಡುವುದು ಈ ಪ್ರವೃತ್ತಿ ಸರಿಯಲ್ಲ. ಈ ಸಮಾಜದಲ್ಲಿ ಅನಿಷ್ಟವಾದುದು ಎಂದು ಹೇಳಿ, ಅಂಟು ರೋಗವೆಂದು ಹೇಳಿ. ಹೀಗೇ ನಡೆಯುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾ ಹೋದರೆ, ಅವರ ಸಹಾಯಕತೆಯನ್ನು ಪ್ರದರ್ಶನ ಮಾಡಿದ ಹಾಗಾಗುತ್ತದೆ. ಅದನ್ನು ಕಂಟ್ರೋಲ್ ಮಾಡಬೇಕು. ಅದು ಅಬಾಲಿಷ್ ಆಗುವವರೆಗೆ ಕಂಟ್ರೋಲ್ ಮಾಡಬೇಕಾಗುತ್ತದೆ. ನಾವು ಇದನ್ನು ಒಪ್ಪಿಕೊಂಡಿರುತ್ತೇವೆ. ಅದಕ್ಕೆ ನಾವು ಲೈಸೆನ್ಸ್ ಕೊಡುತ್ತೇವೆ. ಆದರೆ, ಮನೆಯಲ್ಲಿ ಹೆಣ್ಣು ಮಕ್ಕಳು ನೀವು ನಿಮ್ಮ ಗಂಡಂದಿರನ್ನು ಕಂಟ್ರೋಲ್ ಮಾಡಿ ಎಂದು ಹೇಳಿದರೆ ಅದು ಎಂದೂ ಅಬಾಲಿಷ್ ಆಗಲಿಕ್ಕೆ ಸಾಧ್ಯವಿಲ್ಲ. ನಾಶವಾಗಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಈ ರೀತಿ ಡಿಫೆಂಡ್ ಮಾಡುವುದು ಏಕೆ? ಮಾನ್ಯ ಮುಖ್ಯಮಂತ್ರಿಗಳು ಆದಾಯದ ಮೂಲವೆಂದು ಹೇಳಿದರು. ಹಾಗಾದರೆ, ಇಂಥ ಪಾಪದ ಹಣದಿಂದ ಲಕ್ಷಾಂತರ ಕುಟುಂಬಗಳನ್ನು ಹಾಳು ಮಾಡಿ, ಅವರನ್ನು ಹುಚ್ಚರನ್ನಾಗಿ ಮಾಡಿ, ಅವರನ್ನು ಮನೋರೋಗಿಗಳನ್ನಾಗಿ ಮಾಡಿ, ಕೋಟ್ಯಾಂತರ ರೂಪಾಯಿ ಲೂಟಿ ಮಾಡಿ, ಅದರಿಂದ ಸ್ವಲ್ಪ ಆದಾಯ ಬರುತ್ತದೆಂದು ಹೇಳಿ, ಅಂಥ ಲಾಟರಿಗೆ ಪ್ರೋತ್ಸಾಹ ಕೊಡುತ್ತೇವೆನ್ನುವ ಮಾತು ಮಾನ್ಯ ಮುಖ್ಯಮಂತ್ರಿಗಳ ಬಾಯಿಂದ ಬರಬಾರದು. ಮೊನ್ನೆ ಕನ್ನಡ ಪ್ರಭದ ಮುಖಪುಟದಲ್ಲಿ ಬಂದಿತ್ತು ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಿದ್ದಾರೋ,

ಇಲ್ಲವೋ ಗೊತ್ತಿಲ್ಲ. ಆ ಆನ್‌ಲೈನ್ ಲಾಟರಿ ಮಾಲೀಕರು ಏನಿದ್ದಾರೆ ಅವರ ಏಜೆಂಟರು ಪಂಚತಾರಾ ಹೋಟೆಲ್‌ನಲ್ಲಿ ಸಭೆ ನಡೆಸಿ, ಅಲ್ಲಿದ್ದ ಲಾಟರಿ ಮಾಲೀಕರು ಅಲ್ಲಿದ್ದ ಏಜೆಂಟರಿಗೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕಿಸೆಯಲ್ಲಿದ್ದಾರೆ, ನೀವೇನೂ ಹೆದರಬೇಡಿ ಎಂದು ಹೇಳುತ್ತಾರೆ. ಈ ಬಗ್ಗೆ ಸದನದಲ್ಲಿ ಚರ್ಚೆಯಾಯಿತು. ಅದರ ಮಾರನೇ ದಿವಸವೇ ಕನ್ನಡಪ್ರಭದಲ್ಲಿ ಮುಖಪುಟದಲ್ಲಿ ಈ ರೀತಿಯಾಗಿ ಸ್ಟೇಟ್‌ಮೆಂಟ್ ಬರುತ್ತದೆ. ದಿನಪತ್ರಿಕೆಯಲ್ಲಿ ಫ್ರಂಟ್ ಪೇಜ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕಿಸೆಯಲ್ಲಿದ್ದಾರೆ ಎನ್ನುವ ಮಾತನ್ನು ಲಾಟರಿ ಮಾಲೀಕರಿಂದ ಬರುತ್ತದೆಂದರೆ ಏಜೆಂಟರಿಗೆ ಧೈರ್ಯ ಕೊಡುತ್ತಾರೆಂದರೆ ಯಾವ ಸ್ಥಿತಿಗೆ ನಾವು ಹೋಗಿರಬಹುದೆಂದು ವಿಚಾರ ಮಾಡಬೇಕಾಗುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ನಾವು ಇವತ್ತು ಇದನ್ನು ನಿಷೇದಿಸಿ ಎಂದು ಒತ್ತಾಯಿಸುತ್ತೇವೆ. ನಿಷೇಧಿಸಿದರೆ ಏನು ತೊಂದರೆಯಾಗುತ್ತದೆ? ಇವತ್ತು ಸಾವಿರಾರು ಕೋಟಿ ರೂಪಾಯಿ ಹಣ ಬರುತ್ತದೆಂದರು. ಎಲ್ಲಿ ಹಣ ಸೋರಿ ಹೋಗುತ್ತಿದೆ, ಆ ಹಣವನ್ನು ನಿಲ್ಲಿಸಿ, ಅದನ್ನು ನಿಯಂತ್ರಿಸಿ ಆಗ ಒಂದು ಪಾಪದ ಹಣ ನಮಗೆ ಬೇಕಾಗಿಲ್ಲ. ಹಣ ಬೇಕಾದಷ್ಟು ಸೋರಿ ಹೋಗುತ್ತಿದೆ. ಯಾರ್‍ಯಾರಿಗೆ, ಅಬಕಾರಿ ದೊರೆಗಳಿಗೆ ಬಡ್ಡಿ ಮನ್ನಾ ಮಾಡುತ್ತಿದ್ದೀರಿ. ಅಬಕಾರಿ ಇಲಾಖೆಯಲ್ಲಿ 1,450 ಕೋಟಿ ರೂಪಾಯಿ ಆದಾಯ ಸೋರಿ ಹೋಗುತ್ತಿದೆ. ಇದನ್ನು ನಾನು ಹೇಳುತ್ತಿಲ್ಲ. ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೋಯ್ಲಿಯವರ ಅಧ್ಯಕ್ಷತೆಯಲ್ಲಿ ತೆರಿಗೆ ಸುಧಾರಣಾ ಕಮಿಟಿ ರಚಿಸಿದ್ದೀರಿ. ಅವರು ವರದಿ ಕೊಟ್ಟಿದ್ದಾರೆ. ಆ ವರದಿಯಲ್ಲಿ ಏನಿದೆ, ಮೊಯ್ಲಿಯವರು ಪ್ರತಿವರ್ಷ ಈ ಒಂದು ಅಬಕಾರಿ ಇಲಾಖೆಯಿಂದ 1,450 ಕೋಟಿ ರೂಪಾಯಿ ಸೋರಿ ಹೋಗುತ್ತಿದೆ ಎಂದಿದ್ದಾರೆ. ಹಾಗಾದರೆ, ಅದನ್ನು ನಿಯಂತ್ರಣ ಏಕೆ ಮಾಡುತ್ತಿಲ್ಲ? ನಮಗೆ ಎರಡೂವರೆ, ಮೂರು ಸಾವಿರ ಕೋಟಿ ರೂಪಾಯಿ ಅಬಕಾರಿ ಇಲಾಖೆಯಿಂದ ಆದಾಯ ಬರುತ್ತಿದೆ. ಅದನ್ನು ನೀವು ನಿಯಂತ್ರಣ ಮಾಡಿದರೆ ಸೋರಿಕೆ ತಡೆಗಟ್ಟಿದರೆ, ಅದು ನಾಲ್ಕು ಸಾವಿರ ಕೋಟಿ ರೂ ದಾಟಬಹುದು. ಅದನ್ನು ನಿಯಂತ್ರಣ ಮಾಡಲಿಕ್ಕಾಗುತ್ತಿಲ್ಲ. ಹಾಗಾದರೆ ಮಧ್ಯಪಾನದಿಂದ ಬಂದ ಹಣವನ್ನು ಆದಾಯ ಎಂದು ತೆಗೆದುಕೊಳ್ಳಬಹುದೆ ಎನ್ನುವ ಪ್ರಶ್ನೆ ನಾಳೆ ಬರಬಹುದು. ಆನ್‌ಲೈನ್ ಲಾಟರಿ, ಮದ್ಯಪಾನಕ್ಕೆ ಇರುವ ವ್ಯತ್ಯಾಸ? ಮಧ್ಯಪಾನದಿಂದ ಒಬ್ಬ ಸಾಮಾನ್ಯ ಮನುಷ್ಯ ಯಾರಿಗೆ ಮದ್ಯಪಾನದ ಚಟವಿರುತ್ತದೆ, ಅವನು ಕೇವಲ ಕೆಲವು ಗಂಟೆ ಮಾತ್ರ ಅದನ್ನು ಅನುಭವಿಸುತ್ತಾನೆ. ಆದರೆ, ಲಾಟರಿ ಹುಚ್ಚು ಜೂಜು ಇದೆಯಲ್ಲಾ ಅದು 24 ಗಂಟೆಗಳಿರುತ್ತದೆ. ಮನೆ, ಮಠ ಎಲ್ಲಾ ಬಿಟ್ಟು ಅಲ್ಲೇ ಕುಳಿತಿರುತ್ತಾರೆ. ಅದಕ್ಕೆ ದೊಡ್ಡ ಸ್ಟೋರಿ ಇದೆ. ಇಡೀ ಜಗತ್ತೇ ಮುಳುಗಿ ಹೋಗುತ್ತದೆಂದರೂ ಅಲ್ಲಿಂದ ಎದ್ದು ಹೋಗುವುದಿಲ್ಲ. ಇಸ್ಪೀಟ್, ಲಾಟರಿ ಆಡುವುದಕ್ಕೆ ಕುಳಿತರೆ ಅವನು ಅಲ್ಲಿಂದ ಹೋಗಲು ಆಗಲುವುದಿಲ್ಲ. ಹೀಗಾಗಿ ಇಲ್ಲಿ ಡಿಫರೆನ್ಸ್ ಇದೆ. ಈ ಚಟಕ್ಕೆ, ಮತ್ತೊಂದು ಚಟಕ್ಕೆ ವ್ಯತ್ಯಾಸವನ್ನು ನಾವು ಕಾಣಬಹುದು. ಹೀಗಾಗಿ ಆನ್‌ಲೈನ್ ಲಾಟರಿಯಿಂದ ಕೇವಲ ಕೆಲವು ಸಾವಿರದಷ್ಟು, ನೂರಾರು ಕೋಟಿಯಷ್ಟು ಆದಾಯ ಬರುತ್ತದೆಂದರೆ ನಾವು ಅದನ್ನು ಬ್ಯಾನ್ ಮಾಡುವುದಿಲ್ಲವೆಂದರೆ ಸರಿಯಾದ ನೀತಿಯಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದಾಯ ಎಷ್ಟು ಬರುತ್ತದೆನ್ನುವ ಬಗ್ಗೆ ಇಲ್ಲಿ ಎರಡು ಉದಾಹರಣೆ ಕೊಡಬಯಸುತ್ತೇನೆ. ಆನ್‌ಲೈನ್ ಲಾಟರಿಯಿಂದ ವಾರ್ಷಿಕವಾಗಿ 50 ಸಾವಿರ ಕೋಟಿ ಟಿಕೆಟ್ ಮಾರಾಟವಿದೆ. ಒಟ್ಟು 15 ರಾಜ್ಯಗಳಲ್ಲಿ ಇದು ನಡೆಯುತ್ತಿದೆ. 50 ಸಾವಿರ ಕೋಟಿ ಟಿಕೆಟ್

ಮುದ್ರಣವಾಗುತ್ತಿದೆ. ಆಮೇಲೆ ಒಟ್ಟು ರಾಜ್ಯಗಳಿಗೆ ಎರಡೂವರೆ ಸಾವಿರ ಕೋಟಿ ರೂಪಾಯಿಗಳ ಆದಾಯವಿದೆ. ಆಮೇಲೆ ಇವತ್ತು ಗುತ್ತಿಗೆ ಕಂಪನಿಯವರಿಗೆ ಇದರಿಂದ 5,400 ಕೋಟಿ ರೂಪಾಯಿಗಳ ಲಾಭವಾಗುತ್ತಿದೆ. ಒಂದೊಂದು ರಾಜ್ಯಕ್ಕೆ 400ರಿಂದ 500 ಕೋಟಿ ರೂಪಾಯಿಗಳ ಲಾಭವಾದರೆ, ಅದರ ಆದಾಯದ 5 ಪರ್ಸೆಂಟ್, 2 ಪರ್ಸೆಂಟ್ ಇರುತ್ತದೆ. ನಾವು ಅಷ್ಟು ತೆಗೆದುಕೊಂಡರೆ ಲಕ್ಷಾಂತರ ಜನರ ಜೀವನವನ್ನು ದುರ್ಬಲವಾಗಿ ಮಾಡಿ ಅವರನ್ನು ಚಿಂತಾಜನಕ ಸ್ಥಿತಿಯಲ್ಲಿ, ಮನೋರೋಗಿಗಳನ್ನಾಗಿ ಮಾಡುವುದಕ್ಕೆ ಸರ್ಕಾರವೇ ಇಂಬು ಕೊಡುತ್ತಿದೆ. ನೀವು ಧೈರ್ಯ ಮಾಡಿ. ಆನ್‌ಲೈನ್ ಲಾಟರಿಯನ್ನು ಸಂಪೂರ್ಣವಾಗಿ ನಿಷೇಧಿಸಿ. ಇಡೀ ಲಾಟರಿ ವ್ಯವಸ್ಥೆಯನ್ನೇ ಬಂದ್ ಮಾಡಿ. ಕೋರ್ಟಿನಿಂದ ಸ್ಟೇ ತರುತ್ತಾರೆಂದು ಹೇಳಿದಿರಿ. ಮಧ್ಯಂತರ ಆರ್ಡರ್ ಆಗುತ್ತದೆ, ಆಗೇನು ಮಾಡುವುದೆಂದು ಹೇಳಿದಿರಿ. ನಾವು ಬಲಯುತವಾಗಿ ನಿರ್ಧಾರ ಕೈಗೊಂಡು, ಬಲಯುತವಾಗಿ ಕೋರ್ಟಿನಲ್ಲಿ ನಮ್ಮ ವಾದವನ್ನು ಮಂಡನೆ ಮಾಡಿದರೆ ನಾಳೆ ಕೋರ್ಟಿನಲ್ಲಿ ಈ ಕೇಸ್‌ಗಳು ನಡೆಯುವುದಿಲ್ಲ. ಹಾಗಾದರೆ, ತಮಿಳುನಾಡು ಸರ್ಕಾರ ಯಾವ ಆಧಾರದ ಮೇಲೆ ಲಾಟರಿಯನ್ನು ನಿಷೇಧಿಸಿದೆ? ಲಾಟರಿಯನ್ನು ಸಂಪೂರ್ಣವಾಗಿ ನಿಷೇಧಿಸಿ, ಸರ್ಕಾರ ನಡೆಯುತ್ತಿದೆ. ಈ ಎಲ್ಲಾ ಲಾಟರಿಯ ವ್ಯವಸ್ಥೆಯನ್ನು ನಿಷೇಧಿಸಿ ಜನಹಿತವಾದ, ಕಲ್ಯಾಣಕಾರಿ ಕೆಲಸಗಳನ್ನು ಮುಂದುವರಿಸುತ್ತಿದ್ದಾರೆ. ಹಾಗಾಗಿ ಅಲ್ಲಿ ಲಾಟರಿ ನಿಷೇಧ ಮಾಡಿದ್ದನ್ನು ಇಲ್ಲಿಯೂ ಸಹ ಅದೇ ರೀತಿ ಏಕೆ ಸಾಧ್ಯವಿಲ್ಲ? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಬೇಕಾಗುತ್ತದೆ. ಅದಕ್ಕಾಗಿ ಇವತ್ತು ಈ ಒಂದು ಆನ್‌ಲೈನ್ ಲಾಟರಿಯಿಂದ ಜನರು ಏನು ಹುಚ್ಚಾಸ್ಪತ್ರೆ ಸೇರುತ್ತಿದ್ದಾರೆ, ಮನೋರೋಗಿಗಳಾಗುತ್ತಿದ್ದಾರೆ, ಬೀದಿಭಿಕಾರಿಗಳಾಗುತ್ತಿದ್ದಾರೆ ಇದನ್ನು ತಡೆಹಿಡಿಯುವ ಕೆಲಸ ಸರ್ಕಾರದಿಂದಾಗಬೇಕಾಗಿದೆ. ಸರ್ಕಾರ ತನ್ನ ಅಸಹಾಯಕತೆಯನ್ನು ಪ್ರದರ್ಶನ ಮಾಡುವುದು ಬೇಡ. ಇದರಲ್ಲಿ ಸರ್ಕಾರ ಅಸಹಾಯಕವಾಗಬಾರದು ಸರ್ಕಾರ ಎನ್ನುವುದು ಬಲಯುತ ಎನ್ನುವುದನ್ನು ನಾವು ತೋರಿಸಬೇಕಾಗುತ್ತದೆ. ತಮ್ಮ ಅಸಹಾಯಕತೆಯನ್ನು ಪ್ರದರ್ಶನ ಮಾಡಿದರೆ ರಾಜ್ಯ ಸರ್ಕಾರದ ವೀಕ್‌ನೆಸ್‌ನಿಂದ ಆನ್‌ಲೈನ್ ಲಾಟರಿಯವರು ಅದರ ಉಪಯೋಗ ತೆಗೆದುಕೊಳ್ಳುತ್ತಾರೆ. ಆದಾಗಬಾರದು ಎನ್ನುವ ಮಾತನ್ನು ಎಚ್ಚರಿಕೆಯನ್ನು ನಾನಿಲ್ಲಿ ಕೊಡುತ್ತಿದ್ದೇನೆ. ಅದೇ ರೀತಿ ಆನ್‌ಲೈನ್ ಲಾಟರಿಗೆ ನೀವು ಕಾನೂನುಬದ್ಧವಾಗಿ ಲೈಸೆನ್ಸ್ ಕೊಟ್ಟು ಅದು ನಡೆಯುತ್ತಿದೆ. ಇಡೀ ರಾಜ್ಯದಲ್ಲಿ ನಡೆಯುವ ಮಟ್ಕಾ ಹಾವಳಿ. ಯಾವುದೇ ನಗರ, ಗ್ರಾಮಕ್ಕೆ ಹೋಗಿ, ಓ.ಸಿ, ಮಟ್ಕಾ ದಿನನಿತ್ಯದ ಚಟುವಟಿಕೆ. ಇದು ಅಧಿಕಾರಿಗಳ ಸಹಕಾರದಿಂದ ನಡೆಯುವುದು. ಪೊಲೀಸ್ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡಿದ್ದರೆ, ಓಸಿ, ಮಟ್ಕಾ ಎನ್ನುವುದು ಸರ್ವನಾಶವಾಗಿ ಹೋಗುತ್ತದೆ. ಆದರೆ, ಇದನ್ನು ಅಧಿಕಾರಿಗಳೇ ನಡೆಸುತ್ತಿದ್ದಾರೆ. ನಾನು ಎಷ್ಟೋ ಕಡೆ ನೋಡಿದ್ದೇನೆ. ಪೊಲೀಸ್ ಪೇದೆಗಳು, ಕಾನ್‌ಸ್ಟೇಬಲ್‌ಗಳು ಆ ಓಸಿ ಅಂಗಡಿಯಲ್ಲಿ ಅವರೇ ಕುಳಿತು ಚೀಟಿ ಬರೆಯುವುದನ್ನು ನೋಡುತ್ತಿದ್ದೇನೆ. ಅವರೇ ಕುಳಿತು ಮಟ್ಕಾ ನಡೆಸುವುದು. ಮೊದಲೇನಿತ್ತೆಂದರೆ, ಪೊಲೀಸರ ಅಧಿಕಾರಿಗಳು ಪೊಲೀಸ್ ಸ್ಟೇಷನ್‌ನಲ್ಲಿ ಕುಳಿತು ಮಟ್ಕಾ ಅಡ್ಡೆಗಳನ್ನು ನಡೆಸುತ್ತಿದ್ದರು. ಆ ಮಟ್ಕಾ ಅಡ್ಡೆಗಳಲ್ಲಿ ಇವತ್ತು ಪೊಲೀಸ್ ಅಧಿಕಾರಿಗಳು ನಮ್ಮ ಕಾನ್‌ಸ್ಟೇಬಲ್ಸ್ ಬಿಟ್ಟು ಮಟ್ಕಾ ನಡೆಸುವ ಪರಿಸ್ಥಿತಿ ನಿರ್ಮಾಣವಾದರೆ ರಾಜ್ಯ ಯಾವ ಕಡೆ ಹೋಗುತ್ತಿದೆ ಎನ್ನುವುದನ್ನು ಇವತ್ತು ನೋಡಬೇಕಾಗುತ್ತದೆ. ಮಟ್ಕಾ ಹಾವಳಿಯನ್ನು ನಾಶ ಮಾಡುವುದಕ್ಕೆ ಏಕೆ ಆಗುತ್ತಿಲ್ಲ? ಇದನ್ನು ನಿಯಂತ್ರಣ ಮಾಡುವುದಕ್ಕೆ

ಏಕೆ ಆಗುತ್ತಿಲ್ಲ? ಇದು ನಿಮ್ಮ ದುರ್ಬಲತೆಯನ್ನು ಹಾಗೂ ಆಡಳಿತದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಒಂದು ಕಡೆ ಆನ್‌ಲೈನ್ ಲಾಟರಿ ಮತ್ತೊಂದು ಕಡೆ ಜೂಜು ಇನ್ನೊಂದು ಕಡೆ ಮಟ್ಕಾ ಹೀಗಾದರೆ ಜನರನ್ನು ನೀವು ಯಾವ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ? ಇದರ ಜೊತೆಗೆ ಮದ್ಯದ ವ್ಯಾಪಾರದಲ್ಲಿ ಸೆಕೆಂಡ್ಸ್, ಥರ್ಡ್ಸ್ ಇದರ ಹಾವಳಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಇತರೆ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಿದ್ದಂಥ ಸಂದರ್ಭದಲ್ಲಿ ಮದ್ಯದ ಹಾವಳಿಯ ಬಗ್ಗೆ ಸಾಕಷ್ಟು ಹೇಳಿದಿರಿ ಆದರೂ ಇದು ನಿಂತಿಲ್ಲ. ಹುಬ್ಬಳ್ಳಿಯ ಮದ್ಯದ ವ್ಯಾಪಾರ ಇನ್ನೂ ನಿಂತಿಲ್ಲ. ಯಾವ ಅಧಿಕಾರಿ ಬಂದರೂ ಅದು ನಿಲ್ಲುವುದಿಲ್ಲ. ನಕಲಿ ಮದ್ಯದ ವ್ಯಾಪಾರ ಏನಿದೆ ಅದು ಯಾವ ಪೊಲೀಸ್ ಅಧಿಕಾರಿ ಬಂದರೂ ನಿಲ್ಲುವುದಿಲ್ಲ. ಬಂದಂಥವರು ಕೆಲವು ತಿಂಗಳುಗಳ ನಂತರ ಅಡ್ಜಸ್ಟ್ ಆಗಿ ಬಿಡುತ್ತಾರೆ, ಬಲಯುತವಾದ ಇಚ್ಛಾಶಕ್ತಿ ಇಲ್ಲಿದ್ದಂಥ ಅಧಿಕಾರಿಗೆ ಮತ್ತು ಸರ್ಕಾರಕ್ಕೆ ಇದ್ದರೆ ಮಾತ್ರ ಅದೇನಾದರೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಇದು ಸಾಧ್ಯವೇ ಆಗುವುದಿಲ್ಲ, ಈ ಸರ್ಕಾರ ಬಂದಾಗ ಅಷ್ಟೇ ಮತ್ತೊಂದು ಸರ್ಕಾರ ಬಂದರೂ ಅಷ್ಟೇ, ಯಾವುದೇ ಸರ್ಕಾರ ಬಂದರೂ ಇದು ನಡೆಯುತ್ತಿದೆ. ಆ ಇಚ್ಛಾಶಕ್ತಿ ನಿಮಗೆ ಇಲ್ಲ, ಅದೇ ರೀತಿ ಮಟ್ಕಾ ಮತ್ತು ಆನ್‌ಲೈನ್ ಲಾಟರಿಯ ಹಾವಳಿಯನ್ನು ಹತ್ತಿಕ್ಕುವ ಇಚ್ಛಾಶಕ್ತಿ ನಿಮಗೆ ಇಲ್ಲ. ಹೀಗಾಗಿ ಇವತ್ತು ಜನ ಒಂದು ಕಡೆ ಬರಗಾಲದ ಬೇಗೆ ಬರಗಾಲದಿಂದ ತೊಂದರೆಯನ್ನು ಜನರು ಅನುಭವಿಸುತ್ತಿದ್ದರೆ ಮತ್ತೊಂದು ಕಡೆ ಮಟ್ಕಾ, ಜೂಜು, ಹಾಗೂ ಆನ್ ಲೈನ ಲಾಟರಿಯಿಂದ ಹುಚ್ಚು ಹಿಡಿಯುತ್ತಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ವಿಷಯದಲ್ಲಿ ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸರ್ಕಾರ ವಿಫಲವಾಗಿದೆ ಎಂದು ಹೇಳುತ್ತೇನೆ.

ಇದರ ಜೊತೆಗೆ ವೀರಪ್ಪನ್ ಪ್ರಕರಣದ ಬಗ್ಗೆ ಹೇಳುವುದಾದರೆ, ನಾಗಪ್ಪನವರ ಹತ್ಯೆ ಆಯಿತು, ಇದು ಯಾವ ರೀತಿ ಆಯಿತು? ಯಾರು ಕೊಂದರು? ಏನಾಯಿತು ಎನ್ನುವ ವಿಷಯ ಇವತ್ತಿಗೂ ಹೊರಗೆ ಬರಲಿಲ್ಲ. ನಾಗಪ್ಪನವರನ್ನು ನಮ್ಮ ರಾಜ್ಯ ಸರ್ಕಾರದ ಎಸ್‌ಟಿಎಫ್ ನವರು ಕೊಂದರೊ ಅಥವಾ ತಮಿಳುನಾಡಿನ ಎಸ್‌ಟಿಎಫ್‌ನವರು ಕೊಂದರೋ? ನಾವು ಹಿಂದಿನ ಸದನದಲ್ಲಿ ಇದೇ ವಿಷಯವಾಗಿ ಪ್ರೊಟೆಸ್ಟ್ ಮಾಡಿದ್ದೇವೆ. ಮಾಜಿ ಮಂತ್ರಿ ನಾಗಪ್ಪನವರ ಹತ್ಯೆಗೆ ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಜವಾಬ್ದಾರಿಯಾಗಿದೆ. ನಮ್ಮ ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ರಾಜೀನಾಮೆ ಕೊಡಬೇಕೆನ್ನುವ ಒತ್ತಾಯವನ್ನೂ ಕೂಡ ನಾವು ಮಾಡಿದ್ದವು. ಇದರ ಜೊತೆಗೆ ಸಿಬಿಐ ತನಿಖೆಯಾಗಬೇಕೆಂದು ನಾವು ಒತ್ತಾಯ ಮಾಡಿದರೂ ಸರ್ಕಾರಕ್ಕೆ ಇದು ಬೇಕಾಗಿರಲಿಲ್ಲ. ಇದರ ಬದಲು ಒಂದು ನ್ಯಾಯಾಂಗ ತನಿಖೆಗೆ ಆದೇಶಿಸಿದರೆ, ಅದು ಇಲ್ಲಿಯವರೆಗೆ ಏನು ಪ್ರೊಗ್ರೆಸ್ ಮಾಡಿದೆ? ಅದರ ಬಗ್ಗೆ ವಿವರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಸದನಕ್ಕೆ ಕೊಡಬೇಕಾಗುತ್ತದೆ. ಏಕೆಂದರೆ, ಪ್ರತಿಯೊಂದು ಅಪಹರಣದ ನಡೆದಂಥ ಸಂದರ್ಭದಲ್ಲಿ, ಡಾ|| ರಾಜ್ ಕುಮಾರ್ ಅಪಹರಣದ ಸಂದರ್ಭದಲ್ಲಿ ಎಲ್ಲಾ ರೀತಿಯ ಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ, ವೀರಪ್ಪನ್‌ನನ್ನು ಜೀವಂತವಾಗಿ ಅಥವಾ ಕೊಂದು ಆದರೂ ತೆಗೆದುಕೊಂಡು ಬರುತ್ತೇವೆ, ಎನ್ನುವಂಥ ಮಾತನ್ನು ಹೇಳಿದಿರಿ. ಡಾ|| ರಾಜ್ ಕುಮಾರ್‌ರವರ ಬಿಡುಗಡೆಯಾಯಿತು ನಂತರ ಸದನದಲ್ಲಿ ಚರ್ಚೆಯಾದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ವೀರಪ್ಪನ್ ಅವನನ್ನು ನಾವು ಯಾವುದೇ ರೀತಿಯಲ್ಲಿ

ಆದರೂ ಅರೆಸ್ಟ್ ಮಾಡಿ ಜೀವಂತವಾಗಿ ಅಥವಾ ಅವನ ಹೆಣವನ್ನು ತರುತ್ತೇವೆಂದು ಆ ದಿವಸವೂ ಹೇಳಿದರು. ಇನ್ನು ಕೆಲವೇ ದಿನಗಳಲ್ಲಿ ವೀರಪ್ಪನ್‌ನನ್ನು ಮುಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಇದಾದ ನಂತರ ಮಾಜಿ ಸಚಿವ ನಾಗಪ್ಪನವರ ಅಪಹರಣವಾಯಿತು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಯಾವ ರೀತಿ ನಡೆದುಕೊಂಡಿತು? ಯಾವ ರೀತಿ ಜವಾಬ್ದಾರಿಯಿಂದ ಈ ಕೆಲಸ ನಿಭಾಯಿಸಿದರು? ಕೊನೆಗೆ ಎಲ್ಲಿಗೆ ಬಂತು ಎಂದರೆ ನಾಗಪ್ಪನವರ ದಾರುಣ ಹತ್ಯೆಯಲ್ಲಿ ಇದು ಮುಗಿಯಿತು. ಇವರ ಹತ್ಯೆಯಾದ ನಂತರ ರಾಜ್ಯ ಸರ್ಕಾರದ ನೀತಿ, ನಡವಳಿ ಏನು ಇದೆ? ವೀರಪ್ಪನ್‌ನನ್ನು ಹಿಡಿಯಲಿಕ್ಕೆ ಇಲ್ಲಿಯವರೆಗೆ ನೀವು ಏನೇನು ಕ್ರಮ ಕೈಗೊಂಡಿದ್ದೀರಿ? ನಾಗಪ್ಪನವರನ್ನು ಯಾರು ಕೊಂದರು ಎಂದು ಇಲ್ಲಿಯವರೆಗೆ ಏನು ತನಿಖೆಯಾಗಿದೆ? ತನಿಖೆ ಯಾರು ಮಾಡುತ್ತಿದ್ದಾರೆ? ಯಾವ ಅಧಿಕಾರಿಗಳನ್ನು ನೇಮಿಸಿದ್ದೀರಿ? ಎಲ್ಲಿಯವರೆಗೆ ಆ ತನಿಖೆಯ ಹಂತ ಬಂದಿದೆ? ಇದು ಯಾವುದೂ ಇವತ್ತು ಹೊರಗೆ ಬರುತ್ತಿಲ್ಲ. ಇವತ್ತು ಏನಾಗಿದೆ ಎಂದರೆ, ಈ ದಶಕದ ಒಂದು ದೊಡ್ಡ ಜೋಕ್ ಏನೆಂದರೆ, ಸರ್ಕಾರದಿಂದ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಏನು ಹೇಳುತ್ತಾರೆಂದರೆ, "ಶೀಘ್ರದಲ್ಲಿ ವೀರಪ್ಪನ್ ಬಂಧನ" ಇದು ಈ ದಶಕದ ಒಂದು ಜೋಕ್ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ಜನರು ಹಾಸ್ಯ ಮಾಡುತ್ತಿದ್ದಾರೆ. ವೀರಪ್ಪನ್‌ನನ್ನು ಶೀಘ್ರದಲ್ಲಿ ಬಂಧಿಸುತ್ತೇವೆಂದು ಹೇಳಿದರೆ ಜನ ನಗುತ್ತಿದ್ದಾರೆ. ಇದು ಎಂಥ ಸರ್ಕಾರ, ಹೇಡಿ ಸರ್ಕಾರ ಎನ್ನುವಂಥ ರೀತಿಯಲ್ಲಿ ಜನ ಹಾಗೂ ಚಿಕ್ಕ ಮಕ್ಕಳು ಕೂಡ ಮಾತನಾಡಿಕೊಳ್ಳುತ್ತಿದ್ದಾರೆ. ನಿಮಗೆ ಈ ಕಡೆ ಮಟ್ಕಾ, ಆನ್ ಲೈನ್ ಲಾಟರಿ ನಿಲ್ಲಿಸುವುದಕ್ಕೆ ಆಗುವುದಿಲ್ಲ ಕೊನೆಗೆ ವೀರಪ್ಪನ್‌ನ್ನು ಬಂಧಿಸಲಿಕ್ಕೆ ಆಗುವುದಿಲ್ಲ, ಇಂಥ ಪರಿಸ್ಥಿತಿ ಬಂದರೆ ಜನ ಎಲ್ಲಿಗೆ ಹೋಗಬೇಕು? ಸರ್ಕಾರ ಈ ರೀತಿ ನಡೆದುಕೊಂಡರೆ ಜನರಿಗೆ ಸರ್ಕಾರದ ಮೇಲೆ ಇದ್ದಂಥ ನಂಬಿಕೆ, ವಿಶ್ವಾಸ, ಹೋಗುತ್ತಿದೆ. ಇವತ್ತು ಕೇವಲ ಭಾಷಣಗಳಲ್ಲಿ ಮಾತ್ರ ವೀರಪ್ಪನ್‌ನನ್ನು ಮಟ್ಟ ಹಾಕುತ್ತೇವೆ ಎನ್ನುವ ಮಾತು ಬರುತ್ತದೆಯೇ ವಿನಾ: ಅದರ ಫಲಶೃತಿ ಏನು ಎಂಬುದು ಇವತ್ತಿನವರೆವಿಗೂ ಬರುತ್ತಿಲ್ಲ. ಸಿಬಿಐ ಗೆ ಒಪ್ಪಿಸಿರಿ ಎಂದು ನಾವು ಹೇಳಿದರೂ ನೀವು ಇಲ್ಲವೆಂದು ಹೇಳುತ್ತೀರಿ. ಇವರಿಗೆ ಆ ಸಿಬಿಐ ಬಗ್ಗೆ ಏಕೆ ಹೆದರಿಕೆಯೋ ನನಗೆ ಅರ್ಥವಾಗುತ್ತಿಲ್ಲ. ಸಿಬಿಐ ಎಂದರೆ ಬೇಡ ಎಂದು ಹೇಳುತ್ತಿದ್ದಾರೆ. ಹಾಗಾದರೆ ನಿಮ್ಮ ಕಡೆಯಿಂದ ಏನಾಯಿತು? ನ್ಯಾಯಾಂಗ ತನಿಖೆಗೆ ಕೊಟ್ಟಿದ್ದೀರಿ ಅಲ್ಲವೇ? ಅದು ಏನಾಯಿತು? ನ್ಯಾಯಾಂಗ ತನಿಖೆಗೆ ಮಾನ್ಯ ವೈದ್ಯನಾಥ್‌ನ್ ಎನ್ನುವ ನ್ಯಾಯಾಧೀಶರನ್ನು ನೇಮಿಸಿದಿರಿ, ಅವರು ಸ್ಥಳಕ್ಕೆ ಹೋಗಿ ಪರಿಶೀಲಿಸಿ ಬಂದರು, ಪತ್ರಿಕೆಗಳಲ್ಲಿ ಫೋಟೋಗಳು ಬಂದವು, ಮುಂದೆ ಅವರೇನು ಎವಿಡೆನ್ಸ್ ತೆಗೆದುಕೊಳ್ಳುತ್ತಿದ್ದಾರೋ ಅಥವಾ ಅಲ್ಲಿ ಇನ್‌ವೆಸ್ಟಿಗೇಷನ್ ಆಫೀಸರ್‌ರನ್ನು ಮಾಡಿ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೋ, ಇದು ಯಾವ ವಿಚಾರಗಳೂ ಹೊರಗೆ ಬರಲಿಲ್ಲ. ಅದು ಹಾಗೆಯೇ ಇದೆ. ಪುನ: ಪ್ರಮುಖ ವ್ಯಕ್ತಿಯ ಅಪಹರಣವಾದಂಥ ಸಂದರ್ಭದಲ್ಲಿ ಆಗ ರಾಜ್ಯ ಸರ್ಕಾರ ಆಲೋಚನೆ ಮಾಡುವುದಕ್ಕೆ ಸಾಧ್ಯವಿದೆಯೇ? ಹಾಗಾಗಿ ವೀರಪ್ಪನ್‌ನನ್ನು ಹಿಡಿಯಲಿಕ್ಕೆ ಇಚ್ಛಾಶಕ್ತಿ ಸರ್ಕಾರಕ್ಕೆ ಇದೆಯೋ ಇಲ್ಲವೋ ಎಂದು ಇವತ್ತು ಹೇಳಬೇಕಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಎ.ಎಸ್. ಗುರುಸ್ವಾಮಿಯವರು
ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ನಾನು ಏಕೆ ಈ ನ್ಯಾಯಾಂಗ ತನಿಖೆ ಬೇಡವೆಂದು ಹೇಳಿದೆವು ಎಂದರೆ, ಈ ನ್ಯಾಯಾಂಗ ತನಿಖೆಯಲ್ಲಿ ಕೇವಲ ಸಾಕ್ಷಿಗಳನ್ನು ರೆಕಾರ್ಡ್ ಮಾಡಿಕೊಳ್ಳುವುದು, ಅದು ಇನ್‌ವೆಸ್ಟಿಗೇಷನ್ ಅಥಾರಿಟಿ ಅಲ್ಲ ಅದು ಕೇವಲ ಎವಿಡೆನ್ಸ್ ರೆಕಾರ್ಡ್ ಅಥಾರಿಟಿ. ಆಯೋಗದ ಮುಂದೆ ಜನ ಹೋಗುತ್ತಾರೆ ಹೋಗಿ ತಮಗೆ ಗೊತ್ತಿರುವ ವಿಷಯಗಳನ್ನು ಹೇಳುತ್ತಾರೆ ಅದರ ಮೇಲೆ ಅವರು ಡಿಷಿಷನ್ ಕೊಡುತ್ತಾರೆ. ನಾವು ಎಷ್ಟೋ ನ್ಯಾಯಾಂಗ ತನಿಖೆಗಳನ್ನು ನೋಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಹುಬ್ಬಳ್ಳಿ ಗೋಲಿಬಾರ್ ಪ್ರಕರಣ ಇರಬಹುದು, ಭಟ್ಕಳದ ಗೋಳಿಬಾರ್ ಪ್ರಕರಣ ಇರಬಹುದು, ಅಲ್ಲಿಯ ಗಲಭೆಗಳು ಇರಬಹುದು, ನಾನು ಕೂಡ ಅಲ್ಲಿದೆ ಹೋದಗಿದ್ದೇನೆ, ಅಲ್ಲಿ ನಡೆಯುವಂಥ ಪ್ರಕರಣಗಳು, ಅಲ್ಲಿ ಸರ್ಕಾರ ನೀಡುವಂಥ ಸಾಕ್ಷ್ಯಾಧಾರಗಳು ಹಾಗೂ ಅಲ್ಲಿಯ ಅಧಿಕಾರಿಗಳ ನೀಡುವ ಮಾತು, ಇವುಗಳ ಆಧಾರದ ಮೇಲೆ ಯೋಗದ ಚಿಂತನೆ ನಡೆಯುತ್ತಿದೆ. ನಿಜವಾಗಿಯೂ ಅದು ವಿಷಯದ ಆಳಕ್ಕೆ ಹೋಗಿ ಇನ್‌ವೆಸ್ಟಿಗೇಷನ್ ನಡೆಯುವುದಿಲ್ಲ. ಇದಕ್ಕಾಗಿಯೇ ನಾವು ನ್ಯಾಯಾಂಗ ತನಿಖೆ ಬೇಡ ಸಿಬಿಐ ತನಿಖೆ ಬೇಕು ಎಂದು ಹೇಳಿದ್ದು. ಸಿಬಿಐ ತನಿಖೆ ಆದರೆ ಆ ಅಧಿಕಾರಿಗಳು ಮೂಲಕ್ಕೆ ಹೋಗಿ ತನಿಖೆ ಮಾಡಿ ಅಲ್ಲಿಂದ ವಿಷಯಗಳನ್ನು ಹೊರಗೆ ಹಾಕುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇಂಡಿಪೆಂಡೆಂಟ್ ಆಗಿ ನ್ಯಾಯಾಧೀಶರು ಆ ರೀತಿ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಇದಕ್ಕಾಗಿಯೇ ನಾವು ನ್ಯಾಯಾಂಗ ತನಿಖೆ ಬೇಡವೆಂದು ಹೇಳಿದೆವು. ಆದರೂ ನೀವು ಅದನ್ನು ಮಾಡಿದಿರಿ, ಅದು ಎಲ್ಲಿಗೆ ಬಂತು? ವೀರಪ್ಪನ್ ವಿಚಾರಣೆಯ ಪ್ರಕರಣ ಎಲ್ಲಿಗೆ ಬಂತು? ಈ ವಿಚಾರಗಳನ್ನು ಜನರ ಎದುರಿಗೆ ಈ ಸರ್ಕಾರ ತರಬೇಕೆಂದು ಹೇಳುತ್ತಿದ್ದೇನೆ. ಇದರ ಜೊತೆಗೆ ಇಲ್ಲಿಯವರೆಗೂ ನಮ್ಮ ರಾಜ್ಯದಲ್ಲಿ ಈ ನ್ಯಾಯಾಂಗ ತನಿಖೆಗಳಿಂದ ಏನೇನು ಆಗಿದೆ ಎಂದು ನಾವು ನೋಡುವುದಾದರೆ, ಮತ್ತು ಆ ವರದಿಗಳು ಯಾವ ರೀತಿ ಕಸದಬುಟ್ಟಿಗೆ ಸೇರಿವೆ ಎನ್ನುವುದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಒಂದೆರಡು ಪ್ರಕರಣಗಳನ್ನು ನಾನು ಉಲ್ಲೇಖ ಮಾಡುವುದಾದರೆ, ಹುಬ್ಬಳ್ಳಿಯ ಗೋಲಿಬಾರಿನ ಪ್ರಕರಣದಲ್ಲಿ 4-5 ಜನ ಹತ್ಯೆಯಾಯಿತು ಅದಕ್ಕೆ ನ್ಯಾಯಮೂರ್ತಿ ರಾಜಶೇಖರಮೂರ್ತಿಯವರ ಆಯೋಗ ನೇಮಕವಾಯಿತು. ನಂತರ ಅವರು ವರದಿ ಕೊಟ್ಟರೂ ಅದು ಸದನದ ಮುಂದೆ ಬಂದಿಲ್ಲ. ಅದೇರೀತಿಯಾಗಿ ನ್ಯಾಯಮೂರ್ತಿಗಳಾದ ಜಗನ್ನಾಥ್ ಶೆಟ್ಟಿ, ರಾಮಚಂದ್ರಯ್ಯ ಆಯೋಗ, ಈ ಭಟ್ಕಳದಲ್ಲಿ ನಡೆದಂಥ ಕೋಮುಗಲಭೆ ಇರಬಹುದು ಮತ್ತು ಶಾಸಕರಾದಂಥ ಡಾ|| ಚಿತ್ತರಂಜನ್ ಅವರ ಹತ್ಯೆ ಪ್ರಕರಣ ಇರಬಹುದು, ಇವುಗಳ ಬಗ್ಗೆ ತನಿಖೆ ಮಾಡಲು ಜಗನಾಥ್ ಶೆಟ್ಟಿ ಆಯೋಗ ಮತ್ತು ರಾಮಚಂದ್ರಯ್ಯನವರ ಆಯೋಗವನ್ನು ನೀವು ನೇಮಕ ಮಾಡಿದಿರಿ. ಆಯೋಗದವರು ಇನ್‌ವೆಸ್ಟಿಗೇಷನ್ ಮಾಡಿದರು...

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಛೇರ್ಮನ್‌ರವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಸದನದ ಪರಿಸ್ಥಿತಿಯನ್ನು ತಾವು ನೋಡಬೇಕಾಗುತ್ತದೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಘನತೆ ಗೌರವ ಇದೆ.

ಛೇರ್ಮನ್:- ದಯಮಾಡಿ ಮಾನ್ಯ ಸದಸ್ಯರುಗಳಲ್ಲಿ ಒಂದು ಪ್ರಾರ್ಥನೆ, ದಯವಿಟ್ಟು ತಮ್ಮ ತಮ್ಮ ಸ್ಥಾನದಲ್ಲಿದ್ದು ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಬೇಕೆಂದು ನನ್ನ ಆಶಯ.

ಶ್ರೀ ಡಿ.ವಿ. ಸದಾನಂದ ಗೌಡ:- ದಯಮಾಡಿ ಆ ಕಡೆ ತಾವು ನೋಡಿ ಯಾವ ರೀತಿ ಇದೆ.

Mr. CHARMAN:- May I request Mr. Sanganna, may I request Mr. Tippa Reddy, Mr. Shetty, will you kindly proceed to your seat please?

ಶ್ರೀ ಹೆಚ್. ಮಹಾದೇವ ಪ್ರಸಾದ್:- ಮಾನ್ಯ ಛೇರ್ಮನ್‌ರವರೇ, ತಾವು ಕನ್ನಡದಲ್ಲಿ ಹೇಳಬೇಕು ಅಲ್ಲವೇ?

ಛೇರ್ಮನ್:- ದಯಮಾಡಿ ತಮ್ಮ ತಮ್ಮ ಆಸನಗಳಿಗೆ ನಿರ್ಗಮಿಸಬೇಕೆಂದು ಕೋರಲಾಗಿದೆ.

ಎಸ್.ಕೆ. ಬೆಳ್ಳುಬ್ಬಿ:- ಮಾನ್ಯ ಛೇರ್ಮನ್‌ರವರೇ, ಕವಟೇಕರ್ ಎನ್ನತಕ್ಕಂಥ ಒಬ್ಬ ಪೊಲೀಸ್ ಅಧಿಕಾರಿಯ ಮರ್ಡರ್ ಆಗಿದ್ದು ಅದರ ಬಗ್ಗೆ ಇದೇ ಸದನದಲ್ಲಿ ಚರ್ಚೆಯಾಗಿತ್ತು. ಅದು ಮರ್ಡರ್ ಅಲ್ಲ, ಆತ್ಮಹತ್ಯೆ ಎಂದು ಸರ್ಕಾರ ಮತ್ತು ಅಧಿಕಾರಿಗಳು ಹೇಳಿದರು. ಇದರ ಬಗ್ಗೆ ಏನಾಯಿತು ಇದುವರೆವಿಗೂ ಗೊತತಾಗಲಿಲ್ಲ. ಜೊತೆಗೆ ಆ ಅಧಿಕಾರಿಯ ಮಗನಿಗೆ ಅನುಕಂಪದ ಆಧಾರದ ಮೇಲೆ ನೌಕರಿ ಕೊಡುತ್ತೇವೆಂದು ಹೇಳಿದ್ದರು, ಅವನ ಮಗನಿಗೆ ಇನ್ನು ನೌಕರಿ ಸಿಕ್ಕಿಲ್ಲ, ಅವನಿಗೆ ಯಾವಾಗ ನೀವು ಕೆಲಸ ಕೊಡಿಸುತ್ತೀರಿ? ಆತನ ಮಗ ಕಾಗದ ಪತ್ರ ಹಿಡಿದುಕೊಂಡು ಇನ್ನೂ ಕೆಲಸಕ್ಕಾಗಿ ಅಲೆದಾಡುತ್ತಿದ್ದಾನೆ, ದಯಮಾಡಿ ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕೆಂದು ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯಬಯಸುತ್ತೇನೆ.

ಛೇರ್ಮನ್:- ಮಾನ್ಯ ಬೆಳ್ಳುಬ್ಬಿಯವರೆ, ಸದರಿ ನಿರ್ಣಯದ ಮೇಲೆ ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಈಗಾಗಲೇ ನಡೆದಿರತಕ್ಕಂಥ ಕೆಲವು ಘಟನೆಗಳ ಬಗ್ಗೆ ಹೈಲೈಟ್ ಮಾಡಿ ಸರ್ಕಾರದ ಗಮನಕ್ಕೆ ತರಬಹುದು. ಆದ್ದರಿಂದ, ಈಗ ಮಧ್ಯದಲ್ಲಿ ಪ್ರವೇಶ ಮಾಡಿ ಹೇಳತಕ್ಕಂಥ ಅವಶ್ಯಕತೆ ಏನಿದೆ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಛೇರ್ಮನ್‌ರವರೇ, ಅಲ್ಲಿ ಗೋಲಿಬಾರ್ ಕೂಡ ಆಗಿದೆ. ಹಾಗೆಯೇ ಒಬ್ಬ ಪಿ.ಎಸ್.ಐ ಮರ್ಡರ್ ಆಗಿರತಕ್ಕಂಥ ಬಗ್ಗೆ ಈ ಸದನದಲ್ಲಿ ಚರ್ಚೆ ಆಗಿತ್ತು. ಅದು ಮರ್ಡರ್‌ಲ್ಲ, ಆತ್ಮಹತ್ಯೆ ಎಂದು ಸರ್ಕಾರದವರು ಮತ್ತು ಅಧಿಕಾರಿಗಳು ಹೇಳಿದರು. ಇದರ ಬಗ್ಗೆ ಕೂಡ ನ್ಯಾಯಾಂಗ ತನಿಖೆ ನಡೆಯುತ್ತಿದೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಗೃಹ ಸಚಿವರಾದ ಶ್ರೀ ಖರ್ಗೆಯವರು ಭರವಸೆ ಕೊಟ್ಟಿದ್ದರು. ಕವಟೇಕರ್ ಎನ್ನತಕ್ಕಂಥ ಪಿ.ಎಸ್.ಐ. ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೋ ಅಥವಾ ಕೊಲೆಯಾಗಿದೆಯೋ ಎನ್ನತಕ್ಕಂಥದ್ದು ಗೊತ್ತಿಲ್ಲ. ಆದರೆ ಒಟ್ಟಿನಲ್ಲಿ ಅವರ ಹತ್ಯೆ ಆಗಿದೆ. ಆನಂತರ, ಈತನ ಮಗನಿಗೆ ಅನುಕುಂಪದ ಆಧಾರದ ಮೇಲೆ ನೌಕರಿ ಕೊಡುತ್ತೇವೆಂದು ಹೇಳಿದ್ದರು. ಈ ಘಟನೆ ನಡೆದಂಥ ಸಂದರ್ಭದಲ್ಲಿ ಈ ಸದನದಲ್ಲಿ ಬಿರುಸಿನ ಚರ್ಚೆ ಆದಂಥ ಸಂದರ್ಭದಲ್ಲಿ ಈತನ ಮಗನಿಗೆ ನೌಕರಿ ಕೊಡುತ್ತೇವೆಂದು ಘೋಷಣೆ ಮಾಡಿದರು. ಈತನ ಮಗ ನೌಕರಿಗಾಗಿ ಪ್ರತಿಯೊಂದು ಇಲಾಖೆಗೆ ಅಡ್ಡಾಡುತ್ತಿದ್ದಾನೆ, ಆದರೆ, ಇನ್ನು ಕೆಲಸ ಕೊಟ್ಟಿಲ್ಲ. ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೇವಲ ಭರವಸೆಗಳನ್ನು ಕೊಡುವುದಷ್ಟೆ ಆಗಿದೆ. ಆದರೆ, ಅನುಷ್ಠಾನ ಮಾತ್ರ ಆಗುತ್ತಿಲ್ಲ. ಆತನ ಮಗ ಕಾಗದ ಪತ್ರ ಹಿಡಿದುಕೊಂಡು ನನಗೊಂದು ನೌಕರಿ ಕೊಡಿ ಎಂದು ಇನ್ನು ಅಡ್ಡಾಡುತ್ತಿದ್ದಾನೆ. ಈ ಒಂದು ಪರಿಸ್ಥಿತಿಯನ್ನು ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ. ಸದರಿ ಘಟನೆ ಬಗ್ಗೆ ಕೂಡ ನ್ಯಾಯಾಂಗ ತನಿಕೆ ನಡೆಯುತ್ತಿದೆ. ಆದರೆ, ನ್ಯಾಯಾಂಗ ತನಿಖೆಯ ವರದಿ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ನ್ಯಾಯಾಂಗ ತನಿಖೆ

ಆಗಿರತಕ್ಕಂಥ ಪರಿಸ್ಥಿತಿ ಬಗ್ಗೆ ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ದಿನಾಂಕ 24-10-2002 ರಂದು ಈ ಸದನದ ಮೂಲಕ ನ್ಯಾಯಮೂರ್ತಿ ಜಗನ್ನಾಥಶೆಟ್ಟಿ ಮತ್ತು ನಾಗಣ್ಣಮೂರ್ತಿ ರಾಮಚಂದ್ರಯ್ಯ ಆಯೋಗ ನೀಡಿರತಕ್ಕಂಥ ವರದಿ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಭಟ್ಕಳ ಗಲಭೆ ಮತ್ತು ಶಾಸಕರಾಗಿದ್ದಂಥ ಡಾ॥ ಚಿತ್ತರಂಜನ್ ಹತ್ಯೆ ಬಗ್ಗೆ ಹೆಚ್ಚಿನ ತನಿಖೆ ಮಾಡಲು ಒಂದು ಆಯೋಗವನ್ನು ನೇಮಕ ಮಾಡಲಾಗಿತ್ತು. ಈ ಆಯೋಗದವರು ಸುಮಾರು ಒಂದರಿಂದ ಎರಡು ವರ್ಷದವರೆಗೆ ಸಾಕಷ್ಟು ವಿಚಾರಣೆ ಮಾಡಿ ಇದರ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ನ್ಯಾಯಮೂರ್ತಿಗಳಾದಂಥ ಶ್ರೀ ಕೆ. ಜಗನ್ನಾಥ್ ಶೆಟ್ಟಿಯವರು ತಮ್ಮ ವರದಿಯನ್ನು ದಿನಾಂಕ 27-02-1997 ರಲ್ಲಿಯೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಹಾಗೆಯೇ ನ್ಯಾಯ ಮೂರ್ತಿಗಳಾದ ಶ್ರೀ ಕೆ. ರಾಮಚಂದ್ರಯ್ಯನವರು ತಮ್ಮ ವಿಚಾರಣೆ ಆಯೋಗದ ವರದಿಯನ್ನು ದಿನಾಂಕ 31-03-1998 ರಲ್ಲಿ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳತಕ್ಕಂಥದ್ದು ಏನೆಂದರೆ, ಶ್ರೀ ಕೆ. ಜಗನ್ನಾಥ್ ಶೆಟ್ಟಿಯವರು 1997 ನೇ ಇಸವಿಯಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಆದರೆ, ಈಗಾಗಲೇ 5 ವರ್ಷ ಆಯಿತು. ಆದರೆ, ಇದುವರೆಗೂ ಈ ಸದನದ ಮುಂದೆ ಆ ವರದಿಯನ್ನು ಮಂಡನೆ ಮಾಡಿಲ್ಲ. ಹಾಗೆಯೇ ರಾಮಚಂದ್ರಯ್ಯ ವಿಚಾರಣಾಯೋಗದ ವರದಿಯನ್ನು 1998ನೇ ಇಸವಿಯಲ್ಲಿ ಕೊಟ್ಟಿದ್ದಾರೆ. ಸದರಿ ವರದಿಯನ್ನು ಕೊಟ್ಟು ನಾಲ್ಕು ವರ್ಷವಾಗಿದೆ. ಆದರೆ ಇನ್ನೂ ಕೂಡ ಸದನದ ಮುಂದೆ ಮಂಡನೆ ಮಾಡಿಲ್ಲ. ಇದನ್ನು ಏಕೆ ಮುಚ್ಚಿಡುತ್ತಿದ್ದೀರಿ? ಈ ಒಂದು ವರದಿಯ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥದ್ದು ಮತ್ತು ಸದರಿ ವರದಿಯಲ್ಲಿರತಕ್ಕಂಥ ವಿಷಯಗಳ ಬಗ್ಗೆ ಸರ್ಕಾರ ಆ್ಯಕ್ಷನ್ ಟೇಕನ್ ರಿಪೋರ್ಟ್ ತೆಗೆದುಕೊಂಡಿರತಕ್ಕಂಥದರ ಬಗ್ಗೆ ಸದನದ ಮುಂದೆ ಮಂಡನೆ ಮಾಡಬೇಕಾಗುತ್ತದೆ. ಇಲ್ಲಿಯವರೆಗೆ ಇದನ್ನು ಏಕೆ ಮಾಡಲಿಲ್ಲ ಎನ್ನತಕ್ಕಂಥದನ್ನು ತಿಳಿಸಬೇಕಾಗುತ್ತದೆ. ನ್ಯಾಯಾಂಗ ತನಿಖೆ ಮಾಡಿ, ತಯಾರು ಮಾಡಿರತಕ್ಕಂಥ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಆರು ತಿಂಗಳೊಳಗಾಗಿ ಸರ್ಕಾರ ಸದನದ ಮುಂದೆ ಮಂಡನೆ ಮಾಡತಕ್ಕಂಥದ್ದು ಒಂದು ಮ್ಯಾಂಡೇಟರಿಯಾಗಿದೆ Commission of Inquiry Act, 1952. ಅದರ ಪ್ರಕಾರ ಇದು ಮ್ಯಾಂಡೇಟರಿಯಾಗಿದೆ. ಈ ಒಂದು ಮ್ಯಾಂಡೇಟರಿಯನ್ನು ಸರ್ಕಾರ ನಿಭಾಯಿಸಿಲ್ಲ. ಸೆಕ್ಷನ್ - 3 ಸಬ್ ಕ್ಲಾಜ್-4 ನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

"The appropriate Government shall cause to be laid before each House of the parliament or as the case may be a legislature of a state the report, if any, of the Commission of Inquiry made by the commission under subsection (1) together with a memorandum of the action taken theron within a period of six months of submission of the report by the Commission to the appropriate Government."

ಎನ್‌ಕ್ವರಿ ಕಮಿಷನ್ ಆ್ಯಕ್ಟ್- ಸಬ್ ಕ್ಲಾಸ್ - 4 ಪ್ರಕಾರ ಎನ್‌ಕ್ವಯರಿ ವರದಿಯನ್ನು ಸದನದ ಮುಂದೆ ಆರು ತಿಂಗಳೊಳಗಾಗಿ ಮಂಡಿಸಬೇಕಾಗುತ್ತದೆ. ಆದರೆ, ಒಂದು ವರದಿಯನ್ನು ಕೊಟ್ಟು ಐದು ವರ್ಷವಾಗಿದೆ. ಹಾಗೆಯೇ ಇನ್ನೊಂದು ವರದಿಯನ್ನು ಕೊಟ್ಟು 4 ವರ್ಷವಾಗಿದೆ. ಇಲ್ಲಿಯವರೆಗೂ ಈ ಸದನದಲ್ಲಿ ಮಂಡನೆ ಮಾಡಿಲ್ಲ. ಇದರ ಬಗ್ಗೆ ಈ ಸದನದಲ್ಲಿ ನಾವು ಸಾಕಷ್ಟು ಸಲ ಒತ್ತಾಯ ಮಾಡಿದ್ದೇವೆ. ಹಾಗೆಯೇ ಧರಣಿ ಮತ್ತು ಸತ್ಯಾಗ್ರಹ ಮಾಡಿದಂಥ

ಸಂದರ್ಭದಲ್ಲಿ ಭರವಸೆಯನ್ನು ಕೊಡುತ್ತಾರೆ. ಸದನ ಮುಗಿಯುವುದರೊಳಗೆ ಅಥವಾ ಮುಂದಿನ ಸದನದಲ್ಲಿ ಮಂಡನೆ ಮಾಡುತ್ತೇವೆಂದು ಪ್ರತಿ ಸಲ ಹೇಳುತ್ತಾರೆಯೇ ಹೊರತು ಇದುವರೆಗೂ ಮಂಡನೆ ಮಾಡಿಲ್ಲ. ಆ ವರದಿಗಳನ್ನು ಮುಚ್ಚಿಡತಕ್ಕಂಥ ಪರಿಸ್ಥಿತಿ ಏನಿದೆ? ಹಾಗೆಯೇ ಇದನ್ನು ಮುಚ್ಚಿಡತಕ್ಕಂಥ ಕೆಲಸವನ್ನು ನೀವು ಏಕೆ ಮಾಡುತ್ತಿದ್ದೀರಿ? ಇದನ್ನು ಏಕೆ ಬಹಿರಂಗ ಮಾಡುತ್ತಿಲ್ಲ? ಯಾರಾದರೂ ಅಧಿಕಾರಿಗಳು ಅಥವಾ ವ್ಯಕ್ತಿಗಳ ರಕ್ಷಣೆ ಮಾಡುವುದಕ್ಕೆ ತಾವು ಹೊರಟಿದ್ದೀರಿಯೇ? ಸರ್ಕಾರ ಇದನ್ನು ಇಲ್ಲಿ ಹೇಳಬೇಕಾಗುತ್ತದೆ. ಆ ವರದಿಯನ್ನು ಸರ್ಕಾರ ಇಲ್ಲಿ ಮಂಡನೆ ಮಾಡಬೇಕಾಗಿತ್ತು. ಆದರೆ ಸರ್ಕಾರದ ನಡವಳಿಕೆ ನೋಡಿದರೆ ಇದನ್ನು ಮುಚ್ಚಿಡತಕ್ಕಂಥ ಕೆಲಸ ಮಾಡುತ್ತಿದ್ದಾರೆಂದು ಕಾಣುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಾವು ಕೋರ್ಟ್‌ಗೆ ಹೋಗಬೇಕಾಗುತ್ತದೆ. ಇದರ ಬಗ್ಗೆ ಸುಪ್ರೀಂ ಕೋರ್ಟ್ ಒಂದು ರೂಲಿಂಗನ್ನು ಕೂಡ ಮಾಡಿದೆ. ಸುಪ್ರೀಂ ಕೋರ್ಟ್‌ಗೆ ಅಪ್ರೋಚ್ ಹೊದಂಥ ಸಂದರ್ಭದಲ್ಲಿ ಇದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಕೂಡ ನಡೆಯಿತು. ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನವರು ಒಂದು ಅಬ್ಸರ್‌ವೇಷನ್ ಮಾಡಿದ್ದಾರೆ. ಅದೇನೆಂದರೆ, ಎನ್‌ಕ್ವೈಯರಿ ಕಮಿಷನ್ ನೀಡತಕ್ಕಂಥ ವರದಿಯನ್ನು ಆದಷ್ಟು ಬೇಗ ಮಂಡನೆ ಮಾಡಬೇಕು. ಈ ಒಂದು ಕಾನೂನಿನ ಪ್ರಕಾರ ಇವರು ಇಲ್ಲಿ ಮಂಡನೆ ಮಾಡಬೇಕಾಗಿತ್ತು ಎನ್ನತಕ್ಕಂಥ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. 1999 ಎ.ಆರ್.ಸುಪ್ರೀಂ ಕೋರ್ಟ್ ಪುಟ 3461 ಪ್ರಕಾರ ಯಾವುದೇ ಒಂದು ಎನ್‌ಕ್ವಯರಿ ಕಮಿಷನ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಆರು ತಿಂಗಳೊಳಗಾಗಿ ಮತ್ತು ಆದಷ್ಟು ಬೇಗ ಸದನದ ಮುಂದೆ ಮಂಡನೆ ಮಾಡಬೇಕೆಂದು ಸುಪ್ರೀಂ ಕೋರ್ಟಿನ ರೂಲಿಂಗ್ ಇದೆ. 1999 ಎಆರ್ ಸುಪ್ರೀಂ ಕೋರ್ಟ್ ಪುಟ 3460 ನ್ನು ಸದನದ ಮುಂದೆ ಓದುವುದಕ್ಕೆ ಇಷ್ಟಪಡುತ್ತೇನೆ.

"It is appropriate that when in a matter of definite public importance a Commission of inquiry is appointed under the Commission of Inquiry is appointed under the Commission of Inquiry Act 1952, the State Government should examine the report expeditious by and decide what action, if any, is required to be taken on that report promptly. To keep a report pending for years together and as in this case for a decade does no credit to anybody. Reports of a Commissions of Inquiry should not be allowed to gather dust for years, together as it reflects, adversely on the utility of such commissions and would affect the credibility of the entire exercise."

ಸುಪ್ರೀಂ ಕೋರ್ಟ್‌ನ ಕ್ಲಿಯರ್ ಮ್ಯಾಂಡೇಟರಿ ಇದೆ. ಆದರೆ, ಇದನ್ನು ಕೂಡ ಇವತ್ತಿನ ದಿವಸ ನೆಗ್ಲೇಟ್ ಮಾಡಿದ್ದಾರೆ. ಸುಪ್ರೀಂ ಕೋರ್ಟ್‌ನಿಂದ ನಮ್ಮ ರಾಜ್ಯ ಸರ್ಕಾರ ಬಹಳಷ್ಟು ಸಲ ಛೀಮಾರಿ ಹಾಕಿಸಿಕೊಂಡಿದೆ. ಗ್ರಾಮೀಣ ಕೃಪಾಂಕದ ಬಗ್ಗೆ ಇರಬಹುದು ಅಥವಾ ಕಾವೇರಿ ನದಿ ವಿಚಾರ ಅಥವಾ ಸಿ.ಇ.ಟಿ. ವಿಚಾರ ಇರಬಹುದು. ಒಟ್ಟಿನಲ್ಲಿ ಹೆಚ್ಚಿನ ಸಲ ಛೀಮಾರಿ ಹಾಕಿಸಿಕೊಂಡಿದೆ. ಹಾಗೆಯೇ ಕ್ಷಮಾಪಣೆ ಕೂಡ ಕೇಳಿಕೊಂಡಿದ್ದಾರೆ. ಬಹುಶಃ ನಾಳೆದಿವಸ ನಾವು ಯಾರಾದರೂ ಕೋರ್ಟ್‌ಗೆ ತೆಗೆದುಕೊಂಡು ಹೋಗತಕ್ಕಂಥ ಪ್ರಸಂಗ ಬಂದರೆ ತನಿಖಾ

ಆಯೋಗದ ವರದಿಯನ್ನು ಆರು ತಿಂಗಳೊಳಗಾಗಿ ಸದನದ ಮುಂದೆ ಮಂಡಿಸಲು ತಪ್ಪಿದ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತೆ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ. ಇದಕ್ಕಾಗಿ ನ್ಯಾಯಾಲಯಕ್ಕೆ ಹೋಗುವುದು. ಬೇಡ. 31 ನೇ ಮಾರ್ಚ್ ತಿಂಗಳೊಳಗಾಗಿ ಈ ಸದನ ಮುಗಿಯುವುದರೊಳಗೆ ದಯವಿಟ್ಟು ಆ ಎರಡು ತನಿಖಾ ವರದಿಗಳನ್ನು ಸದನದ ಮುಂದೆ ಮಂಡನೆ ಮಾಡಿ. ನಾನು ಈಗಾಗಲೇ ಹೇಳಿದ ಪ್ರಕಾರ ಬೇರೆ ಬೇರೆ ವಿಷಯಗಳ ಬಗ್ಗೆ ಬೇರೆ ಬೇರೆ ಆಯೋಗದವರು ತನಿಖಾ ವರದಿಯನ್ನು ಕೊಟ್ಟಿದ್ದಾರೆ. ಇದನ್ನು ಸದನದ ಮುಂದೆ ಮಂಡನೆ ಮಾಡತಕ್ಕಂಥದ್ದು ಮ್ಯಾಂಡೇಟರಿಯಾಗಿದೆ. ಮ್ಯಾಂಡೇಟರಿ ಪ್ರಕಾರ ನಡೆದುಕೊಳ್ಳಬೇಕು. ಇಲ್ಲದಿದ್ದರೆ, ನ್ಯಾಯಾಲಯದಿಂದ ಮತ್ತೆ ಛೀಮಾರಿ ಹಾಕಿಸಿಕೊಳ್ಳತಕ್ಕಂಥ ಪ್ರಸಂಗ ಬರುತ್ತದೆ. ಆದಕಾರಣ ಸರ್ಕಾರ ಈ ವರದಿಗಳ ಸಭೆಯ ಮುಂದೆ ಮಂಡನೆ ಮಾಡಬೇಕು ಮತ್ತು ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ ಎನ್ನತಕ್ಕಂಥದ್ದು ಗೊತ್ತಾಗಬೇಕು. ಇವರು ಅಧಿಕಾರಿಗಳಾಗಿರಬಹುದು ಅಥವಾ ಯಾರಾದರೂ ಪ್ರಭಾವಿ ವ್ಯಕ್ತಿಗಳಿರಬಹುದು ಅಥವಾ ಯಾವುದೇ ಕಮ್ಯುನಿಟಿರವರಿರಬಹುದು. ಅವರೇನಾದರೂ ತಪ್ಪು ಮಾಡಿದ್ದರೆ, ಅಥವಾ ಅವರ ಮೇಲೆ ಏನಾದರೂ ರಿಮಾರ್ಕ್ ಮಾಡಿದ್ದರೆ ಅಥವಾ ಏನಾದರೂ ಸಲಹೆ ಸೂಚನೆಗಳನ್ನು ಕೊಟ್ಟಿದ್ದರೆ, ಅದನ್ನು ಸರಿಮಾಡುವುದು, ಅವವ ಮೇಲೆ ಅದು ಕೈಗೊಳ್ಳವಂಥಾದ್ದು. ಆ್ಯಕ್ಷನ್ ಟೇಕನ್ ರಿಪೋರ್ಟ್ ಕೊಡುವಂಥಾದ್ದು ಸರ್ಕಾರದ ನೀತಿಯಾಗಿದೆ. ಆದರೆ ಇವು ಯಾವುದು ಇವತ್ತಿನವರೆಗೂ ಆಗುತ್ತಿಲ್ಲ. ಇವೊತ್ತು ಭಟ್ಕಳ ಆಯೋಗದ ವರದಿ ಬಂದಮೇಲೆ ಯಾವ ರೀತಿ ಅಲ್ಲಿ ಗೊಂದಲ ಆಗಿದೆ, ಎಂಥಂಥ ವ್ಯಕ್ತಿಗಳು, ಅಲ್ಲಿಗೆ ಬಂದು ಹೋದರು ವಿದೇಶದಿಂದ ಯಾವ ವ್ಯಕ್ತಿಗಳು ಅಲ್ಲಿಗೆ ಬಂದು ನೆಲೆಸಿದ್ದಾರೆ. ಹೀಗಾಗಿ ಈ ವಿಷಯಗಳೆಲ್ಲವೂ ಆ ವರದಿಯಲ್ಲಿ ಅಡಕವಾಗಿರಬಹುದು ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಆಗಿರಬಹುದು.

ಶ್ರೀ ಆರ್. ರೋಷನ್ ಬೇಗ್:- (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು ಭಟ್ಕಳ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಶಾಸಕರಾಗಿದ್ದಂಥ ಡಾ॥ ಚಿತ್ತರಂಜನ್‌ರವರು ಮರ್ಡರ್ ಆದಾಗ ಸದರಿ ಕೇಸನ್ನು ಸಿ.ಬಿ.ಐ. ಗೆ ರೆಫರ್ ಮಾಡಲಾಗಿತ್ತು. ಆ ಸಿ.ಬಿ.ಐ. ತನಿಖೆ ಏನಾಯಿತು ಎನ್ನತಕ್ಕಂಥದ್ದನ್ನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಅದು ಏನಾಯಿತು ಎನ್ನತಕ್ಕಂಥದ್ದರ ಬಗ್ಗೆ ನಾವು ನೀವು ಕೂಡಿ ಪ್ರಯತ್ನ ಮಾಡಬೇಕು. ಅದು ಏನಾಯಿತು ಎಂದು ಕೈ ಕಟ್ಟಿ ಕುಳಿತುಕೊಂಡರೆ ಅದೇನೂ ಆಗುವುದಿಲ್ಲ. ನೀವು ಬನ್ನಿ ಅಲ್ಲಿಗೆ ಹೋಗಿ ಕೇಳೋಣ.

ಶ್ರೀ ಆರ್. ರೋಷನ್ ಬೇಗ್:- ಕೇಂದ್ರ ಸರ್ಕಾರ ತಮ್ಮ ಕೈಯಲ್ಲಿ ಸಿ.ಬಿ.ಐ. ತಮ್ಮ ಕೈಯಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್:- ಇದಕ್ಕೆ ಮಾಹಿತಿಗಳನ್ನು ಕೊಡುವುದು ನೀವಲ್ಲ ನಿಮ್ಮ ಅಧಿಕಾರಿಗಳು ಕೊಡುತ್ತಾರೆ.

1.30 ಪಿ.ಎಂ.

ಶ್ರೀ ವಿಶ್ವೇಶ್ವರ ಹೆಗಡೆ ಹಾಗೇರಿ:- ಮಾನ್ಯ ಛೇರ್ಮನರೆ, ನನ್ನದೊಂದು ವಿನಂತಿ ಈ ಸಂದರ್ಭದಲ್ಲಿ, ಜಗನ್ನಾಥಶೆಟ್ಟಿ ಹಾಗೂ ರಾಮಚಂದ್ರಯ್ಯರವರ ಆಯೋಗದ ವರದಿಯನ್ನು ಬಹಿರಂಗಪಡಿಸಿದರೆ ಸಿಬಿಐ ತನಿಖೆಗೂ ಅನುಕೂಲವಾಗುತ್ತದೆ. ಸಿಬಿಐ ತನಿಖೆಗೂ ನಾನು

ಅತ್ಯಂತ ಸ್ಪಷ್ಟವಾಗಿ ಹಾಗೂ ವಿಶ್ವಾಸದಿಂದ ಹೇಳುವುದಕ್ಕೆ ಬಯಸುತ್ತೇನೆ. ಈ ಎರಡು ವರದಿಗಳು ಏನಿವೆ, ಅವುಗಳನ್ನು ಬಹಿರಂಗಪಡಿಸಲಿ. ಸಿಬಿಐ ತನಿಖೆಗೂ ಅನುಕೂಲವಾಗುತ್ತದೆ, ಸಿಬಿಐ ತನಿಖೆಗೆ ಪ್ರಾಮಾಣಿಕವಾಗಿ ಸಹಾಯ ಮಾಡಬೇಕೆಂದು ಇದ್ದರೆ.

ಶ್ರೀ ಆರ್.ರೋಷನ್ ಬೇಗ್:- ಮಾನ್ಯ ಛೇರ್ಮನ್‌ರೆ, ಸಿಬಿಐ ತನಿಖೆಗೆ ಇಷ್ಟು ವರ್ಷಗಳು ಆಗಬೇಕೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಛೇರ್ಮನ್‌ರೆ, ಎಷ್ಟು ವರ್ಷಗಳಿಂದ ನೀವು ಬಚ್ಚಿ ಇಟ್ಟುಕೊಂಡಿದ್ದೀರಿ. ಭಟ್ಕಳ್‌ದಲ್ಲಿ ನಡೆಯತಕ್ಕಂಥ ಚಟುವಟಿಕೆಗಳಿಗೆ ಅನೇಕರ ಆಶೀರ್ವಾದ ಇರುವುದರಿಂದಲೇ ಅಲ್ಲಿ ಹಾಗೆ ನಡೆಯುತ್ತದೆ ಎನ್ನುವುದು ಜಗಜ್ಜಾಹೀರವಾಗಿದೆ. ಜಗನ್ನಾಥಶೆಟ್ಟಿ ಆಯೋಗದ ವರದಿಯಲ್ಲಿ ಬಹಳ ಸ್ಪಷ್ಟವಾಗಿ ನಮೂದಿಸಿದೆ.

ಶ್ರೀ ಆರ್. ರೋಷನ್ ಬೇಗ್:- ಸಿ.ಬಿ.ಐ. ವರದಿ ಏತಕ್ಕಾಗಿ ಬಂದಿಲ್ಲ ಸಿ.ಬಿ.ಐ.ಗೆ ಯಾರ ಆಶೀರ್ವಾದವಿದೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಏಕೆ ಜಗನ್ನಾಥಶೆಟ್ಟಿ ಆಯೋವನ್ನು ಇವತ್ತು ಬಹಿರಂಗ ಪಡಿಸದಿರುವುದಕ್ಕೆ ಇನ್ನು ಯಾರ್‍ಯಾರ ಪ್ರಯತ್ನ ನಡೆದಿದೆ ಎನ್ನುವುದು ಈ ರೀತಿ ಒಂದು ಮಾತಿನಿಂದ ಅದು ಹೊರಗೆ ಬರುತ್ತದೆ. ಹಾಗಾಗಿ ಈ ಎರಡು ವರದಿಗಳನ್ನು ಬಹಿರಂಗಪಡಿಸಲಿ. ಸಿಬಿಐಗೂ ಅನುಕೂಲವಾಗುತ್ತದೆ, ಸಿಬಿಐ ಗೂ ಅನುಕೂಲವಾಗುತ್ತದೆ, ಸಿಬಿಐ ಗೂ ಸಹಾಯವನ್ನು ಮಾಡಲಿ. ಅಲ್ಲಿ ಇನ್ನು ಯಾರು ರಾಷ್ಟ್ರದ್ರೋಹಿ ಚಟುವಟಿಕೆ ನಡೆಸುವಂಥವರು ಇದ್ದಾರೋ ಸಮಾಜ ಘಾತುಕರು ಇದ್ದಾರೋ ಡಾ॥ ಚಿತ್ತರಂಜನ್‌ರಂಥವರನ್ನು ಹತ್ಯೆ ಮಾಡಿದವರು ಇದ್ದಾರೋ ಅವರನ್ನು ದಮನ ಮಾಡುವುದಕ್ಕೆ ಸರ್ಕಾರಕ್ಕೆ ಈ ವರದಿಯನ್ನು ಬಹಿರಂಗ ಪಡಿಸಿದಾಗ ಮಾತ್ರ ಸಾಧ್ಯವಿದೆ. ಹಾಗಾಗಿ ಈ ವರದಿಯನ್ನು ಬಹಿರಂಗ ಪಡಿಸಲಿ. ಸಿಬಿಐ ಗೂ ಅನುಕೂಲವಾಗುತ್ತದೆ ಎನ್ನುವುದುನು ಹೇಳುವುದಕ್ಕೆ ನಾನು ಬಯಸುತ್ತೇನೆ.

ಛೇರ್ಮನ್:- ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಈ ವಿಚಾರವನ್ನು ಅವರು ಹೇಳುತ್ತಾರೆ. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಈಗ 1.30 ಆಯಿತು, ನೀವು ಒಂದು ಕೆಲಸವನ್ನು ಮಾಡಿ, ಆಮೇಲೆ ನೀವು ಮುಂದೂವರೆಸುತ್ತೀರಾ?

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಛೇರ್ಮನ್‌ರೆ, ಹೌದು ಮುಂದುವರೆಸುತ್ತೇನೆ. ಏಕೆಂದರೆ, ಇನ್ನು ವಿಷಯಗಳು ಮಾತನಾಡುವುದು ಬಹಳ ಇದೆ.

Mr chairman:- How much time you want? ಆಯಿತು ನನಗೆ ಅರ್ಥವಾಗುತ್ತದೆ. ಸಭೆಯನ್ನು ಮುಂದುವರೆಸುವುದಕ್ಕೆ ಮುನ್ನ ಒಂದು ಪ್ರಕಟಣೆಯನ್ನು ಮಾಡಬೇಕಾಗುತ್ತದೆ. ಶ್ರೀಮಾನ್ಯ ಆರ್.ವಿ. ದೇಶಪಾಂಡೆ, ಮಾನ್ಯ ಸಚಿವರು ಏನಿದ್ದಾರೆ, ಮಧ್ಯಾಹ್ನ ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳು ಅದರಲ್ಲಿ ಭಾಗವಹಿಸಬೇಕೆಂದು ಹೇಳಿ, ಅವರು ಕೋರಿಕೊಂಡಿದ್ದಾರೆ. ಈ ಸಭೆಯು ಅವರಿಗೆ ಅವರ ಹುಟ್ಟು ಹಬ್ಬದ ಪ್ರಯುಕ್ತ ತುಂಬು ಹೃದಯದಿಂದ ಸರ್ವಾನುಮತದಿಂದ ಕೋರಲಾಗುತ್ತದೆಂದು ಹೇಳಿ, ಈಗ ಸಭೆಯು ಮುಂದೂಡಲ್ಪಟ್ಟು ಪುನಃ 2 ಗಂಟೆ 30 ನಿಮಿಷಕ್ಕೆ ಪ್ರಾರಂಭಗೊಳ್ಳುವುದು.

ಸದನ ಪುನಃ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.
ಮಾನ್ಯ ಉಪಾಧ್ಯಕ್ಷರಾದ (ಶ್ರೀ ಮನೋಹರ್ ಎಚ್. ತಹಸೀಲ್ದಾರ್)
ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)
ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪ

ಉಪಾಧ್ಯಕ್ಷರು:- ತಾವು ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೇ, ಈ ನ್ಯಾಯಾಂಗ ತನಿಖೆಗಳಿಗೆ ಆಯೋಗಗಳನ್ನು ರಚನೆ ಮಾಡಿದ್ದು ಅವುಗಳ ವರದಿ ಏನಾಗಿದೆ ಎನ್ನುವಂಥಾದ್ದು. ಸುಪ್ರೀಂ ಕೋರ್ಟಿನ ಒಂದು ತೀರ್ಪು ಏನಾಗಿದೆ? ಈಗಲಾದರೂ ಸರ್ಕಾರ ಎಚ್ಚೆತ್ತುಗೊಂಡು ಈ ಒಂದು ನ್ಯಾಯಾಂಗ ತನಿಖೆಗಳ ವರದಿಗಳನ್ನು ಸಭೆಯಲ್ಲಿ ಮಂಡನೆ ಮಾಡುವಂಥಾದ್ದು ಮೊಟ್ಟಮೊದಲು ಆಗಬೇಕು ಎನ್ನುವಂಥಾದ್ದು ಮತ್ತು ಈ ರೀತಿ ಬೇರೆ ಬೇರೆ ನ್ಯಾಯಾಂಗ ತನಿಖೆಗಳ ವರದಿಗಳು ಈಗಾಗಲೇ ಸರ್ಕಾರದ ಅಧೀನದಲ್ಲಿವೆ. ವಿಠ್ಠಲೇನಹಳ್ಳಿ ಗೋಲಿಬಾರ್ ಪ್ರಕರಣ ನಡೆದು ಅದರ ಬಗ್ಗೆ ನ್ಯಾಯಾಂಗ ತನಿಖೆ ಆಯಿತು. ಆದರೆ ಅದನ್ನು ಸದನದ ಮುಂದೆ ಮಂಡನೆ ಮಾಡುವುದಕ್ಕೆ ಏಕೆ ಹೆಸಿಟೇಟ್ ಮಾಡುತ್ತಾರೋ ಗೊತ್ತಿಲ್ಲ. ಆದದ್ದರಿಂದ ಇನ್ನು ಮೇಲಾದರೂ ತಕ್ಷಣವೇ ಈ ವರದಿಗಳನ್ನು ಸದನದ ಮುಂದೆ ಮಂಡನೆ ಮಾಡುವಂಥಾದ್ದು ಮತ್ತು ಇದರ ಬಗ್ಗೆ ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂಥಾದ್ದು ಆಗಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಇನ್ನು ಇವತ್ತು ರಾಜ್ಯದಲ್ಲಿ ಚರ್ಚೆಯಾಗತಕ್ಕಂಥ ವಿಷಯ ಎಂದರೆ ಈ ಪ್ರಾದೇಶಿಕ ಅಸಮಾನತೆ ಬಗ್ಗೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಈ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಇವುಗಳನ್ನು ನಾವು ಹೋಲಿಕೆ ಮಾಡಿ ಹೈದರಾಬಾದ್, ಕರ್ನಾಟಕ ಮತ್ತು ಉತ್ತರ ಕರ್ನಾಟಕ ನಿರ್ಲಕ್ಷ್ಯ ಆಗುತ್ತಿದೆ ಎನ್ನತಕ್ಕಂಥ ಮಾತು ಹಲವಾರು ವರ್ಷಗಳಿಂದ, ಈ ಒಂದು ಧ್ವನಿ ಏಳುತ್ತಾ ಇದೆ. ಪಕ್ಷಭೇದ ಮರೆತು ಎಲ್ಲರೂ ಇದನ್ನು ಒಪ್ಪಿಕೊಳ್ಳುವಂಥ ಮಾತು ಎಂದರೆ ಕೌನು, ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕ ನಿರ್ಲಕ್ಷ್ಯ ಆಗಿದೆ ಎನ್ನುವಂಥದ್ದು. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಕಮಿಷನ್‌ನ್ನು ಅಪಾಯಿಂಟ್ ಮಾಡಿದ್ದರು. ಮೊದಲು ಒಬ್ಬರನ್ನು ನೇಮಕ ಮಾಡಿದ್ದರು. ಅದು ಒಂದು ವರ್ಷ ಏನೂ ಕೆಲಸ ಮಾಡಲಿಲ್ಲ. ನಂತರ ಹಿಂದೆ ಪ್ಲಾನಿಂಗ್ ಕಮಿಷನ್ನಿನ ಉಪಾಧ್ಯಕ್ಷರಾಗಿದ್ದಂಥ ಮತ್ತು ಅತ್ಯಂತ ಪ್ರತಿಭಾವಂತ ಅಧಿಕಾರಿಗಳಾಗಿ ಕೆಲಸ ಮಾಡಿದಂಥ ಡಾ|| ನಂಜುಂಡಪ್ಪ ಅವರನ್ನು ಈ ಕಮಿಷನ್‌ಗೆ ಅಧ್ಯಕ್ಷರನ್ನಾಗಿ ಮಾಡಿದಮೇಲೆ ಅವರು ಹಲವಾರು ಕಡೆ ಪ್ರವಾಸ ಮಾಡಿ ಮತ್ತು ಹಲವಾರು ಜನರ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಂಡು ಮತ್ತು ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ಒಂದು ವರದಿಯನ್ನು ಇವತ್ತು ಅವರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಪ್ರಾದೇಶಿಕ ಅಸಮಾನತೆಯನ್ನು ನಿವಾರಣೆ ಮಾಡಲಿಕ್ಕೆ ಯಾವ ರೀತಿ ಸಾಧ್ಯ ಎನ್ನುವಂತಾದ್ದನ್ನು ನೋಡಲು ಸರ್ಕಾರದ ಮುಂದೆ ಆ ವರದಿ ಇದೆ. ಆ ವರದಿ ಮಂಡನೆಯಾದ ಮೇಲೆ ತಕ್ಷಣವೇ ಏನಾದರೂ ಒಂದು ರಿಲೀಫ್ ಈ ಒಂದು ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲಿಕ್ಕೆ ಒಂದಿಷ್ಟು ಪ್ರಾಮಾಣಿಕ ಪ್ರಯತ್ನ ಸರ್ಕಾರದ ಕಡೆಯಿಂದ ಮಾಡಬೇಕಾಗಿತ್ತು. ಒಂದಿಷ್ಟು ಅನುದಾನವನ್ನು ಘೋಷಣೆ ಮಾಡಬೇಕಾಗಿತ್ತು. ಆದರೆ ಅದು ಯಾವುದೂ ಇವತ್ತಿನವರೆಗೂ ಆಗಲಿಲ್ಲ. ಹಾಗಾದರೆ

ಈ ಆಯೋಗಗಳನ್ನು ಈ ಒಂದು ಕಮೀಷನ್ಸ್‌ನ್ನು ನೇಮಕ ಮಾಡುವುದರಲ್ಲಿ ಯಾವ ಪುರುಷಾರ್ಥವಿದೆ ಎನ್ನುವುದನ್ನು ನಾವು ಇವತ್ತು ಕೇಳಬೇಕಾಗುತ್ತದೆ. ಕೇವಲ ನೀವು ವರದಿಯನ್ನು ತೆಗೆದುಕೊಂಡು ಆ ವರದಿಗಳು ಅನುಷ್ಠಾನ ಆಗದೇ ಇರುವುದಾದರೆ ಹಾಗಾದರೆ ಈ ಒಂದು ವರದಿಗಳು, ಕಮೀಷನ್ ಏಕೆ ಬೇಕು ಎನ್ನುವಂತಹ ಪ್ರಶ್ನೆ ಇವತ್ತು ಬರುತ್ತದೆ ಮತ್ತು ಒಂದು ಸಾವಿರ ಪುಟಗಳ ವರದಿಯನ್ನು ಅವರು ಕೊಟ್ಟಿದ್ದಾರೆ. ಕೇವಲ ಅವರು ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಎಂದು ಕಾನ್‌ಸ್‌ಂಟ್ರೇಷನ್ ಮಾಡಲಾಗದೇ ಇಡೀ ರಾಜ್ಯ ಸರ್ವಾಂಗೀಣ ಪ್ರಗತಿಯಾಗಬೇಕು ಮತ್ತು ಇಡೀ ರಾಜ್ಯದಲ್ಲಿರುವಂತಹ ಅತ್ಯಂತ ಹಿಂದುಳಿದ ತಾಲ್ಲೂಕುಗಳು, ಕಡಿಮೆ ಹಿಂದುಳಿದ ತಾಲ್ಲೂಕುಗಳು, ಅಭಿವೃದ್ಧಿಯಾಗುವಂತಹ ತಾಲ್ಲೂಕುಗಳು, ಇವುಗಳನ್ನು ಡಿಸ್‌ಕರ್ಸ್‌ನ್ ಮಾಡಿ ಅವುಗಳ ಬಗ್ಗೆಯೂ ಸಹ ಕೂಲಂಕುಷವಾದಂತಹ ಒಂದು ಅಧ್ಯಯನವನ್ನು ಅವರು ಮಾಡಿದರು. ಆ ವರದಿ ನಮ್ಮ ಮುಂದೆ ಇದೆ, ಆ ವರದಿಯನ್ನು ಅಧ್ಯಯನ ಮಾಡಲಿಕ್ಕೆ ಮತ್ತೊಂದು ಸಬ್ ಕಮಿಟಿ ಈಗ ಸಿ ಇ ಟಿ ಪರಿಸ್ಥಿತಿ ಏನಾಗಿದೆ? ಸಿ ಇ ಟಿ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು, ಸುಪ್ರೀಂ ಕೋರ್ಟ್ ತೀರ್ಪು ಆದ ಮೇಲೆ ಪರಿಸ್ಥಿತಿ ಏನಾಯಿತು? ಗೊಂದಲ, ಮ್ಯಾನೇಜ್‌ಮೆಂಟ್ ಜೊತೆ ಮಾತನಾಡುವಂಥಾದ್ದು, ಈಗ ಮತ್ತೆ ಅದಕ್ಕೊಂದು ಸಬ್ ಕಮಿಟಿ. ಸಿಇಟಿ ಯನ್ನು ಮುಂದುವರಿಸಬೇಕೋ ಅಥವಾ ಬೇಡವೋ ಅಥವಾ ಅದರ ವ್ಯವಸ್ಥೆ ಯಾವ ರೀತಿ ಇರಬೇಕು, ಸುಪ್ರೀಂ ಕೋರ್ಟ್ ತೀರ್ಪು ಆದ 3-4 ತಿಂಗಳ ನಂತರ ಕ್ಯಾಬಿನೇಟ್‌ಸಬ್ ಕಮಿಟಿ. ಅದರ ಬಗ್ಗೆ ಒಂದು ನಿರ್ದಿಷ್ಟ ನಿರ್ಧಾರ ಇಲ್ಲ ಸರ್ಕಾರದ ಕಡೆಯಿಂದ, ನಿರ್ದಿಷ್ಟವಾದ ನಿಲುವು ಇಲ್ಲ. ಅದೇ ರೀತಿ ಡಾಕ್ಟರ್ ನಂಜುಂಡಪ್ಪನವರ ವರದಿ ಬಂತು. ಎಲ್ಲರೂ ಅಪ್ರಿಷಿಯೇಟ್ ಮಾಡಿದ್ದಾರೆ. ಡಾಕ್ಟರ್ ನಂಜುಂಡಪ್ಪನವರು ಸಾಕಷ್ಟು ಶ್ರಮ ಪಟ್ಟು ಕೆಲಸ ಮಾಡಿದ್ದಾರೆ. ಅವರ ಸಲಹೆ ಸೂಚನೆಗಳಲ್ಲಿ ಬಹಳಷ್ಟು ಸತ್ಯಕ್ಕೆ ಸಮೀಪವಾದ ಸಂಗತಿಗಳು ಇವೆ ಎಂದು ಎಲ್ಲರೂ ಹೇಳುವಂತಹ ಪ್ರಸಂಗದಲ್ಲಿ ಅದನ್ನು ನೀವು ಅನುಷ್ಠಾನ ಏಕೆ ಮಾಡಲಿಲ್ಲ ಎನ್ನುವಂತಹ ಪ್ರಶ್ನೆ ಬರುತ್ತದೆ. ಈ ಕ್ಯಾಬಿನೆಟ್ ಸಬ್ ಕಮಿಟಿಯ ಒಂದು ವರದಿ ಅವರು ವರ್ಷಗಟ್ಟಲೆ ಅಭ್ಯಾಸ. ಅಷ್ಟು ಹೊತ್ತಿಗೆ ನಿಮ್ಮ ಸರ್ಕಾರದ ಅವಧಿ ಮುಗಿದು ಹೋಗುತ್ತದೆ. ಆ ವರದಿ ಆಮೇಲೆ ಕಸದ ಬುಟ್ಟಿಗೆ ಬೀಳುತ್ತದೆ. ಅಲ್ಲಿಗೆ ಬರುತ್ತದೆ. ಪರಿಸ್ಥಿತಿ. ಹೀಗಾಗಿ ಈ ಒಂದು ಪ್ರಾದೇಶಿಕ ಅಸಮಾನತೆ ಎನ್ನುವಂಥಾದ್ದು ಅದು ಹಾಗೆಯೇ ಉಳಿದು ಮುಂದುವರಿದುಕೊಂಡು ಬಂದಿದೆ. ಆಮೇಲೆ ಡಾಕ್ಟರ್ ನಂಜುಂಡಪ್ಪನವರ ವರದಿಯಲ್ಲಿ ಅವರು ಹೇಳಿದರು, ಇವತ್ತು ಮೊಟ್ಟಮೊದಲು ಈ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಬೇಕಾದರೆ ಸರ್ಕಾರದ ನೇಮಕಾತಿಗಳು ಏನು ಇವೆ, ಸರ್ಕಾರಿ ನೇಮಕಾತಿಗಳಲ್ಲಿ ಎ ಗ್ರೂಪ್ ಇರಬಹುದು. ಬಿ ಗ್ರೂಫ್ ಇರಬಹುದು, ಸಿ ಗ್ರೂಪ್ ಇರಬಹುದು, ಡಿ ಗ್ರೂಫ್ ಇರಬಹುದು ಆ ಒಂದು ಸಿಬ್ಬಂದಿಯ ನೇಮಕಾತಿ ಮಾಡುವಂಥಾದ್ದರಲ್ಲಿ ಈ ಪ್ರಾದೇಶಿಕ ತಾರತಮ್ಯ ಹೋಗಬೇಕು, ಒಂದು ಪ್ರಾದೇಶಿಕವಾದಂತಹ ಮೀಸಲಾತಿ ಇರಬೇಕು. ಎಲ್ಲಿ ಹಿಂದುಳಿದ ಪ್ರದೇಶಗಳು ಇವೆಂದು, ಅಲ್ಲಿ ಅವರಿಗೆ ಮೀಸಲಾತಿಯನ್ನು ಫಿಕ್ಸ್ ಮಾಡಬೇಕು ಎನ್ನುವಂತಹ ಒಂದು ಸಲಹೆ ಸೂಚನೆ ಇದೆ. ಅದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ನಾನು ಕೇಳಬೇಕಾಗುತ್ತದೆ. ಅದೇ ರೀತಿ ಹಲವಾರು ನೇಮಕಾತಿಗಳು ಇರುತ್ತದೆ. ಇವತ್ತು ಲೋಕಸೇವಾ ಆಯೋಗದ ನೇಮಕಾತಿಗಳು ಇರಬಹುದು. ವಿಶ್ವ ವಿದ್ಯಾನಿಲಯಗಳ ಉಪ ಕುಲಪತಿಗಳನ್ನು ನೇಮಕ ಮಾಡುವಂಥಾದ್ದು ಇರಬಹುದು. ಮತ್ತು ಇನ್ನಿತರ ನಿಗಮ ಮಂಡಲಿಗಳಿಗೆ ನೇಮಕ

ಮಾಡುವಂಥಾದ್ದು ಇರಬಹುದು. ಈ ನೇಮಕಗಳಲ್ಲಿ ನೀವು ಹೈದ್ರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಭಾಗದ ಜನರಿಗೆ ಎಷ್ಟು ನೇಮಕ ಮಾಡಿದ್ದೀರಿ ಎಂಬ ಬಗ್ಗೆ ಸರ್ಕಾರ ಸ್ಪಷ್ಟನೆಯನ್ನು ಕೊಡಬೇಕಾಗುತ್ತದೆ. ಇವತ್ತಿನ ಅಂಕಿಅಂಶಗಳನ್ನು ತೆಗೆದುಕೊಂಡಾಗ ಇದರಲ್ಲಿ ನೀವು ವಿಫಲರಾಗಿದ್ದೀರಿ ಎನ್ನುವಂತಹ ಮಾತನ್ನು ನಾನು ಹೇಳಬೇಕಾಗುತ್ತದೆ. ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವತ್ತು ನಿಗಮ ಮತ್ತು ಮಂಡಲಿಗಳಿಗೆ ಅಧ್ಯಕ್ಷರನ್ನು ಮತ್ತು ಪದಾಧಿಕಾರಿಗಳನ್ನು ನೇಮಕ ಮಾಡಿದಿರಿ. ನಿಜವಾಗಿಯೂ ನಿಗಮ ಮತ್ತು ಮಂಡಲಿಗಳಿಗೆ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಬೇಕೋ ಬೇಡವೋ ಎನ್ನುವುದು ಒಂದು ಪ್ರಶ್ನಾರ್ಹ ಏಕೆಂದರೆ ಈಗಾಗಲೇ 44-45 ಜನ ಕ್ಯಾಬಿನೆಟ್ ಮಂತ್ರಿಗಳು ಇದ್ದಾರೆ. ಅದರ ಜೊತೆಗೆ ಪುನರ್ವಸತಿ ಮಾಡುವ ಸಲುವಾಗಿ ಇವತ್ತು ನಿಗಮ ಮತ್ತು ಮಂಡಲಿಗಳಿಗೆ ಮತ್ತೆ 35-40 ಜನ ಅಧ್ಯಕ್ಷರುಗಳ ನೇಮಕವನ್ನು ಮಾಡಿದಿರಿ. ಬಹುಶಃ ನನಗನ್ನಿಸುತ್ತದೆ ಎಲ್ಲಾ ಕೂಸಿದರೆ ಕ್ಯಾಬಿನೆಟ್ ರ್‍ಯಾಂಕ್, ರಾಜ್ಯ ಸಚಿವರ ಪದವಿ ಇದರ ಒಂದು ಸ್ಟೇಟಸ್‌ನ್ನು ನಾವು ನೋಡಿದಾಗ 80ಕ್ಕೂ ಹೆಚ್ಚು ಸಚಿವರು ಈ ರಾಜ್ಯದಲ್ಲಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. 80ಕ್ಕೂ ಹೆಚ್ಚು, ಹಾಗಾದರೆ ಇದರ ಅವಶ್ಯಕತೆ ಇತ್ತೇ ಎನ್ನುವಂತಹ ಪ್ರಶ್ನೆ ಇದೆ. ಇಷ್ಟೊಂದು ಜನ ಅಧ್ಯಕ್ಷರುಗಳನ್ನು ನೇಮಕ ಮಾಡುವಂತಹ ಅವಶ್ಯಕತೆ ಇತ್ತೋ ಎಂದು ನಾನು ಕೇಳಬಯಸುತ್ತೇನೆ. ಏಕೆಂದರೆ ಕೆಲವು ಕಡೆ ನಿವಾರ್ಯ ಪ್ರಸಂಗಗಳಲ್ಲಿ ನಾವು ನೋಡುತ್ತಿದ್ದೇವೆ. ಎಲ್ಲಿ ಸಮಿಶ್ರ ಸರ್ಕಾರ ಇದೆ, ಅಲ್ಲಿ ರಾಜಕೀಯ ಒತ್ತಡಗಳು ಮಿತ್ರ ಪಕ್ಷಗಳ ಒತ್ತಡಗಳು, ಹೀಗಾಗಿ ಎಲ್ಲರಿಗೂ ಅವಕಾಶ ಕೊಡಬೇಕೆಂದು ಆ ಒಂದು ನೀತಿ ಸಂಹಿತೆಯನ್ನು ಬಿಟ್ಟುಕೊಟ್ಟು ಹೆಚ್ಚಿನ ಪ್ರಮಾಣದಲ್ಲಿ ಸಚಿವರನ್ನು ಮಾಡುವುದನ್ನು ನಾವು ನೋಡುತ್ತೇವೆ. ಮೊನ್ನೆ. ಸಣ್ಣ ರಾಜ್ಯದಲ್ಲಿ ಒಂದು ಕಡೆ ನಾವು ನೋಡಿದೆವು. ಅಲ್ಲಿ ನೂರಕ್ಕೆ ಎಂಬತ್ತರಷ್ಟು ಚುನಾಯಿತರಾಗಿ ಬಂದ ಶಾಸಕರಲ್ಲಿ ನೂರಕ್ಕೆ ಎಂಬತ್ತು ಜನ ಮಂತ್ರಿಗಳೇ ಇದ್ದಾರೆ. ಇವತ್ತು ಅದೇ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಆಗುತ್ತದೆ. ನಿಮಗೆ ಅತ್ಯಂತ ಹೆಚ್ಚಿನ ಬಹುಮತ ಸಿಕ್ಕಿದೆ. ಕ್ಲಿಯರ್ ಮೆಜಾರಿಟಿ ಒಂದೇ ಪಕ್ಷದ ಸರ್ಕಾರ ಇಂಥಾದ್ದರಲ್ಲಿಯೂ ಸಹ ನೀವು 44-45 ಜನ ಮಂತ್ರಿಗಳನ್ನು ಮಾಡಿ ಮತ್ತೆ 40 ಜನರಿಗೆ ನೀವು ಮಂತ್ರಿಗಳ ಸ್ಟೇಟಸ್ ಕೊಡುವುದಾದರೆ ಸರ್ಕಾರ ಮಾಡುವಂತಹ ಖರ್ಚುವೆಚ್ಚಗಳಿಗೆ ಉತ್ತರ ಯಾರು ಕೊಡುವವರು. ಜನರಿಗೆ ಉತ್ತರ ಕೊಡುವಂಥವರು ಯಾರು? ಜನರ ಮೇಲೆ ಅಷ್ಟೊಂದು ಭಾರ. ಇದಕ್ಕೆ ಜವಾಬ್ದಾರರು ಯಾರು ಎನ್ನುವಂತಹ ಪ್ರಶ್ನೆ ಬರುತ್ತದೆ. ಒಂದು ಕಡೆ ಇದು ನೇಮಕ ಆಯಿತು. ಹಾಗಾದರೆ ಅದರಲ್ಲಿ ನೀವು ಎಲ್ಲಾ ಪ್ರದೇಶಗಳಿಗೆ ಸಮಾನವಾದ ಅವಕಾಶ ಕೊಟ್ಟಿದ್ದೀರೋ ಹೇಗೆ? ಇವತ್ತು ನಾನು ಹೇಳುತ್ತಿದ್ದೇನೆ 59 ಜನ ಅಧ್ಯಕ್ಷರನ್ನು ನೀವು ನೇಮಕ ಮಾಡಿದಿರಿ. ನಿಗಮ ಮತ್ತು ಮಂಡಲಿಗಳಿಗೆ ಅಧ್ಯಕ್ಷರುಗಳನ್ನು ಬೇರೆ ರೀತಿಯಲ್ಲಿ ಮಾಡಿದಿರಿ 59 ಜನರ ಪ್ರತಿ 27 ಜನರು ಬೆಂಗಳೂರು ವಿಭಾಗದವರು. ಇನ್ನು 16 ಜನ ಮೈಸೂರು ವಿಭಾಗದವರು. ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ ಕೇವಲ 16 ಜನ. ಇದರಲ್ಲೂ ತಾರತಮ್ಯ. ನೀವು ಭಾಷಣದಲ್ಲಿ ಬೊಗಳೆ ಬಿಡುವುದು, ಪ್ರಾದೇಶಿಕ ಅಸಮಾನತೆ ಹೋಗಬೇಕು ಎಲ್ಲರನ್ನೂ ನಾವು ಸಮಾನವಾಗಿ ಕಾಣುತ್ತೇವೆಂದು ಹೇಳುವುದು, ಕಮೀಷನ್ ನೇಮಕ ಮಾಡುವುದು ಆದರೆ ಪ್ರತಿಯೊಂದು ನಿಮ್ಮ ದಿನನಿತ್ಯದ ಕಾರ್ಯಚಟುವಟಿಕೆಯಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ನಡೆಯುವಂಥಾದ್ದು. ಈ ರೀತಿಯಾದರೆ ಈ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ

ಯಾವ ರೀತಿ ಸಾಧ್ಯವಾಗುತ್ತದೆ? ಇವತ್ತು ಕೆ ಪಿ ಎಸ್ ಸಿ ಅಪಾಯಿಂಟ್‌ಮೆಂಟ್ಸ್ ಇರಬಹುದು ಆದರ ಮೆಂಬರ್ಸ್ ಸೆಲೆಕ್ಷನ್ ಇರಬಹುದು, ಅಥವಾ ರಿಕ್ರೂಟ್‌ಮೆಂಟ್ ಇರಬಹುದು, ಇವುಗಳಲ್ಲಿ ಆ ಪ್ರಾದೇಶಿಕ ತಾರತಮ್ಯವನ್ನು ಹೋಗಲಾಡಿಸಲು ನಿಮ್ಮ ಕಡೆಯಿಂದ ಪ್ರಾಮಾಣಿಕ ಪ್ರಯತ್ನ ಆಗಲೇ ಇಲ್ಲ. ಹೀಗಾಗಿ ಈ ಒಂದು ಪ್ರಾದೇಶಿಕ ಅಸಮಾನತೆಯ ಒಂದು ಕೂಗು ಮುಂದುವರಿಯುತ್ತದೆ ಈಗಾಗಲೇ ಇದರ ಬಗ್ಗೆ ಧ್ವನಿ ಎದ್ದಿದೆ. ಇದೇ ರೀತಿಯಾದಂತಹ ಪ್ರಾದೇಶಿಕ ಅಸಮಾನತೆ ಮುಂದುವರಿದರೆ ನಮ್ಮನ್ನು ಈ ರೀತಿ ನೆಗ್‌ಲೆಟ್ ಮಾಡುವಂಥಾದ್ದು ಮುಂದುವರಿದರೆ ನಾವು ಪ್ರತ್ಯೇಕವಾದ ರಾಜ್ಯ ಕೇಳಬೇಕಾಗುತ್ತದೆ ಎನ್ನುವಂತಹ ಕೂಗು ಹಲವಾರು ಮೂಲೆಯಿಂದ ಬರುತ್ತಿದೆ ಎನ್ನುವಂಥಾದ್ದನ್ನು ನಾವು ನೋಡುತ್ತಿದ್ದೇವೆ.

ಇವತ್ತು ನಾವು ಆ ಕೂಗಿಗೆ ಬೆಂಬಲ ಕೊಡಬಾರದು. ಆ ಕೂಗನ್ನು ನಾವು ಅಳಿಸಿ ಹಾಕುವಂತಹ ಕೆಲಸ ಮಾಡಬೇಕಾಗಿದೆ. ಯಾವುದೇ ಒಂದು ರಾಜಕೀಯ ಪಕ್ಷ ಈ ರಾಜ್ಯವನ್ನು ಹೊಡೆಯುವಂತಹ ಕೆಲಸಕ್ಕೆ ಸಪೋರ್ಟ್ ಕೊಡಬಾರದು. ಆದರೆ ಇದೇ ರೀತಿಯ ನೆಗ್ಲಿಜನ್ಸ್ ಮುಂದುವರಿದಗೆ ಬಹುಶಃ ಆ ಕೂಗಿಗೆ ಶಕ್ತಿ ಬರಲಿಕ್ಕೂ ಸಾಧ್ಯತೆ ಇದೆ. ಇವತ್ತು ಗಡಿ ಭಾಗದಲ್ಲಿರುವಂತಹ ಗ್ರಾಮಗಳು ಇರಬಹುದು, ಹಳ್ಳಿಗಳು ಇರಬಹುದು, ಅಲ್ಲಿರುವಂತಹ ನಗರ ಪಟ್ಟಣಗಳು ಇರಬಹುದು ಈಗಾಗಲೇ ಆ ಗಡಿ ಪ್ರದೇಶದಲ್ಲಿರುವಂತಹ ಜನರಿಂದ ಗ್ರಾಮೀಮ ಭಾಗದಿಂದ ಅಲ್ಲಿಯ ಜನರಿಂದ ಇವತ್ತು ಹೊಸದಾಗಿ ಕೂಗು ಬರುತ್ತಿದೆ. ನಾವು ಈ ರಾಜ್ಯದಲ್ಲಿರುವುದಕ್ಕೆ ಆಗುವುದಿಲ್ಲ. ನಾವು ಬೇರೆ ರಾಜ್ಯಕ್ಕೆ ಹೋಗುತ್ತೇವೆ. ನಾವು ಪಕ್ಕದ ರಾಜ್ಯಕ್ಕೆ ಹೋಗುತ್ತೇವೆ. ಅಲ್ಲಿ ಎಲ್ಲಾ ರೀತಿಯ ಸೌಕರ್ಯ ಸಿಗುತ್ತದೆ. ಎನ್ನುವಂತಹ ಕೂಗು ಎದ್ದಿದೆ. ಹಾಗಾದರೆ ಈ ಒಂದು ಗಡಿ ಪ್ರದೇಶದ ನಾಗರೀಕರ ಸಮಸ್ಯೆಗಳಿಗೆ ನೀವು ಏನು ಮಾಡುತ್ತಿದ್ದೀರಿ? ಈ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ನೀವು ಏನು ಮಾಡುತ್ತಿದ್ದೀರಿ ಎನ್ನುವಂತಹ ಪ್ರಶ್ನೆ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆನ್ನುವ ಮಾತನ್ನು ನಾನು ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ನಾನು ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡುವಂತಾದ್ದು, ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ಮುಖ್ಯಮಂತ್ರಿಗಳಾಗಿ ಜವಾಬ್ದಾರಿಯನ್ನು ತೆಗೆದುಕೊಂಡ ನಂತರ ಹೊಸ ಶಕ್ತಿಯಿಂದ ಒಂದು ಘೋಷಣೆ ಮಾಡಿದರು. ರೈಲ್ವೆ ಪ್ರಾಜೆಕ್ಟ್ಸ್, ಬಹಳ ಮುಖ್ಯವಾದಂತಹ ನಾಲ್ಕು ರೈಲ್ವೆ ಯೋಜನೆಗಳು ಅದರಲ್ಲಿ ಪ್ರಮುಖವಾಗಿ ಹಾಸನ್ - ಮಂಗಳೂರು, ಗೇಜ್ ಪರಿವರ್ತನೆ ಹುಬ್ಬಳ್ಳಿ - ಅಂಕೋಲ ರೈಲ್ವೆ ಲೈನ್ ಹೊಸದಾಗಿ ಮಾಡುವಂಥಾದ್ದು, ಮತ್ತೊಂದು ಬಿಜಾಪುರ-ಗದುಗ್ ಗೇಜ್ ಪರಿವರ್ತನೆ. ಗುಂತಕಲ್ ಹೊಸಪೇಟೆ ಡಬ್ಬಲ್ ಲೈನ್ ಮಾಡುವಂಥಾದ್ದು, ಈ ನಾಲ್ಕು ಯೋಜನೆಗಳನ್ನು ಮಾನ್ಯ ಮಾನ್ಯ ಮುಖ್ಯಮಂತ್ರಿಗಳು ಮಾಡಲು ಪ್ರೈಯಾರಿಟಿ ಕೊಟ್ಟರು. ಈ ನಾಲ್ಕು ಯೋಜನೆಗಳನ್ನು ಮಾಡಲು ರಾಜ್ಯ ಸರ್ಕಾರವು ಸಹ ಸಹಯೋಗ ಕೊಡುತ್ತೇವೆ. ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ ಜೊತೆ ನಾವು ಕೈ ಜೋಡಿಸುತ್ತೇವೆ. ಇದನ್ನು ತ್ವರಿತಗತಿಯಿಂದ ಮಾಡಬೇಕೆನ್ನುವ ಇಚ್ಛಾಶಕ್ತಿಯನ್ನು ಅವರು ವ್ಯಕ್ತಪಡಿಸಿದರು. ಆಗ ನಮಗೂ ಬಹಳ ಸಂತೋಷವಾಗಿತ್ತು. ಅಡ್ಡಿ ಇಲ್ಲ ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಈ ಯೋಜನೆಗಳು ಆದಷ್ಟು ಬೇಗ ಅನುಷ್ಠಾನಗೊಂಡರೆ ಬಹಳ ಒಳ್ಳೆಯದು. ಎನ್ನುವಂತಹ ಮಾತನ್ನು ಹೇಳಿದೆವು. ಸಂದರ್ಭದಲ್ಲಿ ರೈಲ್ವೆ ಸಚಿವರಾಗಿ ಶ್ರೀಮತಿ ಮಮತಾ ಬ್ಯಾನರ್ಜಿಯವರು ಇದ್ದರು. ಆಗ ಮಾನ್ಯ ಮುಖ್ಯಮಂತ್ರಿಗಳು

ಹೊಸದಾಗಿ ಒಂದು ಸಂಸ್ಥೆಯನ್ನೇ ಮಾಡಿದರು. ಕರ್ನಾಟಕ ರೈಲ್ವೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂಟರ್‌ಪ್ರೈಸಸ್ ಎಂದು ಹೇಳಿ ಕರಾಯಿಡ್ ಎಂದು ಹೇಳಿ ಒಂದು ಸಂಸ್ಥೆಯನ್ನು ಅವರು ಮಾಡಿದರು. ಪರವಾಗಿಲ್ಲ ಹೊಸ ಒಂದು ಮಾರ್ಗವನ್ನು ನಮ್ಮ ರಾಜ್ಯದವರು ಕಂಡುಕೊಂಡರು ಇದಕ್ಕೆ ನಾವೆಲ್ಲಾ ಪ್ರೋತ್ಸಾಹ ಕೊಡಬೇಕು, ಬೆಂಬಲ ಕೊಡಬೇಕು ಎನ್ನುವಂತಹ ಅಭಿಪ್ರಾಯವನ್ನು ನಾವು ವ್ಯಕ್ತಪಡಿಸಿದೆವು. ಇಡೀ ದೇಶದಲ್ಲಿಯೇ ಮೊಟ್ಟಮೊದಲು ರೈಲ್ವೆ ಇಲಾಖೆಯೊಂದಿಗೆ, ಸಹಯೋಗದೊಂದಿಗೆ ರಾಜ್ಯದ ರೈಲ್ವೆ ಯೋಜನೆಗಳನ್ನು ಅನುಷ್ಠಾನ ಮಾಡಲಿಕ್ಕೆ ಮತ್ತು ರಾಜ್ಯದ ಒಂದು ಹಣವನ್ನು ವಿನಿಯೋಗ ಮಾಡಲಿಕ್ಕೂ ಮುಂದೆ ಬಂದಂತಹ ರಾಜ್ಯ ಕರ್ನಾಟಕ ಒಂದು ವರ್ಷದವರೆಗೂ ಆ ಸಂಸ್ಥೆಯನ್ನು ನೋಂದಣಿ ಮಾಡಲಿಲ್ಲ. ಅದು ಕೇವಲ ಕಾಗದದಲ್ಲಿ ಮಾತ್ರ ಉಳಿಯಿತು. ಆ ಯೋಜನೆ ಅನುಷ್ಠಾನ ಆಗಲಿಲ್ಲ. ಆ ಸಂಸ್ಥೆ ಮೊದಲನೇ ವರ್ಷ ಅನುಷ್ಠಾನಕ್ಕೆ ಬರಲಿಲ್ಲ. ಒಂದು ವರ್ಷದ ನಂತರ ಅನುಷ್ಠಾನಕ್ಕೆ ಬಂತು. ಆದರೆ, ಬಹುಶಃ ಆ ಭಾಗದ ಜನರ ದುರ್ದೈವ ಎಂದು ನಾನು ಹೇಳಬೇಕಾಗುತ್ತದೆ. ಇವತ್ತು ಬಿಜಾಪುರ - ಗದಗ್ ಗೇಜ್ ಪರಿವರ್ತನೆ ಈ ಕೆರಾಯಿಡ್ ಎಂದು ಮಾಡಿದ ಮೇಲೆ, ಆ ಕೆರಾಯಿಡ್‌ಗೆ ಒಂದು ಪೈಸೆ ಅನುದಾನವನ್ನೂ ಕೊಡಲಿಲ್ಲ. ಆ ಅಗ್ರಿಮೆಂಟಿನ ಕಾಪಿ ನನ್ನ ಕಡೆ ಇದೆ. ಆ ಮೆಮೋರ್‍ಯಾಂಡಂ ಆಫ್ ಅಂಡರ್‌ಸ್ಟಾಂಡಿಂಗ್ ಪ್ರಕಾರ ಒಂದು ಪೈಸೆಯನ್ನೂ ರಾಜ್ಯ ಸರ್ಕಾರ ಆ ಯೋಜನೆಗೆ ಕೊಡಲಿಲ್ಲ. ಆ ಯೋಜನೆ ಪ್ರಕಾರ, ಇಲ್ಲಿ ಹುಬ್ಬಳ್ಳಿ - ಅಂಕೋಲಾ ಆಯಿತು. ಸೊಲ್ಲಾಪುರ - ಗದಗ್ ಲೈನಿಗೆ ಈ ಸಂಸ್ಥೆಯನ್ನು ತೆಗೆದುಕೊಂಡು ಬಂದಾಗ anticipated cost 765 ಕೋಟಿ 77 ಲಕ್ಷ ರೂ.ಗಳು ಆಮೇಲೆ ಬ್ಯಾಲೆನ್ಸ್, ಈಗಾಗಲೇ ಆಗಿರುವಂಥ ಕೆಲಸವನ್ನು ಬಿಟ್ಟು, ಪೂರ್ಣವಾಗಿ ಏಕೆಂದರೆ ಆ ಸಂಸ್ಥೆ ಬಂದಂಥ ಸಂದರ್ಭದಲ್ಲಿ ಸೋಲ್ಲಾಪುರದಿಂದ ಹುಟಗಿವರೆಗೆ ನೂರು ಕಿಲೋಮೀಟರ್ ಗೇಜ್ ಪರಿವರ್ತನೆಯಾಗಿತ್ತು, ಈ ಸಂಸ್ಥೆ ಬಂದಾಗ ಆಗಲೇ ಇಷ್ಟು ಅನುಷ್ಠಾನವಾಗಿತ್ತು. ಮುಂದೆ 162 ಕೋಟಿ ರೂಪಾಯಿಗಳನ್ನು ಈಗಾಗಲೇ ಅದಕ್ಕೆ ಖರ್ಚು ಮಾಡಿದ್ದಾರೆ. ಇನ್ನು 130 ಕಿಲೋ ಮೀಟರ್ ಮಾತ್ರ ಬಾಕಿ ಇದೆ. ಅದಕ್ಕಾಗಿ 132 ಕೋಟಿ ರೂಪಾಯಿ ಬೇಕಾಗುತ್ತದೆ. ಕೇಂದ್ರದ ರೈಲ್ವೆ ಇಲಾಖೆ ಬಜೆಟ್‌ನಲ್ಲಿ ಹೋದವರ್ಷ 20 ಕೋಟಿ ರೂ. ಈ ವರ್ಷ 10 ಕೋಟಿ ರೂ ಕೊಟ್ಟಿದ್ದಾರೆ. ಕೇಂದ್ರದಿಂದ ಇನ್ನೂ ಹೆಚ್ಚು ಹಣ ಬರಬೇಕೆಂದು ನಾನೂ ಒತ್ತಾಯ ಮಾಡುತ್ತೇನೆ. ಅದರಲ್ಲಿ ಎರಡು ಮಾತು ಇಲ್ಲ. ಆದರೆ, ಕೆರಾಯಿಡ್ ಸಂಸ್ಥೆ ಅಸ್ತಿತ್ವಕ್ಕೆ ಬಂದು ಒಂದು ವರ್ಷದ ನಂತರ ನೋಂದಣಿಯಾಗಿ, ಇವತ್ತಿನವರೆಗೆ ಇದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡಿದ್ದು ಎಷ್ಟು? ರಾಜ್ಯಸರ್ಕಾರದ್ದು ಜೀರೋ ಇನ್‌ವೆಸ್ಟ್‌ಮೆಂಟ್ ಹಾಗಾದರೆ ಈ ಕೆರಾಯಿಡ್ ಸಂಸ್ಥೆ ಏಕೆ ಮಾಡಿದಿರಿ? ಇದರ ಅಗ್ರಿಮೆಂಟ್ ಪ್ರಕಾರ ಇಲ್ಲಿ ಸೆಂಟ್ರಲ್ ಗವರ್ನಮೆಂಟ್ 26 ಪರ್ಸೆಂಟ್ ಕೊಡಬೇಕು, ಅಂದರೆ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ 26 ಪರ್ಸೆಂಟ್, ನಮ್ಮ ರಾಜ್ಯ ಸರ್ಕಾರ 26 ಪರ್ಸೆಂಟ್ ಕೊಡಬೇಕು. ಆಮೇಲೆ 48 ಪರ್ಸೆಂಟ್ ಬೇರೆ ಬೇರೆ ಸಂಘಸಂಸ್ಥೆಗಳು ಇರಬಹುದು, ಬ್ಯಾಂಕ್ಸ್ ಇರಬಹುದು ಮತ್ತು ಪಬ್ಲಿಕ್‌ನಿಂದ ಬಾಂಡ್ಸ್ ಮುಖಾಂತರ 48 ಪರ್ಸೆಂಟ್ ಹಣವನ್ನು ಸಂಗ್ರಹ ಮಾಡಬೇಕು. ನೀವು ಈ ಬಾಂಡ್ಸ್ ಮೂಲಕವೂ ಸಂಗ್ರಹ ಮಾಡಲಿಲ್ಲ, ಕೆರಾಯಿಡ್ ಸಂಸ್ಥೆಯೂ ಅನುಷ್ಠಾನಕ್ಕೆ ಬರಲಿಲ್ಲ, 26 ಪರ್ಸೆಂಟ್‌ನ್ನೂ ನೀವು ಕೊಡಲಿಲ್ಲ. ಇಲ್ಲಿಯವರೆಗೆ ಕೇಂದ್ರದ ರೈಲ್ವೆ ಇಲಾಖೆ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಹಾಗಾದರೆ ನಿಮ್ಮ ಜವಾಬ್ದಾರಿ ಏನು? ಹಾಗಿದ್ದಲ್ಲಿ

ಕೆರಾಯಿಡ್ ಸಂಸ್ಥೆ ಏಕೆ ಮಾಡಿದಿರಿ? ನಿನ್ನೆ ಬಿಜಾಪುರದಲ್ಲಿ ಬಂದ್ ಆಗಿದೆ. ಬಾಗಲಕೋಟೆಯಲ್ಲೂ ಹೋರಾಟ ನಡೆದು, ಅಲ್ಲಿಯೂ ಬಂದ್ ಆಗಿದೆ. ಇಡೀ ಬಿಜಾಪುರ ಜಿಲ್ಲೆಯಲ್ಲಿ ಬಂದ್ ಆಚರಣೆ ಪ್ರತಿಭಟನಾ ಕಾರ್ಯಕ್ರಮ ಹಾಕುತ್ತಿದ್ದೇವೆ. ಇದು ಯಾರ ಜವಾಬ್ದಾರಿ, ಇದಕ್ಕೆ ಏಕೆ ಹಣ ಕಡಿಮೆ ಮಾಡಿದಿರಿ? ಬಿಜಾಪುರ ಮತ್ತು ಗದಗ್ ನಡುವೆ ರೈಲ್ವೆ ಲೈನ್ ಇಲ್ಲ, ಅವು ಅನಾಥ ಪ್ರದೇಶಗಳಾಗಿವೆ ಹಾಗಾದರೆ, ಉತ್ತರ ಕರ್ನಾಟಕದ ಭಾಗ ಈ ಕರ್ನಾಟಕ ರಾಜ್ಯದಲ್ಲಿ ಇಲ್ಲವೇ ಎಂಬುದನ್ನು ಇವತ್ತು ವಿಚಾರ ಮಾಡಬೇಕಾಗುತ್ತದೆ. ಇವತ್ತು, ಅದು ಅಂತರ ರಾಜ್ಯ ಸಂಪರ್ಕವನ್ನು ಮಾಡುವಂಥ ಲೈನ್. ಬಹುಮುಖ್ಯವಾದ ಆ ಲೈನಿಗೆ ಸಂಪರ್ಕ ಮಾಡುವುದಕ್ಕೆ ನೀವು ಅನುವು ಮಾಡಿಕೊಡುತ್ತಾ ಇಲ್ಲ. ಏಕೆ ಈ ರೀತಿ ಉದಾಸೀನ ಮಾಡುತ್ತಿದ್ದೀರಿ ಎಂದು ಮುಖ್ಯ ಮಂತ್ರಿಗಳನ್ನು ಕೇಳಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ರೈಲ್ವೆ ಲೈನುಗಳನ್ನು ಹಾಕಬೇಕಾದ್ದು ಕೇಂದ್ರ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯ. ಕಳೆದ 2-3 ವರ್ಷಗಳಿಂದ ಅವರೇನು ಕೊಟ್ಟಿದ್ದಾರೆ ನಮ್ಮ ರಾಜ್ಯಕ್ಕೆ ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕು. ಎಷ್ಟು ಕಿಲೋಮೀಟರ್ ಪರಿವರ್ತನೆ ಮತ್ತು ಕರ್ನಾಟಕಕ್ಕೆ ಹೆಚ್ಚು ಕೊಟ್ಟಿದ್ದಾರೆಯೇ ಇಡೀ ರಾಷ್ಟ್ರದಲ್ಲಿ ಕರ್ನಾಟಕಕ್ಕೆ ಏಕೆ ತಾರತಮ್ಯ, ಏಕೆ ಕರ್ನಾಟಕವನ್ನು ಕಡೆಗಣಿಸಿದ್ದಾರೆ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಎಸ್. ಭೋಸರಾಜ್:- ಹಿಂದಿನ ಪ್ರಧಾನ ಮಂತ್ರಿಗಳು ಮಹಬೂಬ್‌ನಗರ ಮುನಿರಾಬಾದ್‌ಲೈನ್ ಸರ್ವೆ ಮಾಡಲಿಕ್ಕೆ ಮಾಡಿದರು. ಆದರೆ, ಇವತ್ತಿನ ಕೇಂದ್ರಸರ್ಕಾರ ಅದರ ಬಗ್ಗೆ ಯಾವುದೇ ಕಾಳಜಿಯನ್ನು ಮಾಡುತ್ತಾ ಇಲ್ಲ 468 ಕೋಟಿ ರೂಪಾಯಿಗಳ ರೈಲ್ವೆ ಲೈನ್ ಅಂದಾಜು ಮಾಡಲಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್:- ಕಾಂಗ್ರೆಸ್ಸಿನ 18 ಜನ ಎಂ.ಪಿ.ಗಳು ಅಲ್ಲಿದ್ದಾರೆ. ಅವರು ಬಾಯಿಮುಚ್ಚಿಕೊಂಡು ಅಲ್ಲಿ ಕುಳಿತಿರುತ್ತಾರೆಯೇ ಎಂದು ಕೇಳಬೇಕಾಗುತ್ತದೆ. ಅವರು ಪಾರ್ಲಿಮೆಂಟಿನಲ್ಲಿ ಏಕೆ ಸುಮ್ಮನೆ ಕುಳಿತಿದ್ದಾರೆ. ನಾವಿಲ್ಲಿ ರಾಜ್ಯದ ಬಗ್ಗೆ ಕೇಳುತ್ತಿದ್ದೇವೆ. ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಅವರು ಕೇಳಲಿ. ಕೆರಾಯಿಡ್ ಎನ್ನುವಂಥ ಸಂಸ್ಥೆಯನ್ನು ನೀವೇಕೆ ಮಾಡಿದಿರಿ ಎಂಬುದನ್ನು ಮೊದಲು ಹೇಳಿ. ಹಾಗಾದರೆ, ಕೇಂದ್ರ ಸರ್ಕಾರಕ್ಕೆ ಬಿಟ್ಟುಬಿಡಬಹುದಾಗಿತ್ತು. ಆ ಸಂಸ್ಥೆಯನ್ನು ನೋಂದಣಿ ಮಾಡಿ, 26 ಪರ್ಸೆಂಟ್ ನಾವು ಕೊಡುತ್ತೇವೆಂದು ಏಕೆ ಹೇಳಿದಿರಿ? ನಾವು ಮೊನ್ನೆ ಡೆಲಿಗೇಷನ್ ಹೋದಾಗ, ಕೇಂದ್ರದ ರೈಲ್ವೆ ಸಚಿವರಾದ ನಿತೀಶ್ ಕುಮಾರ್‌ರವರು ನನಗೆ ಇದೇ ಪ್ರಶ್ನೆಯನ್ನು ಕೇಳಿದರು. ಈ ಕೆರಾಯಿಡ್ ಸ್ಥಾಪನೆ ಮಾಡಿ, ರಾಜ್ಯಸರ್ಕಾರದವರು ಇದಕ್ಕೆ ಕಾಂಟ್ರಿಬ್ಯೂಷನ್ ಮಾಡುತ್ತೇವೆಂದು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಆದರೆ ಆ ಅಗ್ರಿಮೆಂಟ್ ಪ್ರಕಾರ ನಡೆದುಕೊಳ್ಳುತ್ತಾ ಇಲ್ಲವೆಂಬ ಪ್ರಶ್ನೆಯನ್ನು ಅವರು ಕೇಳುತ್ತಿದ್ದಾರೆ. ಕೇಂದ್ರ ಸರ್ಕಾರವೂ ಕೊಡಬೇಕು, ನಾನು ಇಲ್ಲ ಎಂದು ಹೇಳುತ್ತಾ ಇಲ್ಲ. ಇವತ್ತು ನಾನು ಕೇಂದ್ರ ಸರ್ಕಾರವನ್ನು ಡಿಫೆಂಡ್ ಮಾಡುತ್ತಾ ಇಲ್ಲ ಅವರ ಕಡೆಯಿಂದ ಎಷ್ಟು ಹಣ ಬರಬೇಕೋ ಅದು ಬರಬೇಕು. ಅದು ಬರುವುದು ಬೇಡ ಎಂದು ನಾನು ಹೇಳುವುದಿಲ್ಲ. ನಮ್ಮ ಹಕ್ಕಿನ ಪಾಲನ್ನು ನಾವು ಕೇಳಬೇಕಾಗುತ್ತದೆ. ಅದನ್ನು ನಮ್ಮ ಎಂ.ಪಿ.ಗಳೂ ಕೇಳಬೇಕಾಗುತ್ತದೆ. ಆದರೆ, ನಮ್ಮ ರಾಜ್ಯ ಸರ್ಕಾರ ಕೆರಾಯಿಡ್ ಎಂಬ ಸಂಸ್ಥೆಯನ್ನು ಮಾಡಿ, ಇಲ್ಲಿಯವರೆಗೆ ಆ ಯೋಜನೆಯನ್ನು ಅನುಷ್ಠಾನ ಮಾಡಲಿಲ್ಲವೆಂದರೆ, ಇದರಲ್ಲಿ ರಾಜ್ಯ ಸರ್ಕಾರದ ನಿರ್ಲಕ್ಷ್ಯ,

ಎದ್ದುಕಾಣುತ್ತಿದೆ ಎನ್ನುವಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಅದೇ ರೀತಿ ಹುಬ್ಬಳ್ಳಿ - ಅಂಕೋಲಾ ಹೊಸದಾಗಿ ಲೈನ್ ಮಾಡುವಂಥಾದ್ದು. ಇವತ್ತು ಇದರ ಭೂಸ್ವಾಧೀನ ಕಾರ್ಯ ಎಲ್ಲಿಯವರೆಗೆ ಬಂದಿದೆ ಎಂಬುದನ್ನು ದಯವಿಟ್ಟು ಹೇಳಬೇಕಾಗುತ್ತದೆ. ಇದರ ಸಲುವಾಗಿ ನೀವೆಷ್ಟು ಹಣ ಕೊಟ್ಟಿದ್ದೀರಿ ಮತ್ತು ಭೂ ಸ್ವಾಧೀನ ಎಷ್ಟು ಮಾಡಿದ್ದೀರಿ? ಇಲ್ಲಿಯವರೆಗೆ ಇದು ಕಾರ್ಯಗತವಾಗಲಿಲ್ಲ. ಎಲ್ಲಿಯವರೆಗೆ ನೀವು ಭೂ ಸ್ವಾಧೀನ ಮಾಡಿ, ರೈಲ್ವೆ ಇಲಾಖೆಯವರ ಸುಬರ್ದಿಗೆ ಕೊಡವುದಿಲ್ಲವೋ ಅಲ್ಲಿಯವರೆಗೆ ಆ ಯೋಜನೆ ಅನುಷ್ಠಾನಕ್ಕೆ ಬರಲಿಕ್ಕೆ ಸಾಧ್ಯವಿಲ್ಲ. ಅದನ್ನು ನೀವು ಮಾಡಲಿಕ್ಕೆ ತಯಾರಿಲ್ಲ. ಅದಕ್ಕಾಗಿ ಈ ಸಂದರ್ಭದಲ್ಲಿ ರೈಲ್ವೆ ಲೈನಿನಲ್ಲಿ ಬಹಳಷ್ಟು ಅನ್ಯಾಯವಾಗುತ್ತಾ ಇದೆ ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚು ಮುತುವರ್ಜಿಯನ್ನು, ಹೆಚ್ಚು ಕಾಳಜಿಯನ್ನು ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಈ ರೈಲ್ವೆ ಲೈನ್ ಜೊತೆಗೆ ರಾಜ್ಯದಲ್ಲಿರತಕ್ಕ ಇನ್ನಿತರ ಆಡಳಿತ ವೈಫಲ್ಯದ ಬಗ್ಗೆಯೂ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಅದರಲ್ಲಿ ಲ್ಯಾಂಡ್ ರೆವಿನ್ಯೂ ಅಂದರೆ ಸರ್ಕಾರದ ಜಮೀನುಗಳು ಮತ್ತು ಅದರಲ್ಲಿ ನಡೆಯತಕ್ಕ ಅವ್ಯವಹಾರಗಳು ಇವತ್ತು ಮಿತಿಮೀರಿ ಆಗುತ್ತಾ ಇದೆ ಎಂಬ ಮಾತನ್ನು ಹೇಳಬೇಕಾಗುತ್ತದೆ. ನಮ್ಮ ರಾಜ್ಯಸರ್ಕಾರಕ್ಕೆ, ಸರ್ಕಾರಕ್ಕೆ ಸಂಬಂಧಪಟ್ಟ ರೆವಿನ್ಯೂ ಲ್ಯಾಂಡ್‌ಗಳ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲ, ಅವುಗಳನ್ನು ಉಳಿಸಿಕೊಳ್ಳಲಿಕ್ಕೆ ಎಳ್ಳಷ್ಟೂ ಪ್ರಯತ್ನ ಇಲ್ಲ ಎಂಬ ಮಾತನ್ನು ಹೇಳಬೇಕಾಗುತ್ತದೆ. ಇದು ಬಹಳ ಖೇದದ ಪ್ರಸಂಗ. ನೂರಾರು ಎಕರೆಗಳಷ್ಟು ಜಮೀನುಗಳನ್ನು ಬೇರೆಯವರು ಒತ್ತುವರಿ ಮಾಡಿಕೊಂಡು, ಅತಿಕ್ರಮ ಮಾಡಿಕೊಂಡು, ಅದು ತಮ್ಮದೇ ಆಸ್ತಿ ಎಂದು ಅವರು ವಹಿವಾಟು ಮಾಡಿಕೊಂಡು ಹೋಗುತ್ತಿರುವುದನ್ನು ನೋಡಿದರೆ ರಾಜ್ಯ ಸರ್ಕಾರಕ್ಕೆ ಇದರ ಬಗ್ಗೆ ಎಳ್ಳಷ್ಟು ಕಾಳಜಿ ಇಲ್ಲವೆನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಕೆಲವು ರಾಜಕಾರಣಿ ವ್ಯಕ್ತಿಗಳು ಇರಬಹುದು, ಕೆಲವೊಂದು ಸಮಾಜದಲ್ಲಿರತಕ್ಕ ಗಣ್ಯರು ಇರಬಹುದು ಅಥವಾ ಕೆಲವೊಂದು ಅಧಿಕಾರಿಗಳೂ ಇರಬಹುದು. ಇವತ್ತು ಭೂ ಕಬಳಿಕೆ ಎಂಬುದು ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಾ ಇದೆ. ಇವತ್ತು ಕನಕಪುರ ಭಾಗದಲ್ಲಿ ಯಾವ ರೀತಿ ಗಣಿಗಾರಿಕೆ ಅಕ್ರಮವಾಗಿ ನಡೆಯುತ್ತಿದೆ, ಅದನ್ನು ನಿಲ್ಲಿಸುವುದಕ್ಕೆ ನಿಮಗೆ ಆಗುತ್ತಾ ಇಲ್ಲ. ಅದರಲ್ಲಿ ಪ್ರಭಾವಿ ವ್ಯಕ್ತಿಗಳು ಇನ್‌ವಾಲ್ವ್‌ಮೆಂಟ್ ಇದ್ದು, ಇಂತಹ ಎಷ್ಟೋ ಪ್ರಕರಣಗಳು ಹೊರಗೆ ಬಂದಿವೆ. ಅದೇ ರೀತಿ ಇವತ್ತು ಸರ್ಕಾರದ ರೆವಿನ್ಯೂ ಭೂಮಿಯನ್ನು ಅಕ್ರಮವಾಗಿ ಸುಬರ್ದಿಗೆ ತೆಗೆದುಕೊಂಡು, ಅದನ್ನು ಎಂಜಾಯ್ ಮಾಡುವಂಥ ಪ್ರಕರಣಗಳು ಇವತ್ತು ಹೊರಗೆ ಬಂದಾಗಲೂ ಸಹಿತ, ಪತ್ರಿಕೆಗಳಲ್ಲಿ ಪ್ರಕಟವಾದಾಗಲೂ ಸಹಿತ ಅದರ ಬಗ್ಗೆ ಸರ್ಕಾರದ ಕಡೆಯಿಂದ ಏನೂ ಕ್ರಮ ಇಲ್ಲವೆಂಬ ಮಾತನ್ನು ಹೇಳಬೇಕಾಗುತ್ತದೆ. ಬೆಂಗಳೂರಿನ ಎಕ್ಸ್‌ಟೆನ್‌ಷನ್ ಏರಿಯಾದ ಬಿಡದಿ ಹತ್ತಿರ ಬೆಲೆ ಬಾಳತಕ್ಕ ಜಮೀನುಗಳು ಇವೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಭೂಮಿ ಅಲ್ಲಿವೆ. ಬಡರೈತರಿಗೆ ಹಲವಾರು ಆಮಿಷಗಳನ್ನು ಕೊಟ್ಟು, ಅವರುಗಳಿಂದ ಕಿತ್ತುಕೊಳ್ಳುವಂಥದ್ದನ್ನು ಮತ್ತು ಒಂದಿಷ್ಟು ದುಡ್ಡನ್ನು ಕೊಟ್ಟು ಅದನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವಂಥಾದ್ದನ್ನು ಮಾಡುತ್ತಿದ್ದಾರೆ. ತಮ್ಮ ಹೆಸರಿಗೆ ಮಾಡಿಕೊಂಡು ಹೆಚ್ಚಿನ ಹಣಕ್ಕೆ ನಂತರ ಅಕ್ವಿಸಿಷನ್ ಹಾಕುವಂತಾದ್ದನ್ನು ಮತ್ತು ಅದರಲ್ಲಿ ಕೋಟ್ಯಾಂತರ ರೂಪಾಯಿ ಗಳಿಸುವಂಥ ಪ್ರಕರಣಗಳು ಸಾಕಷ್ಟು ಹೊರಗೆ ಬಂದಿವೆ. ಅದರ ಬಗ್ಗೆ ಸರ್ಕಾರದ ಕಡೆಯಿಂದ ಏನೂ ಕ್ರಮ

ಇಲ್ಲ. ಅಲ್ಲಿದ್ದಂಥ ನಾಗರೀಕರು ಇರಬಹುದು, ಅಲ್ಲಿದ್ದಂಥ ಪ್ರಮುಖ ವ್ಯಕ್ತಿಗಳು ಸರ್ಕಾರದ ಕಡೆ ಸಾಕಷ್ಟು ದೂರುಗಳನ್ನು ಕೊಟ್ಟಿದ್ದಾರೆ. ಈ ರೀತಿ ಅಕ್ರಮವಾಗಿ ನಡೆಯುತ್ತಾ ಇದೆ, ಅತಿಕ್ರಮಣ ನಡೆಯುತ್ತಾ ಇದೆ, ಒತ್ತುವರಿ ನಡೆಯುತ್ತಾ ಇದೆ ಅದರ ಬಗ್ಗೆ ಆಕ್ಷನ್ ಮಾಡಿ, ನೀವು ತೆರವುಗೊಳಿಸಬೇಕೆಂದು ಸಾರ್ವಜನಿಕರಿಂದ ಸಾಕಷ್ಟು ಪ್ರತಿಭಟನೆ ಬಂದಾಗಲೂ ಸಹಿತ, ಅದನ್ನು ಮಾಡಲಿಕ್ಕೆ ಸರ್ಕಾರಕ್ಕೆ ಆಗುತ್ತಾ ಇಲ್ಲ. ಏಕೆ, ಸರ್ಕಾರಕ್ಕೆ ಇಚ್ಛಾಶಕ್ತಿಯ ಕೊರತೆ. ಇಲ್ಲಿ ನಮ್ಮ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬಿಡದಿ ಹತ್ತಿರ, ಅಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ತಾಲ್ಲೂಕಿನ ಭೈರಮಂಗಲ ಕೆರೆ, ಇದು ದೊಡ್ಡದಾದಂಥ ಕೆರೆ.

3.10 ಪಿ.ಎಂ.

ನಮ್ಮ KIADB ಯವರು ಹಿಂದೆ Toyota kirloskar Company ಗೆ ಮತ್ತು ಬೇರೆ ಬೇರೆ ಕಂಪೆನಿಗಳಿಗೆ 1200 ಎಕರೆಯನ್ನು ಜಮೀನನ್ನು acquire ಮಾಡಿ ಕೊಟ್ಟರು ಅದರಲ್ಲಿ 430 ಎಕರೆ ಸಮತಟ್ಟು ಇರಲಿಲ್ಲ, ಅದನ್ನು ಸಮತಟ್ಟು ಮಾಡಲಿಕ್ಕೆ ಅಲ್ಲಿದ್ದ ಕಲ್ಲುಮಣ್ಣು ತೆಗೆದು ಈ ಕೆರೆಗೆ ಹೋಗಿ ಹಾಕಿದರು. ಬೇರೆ ಕಡೆ ಸಾಗಿಸಬೇಕಾಗಿತ್ತು ಬೇರೆ ಕಡೆಗೆ ಸಾಗಿಸಲಾರದೆ ಆ ಮಣ್ಣುಕಲ್ಲನ್ನು ಒಯ್ದು ಈ ಬೈರಮಂಗಲ ಕೆರೆಗೆ ಹಾಕಿದರು. ಆ ಕೆರೆ ಮುಚ್ಚಿಹೋಗುವಂತಹ ಪ್ರಸಂಗ ಬಂತು. ಸುಮಾರು 8 ರಿಂದ 10 ಎಕರೆ ಕೆರೆ ಮುಚ್ಚಿಹೋಯಿತು ಈ ಮಣ್ಣು ಕಲ್ಲಿನಿಂದ ಅಲ್ಲಿಯ ಜನ ಪ್ರತಿಭಟನೆ ಮಾಡಿದರು. ಈ ಕೆರೆ ಉಳಿಸಬೇಕು, ಈ ಕೆರೆ ಮೊದಲಿನ ಯಥಾಸ್ಥಿತಿಯಲ್ಲಿ ಮುಂದುವರೆದರೆ ಮಾತ್ರ ನಮಗೆ ಕುಡಿಯುವ ನೀರು ಇರಬಹುದು ಒಣಭೂಮಿಗೆ ನೀರಾವರಿ ಸೌಕರ್ಯ ಇರಬಹುದು ಅದನ್ನು ಮಾಡಲಿಕ್ಕೆ ಸಾಧ್ಯವಿದೆ ಎಂದು ಹೇಳಿದರು. ಅದಕ್ಕೆ ದೊಡ್ಡ ಪ್ರತಿಭಟನೆ ಆಯಿತು. ಮಾನ್ಯ ಸಿಂಧ್ಯಾರವರು ಆಗ ಗೃಹಮಂತ್ರಿಗಳಾಗಿದ್ದರು. ಅಲ್ಲಿ ಸಂಧಾನದ ಮಾತುಕತೆ ನಡೆಯುವ ಕಾಲಕ್ಕೆ ಮಾನ್ಯ ಸಿಂಧ್ಯಾರವರು ಹೋಗಿದ್ದರು. ಅಲ್ಲಿ ಜನರ ಅಳಲನ್ನು ಕೇಳಿಕೊಂಡು. ಈ KIADB ಯವರು 8 ಎಕರೆ ಒತ್ತುವರಿ ಮಾಡಿಕೊಂಡಿದ್ದರು. ನಂತರ ಜನರ ಒಂದು ಅವಾಜ್ ಕೇಳಿಕೊಂಡು ಅವರಿಗೆ ಒಂದೆ ಎಕರೆಗೆ 6 ಲಕ್ಷ ರೂನಂತೆ 50 ಲಕ್ಷ ರೂಗಳನ್ನು ಆ ಕೆರೆಯ ಅಭಿವೃದ್ಧಿ ಸಲುವಾಗಿ ಅಥವಾ ಪರ್ಯಾಯವಾಗಿ ನೀರಾವರಿ ಸೌಕರ್ಯ ಕೊಡಲಿಕ್ಕೆ ತೆಗೆದಿರಿಸಿದರು. ಆದರೆ ಆ 50 ಲಕ್ಷದಲ್ಲಿ ಇವತ್ತಿಗೂ ಆ ರೈತರಿಗೆ ಏನೂ ಲಾಭವಾಗಲಿಲ್ಲ. ಆ ಹಣ ಅವರಿಗೆ ಮುಟ್ಟಲಿಲ್ಲ ಕೆರೆಯೂ ಅಭಿವೃದ್ಧಿಯಾಗಲಿಲ್ಲ. ಹೀಗಾಗಿ ಸರ್ಕಾರದ ಒಂದು ಸಂಸ್ಥೆಯೇ ಕೆರೆಯನ್ನೇ ನುಂಗಿಹಾಕುವಂತದ್ದು ನಡೆದರೂ ಸರ್ಕಾರದ ಕಡೆಯಿಂದ ಏನೂ ಕ್ರಮವಿಲ್ಲ. ಆ ರೈತರಿಗೆ ಪರ್ಯಾಯವಾದಂತಹ ವ್ಯವಸ್ಥೆಯನ್ನು ಮಾಡಲಿಲ್ಲ ಎಂಬುದು ಒಂದು ಖೇದಕರ ಸಂಗತಿ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಅದೇ ರೀತಿ ಇವತ್ತು ಬಿಡದಿ ಹತ್ತಿರ ಸುಮಾರು 3 ಕೋಟಿ ಕಿಮ್ಮತ್ತಿನ ರೆವಿನ್ಯೂ ಭೂಮಿಯನ್ನು ಅಕ್ರಮ ಸಕ್ರಮದ ನೆಪದಲ್ಲಿ ಕೆಲವೊಂದು ವ್ಯಕ್ತಿಗಳ ಹೆಸರಿನಲ್ಲಿ ಖೋಟಾ ಚೀಟಿಗಳನ್ನು ಹಂಚಿ ನಂತರ ಅದನ್ನು acquisition ಮಾಡಿಕೊಂಡು ಅದರಿಂದ ಕೋಟ್ಯಾಂತರ ರೂಪಾಯಿಗಳ ಲಾಭ ಮಾಡಿಕೊಂಡ ಪ್ರಕರಣ ಇವತ್ತು ಹೊರಕ್ಕೆ ಬಂದಿದೆ. ಇಲ್ಲಿ ಮುಖ್ಯವಾಗಿ ಹೇಳುವಂತಹುದು ಅಬ್ಬನಕುಪ್ಪೆ ಗ್ರಾಮದ ಗೋಮಾಳ ಜಮೀನು 20 ಎಕರೆ, ಸರ್ವೆ ನಂ. 135, ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಲಕ್ಷ್ಯ ತೆಗೆದುಕೊಳ್ಳಬೇಕಾಗುತ್ತದೆ. ನಿಮ್ಮ ಜಮೀನೆಲ್ಲಾ ಬೇರೆಯವರು ಒಯ್ಯುತ್ತಿದ್ದಾರೆ.

ರೆವಿನ್ಯೂ ಲ್ಯಾಂಡ್ಸ್ ಬೇರೆಯವರು ಒಯ್ಯುತ್ತಿದ್ದಾರೆ. ಅದಕ್ಕೇ ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಬಹಳ ಲಕ್ಷ್ಯ ವಹಿಸಬೇಕಾಗುತ್ತದೆ. ನೂರಾರು ಎಕರೆ ಲಪಟಾಯಿಸಿಕೊಂಡು ಹೊರಟಿದ್ದಾರೆ. ಹಗಲುದರೋಡೆ ಮಾಡಲು ಭೂಕಬಳಿಕೆ ನಡೆಯುತ್ತಿದೆ. ಇದನ್ನು ನೀವು ನಿಲ್ಲಿಸಬೇಕಾಗುತ್ತದೆ. ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. Compound wall ಕಟ್ಟಿಸುತ್ತಿದ್ದಾರೆ. ನಾನು ಬೇಕಾದರೆ ತೋರಿಸುತ್ತೇನೆ, ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಇಲ್ಲೇ ಬಿಡದಿ ಹತ್ತಿರ ಆಗುತ್ತಿದ್ದರೂ ಸರ್ಕಾರ ಅಧಿಕಾರಿಗಳು ಎಲ್ಲಾ ಕಣ್ಮುಚ್ಚಿಕೊಂಡು ಕುಳಿತಿದ್ದಾರೆ. ಅಲ್ಲಿನ ತಲಾಟಿ ಎಲ್ಲಿಗೆ ಹೋಗಿದ್ದಾನೆ, ಅಲ್ಲಿನ ತಹಸೀಲ್ದಾರ್ ಎಲ್ಲಿ ಹೋಗಿದ್ದಾರೆ, ಅಲ್ಲಿ Assistant Commissioner ಎಲ್ಲಿ ಹೋಗಿದ್ದಾರೆ? ಈಗಾಗಲೇ ಲೋಕಾಯುಕ್ತಕ್ಕೆ ದೂರಾಗಿದೆ. ಡಿಸಿಯವರಿಗೆ ಕಂಪ್ಲೇಟಾಗಿದೆ. Compound wall ಕಟ್ಟುತ್ತಿರುವುದನ್ನು ನೋಡಿಕೊಂಡು ಕೂತಿರುತ್ತಾರೆ. ಅದನ್ನು ತೆಗೆಸುವುದು ಏನೂ ಇಲ್ಲ. ಅಂದರೆ ಅಕ್ರಮ ಮಾಡಿಕೊಂಡು ಕುಳಿತಿದ್ದಾರೆ. ಇಲ್ಲಿ ಹೇಳುತ್ತೇನೆ. ಅಬ್ಬನಕುಪ್ಪೆ ಗ್ರಾಮದ ಗೋಮಾಳ ಜಮೀನಿನಲ್ಲಿ ಸರ್ವೆ ನಂ. 135 - 8 ಎಕರೆ 20 ಗುಂಟೆ, ಇದು ರೆವಿನ್ಯೂ ಲ್ಯಾಂಡ್ ಇದ್ದುದನ್ನು ಈ ಅಕ್ರಮ ಸಕ್ರಮದ ಅವಧಿ ಮುಗಿದ ಮೇಲೆ ಅವರಿಂದ ಮತ್ತೆ ಫಾರ್ಮ್ಸ್ ತುಂಬಿಸಿಕೊಂಡು ಕೆಲವು ಬೇನಾಮಿ ಹೆಸರಿನಲ್ಲಿ ಆ ಫಾರ್ಮ್ಸ್ ತುಂಬಿಸಿಕೊಂಡು ಎಂಟ್ರಿ ಮಾಡಿಸಿಕೊಂಡು ಆ ಮೇಲೆ ಅವರಿಗೆ ಅಕ್ರಮ ಸಮಿತಿ ಹೋಗಲಿಲ್ಲ ತಹಸೀಲ್ದಾರನೇ ಸ್ವತಃ ಹೋಗಿ ಸಕ್ರಮಗೊಳಿಸಿರುತ್ತಾನೆ. ಅದಕ್ಕೆ ಯಾವುದೂ Legal entity ಇಲ್ಲ. ಇದು 20 ಎಕರೆಯದ್ದು ಎಂದು ಉದಾಹರಣೆ, ಹೀಗೆ ನೂರಾರು ಎಕರೆಯಷ್ಟು ಜಮೀನನ್ನು ನೂರಾರು ಜನರ ಹೆಸರಿನಲ್ಲಿ ನಾನು ಎಲ್ಲಾ ವಿವರ ಕೊಡುತ್ತೇನೆ ಎಲ್ಲಾ ಹೆಸರುಗಳು ಇವೆ ಅಕ್ರಮ ಸಕ್ರಮ ಎಂದು ತಹಸೀಲ್ದಾರ್ ಮಾಡಿ ಮುಂದೆ KIADB ಇಂದ land acquisition ಮಾಡಿಸುತ್ತಾರೆ. ಯಾಕೆ? KIADB ಯಲ್ಲಿ ಯಾರು ಅಧಿಕಾರಿಗಳಿದ್ದಾರಲ್ಲಾ ಅವರೇ ಅದರಲ್ಲಿ ಸಂಚು ಮಾಡುತ್ತಾರೆ. ಈ ಅಕ್ರಮ ಸಕ್ರಮದಲ್ಲಿ ಅವರನ್ನು ಕರೆತಂದು ಅವರಿಗೆ ಜಮೀನನ್ನು ಕೊಡಿಸಿ ನಂತರ ಮತ್ತೆ acquisition, ಮುಂದೆ ಎಕರೆಗೆ ಅವರಿಗೆ 6 ಲಕ್ಷ, 10 ಲಕ್ಷ ಕೊಡುವಂಥಾದ್ದು ಪರಿಹಾರಧನ, ಅದೂ GAP holder ಮುಖಾಂತರ ಪರಿಹಾರಧನ. ಆಗ ಆ ಹಣ ಯಾರಿಗೆ ಹೋಗುತ್ತದೆ ಎಂಬುದನ್ನು ನೀವು ತಿಳಿದುಕೊಳ್ಳಿ. ಕೋಟ್ಯಾಂತರ ರೂಪಾಯಿ KIADB ಯಲ್ಲಿ ಲೂಟಿ ಹೊಡೆದಿದ್ದಾರೆ. ಬೇನಾಮಿ ಹೆಸರಿನಲ್ಲಿ ಅಕ್ರಮ ಸಕ್ರಮ ಹೀಗಾಗಿ ಇವತ್ತು ಡಿಸಿಯವರು, assistant Commissioner, Tahsildar ಎಲ್ಲಾ ರಿಪೋರ್ಟ್ ಕೊಟ್ಟಿದ್ದಾರೆ. ಒಂದನ್ನು ಈಗ ಹೇಳುತ್ತೇನೆ. ಲೋಕಾಯುಕ್ತದ additional registrar ರ ವರೆಗೆ Deputy Commissioner ವರದಿ ಕೊಡುತ್ತಾರೆ: ಅದರಲ್ಲಿ clear cut ಆಗಿ ಹೇಳಿದ್ದಾರೆ. During the spot inspection, it was found that at an extent of 144 acres 24 guntas of land surrey number 135 was granted to Mehababa Universal Spiritual centre. Out of this land, leaving the land to the extent of 124 acres 4 guntas withdrawn by the Government for Gomal as well as the land alienated there remains 8 acres 20 guntas ಅಂದರೆ 8 ಎಕರೆ 20 ಗುಂಟೆ ಅತಿಕ್ರಮಣವಾಗಿದ್ದು ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ spot inspecition ಮಾಡಿದಾಗ ಹೇಳುತ್ತಾರೆ. Thus, prima-facie there

appears to be irregularities in accepting the khata of the land in question in favour of Sri. Meharbaba Institution and making the entries in RTS as per the M.R. No. so and so based on the order so and so of the then Thasildast Ramanagara Taluk, So, in this connection, it also submitted that in respect of the Government lands in abhayankarupa Bandhanur, Talaguppa and other villages acquired by KIADB, certain bogus records were built up. Necessary proposals were sent to Government to take desciplinary action against those officers including Nagaraj, the then Thasildar responsible for the creation of bogus documents so and so date and the disciplinary proceedings have also been initiated by the Government. ಇಲ್ಲಿ ಅಧಿಕಾರಿಗಳ ಹೆಸರನ್ನು ಹಾಕಿ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಿಕ್ಕೆ ಡಿಸಿಯವರು ಬರೆದಿದ್ದಾರೆ. ಅವನನ್ನು ಕೆಲವು ದಿವಸದ ಮಟ್ಟಿಗೆ suspend ಮಾಡುತ್ತಾರೆ. ಅಲ್ಲಿದ್ದ ತಹಸೀಲ್ದಾರ್ ನಾಗರಾಜ್ ಮತ್ತು ಇನ್ನೊಬ್ಬರು ಎಂ.ಎಸ್. ನರಸಿಂಹಮೂರ್ತಿ ಎಂದು ಹೇಳಿ ಇವರನ್ನು suspend ಮಾಡುತ್ತಾರೆ. ಹಾಗೆ ಕೆಲವು ದಿವಸಗಳ ಮಟ್ಟಿಗೆ suspend ಮಾಡಿ ಆನಂತರ ಏನೋ ಗೋಲ್‌ಮಾಲಾಗಿ ಮತ್ತೆ ಅವರನ್ನು reinstate ಮಾಡುತ್ತಾರೆ. ಇನ್ನೊಬ್ಬರಿಗೆ promotion ಕೊಡುತ್ತಾರೆ. ಈಗ ಮತ್ತೊಬ್ಬರು ರಿಟೈರ್ಡ್ ಆಗಿದ್ದಾರೆ. ಅವರಿಗೆ reinstate ಆಗಿತ್ತು. reinstate ಆದ ಮೇಲೆ ರಿಟೈರ್ ಆದರು. ಅಂದರೆ ಇವತ್ತು ಯಾರು ತಪ್ಪು ಮಾಡುವ ಅಧಿಕಾರಿಗಳಿದ್ದಾರೆ ಇವತ್ತು ಓಪನ್ನಾಗಿ ಡಿಸಿಯವರ ನೋಟೀಸಿಗೆ ಇವೆಲ್ಲಾ ಬಂದ ಮೇಲೂ ಆ ಅಧಿಕಾರಿಗಳ ಮೇಲೆ ಶಿಕ್ಷೆ ದಂಡ ಕ್ರಮ ಏನೂ ಇಲ್ಲ. ಅವರಿಗೆ ಮತ್ತೆ ಗೌರವ ಕೊಡುವಂತಹುದು ಇವತ್ತು ನಡೆಯುತ್ತಾ ಇದೆ. ಹೀಗಾಗಿ ಅತಿಕ್ರಮಣ ಮಾಡುವಂತಹವರು ಬೋಗಸ್ ಚೀಟಿದಾರರು ಅಕ್ರಮ ಸಕ್ರಮದಲ್ಲಿ ಭಾಗವಹಿಸಿದಂತಹ ಅಧಿಕಾರಿಗಳು ಇದರಲ್ಲಿ ಇನ್‌ವಾಲ್ವ್‌ಮೆಂಟ್ ಇದ್ದಂಥ ಸಂದರ್ಭದಲ್ಲಿ ಅವರ ಮೇಲೆ ನೀವು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ ಅಂದರೆ ಮುಂದೆ ಇದೇ ರೀತಿಯ ಪರಿಸ್ಥಿತಿ ವಾತಾವರಣ ಇಡೀ ರಾಜ್ಯದಲ್ಲಿ ನೆಲೆಸಲಿಕ್ಕೆ ಸಾಧ್ಯವಿದೆ. ಆದಕ್ಕಾಗಿ ಇದರ ಬಗ್ಗೆ ನೀವು ಏನು ಕ್ರಮ ಜರುಗಿಸುವಿರಿ ಎಂಬುದನ್ನು ಮಾನ್ಯ ಕಂದಾಯ ಸಚಿವರು ಹೇಳಬೇಕಾಗುತ್ತದೆ. ಇದೇ ಪ್ರದೇಶದಲ್ಲಿ ಯಾರು ಬೇನಾಮಿ ಹೆಸರಿನಲ್ಲಿ KIADB ನಿಂದ ಒಂದಷ್ಟು ಜಮೀನನ್ನು ಕ್ರಿಯೆಟ್ ಮಾಡಿ ಒಂದು ಎಕರೆಗೆ 6 ಲಕ್ಷದಂತೆ ಪರಿಹಾರ ಅವರ ಹೆಸರಿಗೆ ಮಂಜೂರು ಮಾಡಿ ಅವರೆಲ್ಲ GPA holder ಎಂದು ಹಣ ಕೊಡಲಾಗಿದೆ. ಕಾನೂನಿನ ಪ್ರಕಾರ ಅವಕಾಶ ಇಲ್ಲ. Land acquisition ಆದ ಮೇಲೆ ಚೆಕ್ ಮಾಲಿಕನ ಹೆಸರಿನಲ್ಲಿ ಕೊಡಬೇಕು, ಅವನಿಗೆ ಹೋಗಿ ಮುಟ್ಟಬೇಕು. ಆದರೆ ಒಬ್ಬ GPA Holder ಹೆಸರಿನಲ್ಲಿ ಇವತ್ತು ಕೋಟ್ಯಾಂತರ ರೂಪಾಯಿ ಬಟವಾಡೆಯಾಗುತ್ತದೆ. ಅಂದರೆ ಯಾವರೀತಿ ಅವ್ಯವಹಾರಗಳು ನಡೆದಿವೆ ಎಂದು ಸರ್ಕಾರ ವಿಚಾರ ಮಾಡಬೇಕಾಗುತ್ತದೆ. 98 ರಿಂದ 2000 ವರೆಗೆ ಇದೆಲ್ಲಾ ನಡೆಯುತ್ತಿದೆ. ಸರ್ಕಾರ ಕಣ್ಣುಚ್ಚಿಕೊಂಡು ಕುಳಿತಿದೆ. ಕಂದಾಯ ಇಲಾಖೆ. ಅದರ ಅಧಿಕಾರಿಗಳು ಎಲ್ಲಾ ಕಣ್ಣುಚ್ಚಿ ಕುಳಿತಿವೆ. ಇದರ ಬಗ್ಗೆ ಏನು ಕ್ರಮ ಜರುಗಿಸುವಿರಿ ಎಂಬುದನ್ನು ತಾವು ಹೇಳಬೇಕು. ಅದೇ ರೀತಿ ಇನ್ನೊಂದು ಜಮೀನು ಇದು ಪತ್ರಿಕೆಯಲ್ಲೂ

ಬಂದಿತ್ತು ಕೇಟಿಗನಹಳ್ಳಿ ಎಂದು, ಬಿಡದಿ ಹತ್ತಿರ ಅಲ್ಲಿ ಸರ್ವೆ ನಂ. 8,9,10,16 ಡಿ.ಸಿ. ನಂಜುಂಡಯ್ಯ - ಮತ್ತು ಇಲ್ಲಿ ಎಚ್ ಡಿ ಕುಮಾರಸ್ವಾಮಿಯವರ ಹೆಸರು ಬಂದಿದೆ. ಅವರು ಯಾರು? ರಾಜಕೀಯ ವ್ಯಕ್ತಿಗಳೋ ಅಥವಾ ಅಲ್ಲವೋ ನಾನು ಏನೂ ಹೇಳುವುದಿಲ್ಲ. ಏಕೆಂದರೆ ಬಹಳ ಅವರ ಹೆಸರು ಬಂದಿದೆ. ಈ ಡಿ ಸಿಯವರ ವರದಿಯಲ್ಲಿ ಜಿಲ್ಲಾಧಿಕಾರಿಗಳು ಕರ್ನಾಟಕ ಲೋಕಾಯುಕ್ತರಿಗೆ ವರದಿ ಕೊಟ್ಟಿದ್ದಾರೆ. ಅದರಲ್ಲಿರುವುದನ್ನು ಓದುತ್ತಿದ್ದೇನೆ. "ಮೇಲ್ಕಂಡ ಅಂಶಗಳಂತೆ ಕೇತಿಗಾನಹಳ್ಳಿ ಸರ್ವೆ ನಂ. 8,9,10,16 ಡಿಸಿ, ನಂಜುಂಡಯ್ಯ ಇವರು ಮತ್ತು ನಮೂನೆ 53 ಅರ್ಜಿ ಹಾಕಿರುವವರು ಸರ್ಕಾರಿ ಜಮೀನು ಅನಧಿಕೃತವಾಗಿ ಒತ್ತುವರಿ ಮಾಡುತ್ತಿರುವುದು ಮತ್ತು ಎಚ್.ಡಿ.ಕುಮಾರಸ್ವಾಮಿ ಸರ್ವೆ ನಂ. 8 ಮತ್ತು 9 ರಲ್ಲಿಯೂ ಇತರ 10 ಜನರು ಸರ್ವೆ ನಂ. 8 ರಲ್ಲಿ ಒತ್ತುವರಿ ಮಾಡುತ್ತಿರುವುದು ಮೋಜಣಿದಾರರ ನಕ್ಷೆ ಮತ್ತು ತಹಸೀಲ್ದಾರರ ವರದಿಯಿಂದ ವ್ಯಕ್ತವಾಗಿದ್ದು ಎಂದು ಸ್ಪಷ್ಟವಾಗಿ ಬರೆದಿದ್ದಾರೆ, ಪತ್ರಿಕೆಯಲ್ಲೂ ಬಂದಿದೆ. ಹಾಗಾದರೆ ನೀವೇನು ಮಾಡುತ್ತಿದ್ದೀರ ಅಂತ? ಇದು ಪತ್ರಿಕೆಯಲ್ಲಿ ಬಂದಿದೆ, ಡಿಸಿ ತಹಸೀಲ್ದಾರ್‌ಗಳ ವರದಿ ಇದೆ, ನೀವು ಬನ್ನಿರಿ ಕರೆದುಕೊಂಡು ಹೋಗಿ ತೋರಿಸುವೆನು, ಗುಡ್ಡದ ಸುತ್ತಲೂ fencing ಮಾಡಿದ್ದಾರೆ. ಸರ್ಕಾರಿ ಜಮೀನಿಗೆ ಓಪನ್ ಆಗಿ fencing ಹಾಕಿಕೊಂಡು ಆರಾಮವಾಗಿ ಎನ್‌ಜಾಯ್' ಮಾಡುತ್ತಾರೆ, ಕಂದಾಯ ಇಲಾಖೆ ಆರಾಮವಾಗಿ ಮಲಗಿಕೊಂಡಿದೆ. ಹಾಗಾದರೆ ಏನು ಕ್ರಮ ಜರುಗಿದೆ ಇದರಲ್ಲಿ? ಪತ್ರಿಕೆಯಲ್ಲಿ ಈ ವಿಚಾರವನ್ನು ನಿಮ್ಮ ಅಧಿಕಾರಿಗಳು ಓದಲಿಲ್ಲವೋ? ಪತ್ರಿಕೆಯ front page ನಲ್ಲಿ ಇದು ಬಂದಿದೆ. ಪತ್ರಿಕೆಯಲ್ಲಿ ಬಂದು ಒಂದು ತಿಂಗಳ ಮೇಲಾಯಿತು, ಹಾಗಾದರೆ, ಇಲ್ಲಿಯವರೆಗೆ ಯಾಕೆ ಸುಮ್ಮನೆ ಕುಳಿತಿದ್ದೀರಿ? ನಿಮ್ಮ ಕಂದಾಯ ಇಲಾಖೆಯವರು ಏನು ಮಾಡುತ್ತಿದ್ದಾರೆ? ಅವರ್‍ಯಾರ ಮೇಲೂ ನಿಮ್ಮದು ಬಿಗಿ ಇಲ್ಲ. ಬಿಗಿ ಆಡಳಿತ ಇಲ್ಲ, ಯಾರ ಮೇಲೂ ನಿಮಗೆ ಹಿಡಿತ ಇಲ್ಲ, ಇನ್ನೊಂದು ಬಹು ಮುಖ್ಯವಾಗಿ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಇದರಲ್ಲಿ ನೂರಾರು ಎಕರೆಯಷ್ಟು. ಇದುವರೆಗೂ ನಾನು ಹೇಳಿದ್ದು ಎರಡು ಎಕರೆ ಐದು ಎಕರೆ 20 ಎಕರೆ ಇರಬಹುದು. ಇನ್ನೊಬ್ಬರು ದೊಡ್ಡ ವ್ಯಕ್ತಿಗಳಿದ್ದಾರೆ. ಅವರು ನೂರಾರು ಎಕರೆ ರಾಜರೋಷವಾಗಿ ಕಬ್ಜಾ ತೆಗೆದುಕೊಂಡು ಎನ್‌ಜಾಯ್ ಮಾಡುತ್ತಿದ್ದಾರೆ. ಮೆ: ಈಗಲ್ಟನ್ ಸಂಸ್ಥೆ, ಬಿಡದಿ ಹತ್ತಿರ ದೊಡ್ಡದೊಂದು ಟೌನ್‌ಶಿಫ್ ಕಟ್ಟಿಸುತ್ತಿದ್ದಾರೆ. ಇದರಲ್ಲಿ ದೊಡ್ಡ ವ್ಯಕ್ತಿಗಳು ರಾಷ್ಟ್ರಮಟ್ಟದ ರಾಜಕಾರಣಿಗಳು ಅವರ ಮಕ್ಕಳು ಎಲ್ಲಾ ಇದ್ದಾರೆ ಎಂದು ನಮಗೆ ಬುದ್ಧಿ ಬಂದಿದೆ. 500 ಎಕರೆ ಜಮೀನು, ಇವರು ಬಾನಂದೂರು, ಶಾನುಮಂಗಲ ತಾಳಗುಪ್ಪೆ ಬಿಲ್ಲಕೆಂಪನಹಳ್ಳಿ ಈ ನಾಲ್ಕು ಗ್ರಾಮಗಳಲ್ಲಿ ಒಂದಕ್ಕೊಂದಕ್ಕೆ ಹೊಂದಿಕೊಂಡಿದ್ದ ಜಮೀನುಗಳು. ಇವರು ರೈತರಿಂದ ಖರೀದಿ ಮಾಡಿದ ಜಮೀನೆಷ್ಟು? 270 ಎಕರೆಯಷ್ಟು 278 ಎಕರೆ ಮಾತ್ರ ರೈತರಿಂದ ಖರೀದಿ ಮಾಡಿದ್ದು ಒಟ್ಟು 503 ಎಕರೆಯಲ್ಲಿ ಆದರೆ ಅವರಿಗೆ 503 ಎಕರೆಗೆ ಕಬ್ಜಾ ಇದೆ. But, the real title holder is for only 278 acres. ಇನ್ನುಳಿದದ್ದು 208.28 ಎಕರೆ, ಇದು ಅಕ್ರಮವಾಗಿ ಇಟ್ಟುಕೊಂಡಂಥಾದ್ದು ಅಕ್ರಮ ಹೇಗೆ ಎಂದು ಹೇಳುತ್ತೇನೆ ದರಖಾಸ್ತು ನಿಯಮ ಉಲ್ಲಂಘನೆ ಮಾಡಿ ಖರೀದಿಸಿದ್ದ ಜಮೀನು 31.18 ಎಕರೆ ಆಮೇಲೆ ಖರೀದಿಸಿರುವ ಜಮೀನಿನಲ್ಲಿ ಬರುವ ಇಳುವರಿಯಲ್ಲಿನ ಎ ಖರಾಬ್ ಜಮೀನು 63.15 ಎಕರೆ ಖರೀದಿಸಿರುವ ಜಮೀನಿನಲ್ಲಿ ಬರುವ ಇಳುವರಿಯ ಬಿ ಖರಾಬ್ ಜಮೀನು 10.22 ಎಕರೆ ಗೋಮಾಳ ಇದನ್ನು ಯಾರಿಗೂ ಅಲಾಟ್ ಮಾಡುವುದಿಲ್ಲ.

ಅಕ್ರಮ ಸಕ್ರಮಗೊಳಿಸಲು ಬರುವುದಿಲ್ಲ. ಗೋಮಾಳ ಎಂದರೆ ನಮ್ಮ ಜಾನುವಾರುಗಳಿಗೆ ಊರಿನ ಜನಗಳಿಗೆ ಸಾರ್ವಜನಿಕವಾಗಿದ್ದಂತಹ ಜಮೀನು. ಗೋಮಾಳ ಅನಧಿಕೃತವಾಗಿ ಬಂದಿರುವ ಒತ್ತುವರಿ ಪ್ರದೇಶ ಇವರ ಕಬ್ಜಾದಲ್ಲಿದ್ದುದು 103.13 ಎಕರೆ ಒಟ್ಟು 503.35 ಎಕರೆ ಓಪನಾಗಿ ಹಿಡಿದು ಕುಳಿತಿದ್ದಾರೆ. ಇವತ್ತು ಇದರ ಬಗ್ಗೆ ಸರ್ಕಾರದ ಒಂದು ವರದಿಯೂ ಇದೆ. ಸುಮ್ಮನೆ ವೇಗ್ ಆಗಿ ಅಲಿಗೇಷನ್ ಮಾಡುತ್ತಿಲ್ಲ. ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ರಾಮನಗರ ತಾಲ್ಲೂಕು ಬಿಡದಿ ಹಾಗೂ ಮಂಚನಾಯ್ಕನಹಳ್ಳಿ ಗ್ರಾಮ ಪಂಚಾಯ್ತಿಗಳ ಅಭಿವೃದ್ಧಿ ಶುಲ್ಕ ಪಡೆಯುವಲ್ಲಿ ನಡೆದ ಅವ್ಯವಹಾರ ಅದರಲ್ಲಿ ಇದನ್ನೆಲ್ಲ ವಿವರಿಸಿದ್ದಾರೆ. ಎಲ್ಲಿಯವರೆಗೆ ಅಂದರೆ ಅವರು 500 ಎಕರೆ ಕಬ್ಜಾ ಇದ್ದರೂ ಅಭಿವೃದ್ಧಿ ಶುಲ್ಕ ತುಂಬುವುದು ಕೇವಲ 278 ಎಕರೆಗೆ ಉಳಿದುದನ್ನು ತುಂಬುವುದಿಲ್ಲ ಮತ್ತು ಅಲ್ಲಿನ ಗ್ರಾಮಪಂಚಾಯ್ತಿಯವರು ಏನು ಮಾಡುತ್ತಾರೆ 503 ಎಕರೆಗೆ ನಕ್ಷೆ ಮಂಜೂರು ಮಾಡಿಕೊಡುತ್ತಾರೆ. ಎಲ್ಲ legalised ಡಿಸಿಯವರು ವರದಿ ಕೊಟ್ಟಿದ್ದಾರೆ: ಒಟ್ಟು ಭೂ ಪರಿವರ್ತನೆಯಾಗಿರುವ 257.21 ಎಕರೆ ಹಾಗೂ KIADB ಇಂದ ಪಡೆದ 16.26 ಎಕರೆ ಇದ್ದು ಪ್ರತಿ ಎಕರೆಗೆ 16 ಸಾವಿರ ರೂಪಾಯಿಗಳಂತೆ ಅಭಿವೃದ್ಧಿ ಶುಲ್ಕ ಇರುತ್ತದೆ. ಒಟ್ಟು ವಿಸ್ತೀರ್ಣ 257 ಎಕರೆಗೆ 41 ಲಕ್ಷ 20 ಸಾವಿರಗಳಾಗುತ್ತದೆ. ಪಡೆದಿರುವುದು 40 ಲಕ್ಷ 81 ಸಾವಿರ ಆದರೆ ಗ್ರಾಮಪಂಚಾಯ್ತಿಯವರು ಸರ್ಕಾರಿ ಜಮೀನು ಸೇರಿದಂತೆ ಒಟ್ಟು ವಿಸ್ತೀರ್ಣಕ್ಕೆ ನಕ್ಷೆಯನ್ನು ಅನುಮೋದಿಸಿದ್ದು ಕಂಡು ಬರುತ್ತದೆ. ಅಂದರೆ ಸರ್ಕಾರದ ಜಮೀನು ಹಿಡಿದುಕೊಂಡು ನಕ್ಷೆಯನ್ನು ಮಂಜೂರು ಮಾಡಿದ್ದಾರೆ. ಗ್ರಾಮಪಂಚಾಯ್ತಿಯವರು. ಅಲ್ಲದೆ ನಕ್ಷೆಯಲ್ಲಿ BMRDA ಸಹಿತ ನಮೂದಾಗಿರುತ್ತದೆ. ಇಂತಹ ಪ್ರಕರಣಕ್ಕೆ ಸಂಬಂಧಿಸಿದಂತೆ 1999ರಿಂದ ಈಚೆಗೆ ಗ್ರಾಮಪಂಚಾಯ್ತಿಗಳಲ್ಲಿ ಭೂಪರಿವರ್ತನೆಯಿಂದ ಜಮೀನಿಗೆ ಖಾತೆ ಮಾಡುವಾಗ ಅಭಿವೃದ್ಧಿ ಶುಲ್ಕವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳು ಅದರ ಪ್ರಕಾರ ಪಡೆಯುತ್ತಿಲ್ಲ ಕಂದಾಯ ಇಲಾಖೆಯವರು ಸದರಿ ಸಂಸ್ಥೆಯು ಒತ್ತುವರಿ ಮಾಡಿರುವ ಸರ್ಕಾರಿ ಜಮೀನನ್ನು ಸರ್ವೆ ಮಾಡಿಸಿ ಒತ್ತುವರಿ ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದ್ದು ಈ ಬಗ್ಗೆ ಮುಂದಿನ ಕ್ರಮಗಳನ್ನು ಹೇಳಲಾಗುವುದು" ಅಂದರೆ ಇವತ್ತು ಒತ್ತುವರಿ ಬಗ್ಗೆ ಒಪ್ಪಿಕೊಳ್ಳುತ್ತಾರೆ. ಅದರ ಬಗ್ಗೆ ಅಭಿವೃದ್ಧಿ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ. ಆಮೇಲೆ ಒತ್ತುವರಿಯಾಗಿರುವ ಜಮೀನನ್ನು ನೀವು ಹಿಡಿದುಕೊಂಡು ನಕ್ಷೆ ಮಂಜೂರು ಮಾಡುತ್ತೀರಿ. ನಾನು ನಿಮ್ಮನ್ನು ಕರೆದುಕೊಂಡುಹೋಗಿ ತೋರಿಸುತ್ತೇನೆ. ಅಲ್ಲಿ ಸರ್ಕಾರಿ ಜಮೀನು ಗುಡ್ಡ ಇದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಅಧ್ಯಕ್ಷರೇ, ನಾನೇ ಖುದ್ದು ಹೋಗಿ ಸ್ಥಳಪರಿಶೀಲನೆ ಮಾಡಿದ್ದೇನೆ ನನ್ನ ಜೊತೆಯಲ್ಲಿ Principal Secretary, ಹಾಗೂ Deputy Commissioner, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಬಂದಿದ್ದರು. ಅಲ್ಲಿ ಕೆಲವು ಜಮೀನು ಒತ್ತುವರಿಯಾಗಿರುವುದು ನಿಜ. ನಮ್ಮ ಸರ್ವೆ ಇಲಾಖೆಯವರನ್ನು ಕರೆಸಿ ಸರ್ವೆ ಮಾಡಿ ಎಷ್ಟು ನಿಗದಿಯಾಗಿ ಒತ್ತುವರಿಯಾಗಿದೆ ಎಂದು ಸರ್ಕಾರಕ್ಕೆ ವರದಿ ಕೊಡಬೇಕು. ಅದನ್ನು ನಿರ್ದಾಕ್ಷಿಣ್ಯವಾಗಿ ಬಿಡಿಸುತ್ತೇನೆ. ಅದರಲ್ಲೇನೂ ತಾವು ಯೋಚನೆ ಮಾಡಬೇಕಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್:-ನೋಡಿ ಇತ್ತೀಚೆಗೆ ಅಲ್ಲಿ ಮನೆಗಳು ಬರುತ್ತಾ ಇವೆ. ಇತ್ತೀಚೆಗೆ ಕಾಂಪೌಂಡ್ ವಾಲ್ ಕಟ್ಟಿದ್ದಾರೆ. ನಿಮ್ಮ ಸರ್ಕಾರ ಬಂದ ಮೇಲೇ ಇದು ನಡೆಯುತ್ತಿದೆ. ಹಿಂದಿನ ಸರ್ಕಾರ ಇದ್ದಾಗಲೂ ಒತ್ತುವರಿಯಾಗಿರಬಹುದು. ಆದರೆ ಇವತ್ತು ಓಪನ್ನಾಗಿ ನಡೆಯುತ್ತಿದೆ.

ಶ್ರೀ ಸಿ. ಶ್ರೀಕಂಠಯ್ಯ:-ರೆಸಾರ್ಟ್ ಅಂದರೆ ದೊಡ್ಡ ಗಾಲ್ಫ್, international golf fround, ಜಗದ್ವಿಖ್ಯಾತಿಯಾಗಿರುವಂತಹುದು. ದೊಡ್ಡದೊಡ್ಡವರೆಲ್ಲಾ ಅಲ್ಲಿ ಹೋಗಿ ಆಡಿದ್ದಾರೆ ನೋಡಿದ್ದಾರೆ, ಅದು ಒತ್ತುವರಿಯಾಗಿರುವುದೂ ನಿಜ, ಅದನ್ನು ನಿಮ್ಮ ಗಮನಕ್ಕೆ ತರುತ್ತೇವೆ.

ಶ್ರೀ ಜಗದೀಶ ಶೆಟ್ಟರ್:- ಉಪಾಧ್ಯಕ್ಷರೇ ಈಗ ಕಂದಾಯ ಸಚಿವರೇ ಹೇಳುತ್ತಾರೆ ಒತ್ತುವರಿ ಆಗಿರುವುದು ನಿಜ ಎಂದು ಮತ್ತು ಅವರು ಅತಿಕ್ರಮವಾಗಿ ಇಟ್ಟುಕೊಂಡದ್ದು ನಿಜ ಅನ್ನುತ್ತಾರೆ. ಅಲ್ಲಿ ಸುತ್ತಲೂ ಇತ್ತೀಚೆಗೆ ಕಾಂಪೌಂಡ್‌ಹಾಲ್ ಕಟ್ಟಿದ್ದಾರೆ. ಆ 200 ಎಕರೆಯನ್ನು include ಮಾಡಿ 500 ಎಕರೆ ಸುತ್ತಲೂ, ನನಗೆ ವಿಚಿತ್ರ ಅನ್ನಿಸುವಂತಹುದು ಅಲ್ಲಿನ ಗುಡ್ಡದ ಸುತ್ತಲೂ ಕಾಂಪೌಂಡ್‌ವಾಲ್ ಕಟ್ಟಿದ್ದಾರೆ. ಅದು ಸರ್ಕಾರದ ಗುಡ್ಡ, ಅಂದರೆ ಏನು ನಮ್ಮ ಅಧಿಕಾರಿಗಳು ಕಣ್ಮುಚ್ಚಿಕೊಂಡು ಕೂತಿರುತ್ತಾರೋ ಏನೋ ಎಂದು ಇವರ ಮೇಲೆ ನೀವು severe action ತೆಗೆದುಕೊಳ್ಳಿ ಓಪಾನಾಗಿ ಹೇಳುತ್ತೇನೆ. ಕಂದಾಯ ಸಚಿವರೇ ಈಗ ನಿಮಗೆ ಗೊತ್ತಾಯ್ತು ಕಾಂಪೌಂಡ್‌ವಾಲ್ ಎಲ್ಲ ಕಟ್ಟಿದ್ದಾರೆ ಎಂದು ಆದರೂ ನಿಮ್ಮ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. 500 ಎಕರೆಗೆ ನಕ್ಷೆ ಮಂಜೂರು ಮಾಡುತ್ತಾರೆ. ಹಾಗಾದರೆ ಎಷ್ಟು ಮಂದಿಯನ್ನು suspend ಮಾಡಿದ್ದೀರಿ ಹೇಳಿ? ತಕ್ಷಣ ಆಗಬೇಕು ಅದು. ಮತ್ತೆ ಅದಕ್ಕೊಂದು enquiry ಅದು ಮಾಡುವುದು ಇದು ಮಾಡುವುದು ಒಪ್ಪಿಕೊಳ್ಳುತ್ತೀರಿ, ಒಪ್ಪಿಕೊಂಡ ಮೇಲೆ ನಿಮ್ಮದೇನು ಕ್ರಮ? ಇಲ್ಲದಿದ್ದರೆ ಹೀಗೆ ನಡೆದುಕೊಳ್ಳುತ್ತಾ ಹೋಗುತ್ತದೆ. ಮತ್ತೆ ಯಾವುದೋ ಒಂದು ಹಂತದಲ್ಲಿ ಅದನ್ನೆಲ್ಲ ಮುಚ್ಚಿಬಿಡುವಂಥಾದ್ದು. ಹೀಗಾದರೆ ಸರ್ಕಾರಿ ಜಮೀನು ಯಾವುದೂ ಉಳಿಯಲಿಕ್ಕಿಲ್ಲ, ಕೋಟ್ಯಂತರ ರೂಪಾಯಿ ಬೆಲೆ ಬಾಳುವಂಥಾದ್ದು. ಅಲ್ಲಿ ಅರಣ್ಯ ಒತ್ತುವರಿ ಮಾಡಿದವರು ಯಾರು? ಬಡವರು, ರೈತರು ಎರಡೆಕರೇನೋ ನಾಲ್ಕೆಕರೇನೋ ಮಾಡಿದರೆ ನೋಟಿಸ್ ಕೊಡುತ್ತೀರಿ ಮೇ 31 ರೊಳಗೆ ಅವರನ್ನು ಹೊರಗೆ ಹಾಕುತ್ತೇವೆ. ಎನ್ನುತ್ತೀರಿ ಪಾಪ ಅವರೇನೋ ಸಣ್ಣ ಮನೆ ಕಟ್ಟಿಕೊಂಡು ಏನೋ ಜೀವನೋಪಾಯ ಮಾಡಿಕೊಂಡು ಇರುತ್ತಾರೆ. ಅಂಥವರಿಗೆ ನೋಟಿಸ್ ಕೊಟ್ಟು ಹೊರಗೆ ಹಾಕುವುದು, ಇಲ್ಲಿ 200 ಎಕರೆ real estate ಮಂದಿ ಅದರಲ್ಲಿ ದೊಡ್ಡದೊಡ್ಡ ರಾಜಕೀಯ ವ್ಯಕ್ತಿಗಳೂ ಇದ್ದಾರೆ. ಅವರನ್ನು ನೀವು ಮುಟ್ಟುವುದಿಲ್ಲ. ಇವತ್ತು ನೀವು ಒತ್ತುವರಿಯಾಗಿದ್ದು ನಿಜ ಎಂದು ಹೇಳುತ್ತೀರಿ ಆದರೆ ನಾನು ಇವತ್ತೂ ಹೇಳುತ್ತೇನೆ ಅವರ ಮೇಲೆ ನೀವು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ, ಇದರಲ್ಲಿ ಬೇಕಾದರೆ ಚಾಲೆಂಜ್ ತೆಗೆದುಕೊಳ್ಳಿ ಮೊದಲು ನಾಳೇನೆ ಹೋಗಿ ಆ ಕಾಂಪೌಂಡ್‌ಹಾಲ್ ತೆಗೆಸಿರಿ. ನಿಮ್ಮ ಜಮೀನಿನ ಮೇಲೆ ಗುಡ್ಡದ ಸುತ್ತಲೂ ಕಾಂಪೌಂಡ್ ವಾಲ್ ಕಟ್ಟಿಸುತ್ತಾರೆಂದರೆ ನಾಳೆ ಹೋಗಿ ಅದನ್ನು ಕೆಡವಿರಿ. ನಾಳೆ ನಿಮಗೆ ಅದನ್ನು ಕೆಡವಲಿಕ್ಕಾಗುತ್ತದೆಯೇ? ಈ ರೀತಿ ದೊಡ್ಡ ವ್ಯವಸ್ಥೆ ಮುಂದುವರೆದರೆ ಇವತ್ತು ಎಲ್ಲಿಗೆ ಹೋಗಿ ಮುಟ್ಟುತ್ತದೆ. ಇವತ್ತು ಸರ್ಕಾರದ ಜಮೀನಿನ ಬಗ್ಗೆ ಸರ್ಕಾರವೇ ಕಾಳಜಿ ಮಾಡುವುದಕ್ಕೆ ಹೋಗಲಿಲ್ಲವೆಂದರೆ ಇಂಥ ಭೂಗಳ್ಳರಿಗೆ ರಕ್ಷಣೆ ಕೊಡುವ ವ್ಯವಸ್ಥೆ ಮುಂದುವರೆಯುತ್ತದೆ. ಮಾನ್ಯ ಮಂತ್ರಿಗಳು ಆಗಿದ್ದು ನಿಜವೆಂದು ಒಪ್ಪಿಕೊಳ್ಳುತ್ತಾರೆ. ಅದಕ್ಕೆ ನಾನು ತೀವ್ರವಾದ ಕ್ರಮವನ್ನು ನಿಮ್ಮ ಕಡೆಯಿಂದ ಎಕ್ಸ್‌ಪೆಕ್ಟ್ ಮಾಡುತ್ತೇನೆ. ಕೇವಲ ಇಲ್ಲಿ ಕಾನೂನು ಪ್ರಕಾರ ಸರ್ವೆ ಮಾಡಿ ಸಮೀಕ್ಷೆ ಮಾಡಿಸಿ ಇದನ್ನು ಇನ್ನೊಂದು ಸಲದಲ್ಲಿ ಕೇಳಿದಾಗ ಮತ್ತೂ ಇದೇ ಉತ್ತರವನ್ನು ಹೇಳುತ್ತಾರೆ. ಏನೂ ಆಗುವುದಿಲ್ಲ. ಏನೂ ವ್ಯವಸ್ಥೆ ಬದಲಾವಣೆಯಾಗುವುದಿಲ್ಲ ಅದಕ್ಕಾಗಿ ಇದು ನಮ್ಮ ಗಮನಕ್ಕೆ ಬಂದಂಥದ್ದು.

ಶ್ರೀಹೆಚ್. ಸಿ. ಶ್ರೀಕಂಠಯ್ಯ: (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, ಅವರು ಸುಪ್ರೀಂ ಕೋರ್ಟಿಗೆ ಹೋಗಿ ಸ್ಟೇ ಆರ್ಡರ್‌ನ್ನು ತಂದಿದ್ದಾರೆ. ಅದ್ದರಿಂದ ಸ್ವಲ್ಪ ಸ್ಥಗಿತವಾಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ಇದೇನಾಗುತ್ತದೆ ಎಂದರೆ ಈ ವ್ಯವಸ್ಥೆನೇ ಆ ರೀತಿ ಇದೆ. ನೂರಾರು ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ವಾಲ್‌ನ್ನು ಹಾಕುತ್ತಾರೆ. ನಾಳೆ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾರೆಂದರೆ ಈ ವ್ಯವಸ್ಥೆ ಹೇಗಿದೆ ಎಂದು ನೀವು ತಿಳಿದುಕೊಳ್ಳಿ. ನಿಮ್ಮ ವಕೀಲರು, ನಿಮ್ಮ ಅಧಿಕಾರಿಗಳು ಯಾವ ರೀತಿ ಮಾಹಿತಿ ಕೊಡುತ್ತಾರೋ, ಏನೋ? ಇದು ಆಡೋಣ ಬಾ ಕೆಡಿಸೋಣ ಬಾ ಎನ್ನುವ ರೀತಿ ಆಗಿದೆ. ಎಲ್ಲಾ ಗೊತ್ತಿದೆ. ತಡೆಯಾಜ್ಞೆ ಇದೆ, ಕೋರ್ಟು ಕಛೇರಿ ಇದೆ, ಮುಗಿದು ಹೋಯಿತು ಅದು ಗಡಿ ಚುಕ್ಕಿ ಬರಚುಕ್ಕಿ ಮತ್ತೊಂದು ಸಲ ಸದನದಲ್ಲಿ ಕೇಳಿದಾಗ ಇದು ಬರುವುದು. ಒಂದು ಸಲ ದಾಟಿತು ಎಂದರೆ ದಾಟಿತು. ಮುಗಿಯಿತು. ಒಂದು ಸಲ ಹೋಗಿ ತಡೆಯಾಜ್ಞೆ ತೆಗೆದುಕೊಂಡು ಬಂದರೆ ಅದು ಮುಗಿಯಿತು. ಅದು ಅವರಿಗೇ ಜಮೀನು. ಈ ರೀತಿ ಪರಿಸ್ಥಿತಿ ಇದೆ. ಅದಕ್ಕೆ ನಿಮ್ಮ ಅಧಿಕಾರಿಗಳು ಇಲ್ಲಿ ಯಾರು ತಪ್ಪು ಮಾಡಿದ್ದಾರೆ, ಅಲ್ಲಿ ಒತ್ತುವರಿ ನಡೆಯುವ ಮಟ್ಟ ಕಾಂಪೌಂಡ್ ವಾಲ್ ಕಟ್ಟಿಸುವ ಮಟ್ಟದವರೆಗೆ ಯಾರೂ ಸುಮ್ಮನೆ ಕುಳಿತಿದ್ದಾರಲ್ಲಾ, ಅಲ್ಲಿರುವ ಕೆಳಗಿನ ಹಂತದ ರೆವಿನ್ಯೂ ಇಲಾಖೆ, ಮೇಲಿನ ಹಂತದ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು ಎನ್ನುವ ಪ್ರಶ್ನೆ ಇದೆಯಲ್ಲಾ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅದೆಲ್ಲವನ್ನೂ ಸಹ ಕೆಡವಿ ಆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಡಿವಿಜನಲ್ ಕಮೀಷನರ್, ಡೆಪ್ಯುಟಿ ಕಮೀಷನರ್ ಎಲ್ಲಾ ಹೋಗಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ ಆ ಜಮೀನುಗಳನ್ನು ಎಷ್ಟೋ ಜನರು ಇವತ್ತು ಸರ್ಕಾರಕ್ಕೆ ಕೊಟ್ಟಿದ್ದಾರೆ ಅದು ತನಿಖೆಯಲ್ಲಿದೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೇ, ಯಾರೂ ಹೇಳುವವರೂ ಕೇಳುವವರೂ ಇಲ್ಲದೇ ಇದ್ದರೆ ನೋಡು ನಮ್ಮ ಶೂರತ್ವ, 'ಹಮಾರ್ ಕುತ್ತಾ, ಹಮಾರ್ ಗಲ್ಲಿ ಮೇ ಷೇರ್ ಎಂದು ಹೇಳಿ ನುಗ್ಗುತ್ತೀರಿ ನೀವು. ಇಂಥವರ ಕಡೆ ನೀವು ಸುಳಿದು ಕೂಡ ನೋಡುವುದಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅವರನ್ನು ಬೆಳೆಯುವುದಕ್ಕೆ ಬಿಟ್ಟವರು ನೀವೇನೆ.

ಶ್ರೀ ಸಿ. ಬೈರೇಗೌಡ:- ಯಾರ ಕಾಲದಲ್ಲಾದರೂ ಆಗಲಿ. ಸರ್ಕಾರ ಎನ್ನುವುದು ವ್ಯವಸ್ಥೆ ಎನ್ನುವುದು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರತಕ್ಕಂಥದ್ದು ಕೆಳಮಟ್ಟದ ಅಧಿಕಾರಿಗಲು ಏನು ಮಾಡುತ್ತಿದ್ದರು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ನಮ್ಮ ಸರ್ಕಾರ ಬಂದಮೇಲೆ ಎಲ್ಲಾ ಅಧಿಕಾರಿಗಳು ಹೋಗಿ ನೋಡಿದ್ದಾರೆ.

ಶ್ರೀ ಸಿ. ಬೈರೇಗೌಡ:- ನಮ್ಮ ಸರ್ಕಾರವೇ ಬರುವುದು. ಬರುತ್ತದೆ. ನಾವೇನೆ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೂ ನೀವು ಸುಮ್ಮನೆ ಬಿಟ್ಟುಬಿಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಓಹೋ, ಸರ್ಕಾರ ಬರುತ್ತದೆ. ಬರಲಿ.

ಶ್ರೀ ಸಿ. ಬೈರೇಗೌಡ:- ಬರುವುದು ನಮ್ಮದೇ ಸರ್ಕಾರ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಬಂದಾಗ ಮಾಡುವುದನ್ನು ನಾವು ನೋಡುತ್ತೇವೆ. ನಾವು ನೋಡಿದ್ದೇವೆ. ನಿಮ್ಮನ್ನು ಹತ್ತು ವರ್ಷದಿಂದ ನಾವು ನೋಡಿದ್ದೇವೆ. ನೀವು ಹೇಗೆ ಮಾಡಿದ್ದೀರಿ ಎಂಬುದು ಗೊತ್ತಿದೆ.

ಶ್ರೀ ಸಿ. ಬೈರೇಗೌಡ:- ನಿನ್ನೆಯೋ ಮೊನ್ನೆಯೋ ನೀವೇನು ಪೇಪರ್‌ನಲ್ಲಿ ಹೇಳಿದ್ದೀರಿ, ಅದನ್ನೂ ಕೂಡ ನಾನು ನೋಡಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ನನಗೂ ನಿಮಗೂ ಎಷ್ಟು ವಾದ ನಡೆದಿದೆ, ಅವರ ಪರ ಎಷ್ಟು ನೀವು ಮಾತನಾಡಿದ್ದೀರಿ ಎನ್ನುವುದು ನನಗೆ ನಿಮಗೆ ಇಬ್ಬರಿಗೆ ಗೊತ್ತು. ಅದ್ಯಾಕೆ ಮಾತನಾಡುತ್ತೀರಿ ಈಗ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ:- ಇದು ಬಹಳ ಅನ್ಯಾಯ ಮಾನ್ಯ ಉಪಾಧ್ಯಕ್ಷರೇ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಈಗ ಎಲ್ಲರಿಗೂ ಗೊತ್ತಾಗಿ ಹೋಯಿತು. ನೀವಿಬ್ಬರೂ ಏನು ಮಾತನಾಡಿದ್ದಿರಿ ಎಂದು.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ:- ನಮಗೆ ಗೊತ್ತಾದಗದ ಹಾಗೆ ವ್ಯವಹಾರ ನಡೆಸುತ್ತಿದ್ದಾರೆ ನೋಡಿ ಇವರಿಬ್ಬರು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಪೇಪರ್‌ನಲ್ಲಿ ಬಂದಿರುವ ವಿಷಯ ಇರಲಿ. ಬೈರೇಗೌಡರಿಗೆ ಎಷ್ಟು ಸ್ವಾಮಿಭಕ್ತಿ ಇತ್ತು, ಅವರ ಮನೆ ದೇವರಿಗೂ ಸಹಾ ಅವರು ಕೈಮುಗಿದವರಲ್ಲ. ಅಷ್ಟು ಕೈ ಮುಗಿಯುವವರು ಇವರು. ಕಮ್ಯುನಿಸ್ಟರು, ಕೈಮುಗಿಯುತ್ತಿರಲಿಲ್ಲ. ಆ ಸ್ವಾಮಿಗೆ ಕೈ ಮುಗಿದಿದ್ದಾರೆ. ಕಾಲಿಗೆ ಬಿದ್ದಿದ್ದಾರೆ, ನನಗೆ ಹೇಳುತ್ತಾರೆ ಈಗ.

ಶ್ರೀ ಸಿ. ಭೈರೇಗೌಡ:- ನಾನು ಇವತ್ತಿನವರೆಗೂ ಯಾರ ಕಾಲಿಗೂ ಬಿದ್ದಿಲ್ಲ. ನಮ್ಮ ತಂದೆ ತಾಯಿ ಬಿಟ್ಟರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಕಾಲಿಗೆ ಬಿದ್ದಿದ್ದಾರೆ ಎಂದರೆ ಕಾಲಿಗೆ ಬೀಳಬೇಕಾಗಿಲ್ಲ ಅಷ್ಟೊಂದು ದಾಸಾನುದಾಸರಾಗಿದ್ದಿರಿ ಎಂದು.

ಶ್ರೀ ಸಿ. ಭೈರೇಗೌಡ:- ನಮ್ಮ ತಂದೆ ತಾಯಿ ಬಿಟ್ಟರೆ ಇನ್ನಾರ ಕಾಲಮೇಲೆ ಬೀಳತಕ್ಕ ಕೆಲಸ ಇಲ್ಲಿಯವರೆಗೂ ಮಾಡಿಲ್ಲ. ಇನ್ನು ಮುಂದೇನೂ ಕೂಡ ಮಾಡುವುದಿಲ್ಲ. ದಯವಿಟ್ಟು ಅದನ್ನು ಮಾತ್ರ ನೀವು ಹೇಳಿದ್ದನ್ನು ನಾನು ಒಪ್ಪುವುದಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಕಾಲಿಗೆ ಬಿದ್ದಿರಿ ಎಂದರೆ ಅವರ ಕಾಲಿಗೆ ಬಿದ್ರಿ ಎಂದು ಅರ್ಥವಲ್ಲ. ಅಷ್ಟೊಂದು ದಾಸಾನುದಾಸರಾಗಿದ್ದಿರಿ ಎಂದು ಅಷ್ಟೇ ಹೇಳಿದೆ ರಾಜಕೀಯದಲ್ಲಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ನೀವಿಬ್ಬರು ಮಾತನಾಡುತ್ತಿರುವುದು ಯಾರ ಉದ್ದೇಶ ಇಟ್ಟುಕೊಂಡು. ಅದನ್ನಾದರೂ ನಮಗೆ ಹೇಳಿ, ಈ ಸಭೆಗಾದರೂ ಗೊತ್ತಾಗಲಿ. ಯಾರ ಉದ್ದೇಶದ ಮೇಲೆ ನೀವಿಬ್ಬರು ಮಾತನಾಡಿಕೊಳ್ಳುತ್ತಿದ್ದೀರಿ ಎಂದು.

ಶ್ರೀ ಬಿ.ಎನ್. ಬಚ್ಚೇಗೌಡ:- ಬಹಳ ನಿಗೂಢವಾಗಿ ಮಾತನಾಡುತ್ತಿದ್ದೀರಿ. ಯಾರಿಗೂ ಗೊತ್ತಾಗುವುದಿಲ್ಲ.

ಉಪಾಧ್ಯಕ್ಷರು:- ಬಿಡಿ. ಅದು ಗೊತ್ತಾಗುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಉಪಾಧ್ಯಕ್ಷರೇ, ಈ ರೀತಿ ಹಗಲು ದರೋಡೆ ನಡೆಯುತ್ತಿದೆ ಈ ಹಗಲು ದರೋಡೆಯನ್ನು ನೋಡಿಕೊಂಡು ಇವತ್ತು ಸರ್ಕಾರದ ಮಂತ್ರಿಗಳು ಮತ್ತು ಅಧಿಕಾರಿಗಳು ಸುಮ್ಮನೆ ಕುಳಿತಿರುವುದನ್ನು ನೋಡಿದರೆ ನಮಗೆ ಹಲವಾರು ಸಂಶಯ ಬರಲಿಕ್ಕೆ ಸಾಧ್ಯ ಇದೆ. ಜನ ಸಾಮಾನ್ಯರಲ್ಲಿ ಹಲವಾರು ಸಂಶಯ ಬರಲಿಕ್ಕೆ ಸಾಧ್ಯ ಇದೆ. ಜನ

ಸಾಮಾನ್ಯರಲ್ಲಿ ಹಲವಾರು ಸಂಶಯ ಬರಲಿಕ್ಕೆ ಸಾಧ್ಯ ಇದೆ. ಅದಕ್ಕಾಗಿ ಇವತ್ತು ಕೋರ್ಟಿನ ತಡೆಯಾಜ್ಞೆ ಏಕೆ ಇದೆಯೋ ಗೊತ್ತಿಲ್ಲ. ಆದರೆ ಇಮ್ಮಡಿಯೇಟ್ಲಿ ಯಾರು ಆ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಿ ಮತ್ತು ಯಾವುದೇ ವ್ಯಕ್ತಿಗಳು ಇರಲಿ, ಇದರಲ್ಲಿ ರಾಜಕಾರಣಿಗಳೂ ಇರಲಿ ಮೇಲೂ ಕ್ರಮ ತೆಗೆದುಕೊಳ್ಳುವುದಾಗಬೇಕು. ಅಂದಾಗ ನಿಮ್ಮ ಇಚ್ಛಾಶಕ್ತಿ ಗೊತ್ತಾಗುತ್ತದೆ. ಸರ್ಕಾರದ ಪ್ರಾಪರ್ಟಿಯನ್ನು ಉಳಿಸುವಂಥದ್ದು, ರಕ್ಷಣೆ ಮಾಡುವಂಥದ್ದು ಗೊತ್ತಾಗುತ್ತದೆ. ಏಕೆಂದರೆ ಇದರಲ್ಲಿ ಎಲ್ಲರ ಇನ್‌ವಾಲ್ವ್‌ಮೆಂಟ್ ಇದೆಯೋ ಎನ್ನುವಂಥ ಸಂಶಯಗಳು ಪ್ರರಂಭವಾಗಲಿಕ್ಕೆ ಸಾಧ್ಯ ಇದೆ. ಅದಕ್ಕಾಗಿ ಇದರ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಜಮೀನನ್ನು ಮರಳಿ ವಾಪಸ್ ಸರ್ಕಾರದ ಒಂದು ಸ್ವಾಧೀನಕ್ಕೆ ತೆಗೆದುಕೊಳ್ಳುವಂಥ ಕೆಲಸವಾಗಬೇಕಾಗುತ್ತದೆ. ಆ ಒಂದು ಕೆಲಸವನ್ನು ನೀವು ಮಾಡಬೇಕೆನ್ನುವ ಒತ್ತಾಯವನ್ನು ಇಲ್ಲಿ ಮಾಡುತ್ತಿದ್ದೇನೆ. ಮತ್ತು ಅದರ ಜೊತೆಗೆ ಇವತ್ತು ಅಲ್ಲೇ ಬಿಡದಿ ಏರಿಯಾದಲ್ಲಿರುವಂಥ ನಮ್ಮ ಕೋಕ ಕೋಲಾ ಕಂಪನಿಯವರು, ಈಗಲೆಟನ್ ಸಂಸ್ಥೆ ಇವರು ಅತಿಕ್ರಮಣ ಮಾಡಿದ್ದಾರೆ. ಇದು ಮೇಲು ನೋಟಕ್ಕೆ ಗೊತ್ತಿದೆ. ಅಂಥದ್ದಕ್ಕೆ ನೀವು ನಿಮ್ಮ ಇಲಾಖೆಯವರು ಅವರಿಗೆ ಟ್ಯಾಕ್ಸೇಷನ್ ಅನ್ನು ಇಕ್ಸ್‌ಂಷನ್ ಕೊಡುತ್ತೀರಿ. Exemption of sales and luxury tax to m/s Eagleton golf Resorts and Gardens, Bangalore. ಇವರಿಗೆ ನೂರಾರು ಎಕರೆ ಅತಿಕ್ರಮಣ ಮಾಡಿದಂಥವರಿಗೆ ಅವರಿಗೆ ಟ್ಯಾಕ್ಸ್ ಎಕ್ಸ್‌ಂಪೆನ್. ಮತ್ತು ಶಹಭಾಷಗಿರಿಯನ್ನು ಕೊಡುತ್ತೀರಿ. ಮತ್ತು ಇದರ ಅರ್ಥವೇನಾಗುತ್ತದೆ? ಆ ಎಕ್ಸೆಂಷನ್ ಅನ್ನು ವಾಪಸ್ ತೆಗೆದುಕೊಳ್ಳಿ. ಎರಡು ನೂರು ಎಕರೆ ಜಮೀನನ್ನು ಸರ್ಕಾರ ತೆಗೆದುಕೊಂಡು ಅಂಥವರಿಗೆ ಸೇಲ್ಸ್ ಟ್ಯಾಕ್ಸ್ ಎಕ್ಸೆಂಷನ್ ಕೊಡುತ್ತೀರಿ ಎಂದರೆ ಅದರಲ್ಲಿ ಕೋಟ್ಯಾಂತರ ರೂಪಾಯಿ ವ್ಯವಹಾರ. ಮೊದಲು ನೀವು ಟ್ಯಾಕ್ಸ್ ಎಕ್ಸೆಂಷನ್ ಅನ್ನು ವಾಪಸ್ ತೆಗೆದುಕೊಳ್ಳಿ. ಇಂಥವರಿಗೆ ನೀವು ಸ್ಕೋಪ್ ಕೊಡುತ್ತೀರಿ. ನೀವು ಈ ಬೋಲ್ಡ್ ಡಿಸಿಷನನ್ನು ತೆಗೆದುಕೊಳ್ಳುತ್ತೀರಾ? ತೆಗೆದುಕೊಳ್ಳಿ. ಇಲ್ಲದಿದ್ದರೆ ಹಲವಾರು ಸಂಶಯಗಳು ನಮ್ಮ ಮುಂದೆ ಇದ್ದಾವೆ. ಇಂಥ ಅತಿಕ್ರಮಣ ಮಾಡುವಂಥವರಿಗೆ ನೀವು ಎಕ್ಸೆಂಪ್ಷನ್ ಕೊಡುವಂಥದ್ದು. ಆ ಕಡೆ ಕೋಕಾಕೋಲಾ ಕಂಪನಿಯವರಿಗೆ ಎಕ್ಸೆಂಷನ್‌ನ್ನು ಕೊಟ್ಟಿದ್ದೀರಿ. ಟೋಟಲ್ 210 ಕೋಟಿ ರೂಪಾಯಿಗಳ ಎಕ್ಸೆಂಷನ್ ಆಗುತ್ತದೆ. ವಿದೇಶದಿಂದ ಬಂದವರಿಗೆ ಸೇಲ್ಸ್‌ಟ್ಯಾಕ್ಸ್ ಎಕ್ಸೆಂಪ್ಷನ್ ನಮ್ಮಲ್ಲಿ ಇಂಡಸ್ಟ್ರೀಸ್‌ಗಳು ಸಾಯುವುದಕ್ಕೆ ಹೊರಟಿವೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳು ಸತ್ತುಹೋಗಿವೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅವಧಿ ಹೇಳಿ. ಯಾರ ಕಾಲದಲ್ಲಿ ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- 1999-2000 ರಲ್ಲಿ ಕೊಟ್ಟಿರುವ ಎಕ್ಸ್‌ಷನ್. ಕೋಕಾ ಕೋಲಾ ಕಂಪನಿಯವರಿಗೆ ಎಕ್ಸ್‌ಷನ್ ಕೊಡುತ್ತೀರಿ. 210 ಕೋಟಿ ರೂಪಾಯಿ ಎಕ್ಸ್‌ಷನ್ ಕೋಲಾ ಕೋಕಾ ಕಂಪನಿಯವರಿಗೆ ಇಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀ 350-400 ಕೋಟಿ ರೂಪಾಯಿ ಸಬ್ಸಿಡಿ ಇದೆ. ನಿಮಗೆ ಒಂದು ಪೈಸೆ ಕೊಡುವುದಕ್ಕಾಗಿಲ್ಲ. 50 ಪರ್‌ಸೆಂಟಷ್ಟು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳು ಮುಚ್ಚಿಹೋಗಿವೆ. ಅವರಿಗೆ ನೀವು ಸಬ್ಸಿಡಿ ಕೊಡಲಿಕ್ಕಾಗಿಲ್ಲ. ಪ್ರತಿ ಸಲ ಸದನದಲ್ಲಿ ಚರ್ಚೆಯಾಗುತ್ತದೆ. ಅವರು ಹೋರಾಟ ಮಾಡುತ್ತಾರೆ. ಸೆಮಿನಾರ್ ಮಾಡುತ್ತಾರೆ. ಮಂತ್ರಿಗಳನ್ನು ಕರೆಸಿ ಕೇಳುತ್ತಾರೆ ವಿಚಾರಗಳನ್ನು ಸ್ಪಂದನ ಮಾಡುತ್ತೇವೆಂದು ಹೇಳಿ. ಒಂದು ಪೈಸೆ ಅವರಿಗೆ ಸಬ್ಸಿಡಿ ಬಿಡುಗಡೆ ಇಲ್ಲ. ಅಲ್ಲಿ ಕೋಕಾಕೋಲಾ ಕಂಪನಿಗೆ 210 ಕೋಟಿ ರೂಪಾಯಿ

ಕೊಡುತ್ತೀರಿ ಇವತ್ತು ಕೋಕಾಕೋಲಾ ಕಂಪನಿಯ ನೌಕರರ ಪರಿಸ್ಥಿತಿ ಏನಾಗಿದೆ ಎಂದು ನಿಮಗೆ ಗೊತ್ತಿದೆಯೇ? ಅಲ್ಲಿ 700-800 ಜನ ನೌಕರದಾರರು ಇದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುರುವನಹಳ್ಳಿ:- ಮಾನ್ಯ ಉಪಾಧ್ಯಕ್ಷರೇ, ಸಬ್ಸಿಡಿ ಏನಾಗಿದೆ 373 ಕೋಟಿ ರೂಪಾಯಿ ಕೊಡಬೇಕು. ದೊಡ್ಡ ಇಂಡಸ್ಟ್ರೀಸ್‌ಗಳಿಗೆ ಯಾವುದಕ್ಕೋ ಕೊಡುವುದಾದರೆ ಅವುಗಳಿಗೆ ಲೇಟ್ ಮಾಡಿ. ಆದರೆ ರೈತರ ಬ್ಯಾಕ್‌ಗ್ರೌಂಡ್ ಇರುವ ಕೋಳಿಫಾರಂ ಇಟ್ಟಿಗೆ ಫ್ಯಾಕ್ಟರಿ ಇಟ್ಟಿರುವವರು, ಇಂಥವರುಗಳಿಗೆ ಕೊಡದಿದ್ದರೆ ಈಗಾಗಲೇ ರೈತರುಗಳು ಬರದ ನೆರಳಲ್ಲಿ ಬೆಂಡಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಕನಿಷ್ಠ ಎರಡು-ಮೂರು ಸ್ಕೀಮ್‌ಗಳನ್ನು ನೀವೇನು ಇಟ್ಟುಕೊಂಡಿದ್ದೀರಿ, ಇವುಗಳಿಗೆ ಕೊಡುವ ಕೆಲಸ ದಯವಿಟ್ಟು ಬೇಗನೆ ಮಾಡಬೇಕು. ನಾಳೆ ಬಜೆಟ್‌ನಲ್ಲಿ ಏನು ಮಾಡುತ್ತಾರೋ ಏನೋ ಗೊತ್ತಿಲ್ಲ. ಕನಿಷ್ಠ ಹಳ್ಳಿಗಾಡಿನಲ್ಲಿ ಇರುವ ಕಾರ್ಖಾನೆಗಳಿಗೆ, ಇವುಗಳಿಗೂ ಕೊಡದಿದ್ದರೆ ಗತಿಯೇನು? ಇವತ್ತು ಬರ ಇದೆ. ಎಲ್ಲಿ ನೀರು ಇಲ್ಲ, ಕರೆಂಟ್ ಕೊಡುವುದಿಲ್ಲ ನೀವು. ಇಂಥ ಪರಿಸ್ಥಿತಿಯಲ್ಲೂ ರೈತರು ಬದುಕಬೇಕು ಅಟ್‌ಲೀಸ್ಟ್ ಆ ಸಬ್ಸಿಡಿಯನ್ನಾದರೂ ಕೊಟ್ಟರೆ ಅವನು ಆ ಬ್ಯಾಂಕಿಗೆ ಕಟ್ಟುವ ಲೋನ್ ಅದನ್ನು ಕಟ್ಟಿ ಸುಖವಾಗಿಯಾದರೂ ಅವನು ಜೀವನ ಮಾಡಬಹುದು. ತಾವು ಇದಕ್ಕೆ ನೇರವಾಗಿ ಸ್ಪಂದಿಸುವ ಕೆಲಸವನ್ನು ದಯವಿಟ್ಟು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ನಾನು ಹೇಳುವಂಥದ್ದು ಇವತ್ತು ಅಲ್ಲಿ ಟ್ಯಾಕ್ಸ್ ಎಕ್ಸೆಂಪ್ಷನ್. ಇಲ್ಲಿ ಕೋಕಾಕೋಲಾ ಕಂಪನಿಗೆ ಟ್ಯಾಕ್ಸ್‌ಎಕ್ಸೆಂಪ್ಷನ್. 210 ಕೋಟಿ ರೂಪಾಯಿ ಟ್ಯಾಕ್ಸ್ ಎಕ್ಸೆಂಪ್ಷನ್ ಹೋಗಲಿ, ಟ್ಯಾಕ್ಸ್ ಎಕ್ಸೆಂಪ್ಷನ್ ಕೊಟ್ಟಿದ್ದೀರಿ, ಅಲ್ಲೇನಾದರೂ ನೌಕರರು ಸುಖದಿಂದ ಇದ್ದಾರೋ? ಅವರೆಲ್ಲಾ ಸ್ಥಳೀಯ ನೌಕರರಲ್ಲಿ ಅವರೆಲ್ಲಾ ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುವಂಥವರು. ಅವರಿಗೆ ಇವತ್ತಿನವರೆಗೂ ಪಿ.ಎಫ್.ನ್ನು ಕೊಟ್ಟಿಲ್ಲ. ಪಿ.ಎಫ್.ಹಣ ತುಂಬಿಲ್ಲ. ಒಂದು ಕ್ಯಾಂಟೀನ್ ಫೆಸಿಲಿಟಿ ಆ "ಡಿ" ಗ್ರೂಪ್ ವರ್ಗದವರಿಗೆ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- (ಭಾರೀ ಕೈಗಾರಿಕಾ ಸಚಿವರು) ಮಾನ್ಯ ಉಪಾಧ್ಯಕ್ಷರೇ, ತಾವು, ಎಕ್ಸೆಂಪ್ಷನನ್ನು ಕೊಟ್ಟಿದ್ದಾರೆಂದು ಹೇಳುತ್ತಿದ್ದೀರಿ. There is a difference between subsidy and exemption. ಸಬ್ಸಿಡಿ ಏನು ಸಣ್ಣ ಕೈಗಾರಿಕೆಗೆ ಕೊಡಬೇಕಾಗಿದೆ, ಅದಕ್ಕೆ ಇನ್‌ವೆಸ್ಟ್‌ಮೆಂಟ್ ಸಬ್ಸಿಡಿ ಎಂದು ಹೇಳುತ್ತಾರೆ. ಹಾಗಾಗಿ, ಇವತ್ತಿನ ಪಾಲಿಸಿಯ ಪ್ರಕಾರ ಅದೂ ಸಹ

3.40 ಪಿ.ಎಂ

ಅತಿ ಚಿಕ್ಕ ಕೈಗಾರಿಕೆ ಮತ್ತು ಗ್ರೂಪ್ "ಡಿ" ಅಂದರೆ ಗ್ರೂಪ್ ಸೆಂಟರ್ಸ್, ಲೋ ಕೈಗಾರಿಕೆಗೆ ಅಷ್ಟೇ ಕೊಡುವ ನೀತಿ ಇದೆ. ಮುಂದೆ ತಾವು ಹೇಳಿದ ಹಾಗೆ ಸಣ್ಣ ಕೈಗಾರಿಕೆಗೆ ಇನ್‌ವೆಸ್ಟ್‌ಮೆಂಟ್ ಸಬ್ಸಿಡಿ ಎಂದು ಇದೆ. ಡೈರೆಕ್ಟ್ ಫೈನಾನ್ಸಿಯಲ್ ಹೆಲ್ಪ್ ಮ್ಯಾಕ್ಸಿಮಮ್ ಅಪ್‌ಟು 25 ಲಕ್ಷ ರೂಪಾಯಿ. ಅದು ಮಾನ್ಯ ಶ್ರೀನಿವಾಸಗೌಡರು ಹಾಗು ತಾವು ಹೇಳಿದ ಹಾಗೆ ಬಾಕಿ ಉಳಿದಿದ್ದು ನಿಜ. ಅದನ್ನು ಕೊಡಬೇಕಾಗಿದೆ. ಅದರಿಂದ ಸಣ್ಣ ಕೈಗಾರಿಕೆಗೆ ತೊಂದರೆ ಆಗಿದ್ದು ನಿಜ. ಅದರ ಬಗ್ಗೆ ಪ್ರಶ್ನೆ ಇಲ್ಲ. ಮತ್ತೊಂದು ತಾವೇನು ಹೇಳುತ್ತಿದ್ದೀರಲ್ಲ, ಎಕ್ಸೆಂಪ್ಷನ್ ಇದು ಕೇವಲ ಕರ್ನಾಟಕ ಸರ್ಕಾರದ ನೀತಿ ಅಲ್ಲ. ಇದು ಇಡೀ ದೇಶದಲ್ಲಿ ಎಲ್ಲಾ ಸರ್ಕಾರಗಳೂ

ಇನ್‌ವೆಸ್ಟ್‌ಮೆಂಟ್ಸ್‌ನ್ನು ರಾಜ್ಯದಲ್ಲಿ ಅಟ್ರ್ಯಾಕ್ಟ್ ಮಾಡಲಿಕ್ಕೆ ಮಾಡಿದ ಒಂದು ಪ್ರಯತ್ನ ಅದರಲ್ಲಿ ಇಲ್ಲಾ ಸರ್ಕಾರಗಳೂ ಇವೆ. ಅದರಲ್ಲಿ ಕರ್ನಾಟಕ ಸರ್ಕಾರ ಇದೆ, ಆಂಧ್ರ ಪ್ರದೇಶ ಇದೆ, ಮಹಾರಾಷ್ಟ್ರ ಇದೆ, ಎಲ್ಲಾ ಸರ್ಕಾರಗಳೂ ಇವೆ. ಮತ್ತೆ ಇದನ್ನು ಸಕ್ಸಸ್ ಗವರ್ನಮೆಂಟ್ ಮಾಡಿದ್ದಾರೆ. ಇದೇನು ಎಸ್.ಎಂ. ಕೃಷ್ಣ ಗವರ್ನಮೆಂಟ್ ಬಂದ ತಕ್ಷಣ ಹೊಸದಾಗಿ ನಾವೇನಾದರೂ ಮಾಡಿದ್ದೇನೆಂದು ಹೇಳಿದರೆ ನಾನು ತಾವು ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳುತ್ತೇನೆ. ಇಲ್ಲ ನಾವೇನೂ ಹೊಸದಾಗಿ ಏನೂ ಮಾಡಿಲ್ಲ. ಇದು 1983,1985, 1986ನೇ ಇಸವಿಯಿಂದ ಬರುತ್ತಿದೆ. ವೋಲ್ವೋಗೆ ಕೊಟ್ಟಿಲ್ಲವೇ? ಟೊಯೊಟೊಗೆ ಕೊಟ್ಟಿಲ್ಲವೇ? ಆಗ ನಾನೇ ಕೈಗಾರಿಕಾ ಮಂತ್ರಿ ಇದ್ದೆ. ನಮ್ಮ ದೇವೇಗೌಡರು, ಜೆ.ಎಚ್. ಪಟೇಲರು ಮಾನ್ಯ ಮುಖ್ಯಮಂತ್ರಿ ಇದ್ದರು. ಅವರೇನೂ ತಪ್ಪು ಮಾಡಿಲ್ಲ, ಕೈಗಾರಿಕೆ ಬರಬೇಕು ಎಂದು ಮಾಡಿದ್ದಾರೆ. ಹಾಗೆ ತಾವು ಕೋಕಾಕೋಲಾ ಮಲ್ಟಿ ನ್ಯಾಷನಲ್, ಮಲ್ಟಿ ನ್ಯಾಷನಲ್ ಎಂದು ಹೇಳುತ್ತೀರಿ. ಮಲ್ಟಿನ್ಯಾಷನಲ್ ಕಂಪನಿ ಬರುವುದಕ್ಕೆ ಪರ್ಮಿಷನ್ ಕೊಡುವವರು ಯಾರು? ತಾವು ಕೊಡುತ್ತೀರಲ್ಲಾ. ತಮ್ಮ ಕೇಂದ್ರ ಸರ್ಕಾರ ಪರ್ಮಿಷನ್ ಕೊಡುತ್ತಿದೆಯಲ್ಲಾ ತಾವು ಬಂದ್ ಮಾಡಿ ಬಿಡಿ. No industries like Coco Cola pepsi should be given permission. FDI ಇನ್‌ವೆಸ್ಟ್‌ಮೆಂಟಿಗೆ ಪರ್ಮಿಷನ್ ಕೊಟ್ಟ ನಂತರ ಇಲ್ಲಿ ಕೈಗಾರಿಕೆಗಳು ಬರುತ್ತವೆ. ತಾವು ಲೈಸೆನ್ಸ್ ಕೊಟ್ಟರೆ ಕೈಗಾರಿಕೆ ಬರುತ್ತದೆ. ಹಾಗಾಗಿ ತಾವು ಮಲ್ಟಿ ನ್ಯಾಷನಲ್ಸ್ ಕಂಪನಿ ಬೇಡ ಎಂದರೆ ನಾವು ತಮ್ಮ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಇಲ್ಲಿ ಬಂದ್ ಮಾಡಿ ಬಿಡಿ. ಅವು ಆಟೋಮ್ಯಾಟಿಕ್ ಬರುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಸಾಫ್ಟ್‌ವೇರ್ ಕಂಪನಿಗೆ ತಾವು ಸಾಕಷ್ಟು ಎಕ್ಸಂಷನ್ ಕೊಟ್ಟಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ:- ತಮಗೆ ಗೊತ್ತಾಗಬೇಕು. 1.1.2000ದಿಂದ ಕೇಂದ್ರ ಸರ್ಕಾರ ಕನ್ಸೆಷನ್ಸ್ ಕೊಡುತ್ತಿದ್ದಾರೆ, ಅನ್‌ಫೇರ್ ಕಾಂಪಿಟಿಷನ್ ನಡೆಯುತ್ತಿದೆ ಎಂದು ಹೇಳಿ ಅವರೇ ಇಲ್ಲಾ ಸ್ಟೇಟ್ ಫೈನಾನ್ಸ್ ಮಿನಿಸ್ಟರ್ಸ್ ಅವರನ್ನು ಕರೆಸಿ ಒಂದು ನಿರ್ಣಯ ಮಾಡಿದ್ದಾರೆ. ಆ ನಿರ್ಣಯದ ಪ್ರಕಾರ 1.1.2000ದಿಂದ ಯಾವ ಸೇಲ್ಸ್ ಟ್ಯಾಕ್ಸ್ ಕನ್ಸೆಷನ್ ಯಾವ ಕೈಗಾರಿಕೆಗೂ ಸಿಗುತ್ತಿಲ್ಲ. ಆ ಸಮಯದಲ್ಲಿ ಕೆಲವೊಂದು ಪೈಪ್‌ಲೈನ್ ಕೇಸ್‌ಗಳಿದ್ದು ಕೊಟ್ಟರು ಇವತ್ತು ಅದೂ ಬಂದ ಆಗಿದೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಕನ್ಸೆಷನ್ ಕೊಡುವುದು ಎಂದರೆ ಒಂದು ಎಂಟ್ರಿ ಟ್ಯಾಕ್ಸಿಗೆ ಮಾತ್ರ. ಏಕೆಂದರೆ ಅದು ಲೆವೆಲ್ ಪ್ಲೇಯಿಂಗ್ ಫೀಲ್ಡ್ ಬೇರೆ ರಾಜ್ಯದಲ್ಲಿಲ್ಲ ಎಂದು ಈ ಕಾರಣ ಒಂದು, ಮತ್ತು 50 ಪರ್ಸೆಂಟ್ ಸ್ಟಾಂಪ್‌ಡ್ಯೂಟಿ ಬಿಟ್ಟರೆ ಮತ್ತು ಐಟಿ ಇಂಡಸ್ಟ್ರಿಗೆ ಎಕ್ಸ್‌ಪೋರ್ಟ್ ಮಾಡಿದರೆ 100 ಪರ್ಸೆಂಟ್ ಎಕ್ಸ್‌ಂಷನ್ ಗವರ್ನಮೆಂಟ್ ಆಫ್ ಇಂಡಿಯಾ ಕೊಡುತ್ತದೆ. ಮತ್ತು ಎಕ್ಸ್‌ಪೋರ್ಟ್ ಯಾವ ಇಂಡಸ್ಟ್ರಿಯವರು ಮಾಡುತ್ತಾರೆ, ರಾ ಮೆಟೀರಿಯಲ್ ಎಲ್ಲಿ ಹೋಗುತ್ತದೆ, ಅದರ ಮೇಲೆ ಸೇಲ್ಸ್ ಟ್ಯಾಕ್ಸ್ ಬಿಟ್ಟರೆ ಬೇರೆ ಯಾವುದೇ ಕನ್ಸೆಷನ್ಸ್ ಸರ್ಕಾರ ಕೊಡುತ್ತಾ ಇಲ್ಲ. ಅದು ಕರ್ನಾಟಕದಲ್ಲಿ ಅಲ್ಲ, ಇಡೀ ದೇಶದಲ್ಲಿ ಬಂದ್ ಆಗಿದೆ ಹಾಗಾಗಿ ತಾವು ಮಲ್ಟಿ ನ್ಯಾಷನಲ್ ಕಂಪನಿಯ ವಿಚಾರ ಮಾತನಾಡುವಾಗ ಅಥವಾ ಎಕ್ಸಂಷನ್ ವಿಚಾರ ಮಾತನಾಡುವಾಗ ಓವರ್ ಆಲ್ ಪಿಕ್ಚರ್ ದೇಶದಲ್ಲಿ ಏನು ನಡೆಯುತ್ತಿದೆ, ಅದನ್ನು ನೋಡಿ ಮಾತನಾಡಿದರೆ ನಾವು ಸ್ವಲ್ಪ ಸರಿಯಾಗಿ ಹೇಳಲಿಕ್ಕೆ ಆಗಬಹುದು.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ:- ಮಾನ್ಯ ಉಪಾಧ್ಯಕ್ಷರೆ, ಹೋದ ಸಭೆಯಲ್ಲಿ ಮಾನ್ಯ ನಮ್ಮ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಮಿನಿಸ್ಟರ್ ಅವರು ಸಬ್ಸಿಡಿಗೆ ಕೆಎಸ್‌ಎಫ್‌ಸಿ ಬಾಂಡ್ ಕೊಡುತ್ತೇವೆ ಎಂದು ಹೇಳಿದರು. ನಾನು ಅವತ್ತು ಎದ್ದು ಹೇಳಿದೆ, ಬೇಡ ಕೆಎಸ್‌ಎಫ್‌ಸಿ ಬಾಂಡ್ ಕೊಡಬೇಡಿರಿ, ಸರ್ಕಾರದ್ದು ಬಾಂಡ್ ಕೊಡಿ. ಅವನು ಯಾವುದಾದರೂ ಬ್ಯಾಂಕ್‌ನಲ್ಲಿ ಇಟ್ಟು ಮತ್ತೆ ಸಾಲ ಮಾಡಿ ಅವನ ಜೀವನ ಹೇಗೋ ಮಾಡಿಕೊಳ್ಳುತ್ತಾನೆಂದು ಹೇಳಿದೆ. ಅದಕ್ಕೆ ಈ ಮನೆಯಲ್ಲಿ ಸರ್ಕಾರ ಹೇಳಿದರು ಕೂಡ ಒಬ್ಬ ಸಚಿವರು ಹೇಳಿದರೂ ಅದು ನಡೆಯುವುದಿಲ್ಲ ಎಂದರೆ ಇದಕ್ಕೆ ನಾವು ಏಕೆಂದು ಹೇಳುವುದು? ಅಶ್ಯೂರೆನ್ಸ್, ಅದು ಈ ಫ್ಲೋರ್‌ನಲ್ಲಿ ಹೇಳಿರುವಂಥಾದ್ದು. ಅವತ್ತು ಕೆಎಸ್‌ಎಫ್‌ಸಿ ಬಾಂಡ್ ಕೊಡುತ್ತೇವೆಂದರು. ನಾವೆಲ್ಲ ಇದ್ದುಕೊಂಡು, ಕೆಎಸ್‌ಎಫ್‌ಸಿ ಬಾಂಡ್ ಬೇಡ, ಅದೇ ಬಹಳ ಕಷ್ಟದಲ್ಲಿದೆ, ಮುಳುಗುವ ಪರಿಸ್ಥಿತಿಯಲ್ಲಿದೆ, ಸರ್ಕಾರದ್ದೇ ಬಾಂಡ್ ಕೊಡಿ, ಅದರ ಮೇಲೆ ರೈತರು ಎಲ್ಲಾದರೂ ಹೋಗಿ ಸಾಲ ತೆಗೆದುಕೊಂಡು ಪ್ಲೆಜ್ ಮಾಡಿ ಮತ್ತೆ ಸಾಲ ಗೀಲ ತೀರಿಸಿಕೊಳ್ಳುತ್ತಾರೆ ಎಂದು ಹೇಳಿದ ಮೇಲೆ ಅದನ್ನು ನಾನು 15 ದಿವಸದಲ್ಲಿ ಮಾಡುತ್ತೇವೆಂದು ಹೇಳಿದವರು ಇವತ್ತಿನವರೆಗೆ ಏನೂ ಇಲ್ಲ. ಆ ಅಸೆಂಬ್ಲಿ ಆಗಿ ಹೋಯಿತು. ಇನ್ನೊಂದು ಅಸೆಂಬ್ಲಿಯಲ್ಲಿ ಕುಳಿತಿದ್ದೇವೆ. ಸರ್ಕಾರಕ್ಕೆ ಈ ಮನೆಯಲ್ಲಿ ಮಾತನಾಡುವುದರ ಮೇಲೆ ಅದಕ್ಕೆ ಹಿಡಿತ ಇಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆಗೆ ಗಮನ ಹರಿಸಬೇಕು. ಅಥವಾ ಮಂತ್ರಿಗಳ ತಪ್ಪೋ ತಾವು ಅವರಿಗೆ ಹೀಗೆ ಹೇಳುತ್ತೀರೋ ಎಂಬುದು ನಮಗೆ ಅರ್ಥ ಆಗುತ್ತಿಲ್ಲ. ಇದು ಬಹಳ ಗಹನವಾದಂಥಾದ್ದು, ಬಡಬಗ್ಗರು ಸಣ್ಣ ಸ್ಕೇಲ್ ಇಂಡಸ್ಟ್ರೀಸ್ ಮಾಡುವವರು. ಇಟ್ಟಿಗೆ ಆಗಬಹುದು, ಹೆಂಚು ಆಗಹುದು, ಇವೆಲ್ಲಾ ಸಣ್ಣ ಗುಡಿ ಕೈಗಾರಿಕೆಗಳನ್ನು ಮಾಡುವಂತಹವರು. ಇಂಥಾಹದಕ್ಕೆ ಕೊಡಬೇಕು. ನೀವು ಕೊಡುವುದಿಲ್ಲ ಎಂದು ಹೇಳಿ ಬಿಡಿ. ಸಾದಾ ಸೀದಾ ಕೊಡುವುದಿಲ್ಲ ಎಂದು ಹೇಳಿ ಬಿಡಿ. ಅವರ ಕಷ್ಟ ಸುಖ ಮಾಡಿಕೊಳ್ಳುತ್ತಾರೆ ನೀವು ಇವತ್ತು ಈ ಮನೆಯಲ್ಲಿ ಹೇಳಿದ್ದನ್ನು ಪಾಲಿಸದೇ ಇದ್ದರೆ ಈ ಮನೆಯ ವ್ಯಕ್ತಿತ್ವ ಏನಿದೆ? ಗೌರವ ಏನಿದೆ? ಮಾನ್ಯ ಮಂತ್ರಿಗಳು ಹೇಳಿರುವಂಥಾದ್ದನ್ನು ಕಾರ್ಯರೂಪಕ್ಕೆ ತರುವಂತಹ ಕೆಲಸ ಮಾಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್:- ಮಲ್ಟಿ ನ್ಯಾಷನಲ್ಸ್ ಕಂಪನಿ ಮತ್ತು ಕೇಂದ್ರದಿಂದ ಅನುಮತಿ ಪಡೆದು ಬಂದವರಿಗೆ ಟ್ಯಾಕ್ಸ್ ಎಕ್ಸಂಪ್ಷನ್ ಕೊಡುವುದು ನ್ಯಾಷನಲ್ ಪಾಲಿಸಿ ಎಂದು ಹೇಳಿದ್ದೀರಿ. ಈಗ ಇಲ್ಲ ಅದನ್ನು ತೆಗೆದಿದ್ದಾರೆ 2000ನೇ ಇಸವಿಯಲ್ಲಿ ಎಂದು ಹೇಳಿದ್ದೀರಿ. ಅದರ ಜೊತೆಗೆ ಡೆಫರ್ಡ್ ಪೇಮೆಂಟ್ ಎಂದು ಕೊಟ್ಟಿದ್ದೀರಿ. ಅದನ್ನು ಹತ್ತು ವರ್ಷಕ್ಕೋ ಹನ್ನೆರಡು ವರ್ಷಕ್ಕೋ ನೀವು ಡೆಫರ್ಡ್ ಪೇಮೆಂಟ್ ಎಂದು ಮಾಡುತ್ತೀರಿ. ಅಷ್ಟು ಅನುಕೂಲವನ್ನು ಪಡೆದುಕೊಂಡು ದುಡ್ಡನ್ನು ಶೇಖರಣೆ ಮಾಡಿ ಒಂದು ವೇಳೆ ಆ ಕಂಪನಿಗಳು ಮುಚ್ಚಿದರೆ who is responsble?who has to give the money to the Government? ಅಂತಹ ಕಂಪನಿಗಳು ಮುಚ್ಚಿ ಬಿಡುತ್ತವೆ ಎಂದುಕೊಳ್ಳಿ, 12 ವರ್ಷವಾದ ಮೇಲೆ . ನಿಮಗೆ ಯಾವ ಗ್ಯಾರಂಟಿ ಇದೆ ಸರ್ಕಾರಕ್ಕೆ ಡೆಫರ್ಡ್ ಪೇಮೆಂಟ್ ವಾಪಸ್ ಬರುತ್ತದೆ. ಎಂದು ಅದಕ್ಕೆ ಬ್ಯಾಂಕ್ ಗ್ಯಾರಂಟಿನೋ ಅಥವಾ ಇನ್ಯಾವುದೇ ಗ್ಯಾರಂಟಿ ತೆಗೆದುಕೊಂಡಿದ್ದೀರಾ? ಅದಕ್ಕೆ ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ರಾಜ್ಯದಲ್ಲಿ ಇನ್ಸೆಂಟೀವ್ ಕನ್ಸಿಷನ್ಸ್ ಕೊಡುವುದು ಏಕೆ ಬಂತು? ಕೈಗಾರಿಕೆಗಳು ಬರಬೇಕು, ವ್ಯಾಪಾರ ಉದ್ಯೋಗ ಬೆಳೆಯಬೇಕು, ನಮ್ಮ ಸ್ಥಳೀಯ ಜನರಿಗೆ ಉದ್ಯೋಗವಕಾಶ ಸಿಗಬೇಕು. ಅಲ್ಟಿಮೇಟ್ಲಿ, ನಾಲ್ಕು-ಐದು ವರ್ಷದ ನಂತರ ಸರ್ಕಾರಕ್ಕೆ ಆದಾಯ ಬರಬೇಕು ಎಕಾನಮಿ ಬಿಲ್ಡಪ್ ಆಗಬೇಕಾದರೆ ಕೃಷಿ, ತೋಟಗಾರಿಕೆ, ವ್ಯಾಪಾರ, ಕೈಗಾರಿಕೆ ಬೆಳೆಯಬೇಕು. ಇವತ್ತು ಕರ್ನಾಟಕ ಫೋರ್‌ಫ್ರಂಟ್‌ನಲ್ಲಿ ಇದ್ದರೆ, ಅದಕ್ಕೆ ಸಕ್ಸೆಸೀವ್ ಗವರ್ನಮೆಂಟ್ಸ್ ಕಾರಣ. ಮಹಾರಾಜರ ಕಾಲದಿಂದ ಕೈಗಾರಿಕೆಗಳಿಗೆ, ವ್ಯಾಪಾರಕ್ಕೆ, ಶಿಕ್ಷಣಕ್ಕೆ ಒಂದು ಉತ್ತೇಜನ ಕೊಟ್ಟರು. ಹಾಗಾಗಿ you are in the forefront today. it is not like Bihar; ಹಾಗಾಗಿ ಮಾಡಿದ್ದು ತಪ್ಪಲ್ಲ. ಒಳ್ಳೆಯ ಇಂಟೆನ್‌ಷನ್‌ನಲ್ಲಿ ಮಾಡಿದ್ದಾರೆ. ಇವತ್ತು ಡೆಫರ್‌ಮೆಂಟ್ ಏನು ಕೊಡುತ್ತೇವೆ, ನಾಳೆ ಅವನು ಮುಳುಗಿ ಹೋದರೆ ಏನು ಆಗಬಹುದು ಎಂದರೆ ಏನು ಮಾಡುವುದಕ್ಕಾಗುತ್ತದೆ ದಯವಿಟ್ಟು ಅರ್ಥ ಮಾಡಿಕೊಳ್ಳಿ. ಅವನ ಅಸೆಟ್ಸ್ ಏನು ಇವೆ, ಅದರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಇವತ್ತು ಬಹಳಷ್ಟು ಜನ ನಮ್ಮ ಕೆಎಸ್‌ಎಫ್‌ಸಿ, ಕೆಎಸ್‌ಐಡಿಯಿಂದ ಸಾಲ ತೆಗೆದುಕೊಂಡಿದ್ದಾರೆ, ಬಹಳಷ್ಟು ಜನ ಇವತ್ತು ಬ್ಯಾಂಕ್‌ರಪ್ಟ್, ಆಗಿದ್ದಾರೆ. ಒನ್‌ಟೈಮ್ ಸೆಟಲ್‌ಮೆಂಟ್ ಮಾಡುವಾಗ ಇವತ್ತು ಪ್ರಿನ್ಸಿಪಲ್ ತೆಗೆದುಕೊಂಡು ಮಾಡುತ್ತಿದ್ದೇವೆ. ಪ್ರಿನ್ಸಿಪಲ್ ಕಡಿಮೆ ತೆಗೆದುಕೊಂಡೂ ಮಾಡುತ್ತಿದ್ದೇವೆ. ಅದೊಂದು ವ್ಯವಹಾರ. ಹಾಗಾಗಿ ಯಾವುದೋ ಒಂದು ಒಳ್ಳೆಯ ಇಂಟೆನ್‌ಷನ್‌ನಿಂದ ಮಾಡಿದ್ದು. ಮತ್ತೊಂದು ಕಾಂಗ್ರೆಸ್ ಸರ್ಕಾರ, ಎಸ್.ಎಂ. ಕೃಷ್ಣ ಅವರ ಸರ್ಕಾರ ಬಂದಾಗಿನಿಂದ ಇದು ಶುರುವಾಗಿಲ್ಲ. ಇದು 20,25 ವರ್ಷದಿಂದ ಕೊಡುತ್ತಾ ಬಂದಿದ್ದೇವೆ. ಹೊಸದಾಗಿ ಏನಾದರೂ ಪ್ರರಂಭ ಮಾಡಿದ್ದರೆ ತಾವು ಹೇಳಬಹುದಿತ್ತು, ಏನು ನೀವು ಹೊಸದಾಗಿ ಮಾಡಿದ್ದಿರೆಂದು ಕೇಳಿದ್ದರೆ ನಾವು ಉತ್ತರ ಕೊಡುವುದು ಕಷ್ಟ ಆಗಬಹುದು. ಇದು ಸಕ್ಸೆಸೀವ್ ಗವರ್ನಮೆಂಟ್ಸ್ ಒಳ್ಳೆಯ ಮನಸ್ಸಿನಿಂದ, ಒಳ್ಳೆಯ ವಿಚಾರದಿಂದ ಮಾಡಿದ್ದಾರೆ. ಈಗ ಮಾನ್ಯ ಚಂದ್ರಬಾಬು ನಾಯುಡು ಇದ್ದಾರೆ, ತಾವು ಮಾತನಾಡುತ್ತೀರಿ. ಅವರು ಬೇಕಾದ್ದು ಕೊಡುತ್ತೇನೆಂದು ಹೇಳಿದ್ದಾರೆ. ಹಣ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಕ್ಯಾಶ್ ಸಬ್ಸಿಡಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. we are not doing that. Even the Chief MInister said, no, we cannot do all that. ಹಾಗೆ ನಾವು ಸಹ ನಮ್ಮ ಪ್ಯಾರಾಮೀಟರ್‌ನಲ್ಲಿ ಕೈಗಾರಿಕೆಗಳು ಬರಬೇಕು, ವ್ಯಾಪಾರ ಬೆಳೆಯಬೇಕು ಎಂದು ಪ್ರಯತ್ನ ಮಾಡುವಾಗ ಕೆಲವೊಂದು ಸಾರಿ ಕೆಲವು ಇನ್ಸೆಂಟಿವ್ ಅನ್ನು ಇಂಡಸ್ಟ್ರೀಗಳಿಗೆ ಕೊಟ್ಟಿದ್ದೇವೆ. ಅದಕ್ಕೆ ಈಗಾಗಲೇ ಪೂರ್ಣ ವಿರಾಮ 1.1.2001ದಿಂದ ಹಾಕಿದ್ದೇವೆ.

ಶ್ರೀ ಬಿ. ಸೋಮಶೇಖರ್:- ಬ್ಯಾಂಕ್ಸ್‌ಡಿಪರ್‌ಮೆಂಟ್‌ನಿಂದ ನೂರಾರು ಕೋಟಿ ರೂಪಾಯಿ ಶೇಖರಣೆ ಆಗುತ್ತದೆ. ಸರ್ಕಾರಕ್ಕೆ ಬರುವ ಟ್ಯಾಕ್ಸ್‌ನಲ್ಲಿ ಬೆಸಿನೆಸ್ ಮಾಡಿ ಅವನು ಮಲ್ಟಿಪ್ಲೈ ಮಾಡಿಕೊಳ್ಳುತ್ತಾನೆ ಅಷ್ಟೆಲ್ಲಾ ಮಾಡಿ ಉಪಯೋಗ ಪಡೆದು ಹತ್ತು, ಹನ್ನೆರಡು ವರ್ಷವಾದ ಮೇಲೆ ಏನು ಬ್ಯಾಂಕ್‌ರಪ್ಟ್ ಆಗಿ ಮುಚ್ಚಿ ಬಿಡುತ್ತಾನೆ ಎಂದು ಇಟ್ಟುಕೊಳ್ಳಿ. ಈ ಕಲೆಕ್ಟ್ ಮಾಡಿದಂತಹ ಹಣಕ್ಕೆ ಯಾರು ಗ್ಯಾರಂಟಿ ಎಷ್ಟು, ಅದರ ಬಗ್ಗೆ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ:- ಆಗಲೇ ನಾನು ಹೇಳಿದೆ, most of the cases, ಎಲ್ಲಿ ಕೈಗಾರಿಕಾ ಡೆಫರ್‌ಮೆಂಟ್ ತೆಗೆದುಕೊಳ್ಳುತ್ತಾರೆ. They generally do well ಅದು ಬರುತ್ತದೆ. ಕೆಲವು ಸಂದರ್ಭದಲ್ಲಿ ಹೀಗೆ ಯಾವುದಾದರೂ ಕೇಸ್ ಬಂದಾಗ We have to

go against their assets, personal assets what they have got. ಬಗ್ಗೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುದುವನಹಳ್ಳಿ:- ಸಣ್ಣ ಕೈಗಾರಿಕಾ ಮಂತ್ರಿಗಳು ಬಾಂಚ್ ಕೊಡುವ ವಿಚಾರದಲ್ಲಿ ಏನೂ ಹೇಳಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಮಿಷ

ಶ್ರೀ ಜಗದೀಶ್ ಶೆಟ್ಟರ್:- ನೀವು ರಿಪ್ಲೈ ಕೊಡುವಾಗ ಹೇಳಿ. ನೀವು ಒಮ್ಮೆಲೇ ನ್ಯಾಷನಲ್ ಇಂಟರ್ ನ್ಯಾಷನಲ್‌ಗೆ ಹೋಗಿ ಬಿಡುತ್ತೀರಿ. ನಾನು ನೌಕರುದಾರರ ಬಗ್ಗೆ ಹೇಳುವುದಕ್ಕೆ ಹೊರಟಿದ್ದೇನೆ. ನೌಕರುದಾರರ ಬಗ್ಗೆ ನಿಮ್ಮ ಕೋಕಕೋಲಾ ಕಂಪನಿ ಯಾವ ಗತಿಗೆ ತೆಗೆದುಕೊಂಡು ಬಂದಿದ್ದಾರೆ ಎಂದು ಹೇಳುವುದಕ್ಕೆ ಹೊರಟಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ನೀವು ಕ್ಯಾಂಟೀನ್ ಇಲ್ಲ ಎಂದು ಹೇಳಿದಿರಿ. ಲೇಬರ್ ಡಿಪಾರ್ಟ್‌ಮೆಂಟಿಗೆ ಕಂಪ್ಲೇಂಟ್ ಮಾಡಲು ಹೇಳಿ they will take action against them. ಪ್ರಾವಿಡೆಂಟ್ ಫಂಡ್ ಕೊಟ್ಟಿಲ್ಲ ಎಂದು ಹೇಳಿದಿರಿ they will be prosecuted coco cola Company they have not credited provident fund, they could be prosecuted. If you have got representation please send it to me. we will see that they are prosecuted tomorrow.

ಶ್ರೀ ಜಗದೀಶ್ ಶೆಟ್ಟರ್:- ಕೋಕಾಕೋಲಾಕಂಪನಿ ಎಂದರೆ ನಿಮಗೆ ಸಿಟ್ಟು. ಕೋಕಾಕೋಲಾ ಕಂಪನಿಯ ಬಗ್ಗೆ ಹೇಳಿದರೆ ನಿಮಗೆ ಏಕೆ ಸಿಟ್ಟು ಬರುತ್ತದೆ?

ಶ್ರೀ ಆರ್.ವಿ. ದೇಶಪಾಂಡೆ:- ತಾವು ಹೇಳುತ್ತಿದ್ದೀರಿ. ತಾವು ಜವಾಬ್ದಾರಿ ಸ್ಥಾನದಿಂದ ಮಾತನಾಡುತ್ತಿದ್ದೀರಿ. ಪ್ರಾವಿಡೆಂಟ್ ಫಂಡ್ ಕೊಟ್ಟಿಲ್ಲ ಎಂದರೆ ಪ್ರಾಸಿಕ್ಯೂಟ್ ಮಾಡಬೇಕಾಗುತ್ತದೆ ಸೆಂಟ್ರಲ್ ಲೆಜಿಸ್ಲೇಷನ್ ಇದೆ. How can we keep quite we will have to prosecute them tomorrow. ಅದನ್ನು ಗಮನಕ್ಕೆ ತನ್ನಿ. ದಯಮಾಡಿ ಕೊಡಿ.

ಶ್ರೀ ಜಗದೀಶ್ ಶೆಟ್ಟರ್:- ಅವರು ಎಲ್ಲಾ ಕಡೆ ಅರ್ಜಿ ಕೊಟ್ಟು ಏನೂ ಆಗಿಲ್ಲ. ಇವತ್ತು ನಮ್ಮ ಗಮನಕ್ಕೆ ಬಂದಿದೆ. ಇವತ್ತು ಕನಿಷ್ಠ ವೇತನ ಇಲ್ಲ, ಪಿಎಫ್ ಕೊಡುತ್ತಿಲ್ಲ ಮತ್ತು ಇಎಸ್‌ಐ ಸೌಲಭ್ಯ ಇಲ್ಲ, ಅವರಿಗೆ ಕ್ಯಾಂಟೀನ್ ಸೌಲಭ್ಯ ಇಲ್ಲ. ದೊಡ್ಡ ಕಂಪನಿ ಇಂಟರ್‌ನ್ಯಾಷನಲ್ ಕಂಪನಿ, ಅಲ್ಲಿ ನೌಕರುದಾರರು 700,800 ಜನ ಸಾಯುವುದಕ್ಕೆ ಹತ್ತಿದ್ದಾರೆ. 8-10 ತಾಸು ಕೆಲಸ ಮಾಡುತ್ತಾರೆ. ಅವರು ಮಾಡುವ ಡ್ಯೂಟಿಗೆ ಬೆಲೆ ಇಲ್ಲ. ಅಂಥವರಿಗೆ ಸೌಲಭ್ಯ ಕೊಡುವಂಥಾದ್ದು ಇಲ್ಲ. ದೊಡ್ಡ ಕಂಪನಿಗೆ ನೂರಾರು ಕೋಟಿ ರೂಪಾಯಿ ಎಕ್ಸಂಪ್ಷನ್ ಕೊಟ್ಟಿದ್ದೀರಿ, ಅದನ್ನು ನಾನು ಕೇಳುತ್ತಿದ್ದೇನೆ. ಇವತ್ತು ನೌಕರುದಾರರ ರಕ್ಷಣೆ ಮಾಡಬೇಕಲ್ಲಾ ಅವರು.

ಶ್ರೀ ಆರ್.ವಿ. ದೇಶಪಾಂಡೆ:- ತಮಗೆ ಡಿಸ್ಟರ್ಬ್ ಮಾಡುತ್ತೇವೆಂದು ಅಂದುಕೊಳ್ಳಬೇಡಿ. ನಮ್ಮ ಕಡೆ ಯಾವುದಾದರೂ ರೆಪ್ರಸೆಂಟೇಷನ್ ಬಂದರೆ ನಮಗೆ ಕಳುಹಿಸಿ ಕೊಡಿ we will definitely reply and take action.

ಶ್ರೀ ಜಗದೀಶ್ ಶೆಟ್ಟರ್:- ಪಿಎಫ್ ಫಾರಂಗೆ ನೌಕರುದಾರರದ್ದು ಬ್ಲಾಂಕ್ ಸಹಿ ಮಾಡಿರುವ ಕಾಪಿ ನನ್ನ ಕಡೆಗೆ ಇದೆ. ಬ್ಲಾಂಕ್ ಸ್ಪೇಸ್ ತೆಗೆದುಕೊಂಡಿದ್ದಾರೆ. ಪಾಪ ಅವರು ಪಿಎಫ್ ಹಣ ತುಂಬುತ್ತಾರೆ. ಆದರೆ ಎಂಟ್ರಿ ಏನೂ ಇಲ್ಲ ಅಲ್ಲಿ. ಬ್ಲಾಂಕ್ ಸಹಿ ಮಾಡಿಸಿಕೊಂಡು ತಮಗೇನುಬೇಕೋ ಅದನ್ನು ಮಾಡಿಕೊಳ್ಳುತ್ತಿದ್ದಾರೆ. ಇಷ್ಟೊಂದು ಪರಿಸ್ಥಿತಿ ಇದೆ. ತಾವು ನಾಳೆ ಎನ್‌ಕ್ವೈರಿ ಮಾಡಿ ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಿ. ಆ ನೌಕರರಿಗೆ ಎಲ್ಲಾ ಸೌಲಭ್ಯವನ್ನು ಕೊಡುವ ವ್ಯವಸ್ಥೆ ಮಾಡಿ. ಆ ವ್ಯವಸ್ಥೆ ಮಾಡಿದಾಗ ನಿಮ್ಮ ಸರ್ಕಾರ, ಮಂತ್ರಿಗಳ ಬಗ್ಗೆ ನಾವು ಶಹಭಾಸ್‌ಗಿರಿ ಕೊಡಲು ಸಾಧ್ಯ ಇದೆ. ಕೋಕಕೋಲಾ ಕಂಪನಿಯಲ್ಲಿ ನೌಕರುದಾರರು ಯಾರು ಅಂದರೆ ಅವರು ಸ್ಥಳೀಯರು. ಅವರು ವಿದೇಶದಿಂದ ಬಂದವರು 700-800 ನೌಕರರು ಸ್ಥಳೀಯರು ಇದ್ದಾರೆ. ಇವರೆಲ್ಲಾ ತೊಂದರೆಯಲ್ಲಿದ್ದಾರೆ. ಅವರಿಗೆ ಇಲ್ಲಾ ಫೆಸಿಲಿಟಿ ಕೊಡುವಂತಹ ವ್ಯವಸ್ಥೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಬಗ್ಗೆ ನೀವು ಹೇಳಿದಿರಿ. ಟ್ಯಾಕ್ಸ್ ಎಕ್ಸಂಷನ್ ಕೊಡಬೇಕು, ಇವತ್ತು ಕೇಂದ್ರ ಸರ್ಕಾರನೂ ಆ ರೀತಿ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡಿದೆ ಎಂದು ಹೇಳಿದಿರಿ. ನಾವು ಮಲ್ಟಿ ನ್ಯಾಷನಲ್ ಕಂಪನಿಗಳು ಬಂದರೆ ರಾಜ ವೈಭವದ ಗೌರವ ಕೊಡಬೇಕಾಗುತ್ತದೆ, ಎಕ್ಸಂಪ್‌ಷನ್ ಕೊಡಬೇಕಾಗುತ್ತದೆ ಎಂದೆಲ್ಲಾ ಹೇಳಿದಿರಿ. ಮಾಡಿರಿ, ಇಂಡಸ್ಟ್ರಿ ತೆಗೆದುಕೊಂಡು ಬನ್ನಿ, ಬೆಳೆಸಿರಿ. ಯಾರೂ ಬೇಡ ಎನ್ನುವುದಿಲ್ಲ. ಆದರೆ ಇದರ ಜೊತೆಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳು ಸಾಯಬೇಕಾ? ಇವು ನಮ್ಮವು. ನಮ್ಮ ದೇಶದ್ದು, ನಮ್ಮ ರಾಜ್ಯದ್ದು. ನಮ್ಮ ಜನರೂ ಇಲ್ಲಿದ್ದಾರೆ. ಅವರಿಗೆ ಇಂಡೈರೆಕ್ಟ್ ರೀತಿಯಿಂದ 200 ಕೋಟಿ ರೂಪಾಯಿಯಷ್ಟು ಎಕ್ಸಂಪಷನ್ ಕೊಡುತ್ತೀರಿ. ಇವತ್ತು ಡೈರೆಕ್ಟಾಗಿ 360 ಕೋಟಿ ರೂಪಾಯಿ ಕೊಡಲಿಕ್ಕೆ ಆಗಲಿಲ್ಲ ಎಂದರೆ ಇದೇನು? ಅಷ್ಟೊಂದು ಹಣವನ್ನು ನೀವು ಬಜೆಟ್‌ನಲ್ಲಿ ಅಡ್ಜಸ್ಟ್ ಮಾಡಲಿಕ್ಕೆ ಆಗುವುದಿಲ್ಲವೇ? ಏಕೆ ನೀವು ಪ್ರತಿ ಸಲ ಒಪ್ಪಿಕೊಳ್ಳುತ್ತೀರಿ. ಸದನದಲ್ಲಿ ಒಪ್ಪಿಕೊಳ್ಳುತ್ತೀರಿ, ಹೌದು 370 ಕೋಟಿ ರೂಪಾಯಿ ಕೊಡುವುದಿದೆ, ಕೊಡಬೇಕಾಗಿದೆ, ಅದರಿಂದ ತೊಂದರೆ ಆಗಿದೆ ಎಂದು ಎಲ್ಲಾ ಹೇಳುತ್ತೀರಿ. ಮುಂದೇನು? ಮಾರ್ಚ್. ಹಾಗಾದರೆ ಯಾವಾಗ ಬಿಡುಗಡೆ ಮಾಡುತ್ತೀರಿ ಹೇಳಿರಿ? ನೀವು ಹೇಳುತ್ತೀರಿ. ನಮ್ಮ ಕಾಶ್ಯಪ್ಪನವರ್ ಇದ್ದಾಗ ಕೆಎಸ್‌ಎಫ್‌ಸಿ ಬಾಂಡ್ ಇಶ್ಯೂ ಮಾಡುತ್ತೇನೆಂದು ಹೇಳಿದ್ದರು. ಆ ಬಾಂಡ್ ಇಲ್ಲ, ಹಣವೂ ಇಲ್ಲ. ಯಾವುದನ್ನೂ ಕೊಟ್ಟಿಲ್ಲ. ನೀವೆಲ್ಲಾ ದೊಡ್ಡ ದೊಡ್ಡ ಇಂಡಸ್ಟ್ರಿ ತೆಗೆದುಕೊಂಡು ಬರುವುದಕ್ಕೆ ಹೊರಟಿದ್ದೀರಿ. ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲ್ಲಿ ಸಹ ಲಕ್ಷಾಂತರ ಜನರು ಇದ್ದಾರೆ. ನಿರುದ್ಯೋಗಿಗಳು ಆಗುತ್ತಾರೆ. 50 ಪರ್ಸೆಂಟ್, 70 ಪರ್ಸೆಂಟ್ ನಿರುದ್ಯೋಗಿ ಆಗುತ್ತಾರೆ. ನಾಳೆ 100 ಪರ್ಸೆಂಟ್ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಮುಚ್ಚಿದರೆ ದೊಡ್ಡ ಇಂಡಸ್ಟ್ರಿ ಎಷ್ಟು ದಿನ ನಡೆಯುತ್ತದೇ ಅದಕ್ಕೆ ನಾನು ಏನು ಹೇಳುತ್ತಿದ್ದೇನೆ, ನೀವು ದೊಡ್ಡ ಇಂಡಸ್ಟ್ರಿ, ಮಲ್ಟಿ ನ್ಯಾಷನಲ್ ಇಂಡಸ್ಟ್ರಿ ಕರೆಯಿರಿ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಇದ್ದಂತಹ ನಮ್ಮವರನ್ನು ನೀವು ಉಳಿಸಬೇಕು. ಲಕ್ಷಾಂತರ ಜನರು ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಯಲ್ಲಿ ಇದ್ದಾರೆ. ಮಲ್ಟಿ ನ್ಯಾಷನಲ್ ಇಂಡಸ್ಟ್ರಿಯಲ್ 400 ಜನ ಕೆಲಸ ಮಾಡಿದ್ದಾರೆ. ನಮ್ಮಲ್ಲಿ 1000 ಜನ ಕೆಲಸ ಮಾಡಿದ್ದಾರೆ. ನಮ್ಮವರು ಇಲ್ಲಿ ಬದುಕುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಗಳು ಇದ್ದಾವೆ. ಅವರಿಗೆ ನೀವು ಇನ್‌ಕರೇಜ್‌ಮೆಂಟ್ ಕೊಡಬೇಕಲ್ಲಾ. ಮೊದಲು ಸಬ್ಸಿಡಿ ಕ್ಯಾನ್ಸಲ್ ಮಾಡಿದ್ದೀರಿ, ಓಕೆ. ನೀವು

ಆದೇ ರೀತಿ ಮೊದಲೇ ಆ ರೀತಿ ಪಾಲಿಸಿ ಮಾಡಿದ್ದರೆ ಓಕೆ. ಆದರೆ ಪ್ರಿಫೆರ್ಡ್ ಅವರದ್ದು ಇದೆ, ನಾವು ಸಬ್ಸಿಡಿ ತೆಗೆದುಕೊಂಡು ಮಾಡಬೇಕು ಎಂದು ಅವರು ಇದ್ದಾರೆ. ಸಬ್ಸಿಡಿ ಕೊಡುವ ಟೈಮ್‌ನಲ್ಲಿ ಕೊಡದೇ ಇದ್ದುದಕ್ಕೆ ಅವೆಲ್ಲಾ ಸಿಕ್ ಇಂಡಸ್ಟ್ರಿ ಆಗಿವೆ. ಹಾಗಾಗಿ ಅದನ್ನು ಬದುಕಿಸುವುದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಹೇಳಿ. ಇವೆಲ್ಲಾ ಆಗಲೇ ಹೇಳಿದಿರಿ, ಕೇಂದ್ರ ಸರ್ಕಾರದ ಪಾಲಿಸಿ, ನ್ಯಾಷನಲ್, ಇಂಟರ್‌ನ್ಯಾಷನಲ್ ಪಾಲಿಸಿ ವಿಚಾರ ಹೇಳಿದಿರಿ ನಿಮ್ಮ ಪಾಲಿಸಿ ಎಲ್ಲಾ ಹೇಳಿದಿರಿ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಬಗ್ಗೆ ನಿಮ್ಮ ಪಾಲಿಸಿ ಏನು ಹೇಳಿ. ಅದಕ್ಕಾದರೂ ನಿಮ್ಮ ಕಡೆ ಉತ್ತರ ಇಲ್ಲ. ನೀವು ಅಸಹಾಯಕರು. ನನಗೆ ಗೊತ್ತಿದೆ. ನೀವು ಹಣ ಯಾವಾಗ ಕೊಡುತ್ತೀರಿ ಹೇಳಿ? ಈ 370 ಕೋಟಿ ರೂಪಾಯಿ, 400 ಕೋಟಿ ರೂಪಾಯಿಯನ್ನು ನೀವು ಯಾವಾಗ ಕೊಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಿ. ನಿಮ್ಮ ಕಡೆ ಉತ್ತರ ಇಲ್ಲ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರನೂ ಉತ್ತರ ಇಲ್ಲ. ಏಕೆಂದರೆ ಫೈನಾನ್ಷಿಯಲ್ ಕ್ರೈಸಿಸ್ ಇದೆ. ನಿಮಗೆ ಕೊಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ಏನೋ ಒಂದು ಹೇಳುವಂಥಾದ್ದು. ಇದೂ ಇದೆ. ಅದಕ್ಕಾಗಿ ಒಬ್ಬೊಬ್ಬರಿಗೆ ಒಂದೂ ಇನ್ನೊಬ್ಬರಿಗೆ ಒಂದು ಎಂಬ ರೀತಿ ಆಗಬಾರದು. ದೊಡ್ಡವರಿಗೆ ಸಣ್ಣವರಿಗೆ ಇಲ್ಲರಿಗೂ ಒಂದೇ ರೀತಿ ಮನ್ನಣೆ ಕೊಡುವಂತಹ ಕೆಲಸ ಆಗಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಬೇರೆ ಒಂದು ಆಡಳಿತ ವ್ಯವಸ್ಥೆಯಲ್ಲಿ ನೀವು ಯಾವ ರೀತಿ ಇವತ್ತು ನಡೆದುಕೊಳ್ಳುತ್ತಿದ್ದೀರಿ? ಪ್ರಜಾತಂತ್ರ ವಿರೋಧವಾಗಿ ಇವತ್ತೇನು ಕೆಲಸ ಮಾಡುತ್ತಿದ್ದೀರಿ? ನಿನ್ನೆ ಬಿಜಾಪುರ ಡಿಸಿಸಿ ಬ್ಯಾಮಕ್ ಬಗ್ಗೆ ಚರ್ಚೆ ಆಯಿತು. ಹೆಚ್ಚು ಕಡಿಮೆ ಮಾನ್ಯ ವಿಶ್ವನಾಥ್ ಅವರು ಏನು ಒಳಗೊಳಗೆ ನಡೆದಿದೆ ಎನ್ನುವುದು ಅವರ ಮಾತಿನಲ್ಲಿ ಅರ್ಥ ಆಯಿತು. ಪ್ರಜಾತಂತ್ರ ವ್ಯವಸ್ಥೆಗೆ ಪೂರ್ತಿ ಅಗೌರವ ಕೊಡುವಂತಹ ಕೆಲಸ ಇವತ್ತು ರಾಜ್ಯದಲ್ಲಿ ನಡೆಯುತ್ತಿದೆ. ಇವತ್ತು ಬಿಜಾಪುರದ ಡಿಡಿಸಿ ಬ್ಯಾಂಕ್ ವಿಚಾರ ಒಂದಾದರೆ ನಾನು ಇನ್ನೊಂದೆರಡು ಉದಾಹರಣೆ ಕೊಡುತ್ತಿದ್ದೇನೆ. ಕೇವಲ ಉದಾಹರಣೆ. ಇನ್ನೂ ಬಹಳಷ್ಟು ಇಡೀ ರಾಜ್ಯದಲ್ಲಿದ್ದಾವೆ. ಪ್ರಜಾತಂತ್ರ ವ್ಯವಸ್ಥೆಯನ್ನು ಹಾಳುಮಾಡುವಂಥದ್ದು ಬಹಳಷ್ಟು ಇದೆ. ಸ್ಥಳೀಯ ಟೌನ್ ಪಂಚಾಯತಿ ಇರಬಹುದು ಅಥವಾ ಗ್ರಾಮ ಪಂಚಾಯಿತಿ ಇರಬಹುದು. ಅಲ್ಲಿ ಸಹ ರಾಜಕೀಯ ಆಟ ಆಡುವಂತಹ ಕೆಲಸ ಇವತ್ತು ನಡೆಯುತ್ತಿದೆ. ಯಾರೋ ಅಲ್ಲಿ ಜನ ಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ಯಾರು ಅಧ್ಯಕ್ಷರು ಉಪಾಧ್ಯಕ್ಷರು ಆಗ ಬೇಕೆಂದು ಇದ್ದಾರೆ, ಅವರನ್ನೆಲ್ಲಾ ಡೆಸ್ಟ್ರಯ್ ಮಾಡಿ ತಮ್ಮದೇ ರೂಲಿಂಗ್ ಪಾರ್ಟಿನೇ ಇರಬೇಕು, ಇವತ್ತು ಅಪೋಸಿಷನ್‌ನವರು ಇರಲೇಬಾರದು, ಆ ರೀತಿಯಾದಂತಹ ಘನ ಕಾರ್ಯಗಳನ್ನು ಈ ಸರ್ಕಾರದವರು ಮಾಡಿದ್ದಾರೆ, ಅಧಿಕಾರಿಗಳು ಮಾಡಿದ್ದಾರೆ. ಪೋಲೀಸ್ ಅಧಿಕಾರಿಗಳು ಮಾಡಿದ್ದಾರೆ. ಒಂದೆರಡು ಉದಾಹರಣೆಗಳನ್ನು ನಾನು ಕೊಡುತ್ತಿದ್ದೇನೆ. ಬಾದಾಮಿ ತಾಲ್ಲೂಕಿನ ಮುಷ್ಟಿಗೇರಿ ಗ್ರಾಮ ಪಂಚಾಯತಿ ಎಲೆಕ್ಷನ್ ಆಯಿತು. ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಆಯಿತು. ಅಲ್ಲೇನು ಮಾಡುತ್ತೀರಿ ನೀವು?ಅಲ್ಲಿ 13 ಜನ ಇದ್ದಾರೆ. 13 ಜನರೊಳಗೆ ಇವತ್ತು ಜನತಾ ದಳ ಇರಬಹುದು, ಬಿಜೆಪಿ ಇರಬಹುದು. ಅಪೋಸಿಷನ್‌ನಲ್ಲಿ 7 ಜನ ಇದ್ದಾರೆ. ಏಳು ಜನ ಒಂದಾಗಿ ಆ ಚುನಾವಣೆಯಲ್ಲಿ ಭಾಗವಹಿಸಲಿಕ್ಕೆ ಹೋಗಿದ್ದಾರೆ. ಅಲ್ಲಿ 6 ಜನ ಒಳಗೆ ಇದ್ದಾರೆ. ಚುನಾವಣಾ ಅಧಿಕಾರಿ ಹತ್ತಿರ ಆರು ಜನ ಇದ್ದಾರೆ. ಇವರು ಅದರಲ್ಲಿ ಭಾಗವಹಿಸುವುದಕ್ಕೆ ಹೋದರೆ ಗುಂಡಾಗಳನ್ನು ಕಳುಹಿಸಿ ಸಾವಿರಾರು ಸಂಖ್ಯೆಯಲ್ಲಿ ಹೊರಗೆ ನಿಂತು, ಚುನಾವಣೆ ನಡೆಯುವಂತಹ ಸ್ಥಳದಲ್ಲಿ ಹೊರಗೆ ನಿಂತಿದ್ದಾರೆ. ಅವರನ್ನು

ಅಂದರೆ ಅಪೋಸಿಷನ್‌ನವರನ್ನು ಒಳಗಡೆ ಎಂಟ್ರಿ ಮಾಡುವುದಕ್ಕೆ ಬಿಡಲಿಲ್ಲ. ಅವರು ಒಳಗೆ ಎಂಟ್ರಿ ಆಗಲಿಲ್ಲ. ಗೊಂದಲ ನಿರ್ಮಾಣ ಆಯಿತು. ಅಲ್ಲಿರುವಂತಹ ಸಿಪಿಐ ಅವರಿಗೆ ರಕ್ಷಣೆ. ನಮ್ಮ 7 ಜನ ಅಪೋಜಿಷನ್‌ನಿಂದ ಬಂದವರಿಗೆ ಅವರು ರಕ್ಷಣೆ ಕೊಡಬೇಕು. ಅವರಿಗೆ ರಕ್ಷಣೆ ಕೊಡಲಿಲ್ಲ ಒಳಗೆ ಬಿಡಲಿಲ್ಲ, ಬಾಗಿಲು ಹಾಕಿಕೊಂಡರು. ಬಾಗಿಲು ಹಾಕಿಕೊಂಡು ಚುನಾವಣಾ ಅಧಿಕಾರಿ ಘೋಷಣೆ ಮಾಡುತ್ತಾನೆ ಅಧ್ಯಕ್ಷರು, ಉಪಾಧ್ಯಕ್ಷರನ್ನು ಆರು ಜನ ಚುನಾವಣೆ ಮಾಡಿ ಘೋಷಣೆ ಮಾಡಿ ಹೊರಟು ಹೋದರು. ಇದು ನಿಮ್ಮ ನೀತಿ. ಅಪೋಸಿಷನ್‌ದವರನ್ನು ಹತ್ತಿಕ್ಕುವಂತಹ ದೌರ್ಜನ್ಯ ಮಾಡುವಂತಹ ಕೆಲಸ ಇವತ್ತು ಪೋಲೀಸ್ ಅಧಿಕಾರಿಗಳ ಜೊತೆ ಶಾಮೀಲು ಮಾಡಿಕೊಂಡು ಅವರ ಮುಖಾಂತರ ನೀವು ಪ್ರಜಾತಂತ್ರದ ಕೊಲೆಯನ್ನು ಮಾಡುತ್ತಿದ್ದೀರಿ. ಮುಷ್ಟಿಗೇರಿಯಲ್ಲಿ ಆಯಿತು. ಚುನಾವಣೆ ಘೋಷಣೆ ಮಾಡಿದ್ದೀರಿ, ಏಳು ಜನ ಹೊರಗಡೆ ಇದ್ದಾರೆ. ಇನ್ನೊಂದು ಉದಾಹರಣೆ ಕೊಡುತ್ತೇನೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ವಿಚಾರ. ಶ್ರೀರಂಗಪಟ್ಟಣದ ಪುರಸಭಾ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ. ಅಲ್ಲಿ ಒಳಗೆ ಇದ್ದಾರೆ ಮೆಜಾರಿಟಿಯವರು. ಇವತ್ತು ಪ್ರತಿಪಕ್ಷದಲ್ಲಿದ್ದವರು ಜನತಾ ದಳದವರು ಇರಬಹುದು, ಬಿಜೆಪಿ ಅವರು ಇರಬಹುದು. ಅವರುಗಳು ಒಂದಾಗಿ ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ಒಳಗೆ ಕುಳಿತಿದ್ದಾರೆ. ಕಾಂಗ್ರೆಸ್‌ನವರು ಬರಲಿಲ್ಲ. ಆಮೇಲೆ ವೇಳೆ ಆಯಿತು. ಬಾಗಿಲು ಹಾಕಿ ಚುನಾವಣೆ ಪ್ರಾರಂಭ ಮಾಡಿ ಎಂದರೆ ಚುನಾವಣಾಧಿಕಾರಿ ಚುನಾವಣೆ ಪ್ರಾರಂಭ ಮಾಡಲಿಲ್ಲ. ಒಳಗೆ ಗುಂಡಾಗಳು, ಹೊರಗೆ ಗುಂಡಾಗಳು ಗದ್ದಲ ಮಾಡಿದರು. ಚುನಾವಣ ಅಧಿಕಾರಿ ನನ್ನ ಜೀವಕ್ಕೆ ಭಯ ಇದೆ ಎಂದು ಕದ ತೆಗೆದು ಚುನಾವಣೆಯನ್ನು ರದ್ದು ಮಾಡಿ ಓಡಿ ಹೋಗುತ್ತಾನೆ. ಹೊರಗೆ ಗದ್ದಲ ಆಯಿತು ಎಂದು ಹೊರಗಡೆ ಓಡಿ ಹೋಗುತ್ತಾನೆ. ಅಲ್ಲಿ ಮುಷ್ಟಿಗೇರಿಯಲ್ಲಿ ಗದ್ದಲ ಮಾಡಿ ಒಳಗೆ ಬಿಡಲಿಲ್ಲ. ಇಲ್ಲಿ ಒಳಗೆ ಮೆಜಾರಿಟಿ ಮೆಂಬರ್ಸ್ ಕುಳಿತಿದ್ದರೆ ಇಲ್ಲಿ ಗದ್ದಲ ಮಾಡಿ ಚುನಾವಣಾಧಿಕಾರಿಯನ್ನು ಮನೆಗೆ ಕಳುಹಿಸುತ್ತೀರಿ. ಆಮೇಲೆ ಚುನಾವಣೆ ರದ್ದು ಮಾಡುತ್ತೀರಿ. ಚುನಾವಣೆ ರದ್ದಾಯಿತು. ಜನರಿಗೆ 16ನೆ ತಾರೀಖು ಚುನಾವಣೆ ರದ್ದಾಗಿದೆ ಶ್ರೀರಂಗಪಟ್ಟಣದ್ದು. ಇಲ್ಲಿಯವರೆಗೆ ಹೊಸ ಚುನಾವಣೆ ಘೋಷಣೆ ಮಾಡಲಿಲ್ಲ. ಶ್ರೀರಂಗಪಟ್ಟಣ ಪುರಸಭಾ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆ ಜನವರಿ 16ನೇ ತಾರೀಖು ಒಳಗಡೆ ಮೆಜಾರಿಟಿ ಮೆಂಬರ್ಸ್ ಕುಳಿತಿದ್ದಾರೆ. ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ಮಾಡುವುದಿಲ್ಲ. ಹೊರಗೆ ಗದ್ದಲ ಆಯಿತು ಎಂದು ನೆಪ ಮಾಡಿಕೊಂಡು ಚುನಾವಣ ಅಧಿಕಾರಿ ಚುನಾವಣೆ ರದ್ದು ಮಾಡಿ ಹೋಗುತ್ತಾನೆ. ರದ್ದಾದ ಮೇಲೆ ಪೋಲೀಸರ ರಕ್ಷಣೆ ಇಟ್ಟುಕೊಂಡು, ಪೋಲೀಸರ ಮುಖಾಂತರ ರಕ್ಷಣೆ ಕೊಟ್ಟು ಹೊಸದಾಗಿ ಚುನಾವಣೆ ಮಾಡಬೇಕಿತ್ತಲ್ಲಾ. ಚುನಾವಣೆ ಮಾಡಲಿಲ್ಲ. ಇವತ್ತಿನವರೆಗೆ ಚುನಾವಣಾ ಡೇಟ್ ಫಿಕ್ಸ್ ಆಗಲಿಲ್ಲ. ಹಾಗಾದರೆ ನೀವು ಗುಂಡಾರಾಜ್ಯ ಮಾಡುತ್ತಿದ್ದೀರಿ? ಇವತ್ತು ಪ್ರಜಾತಂತ್ರದ ಕೊಲೆ ದಿನನಿತ್ಯ ನಡೆಯುತ್ತಿದೆ. ಹಾಗಾದರೆ ಇದಕ್ಕೆ ಉತ್ತರ ಕೊಡುವವರು ಯಾರಿದ್ದಾರೆ? ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದು ಬರುತ್ತದೋ ಇಲ್ಲವೋ? ಮಂತ್ರಿಗಳ ಗಮನಕ್ಕೆ ಬರುವುದಿಲ್ಲವೋ ಹೇಗೆ? ಇದರ ಬಗ್ಗೆ ಸಾಕಷ್ಟು ಅವರು ಮೆಮಾರ್‍ಯಾಂಡಮ್ ಕೊಡುತ್ತಾರೆ. ಎಲ್ಲಾ ಮಾಡುತ್ತಾರೆ. ಪತ್ರಿಕೆಗಳಲ್ಲಿ ಬರುತ್ತದೆ. ಆದರೆ ಇದರ ಬಗ್ಗೆ ಸರ್ಕಾರ ಇವತ್ತು ಕಣ್ಣು ಮುಚ್ಚಿಕೊಂಡು ಕುಳಿತಿದೆ. ಕಿವಿ ಕೇಳಿಸುತ್ತಿಲ್ಲ. ಬಾಯಿಮುಚ್ಚಿಕೊಂಡು ಕುಳಿತಿದೆ. ಇದಕ್ಕೆ ಕಣ್ಣು, ಬಾಯಿ ಈ ಸರ್ಕಾರಕ್ಕೆ ಏನೂ ಇಲ್ಲ. ಇಂತಹ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ನಿರ್ಮಾಣ ಆಗಿದೆ. ವಿರೋಧಿಗಳನ್ನು

ದೌರ್ಜನ್ಯ ಮಾಡುವಂಥದ್ದು, ಹತ್ತಿಕ್ಕುವಂತಹ ಕೆಲಸ ಇವತ್ತು ರಾಜ್ಯದಲ್ಲಿ ನಡೆಯುತ್ತಿದೆ. ಹಾಗಾದರೆ ಇವತ್ತು ಚುನಾವಣೆಯನ್ನು ಯಾವಾಗ ಘೋಷಣೆ ಮಾಡುತ್ತಾರೆಂದು ಸದನದಲ್ಲಿ ಹೇಳುತ್ತೀರಾ? ಶ್ರೀರಂಗಪಟ್ಟಣದ್ದು, ಮುಷ್ಟಿಗೇರಿ ಚುನಾವಣೆಯು ಅಕ್ರಮವಾಗಿ ಆಯಿತು. ರದ್ದು ಮಾಡುತ್ತೀರಾ? ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ವಿಚಾರ ಮಾಡಿರಿ. ಅಲ್ಲಿ ಪೋಲೀಸ್ ಅಧಿಕಾರಿಗಳು, ಶ್ರೀರಂಗಪಟ್ಟಣದಲ್ಲಿ ಓಪನ್ ಆಗಿ ಪೋಲೀಸ್ ಅಧಿಕಾರಿಗಳು ನಿಮ್ಮ ಗುಂಡಾಗಳಿಗೆ ಸಪೋರ್ಟ್ ಮಾಡುತ್ತಾರೆ. ಹಾಗಾದರೆ ಇವತ್ತು ಪ್ರಜಾತಂತ್ರ ಎಂದು ಹೇಳಬೇಕೋ ಇಲ್ಲವೋ ಎನ್ನುವುದನ್ನು ನಾವು ಕೇಳಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅದೇರೀತಿ ಇವತ್ತು ಡೀಸೆಂಟ್ರಲೈಸೇಷನ್ ಎಂದು ಹೇಳಿ ಕೆಳಹಂತದ ಒಂದು ವ್ಯವಸ್ಥೆಯನ್ನು ಹದಗೆಡಿಸುವಂತಹದ್ದು ಕೇವಲ ಒಂದು ರಾಜಕೀಯ ಹಿತಾಶಕ್ತಿಯನ್ನು ಕಾಪಾಡುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಅದರ ಜೊತೆಗೆ ಇವತ್ತು ಎಲ್ಲೋ ಒಂದು ಸಣ್ಣ ಪುಟ್ಟ ಘಟನೆಗಳು ಆಗಲಿ ಸಣ್ಣ ಪುಟ್ಟ ಇನ್ಸಿಡೆಂಟ್ ಆದರೆ ತಕ್ಷಣವೇ ಸಾವಿರಾರು ಮಂದಿಗಳ ಮೇಲೆ ಕೇಸುಗಳನ್ನು ದಾಖಲು ಮಾಡುವಂಥಾದ್ದು ಆಗುತ್ತಿದೆ. ಅದರಲ್ಲಿ ಪ್ರಮುಖವಾಗಿ ಇವತ್ತು ಹಿಂದೂ ಸಂಘಟನೆಗಳು ಏನಾದರೂ ಕೆಲಸ ಮಾಡುತ್ತಿದ್ದಾರೆ, ಸಂಘಟನೆ ಬಗ್ಗೆ ಪ್ರಚಾರ ಮಾಡುತ್ತಿದ್ದಾರೆ ಎಂದರೆ ಅವರ ಮೇಲೆ 108 ಕೇಸುಗಳನ್ನು ಹಾಕುವಂತಹ ಕೆಲಸ ನಡೆಯುತ್ತಿದೆ. ನಾನು ಕೆಲವೊಂದು ಊರುಗಳು ಹೆಸರುಗಳನ್ನು ಹೇಳುತ್ತಿದ್ದೇನೆ. ಆ ಊರುಗಳಲ್ಲಿ ಇವತ್ತು ಸಾವಿರಾರು ಸಂಖ್ಯೆಯಲ್ಲಿ ಹೊಳೆಹಾಲೂರು ಇರಬಹುದು, ಮುನವಳ್ಳಿ ಇರಬಹುದು, ಮುದ್ದೇಬಿಹಾಳ ಇರಬಹುದು. ಗೋದಾಮ್‌ಪುರ ಇರಬಹುದು ಎಂಕೆ ಹುಬ್ಬಳ್ಳಿ ಇರಬಹುದು, ರಾಣಿಬೆನ್ನೂರು ಮತ್ತು ರಬಕವಿ, ತೇರದಾಳ್, ನರಗುಂದ ಕಲ್ಲೋಳಿ, ಹುಕ್ಕೇರಿ, ಸಿಂಧಿ ಕುರ್ವೆಟ್, ನವದತ್ತಿ, ಬಾಗಲಕೋಟೆ, ಬೆಳಗಾವಿ, ಹಾವೇರಿ ರಾಣಿಬೆನ್ನೂರು, ಶಿಕಾರಿಪುರ್, ಜಮಖಂಡಿ ಇನ್ನೂ ಹಲವಾರು ಊರುಗಳು ಇದ್ದಾವೆ. ಇಲ್ಲಿ ಏನು ಮಾಡುತ್ತಿದ್ದಾರೆ? ಸಂಘಟನೆ ಮಾಡುವಂತಹವರಿಗೆ ಪೋಲೀಸರು ಕರೆಸಿ ಧಮಕಿ ಹಾಕುತ್ತಾರೆ. ದೈಹಿಕವಾಗಿ ಅವರ ಮೇಲೆ ದೌರ್ಜನ್ಯ ಮಾಡುತ್ತಾರೆ. ಅದೆಲ್ಲಾ ಆದ ಮೇಲೆ ಅವರ ಮೇಲೆ ಸೆಕ್ಷನ್ 307ರ ಅಡಿಯಲ್ಲಿ ಕೇಸ್ ಹಾಕುತ್ತಾರೆ. ಇವತ್ತು ಸಾವಿರಾರು ಜನರ ಮೇಲೆ ರಾಜ್ಯದಲ್ಲಿ ಸೆಕ್ಷನ್ 307 ಕೇಸ್ ಹಾಕಿದ್ದಾರೆ. Attempt to meurber ಏನೋ ಒಂದಿಷ್ಟು ಮೆರವಣಿಗೆ ಮಾಡಿರುತ್ತಾರೆ. ಒಂದಿಷ್ಟು ಘೋಷಣೆ ಕೂಗಿರುತ್ತಾರೆ. ಅವರುಗಳ ಮೇಲೆ ನೀವು ಸೆಕ್ಷನ್ 307 ಕೇಸ್ ಹಾಕಿದ್ದೀರಿ. ನೀವು ಕರ್ನಾಟಕವನ್ನು ಪೋಲೀಸ್ ರಾಜ್ಯವನ್ನಾಗಿ ಮಾಡುತ್ತಿದ್ದೀರಾ? ಈ ರೀತಿ ಬಹಳ ದಿವಸ ನಡೆಯುವುದಿಲ್ಲ. ಪೋಲೀಸರ ಮುಖಾಂತರ ದೌರ್ಜನ್ಯ ನಡೆಸಿ, ಆಡಳಿತ ಯಂತ್ರ ನಡೆಸುತ್ತೇವೆಂದರೆ.....

ಶ್ರೀ ಅಪ್ಪಾಜಿ.ಎಸ್. ನಾಡಗೌಡ:- ಉಪಾಧ್ಯಕ್ಷರೆ, ಅವರು ಮುದ್ದೇಬಿಹಾಳ ಕುರಿತು ಪ್ರಸ್ತಾಪಿಸಿದರು. ಅಲ್ಲಿ ಯಾರೂ ಯಾರ ಮೇಲೂ ದೌರ್ಜನ್ಯ ನಡೆಸಲಿಲ್ಲ. ಬಿಜೆಪಿ, ಆರ್‌ಎಸ್‌ಎಸ್‌ನವರು ಮೆರವಣಿಗೆ ಮಾಡಿಕೊಂಡು ನೇರವಾಗಿ ಊರಿಗೆ ಹೋಗಿ ಜನರನ್ನು ಹೊಡೆಯಲು ಪ್ರಾರಂಭಿಸಿದರು, ಮಸೀದಿಗೆ ಕಲ್ಲು ತೂರಲು ಪ್ರಾರಂಭಿಸಿದರು, ಅನಂತರ ಟ್ರ್ಯಾಕ್ಟರ್ ಸಹ ಸುಟ್ಟರು. ಇಷ್ಟೆಲ್ಲಾ ನಡೆಯುತ್ತಿರುವಾಗ ಪೋಲೀಸರು ಸುಮ್ಮನೆ ಕುಳಿತುಕೊಂಡು ನೋಡಲು ಸಾಧ್ಯವೇ? ಪೋಲೀಸರು ಆಗ ಏನು ಮಾಡಬೇಕು? ಕೊನೆಗೆ ಒಂದು ದಿವಸ ಬರುತ್ತದೆ. ನಮ್ಮ ಸ್ನೇಹಿತರು ಹೇಳಿದಂತೆ ಜನರೇ ಬಡಿಗೆ ತೆಗೆದುಕೊಳ್ಳುವಂಥ ಪರಿಸ್ಥಿತಿ ಉದ್ಭವವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಬೇಕಾದರೆ ಅಲ್ಲಿ ಸ್ಥಳ ಪರೀಕ್ಷೆ ಮಾಡಲು ಹೋಗೋಣ ಸದನಕ್ಕೆ ಸುಮ್ಮನೆ ಸುಳ್ಳು ಮಾಹಿತಿ ಕೊಡುವಂಥಾದ್ದು ಆಗಬಾರದು ಸದನಕ್ಕೆ ತಪ್ಪು ಮಾಹಿತಿ ಕೊಡಬಾರದು.

ಶ್ರೀ ಅಪ್ಪಾಜಿ. ಎಸ್. ನಾಡಗೌಡ:- ಅದು ಸುಳ್ಳು ಮಾಹಿತಿಯಲ್ಲ. ನಾನು ಒಬ್ಬ ಒಮಾಬ್ದಾರಿ ಸದಸ್ಯನಾಗಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:- ಈ ರೀತಿ ಸಂಘಟನೆ ಮಾಡುವಂತಹವರ ಮೇಲೆ ದೌರ್ಜನ್ಯವೆಸಗುವಂಥ ಪ್ರಕರಣಗಳು ದಿನನಿತ್ಯವೂ ನಡೆಯುತ್ತಿದೆ. ಇಂತಹ ದೌರ್ಜನ್ಯ ಬಹಳ ದಿವಸ ನಡೆಯುವುದಿಲ್ಲ.

ಶ್ರೀ ಅಪ್ಪಾಜಿ ಎಸ್. ನಾಡಗೌಡ:- ಅದಕ್ಕೋಸ್ಕರವೇ ಎಲ್ಲಾ ಕಡೆಗಳಲ್ಲೂ ಜನರು ಉತ್ತರ ಕೊಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಉತ್ತರ ಕೊಡುತ್ತಾರೆ, ಉತ್ತರ ಕೊಡುವ ದಿವಸ ಏನಾಗುತ್ತದೆಂದು ನಿಮಗೆ ಗೊತ್ತಾಗುತ್ತದೆ. ಯಾರೋ ಒಂದು ಕೋಮಿನ ಜನರನ್ನು........

(ಗದ್ದಲ)

ನಾನು ಮಾತನಾಡಬೇಕೇ? ಬೇಡವೇ? ಮಾತನಾಡುವುದು ನನ್ನ ಹಕ್ಕು ನಾನು ಹೇಳುವಂತಹ ವಿಚಾರಗಳಿವೆ. ಸದನದಲ್ಲಿ ಈ ರೀತಿ ವಿಚಾರಗಳನ್ನು ಹತ್ತಿಕ್ಕುವಂಥ ಕೆಲಸ ನಡೆಯುತ್ತಿದ್ದರೆ. ಹೊರಗಡೆ ಪೋಲೀಸರ ಮುಖಾಂತರ ಸೆಕ್ಷನ್ 307 ಕೇಸ್ ಹಾಕುತ್ತಿದ್ದೀರಿ. ಎಷ್ಟು ಮಂದಿಯ ಮೇಲೆ ನೀವು ಸೆಕ್ಷನ್ 307 ಕೇಸ್ ಹಾಕುತ್ತೀರಿ? ಸಾವಿರಾರು ಸಂಖ್ಯೆಯಲ್ಲಿ ಸೆಕ್ಷನ್ 307 ಕೇಸ್ ಹಾಕುತ್ತಿದ್ದೀರಿ. ಅಂದರೆ, ಕರ್ನಾಟಕವನ್ನು ಪೋಲೀಸ್ ರಾಜ್ಯವನ್ನಾಗಿ ಮಾಡಿದ್ದೀರಾ?

ಶ್ರೀ ಕರಿಯಣ್ಣ:- ಇಷ್ಟು ಹೊತ್ತಿನವರೆಗೆ ಪೋಲೀಸರು ನಿಷ್ಕ್ರಿಯರಾಗಿದ್ದೀವೆಂದು ಹೇಳಿದರಿ, ಈಗ ಕರ್ನಾಟಕವನ್ನು ಪೋಲೀಸ್ ರಾಜ್ಯವನ್ನಾಗಿ ಮಾಡುತ್ತಿದ್ದೇವೆ ಎಂದು.........

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಇದರ ಬಗ್ಗೆ ಅನಂತರ ಉತ್ತರ ಹೇಳಲಿ. ಯಾವ್ಯಾವ ಊರುಗಳಲ್ಲಿ ಏನೇನಾಗಿದೆ ಎಂಬುದನ್ನು ಹೇಳಲಿ ನಾವೂ ಹೇಳುತ್ತೇವೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ:- ಸೆಕ್ಷನ್ 307 ಕೇಸನ್ನು ಎಷ್ಟು ಮಂದಿ ಮೇಲೆ ಹಾಕಲಾಗಿದೆಯೆಂದು ಹೇಳಿದ ನಂತರ ತಮ್ಮ ಮಾಹಿತಿ ಸಂಪೂರ್ಣವಾಗುತ್ತದೆ. ತಾವು ಇದನ್ನು ಒಂದು ವರ್ಗಕ್ಕೆ ಮಾತ್ರ ಸೀಮಿತಗೊಳಿಸುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:- ನಾನು ವಿವರಗಳನ್ನು ಕೊಡುತ್ತೇನೆ. ನಿಮಗೆ ಅವಕಾಶ ಸಿಕ್ಕಾಗ ನೀವು ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ಸಂದರ್ಭದಲ್ಲಿ ಮಾತನಾಡಿ, ಬೇಡವೆಂದು ಹೇಳುವುದಿಲ್ಲ. ನಮಗೆ ಮಾತನಾಡುವ ಹಕ್ಕು ಇದೆ. ಈ ರೀತಿ ಸೆಕ್ಷನ್ 307 ಕೇಸ್ ಹಾಕುವ ಮೂಲಕ ಹೆದರಿಸಿ, ದೌರ್ಜನ್ಯ ನಡೆಸುವುದು ಬಹಳ ದಿವಸ ನಡೆಯುವುದಿಲ್ಲ. ಎಷ್ಟು ದಿವಸ ಜೈಲಿನಲ್ಲ ಇಡುತ್ತೀರಿ? 10 ದಿವಸ 20 ದಿವಸ, ಒಂದು ತಿಂಗಳು ಇಡುತ್ತೀರಿ. ಇದು ಬಹಳ ದಿವಸ ನಡೆಯುವುದಿಲ್ಲ. ಒಂದು ದಿವಸ ಜನರೇ ಆಕ್ರೋಶಗೊಳ್ಳುತ್ತಾರೆ. ಈ ದೌರ್ಜನ್ಯವನ್ನು ನಿಲ್ಲಿಸಬೇಕೆಂದು ಒತ್ತಾಯಿಸುತ್ತೇನೆ. ಇಲ್ಲದಿದ್ದರೆ, ರಾಜ್ಯ ಸರ್ಕಾರಕ್ಕೆ ಜನರೇ ಸರಿಯಾಗಿ ಉತ್ತರ

ಕೊಡುತ್ತಾರೆಂಬ ಎಚ್ಚರಿಕೆ ಕೊಡುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಹೇಳಬೇಕಾಗುತ್ತದೆ. ಭಜರಂಗ ದಳದ ಮೇಲೆ ನಿರ್ಬಂಧ ಹೇರಿ ನಿಷೇಧ ವಿಧಿಸಿದ್ದೀರಿ. ಪ್ರವೀಣ್ ತೊಗಾಡಿಯಾರವರು ಬಂದರೆ ಗಡಿಪಾರು ಮಾಡುತ್ತೀರಿ. ಅವರ ಮೇಲೆ ನಿರ್ಬಂಧ ಹೇರುತ್ತೀರಿ. ಪ್ರಮೋದ್ ಮುತಾಲಿಕ್ ಅವರನ್ನು ಗಡಿಪಾರು ನಿರ್ಬಂಧ ಎಲ್ಲವೂ ರದ್ದಾಗಿ ಹೋದವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿ ತನ್ನ ವಿಚಾರಗಳನ್ನು ವ್ಯಕ್ತಪಡಿಸುವುದಕ್ಕೆ, ಹಕ್ಕು ಇದೆ. ಆತ ತನ್ನ ವಿಚಾರಗಳನ್ನು ವ್ಯಕ್ತಪಡಿಸುವುದಕ್ಕೆ ನೀವು ಅವಕಾಶ ಕೊಡಬೇಕು. ಆದರೆ, ವಿಚಾರಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ನೀಡದೆ ಪ್ರಜಾತಂತ್ರ ವಿರೋಧಿ ಕೆಲಸ ಮಾಡುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಅಲ್ಲದೆ, ಭಜರಂಗ ದಳವನ್ನು ನಿಷೇಧಿಸಿರುವುದರ ಬಗ್ಗೆಯೂ ಸರ್ಕಾರ ಇವೊತ್ತು ಹೇಳಬೇಕಾಗುತ್ತದೆ. ಏಕೆಂದರೆ, ಲಕ್ಕಪ್ಪ ಮಸಗುಬ್ಬಿ ಎಂಬ ಒಬ್ಬ ವ್ಯಕ್ತಿ ಬೆಳಗಾವಿ ಜಿಲ್ಲೆಯ ಪೋಲೀಸ್ ಇಲಾಖೆಯಲ್ಲಿ ಸಿಪಿಸಿ ಹುದ್ದೆಗೆ ಅರ್ಜಿ ಹಾಕಿರುತ್ತಾನೆ. ಆತನಿಗೆ ಎಲ್ಲಾ ರೀತಿಯ ಮೆರಿಟ್ ಇದೆ. ಸಂದರ್ಶನದಲ್ಲೂ ಪಾಸಾಗುತ್ತಾನೆ. ನೇಮಕಾತಿ ಮಾಡಿಕೊಳ್ಳುವ ಹಂತಕ್ಕೆ ಬಂದಾಗ ಆತ ಭಜರಂಗ ದಳದ ಕಾರ್ಯಕರ್ತನೆಂದು ಆತನ ನೇಮಕಾತಿಯನ್ನು ಈ ಸರ್ಕಾರ ರದ್ದುಗೊಳಿಸುತ್ತದೆ. ಬೆಳಗಾವಿ ಎಸ್‌ಪಿಯವರು, ಈತ ಭಜರಂಗ ದಳದ ಕಾರ್ಯಕರ್ತನಾಗಿರುವುದರಿಂದ ನೇಮಕಾತಿಗೆ ಪರಿಗಣಿಸಬಾರದೆಂದು ವರದಿ ಸಲ್ಲಿಸುತ್ತಾರೆ. ಯಾವುದೇ ಒಂದು ಸಂಘಟನೆಗೆ ಸೇರಿದ ವ್ಯಕ್ತಿಯೆಂದು ಅವರಿಗೆ ಸಿಕ್ಕ ಅವಕಾಶವನ್ನು ತಪ್ಪಿಸುವುದಾದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಹುಶಃ ನಾವು ಇಲ್ಲವೆಂದು ಹೇಳಬೇಕಾಗುತ್ತದೆ. ಈ ರೀತಿಯಲ್ಲಿ ಸರ್ಕಾರ ತನ್ನ ಆಡಳಿತ ನಡೆಸುವುದಾದರೆ ಇದು ಬಹಳ ದಿವಸ ನಡೆಯುವುದಿಲ್ಲ. ಇದರ ಬಗ್ಗೆ ಜನರು ಸರ್ಕಾರಕ್ಕೆ ಸರಿಯಾದ ಬುದ್ಧಿ ಕಲಿಸುತ್ತಾರೆಂದು ಎಚ್ಚರಿಕೆ ಕೊಡುತ್ತಿದ್ದೇನೆ. ಈ ತರಹ ವ್ಯತ್ಯಾಸ ಮಾಡಬಾರದು. ಭಜರಂಗ ದಳದ ಕಾಯಕರ್ತನೆಂದು ಸಿಕ್ಕಿದ್ದ ನೇಮಕಾತಿಯನ್ನು ರದ್ದುಗೊಳಿಸುವಂತಾದ್ದು, ಆ ಬಗ್ಗೆ ಎಸ್‌ಪಿಯವರು ರಿಪೋರ್ಟ್ ಕೊಟ್ಟಿರುವುದು. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಈ ರೀತಿಯಾದ ದೌರ್ಜನ್ಯ ರಾಜ್ಯದಲ್ಲಿ ನಡೆಯುತ್ತಿದೆ. ಸಂಘಟನೆಗಳ ಮೇಲೆ ನಡೆಸಲಾಗುತ್ತಿರುವ ಇಂತಹ ದೌರ್ಜನ್ಯವನ್ನು ಸರ್ಕಾರ ತಕ್ಷಣದಿಂದ ನಿಲ್ಲಿಸಬೇಕು ಮತ್ತು ಹಾಕಿರುವ ಬೋಗಸ್ ಕೇಸ್‌ಗಳನ್ನು ವಿತ್‌ಡ್ರಾ ಮಾಡಬೇಕೆಂದು ಒತ್ತಾಯಿಸುತ್ತಿದ್ದೇನೆ. ಕೊನೆಯದಾಗಿ, ಪ್ರಮುಖವಾದ ವಿಚಾರವನ್ನು ನಾನು ಹೇಳಬಯಸುವುದೇನೆಂದರೆ, ಬರಗಾಲದ ವಿಷಯ ಕುರಿತಂತೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿದೆ. ಇವೊತ್ತು ಬಡ್ಡಿ ಮನ್ನಾ ಮಾಡುವ ವಿಚಾರ ಬಂದಿದೆ. ಆದರೆ, ಬಡ್ಡಿ ಮನ್ನಾ ಕುರಿತಂತೆ ಏನು ಕ್ರಮ ಕೈಗೊಂಡಿದ್ದೀರಿ? ಯಾವ ಬೆಳೆಗೆ ನೀವು ಬಡ್ಡಿ ಮನ್ನಾ ಮಾಡಿದ್ದೀರಿ? ಯಾವ ಸಾಲಕ್ಕೆ ಬಡ್ಡಿ ಮನ್ನಾ ಮಾಡಿದ್ದೀರಿ? ಇವೊತ್ತು ಹಿಂಗಾರು ಮತ್ತು ಮುಂಗಾರು ಬೆಳೆಗಳ ಎರಡಕ್ಕೂ ಬಡ್ಡಿ ಮನ್ನಾ ಮಾಡಬೇಕಾಗುತ್ತದೆ. ಆದರೆ ಬೆಳೆಗೆ ಸಂಬಂಧಿಸಿದಂತೆ ಸಾಲ ತೆಗೆದುಕೊಂಡಿದ್ದ ರೈತರಿಗೆ ಮಾತ್ರ ಇವೊತ್ತು ನೀವು ಬಡ್ಡಿ ಮನ್ನಾ ಆಗಬೇಕಿದೆ. ಈ ವರ್ಷದ ಮಟ್ಟಿಗೆ ಅಂದರೆ ಜನವರಿ ತಿಂಗಳಿನಿಂದ ಯಾವ ರೈತರು ಸಾಲ ತೆಗೆದುಕೊಂಡಿದ್ದಾರೋ, ಅವರೆಲ್ಲರಿಗೂ ಬಡ್ಡಿ ಮನ್ನಾ ಆಗಬೇಕಾಗಿದೆ. ಮುಂಬರುವ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಪ್ರಕಟಿಸಬೇಕಾಗುತ್ತದೆ ಅಂದಾಗ ಮಾತ್ರ ಬರಗಾಲದ ಬವಣೆಯನ್ನು ಅನುಭವಿಸುತ್ತಿರುವ ರೈತರಿಗೆ ಏನಾದರೊಂದು ಪರಿಹಾರ ಹುಡುಕುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಕೆರೆಗಳಲ್ಲಿನ

ಹೂಳು ತೆಗೆಯುವ ಕೆಲಸವೂ ಸಹ ಅಷ್ಟೇ ಶೀಘ್ರ ಗತಿಯಲ್ಲಿ ಆಗಬೇಕಾಗಿದೆ. ಇದನ್ನು ಕಳೆದ ಮೂರು ವರ್ಷಗಳಿಂದ ಹೇಳುತ್ತಾ ಬಂದಿದ್ದರೂ ಆ ಕೆಲಸ ಆಗಿಲ್ಲ ಇವೊತ್ತು ದೊಡ್ಡ ಪ್ರಮಾಣದಲ್ಲಿ ಹೂಳು ತೆಗೆಯುವ ಕೆಲಸ ಹಮ್ಮಿಕೊಳ್ಳಬೇಕಾಗಿದೆಯೆಂದು ಹೇಳುತ್ತಿದ್ದೇನೆ. ಇನ್ನೊಂದು ವಿಚಾರವೆಂದರೆ, ಖೋಟಾ ಸ್ಟಾಂಪ್ ಪೇಪರ್ ಹಗರಣ ಏನಾಯಿತು? ಕರೀಂಲಾಲ ಬಗ್ಗೆ ಏನು ನಡೆಯಿತು? ಇಲ್ಲಿಯವರೆಗೆ ಏನೇನು ಪ್ರೋಗ್ರೆಸ್ ಆಗಿದೆ? ಎಷ್ಟು ನಕಲಿ ಸ್ಟಾಂಪ್ ಪೇಪರ್‌ಗಳನ್ನು ವಶಪಡಿಸಿಕೊಂಡಿದ್ದೀರಿ? ಎಷ್ಟು ಪ್ರಕರಣಗಳು ದಾಖಲಾಗಿವೆ? ಆತನಿಗೆ ಸಂಬಂಧಿಸಿದ ವ್ಯಕ್ತಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮುಂತಾದ ವಿಷಯಗಳೆಲ್ಲವೂ ಹೊರಗೆ ಬರಬೇಕಾಗಿದೆ. ಕರೀಂಲಾಲನಿಗೆ ಜೈಲಿನಲ್ಲಿ ಬಿರಿಯಾನಿ, ಎ.ಸಿ. ಮೊಬೈಲ್ ಇತ್ಯಾದಿ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದೀರಿ. ಏಕೆಂದರೆ, ಆತ ದೊಡ್ಡ ದೊಡ್ಡ ವ್ಯಕ್ತಿಗಳೊಂದಿಗೆ ಸಂಪರ್ಕ ವಿಟ್ಟುಕೊಂಡಿರುವವನಾಗಿದ್ದಾನೆ. ಎಲ್ಲಾ ಸೌಕರ್ಯಗಳನ್ನು ಒದಗಿಸಿ ಇಟ್ಟುಕೊಂಡಿದ್ದೀರಿ. ಜೈಲಿನೊಳಗಿದ್ದುಕೊಂಡೇ ಮೊಬೈಲ್ ಮುಖಾಂತರ ಆತ ದೇಶಾದ್ಯಂತ ನಕಲಿ ಸ್ಟಾಂಪ್ ಪೇಪರ್ ಮಾರಾಟ ಮಾಡಿಸುವುದಕ್ಕೆ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಆತನಿಗೆ ಈ ರೀತಿಯ ಸಂಪರ್ಕವೆಲ್ಲವೂ ಇದೆ. ಮುಂದೆ ಇನ್‌ವೆಸ್ಟಿಗೇಶನ್ ಏನೇನಾಯಿತು? ಪ್ರಕರಣ ಇಲ್ಲಿಯವರೆಗೆ ಬಂದಿದೆ ಎಂಬಿತ್ಯಾದಿ ವಿಚಾರಗಳೆಲ್ಲವೂ ಇವೊತ್ತು ಹೊರಗಡೆ ಬರಬೇಕಾಗಿದೆ. ನೆಗಡಿಯಾಗಿದೆಯೆಂದರೆ ಮೂಗು ಕೊಯ್ಯುವಂಥ ಕೆಲಸವನ್ನು ಇವೊತ್ತು ಸರ್ಕಾರ ಮಾಡುತ್ತಿದೆ. ನೀವೇ ಹೊರಗಡೆ ಹೋಗಿ ನಕಲಿ ಸ್ಟಾಂಪ್ ಪೇಪರ್‌ಗಳನ್ನು ಹುಡುಕಿ ಎಂದರೆ, ಅದನ್ನು ಯಾರು ತಯಾರು ಮಾಡುತ್ತಾರೋ, ಪ್ರಿಂಟಿಂಗ್ ಪೇಪರ್ ಮತ್ತು ಮೆಷಿನ್ ಎಲ್ಲಿದೆಯೆಂದು ಕಂಡುಹಿಡಿಯುವುದು ಬಿಟ್ಟು ಆತನ ಕಡೆಯಿಂದ ಬಂದಿದ್ದ ಎವಿಡೆನ್ಸ್ ಎಲ್ಲವನ್ನೂ ಮುಚ್ಚಿಹಾಕುವಂತ ಕೆಲಸವಾಯಿತು. ಆತ ಈಗ ನಿಮ್ಮ ಕಸ್ಟಡಿಯಲ್ಲಿರುವುದರಿಂದ ನೀವೇ ಇನ್‌ವೆಸ್ಟಿಗೇಶನ್ ಮಾಡಿ. ಕರೀಂಲಾಲಾ ನಕಲಿ ಸ್ಟಾಂಪ್ ಪೇಪರ್ ಅನ್ನು ಎಲ್ಲಿ ಪ್ರಿಂಟ್ ಮಾಡುತ್ತಿದ್ದ? ಯಾರ ಮುಖಾಂತರ ಮಾಡುತ್ತಿದ್ದ? ಇದನ್ನು ಏಕೆ ಇನ್ನೂ ಇನ್‌ವೆಸ್ಟಿಗೇಶನ್ ಮಾಡಲು ಸಾಧ್ಯವಾಗಿಲ್ಲ? ಆತನಿಂದ ಏಕೆ ಬಾಯಿ ಬಿಡಿಸಲು ಆಗಲಿಲ್ಲ? ಪ್ರಿಂಟಿಂಗ್ ಮೆಷಿನ್ ಅನ್ನು ಸೀಜ್ ಮಾಡುವುದಕ್ಕೆ ನಿಮಗೆ ಇಲ್ಲಿಯವರೆಗೂ ಸಾಧ್ಯವಾಗಲಿಲ್ಲ. ಅದಕ್ಕೋಸ್ಕರವೇ ನಮಗೆ ಸಂಶಯವಿದೆ. ಪ್ರಕರಣದಲ್ಲಿ ದೊಡ್ಡ ವ್ಯಕ್ತಿಗಳು, ಭಾಗೀಯಾಗಿದ್ದಾರೆಂಬ ಬಗ್ಗೆ ಹಿಂದೆಯೇ ಅಲಿಗೇಶನ್ ಮಾಡಿದ್ದೇವೆ. ಆ ಸಂಬಂಧ ಇನ್ನೂ ಮುಂದುವರಿದಿದೆ ಎನ್ನುವ ಮಾತನ್ನು ಹೇಳಬೇಕಾಗಿದೆ. ಇದುವರೆವಿಗೂ ಪ್ರಕರಣದಲ್ಲಿ ಏನೂ ಪ್ರೊಗ್ರೆಸ್ ಆಗಿಲ್ಲ ಮಹಾರಾಷ್ಟ್ರ ಆಂಧ್ರಪ್ರದೇಶ ಮತ್ತು ಚೆನ್ನೈನಲ್ಲಿ ಕೆಲವು ಸೀಜ್ ಮಾಡುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿ ಏನಾಗಿದೆ? ಈ ಕುರಿತು ಇನ್‌ವೆಸ್ಟಿಗೇಶನ್ ಎಲ್ಲಿಯವರೆಗೆ ಬಂದಿದೆ? ಮುಂದೆ ಏನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಇದೆಲ್ಲಾ ಮಾಡುವುದನ್ನು ಬಿಟ್ಟು ಸ್ಟಾಂಪ್ ಪೇಪರ್‌ಗಳನ್ನು ರದ್ದುಗೊಳಿಸುವಂಥಾದ್ದು, ನಿರ್ಬಂಧ ಹೇರುವಂತಾದ್ದು ಮಾಡುತ್ತಿದ್ದೀರಿ. ಈಗಾಗಲೇ ರಾಜ್ಯದಲ್ಲಿರುವ ಎಲ್ಲಾ ಸ್ಟಾಂಪ್ ವೆಂಡರುಗಳು ರಾಜಧಾನಿಗೆ ಮೆರವಣಿಗೆಯಲ್ಲಿ ಬಂದು ಹೋರಾಟ ಮಾಡುತ್ತಿದ್ದಾರೆ.

4.10. ಪಿ.ಎಂ

ಇವತ್ತು ಸ್ಟ್ಯಾಂಪ್ ವೆಂಡರ್ಸ್ ಈ ಸ್ಟ್ಯಾಂಪ್ ಪೇಪರ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಲಕ್ಷಾಂತರ ಜನ ಕುಟುಂಬದವರು ಅದರ ಮೇಲೆ ಡಿಪೆಂಟ್ ಆಗಿದ್ದಾರೆ. ಅವರೆಲ್ಲ ಇವತ್ತು

ಬೀದಿಗೆ ಬರುವಂತಹ ಪರಿಣಾಮ ಬಂದಿದೆ. ಖೋಟಾ ನೋಟು ಚಲಾವಣೆಯಲ್ಲಿ ಇದೆ ಎಂದು ನೋಟುಗಳನ್ನು ರದ್ದು ಮಾಡುವಂತಹವರು ನೀವಾಗಿದ್ದೀರಿ. ಇವತ್ತು ನೆಗಡಿಯಾಗಿದೆ ಎಂದು ಮೂಗನ್ನೇ ಕೊಯ್ದು ಬಿಡುವವರು ನೀವು. ಹೀಗಾಗಿ ಇವತ್ತು ಸ್ಟ್ಯಾಂಪ್ ಪೇಪರ್ ನಕಲಿ ಇವೆ ಎಂದು ಹೇಳಿ ಅದನ್ನು ಇನ್‌ವೆಸ್ಟಿಗೇಷನ್ ಮಾಡಿ ಅವನ್ನು ತೆಗೆದು ರದ್ದು ಮಾಡುವುದನ್ನು ಬಿಟ್ಟು ಇವತ್ತು ಸ್ಟ್ಯಾಂಪ್ ಪೇಪರೇ ಬೇಡ ಎನ್ನುವಷ್ಟರ ಮಟ್ಟಿಗೆ ನೀವು ಬಂದಿದ್ದೀರಿ ಎಂದ ಮೇಲೆ, ಇವತ್ತು ಅದರ ಮುಖಾಂತರ ಲಕ್ಷಾಂತರ ಜನರನ್ನು ನೀವು ಜೀವಂತವಾಗಿ ಕೊಲ್ಲುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಲಿಕ್ಕಾಗುತ್ತದೆಯೇ? ಹಾಗಾದರೆ ಪರ್ಯಾಯ ವ್ಯವಸ್ತೆ ಮಾಡಿ. ಈ ಸ್ಟ್ಯಾಂಪ್ ವೆಂಡರ್ಸ್ ಸಲುವಾಗಿ ಪರ್ಯಾಯ ವ್ಯವಸ್ಥೆ ಏನು ಮಾಡುತ್ತೀರಿ? ಮೊನ್ನೆ ಬೀದಿಗೆ ಬಂದು ಹೋರಾಟ ಮಾಡಿದ್ದಾರೆ. ಪೂರ್ತಿ ಸ್ಟ್ಯಾಂಪ್ ಪೇಪರ್ ಅನ್ನೇ ಈಗ ರದ್ದು ಮಾಡಿದಿರಿ. ಸ್ಟ್ಯಾಂಪ್ ಪೇಪರ್ ಇನ್ನು ಮುಂದೆ ಇಲ್ಲ. ಬಿಳಿ ಕಾಗದದ ಮೇಲೆ ನೋಟ್ ಮಾಡಿದರೆ ಸಾಕು ಎನ್ನುತ್ತೀರಿ. ಹಾಗಾದರೆ ಇವತ್ತು ಆ ಸ್ಟ್ಯಾಂಪ್ ಪೇಪರ್ ಅನ್ನು ಮಾರಾಟ ಮಾರುವವರು ಎಲ್ಲಿಗೆ ಹೋಗಬೇಕು? 20 ಸಾವಿರ ಸ್ಟ್ಯಾಂಪ್ ವೆಂಡರ್ಸ್ ಇದ್ದಾರೆ. ಲಕ್ಷಾಂತರ ಜನ ಅವರ ಮೇಲೆ ಡಿಪೆಂಟ್ ಆಗಿದ್ದಾರೆ. ಅವರಿಗೇನು ಪರ್ಯಾಯ ವ್ಯವಸ್ಥೆ ಮಾಡುತ್ತೀರಿ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ಈ ರೀತಿಯಾಗಿ ರಾಜ್ಯವನ್ನು ನಡೆಸುವಂತಾದ್ದು ಸರಿಯಲ್ಲ. ಅದಕ್ಕಾಗಿ ಇವತ್ತು ಎಲ್ಲ ದೃಷ್ಟಿಯಿಂದಲೂ ಇವತ್ತು ರಾಜ್ಯದಲ್ಲಿ ಒಂದು ವಿಫಲತೆಯನ್ನು ನಾವು ನೋಡುತ್ತಿದ್ದೇವೆ. ಸರ್ಕಾರ ಇವತ್ತೇನು ರಾಜ್ಯಪಾಲರ ಮುಖಾಂತರ ಭಾಷಣವನ್ನು ಮಾಡಿಸಿದೆ, ಅದರಲ್ಲಿ ಯಾವುದೇ ಒಂದು ಅರ್ಥ ಇಲ್ಲ. ನಿಮ್ಮ ಆಡಳಿತದಲ್ಲಿ ಹಿಡಿತ ಕಳೆದುಕೊಂಡಿದ್ದೀರಿ. ಈ ಭ್ರಷ್ಟ ವ್ಯವಸ್ಥೆ ಮುಂದುವರೆಯುತ್ತಿದೆ. ಪೊಲೀಸ್ ರಾಜ್ಯ ಇವತ್ತು ಇದಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಿ ಇವತ್ತು ಈ ಸಂದರ್ಭದಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಸ ಮಾಡಿಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ VAT bill ಅನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೇ, Governor's address ಗೆ ಇನ್ನು ಎರಡೇ ದಿನ ಉಳಿದಿದೆ. ಇದುವರೆಗೂ ಮಾನ್ಯ ವಿರೋಧ ಪಕ್ಷದ ನಾಯಕರೊಬ್ಬರೇ ಮಾತನಾಡಿದ್ದಾರೆ. ನಾವು Business advisory Committee metting ನಲ್ಲಿ ಒಪ್ಪಿಕೊಂಡಿರುವ ಹಾಗೆ ಒಂದು ದಿನಕ್ಕೆ ಎರಡು ಬಿಲ್‌ನಂತೆ ಇದುವರೆಗೂ ಪಾಸ್ ಮಾಡಿ ಕೊಟ್ಟಿದ್ದೇವೆ. ನಾಡಿದ್ದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ನಮ್ಮ ಪಕ್ಷದವರು, ಬಿ.ಜೆ.ಪಿ.ಯವರು ಮತ್ತು ಆಡಳಿತ ಪಕ್ಷದವರು ಮಾತನಾಡಬಹುದು, ನನಗೆ ಗೊತ್ತಿಲ್ಲ, ನಾವೆಲ್ಲಾ ಮಾತನಾಡಬೇಕಾಗುತ್ತದೆ. ಬಿಲ್‌ಗಳನ್ನು ಪಾಸ್ ಮಾಡಿ ಕೊಡೋಣ. ದಯಮಾಡಿ ಮತ್ತು ನಾಳೆ ರಾಜ್ಯಪಾಲರ ಭಾಷಣದ ಮೇಲೆಯೇ ಮಾತನಾಡಲು ಅವಕಾಶ ಮಾಡಿಕೊಡಿ ಇಲ್ಲದಿದ್ದರೆ ನಮಗ್ಯಾರಿಗೂ ಮಾತನಾಡುವುದಕ್ಕೆ ಅವಕಾಶವೇ ಸಿಗುವುದಿಲ್ಲ. ಏಪ್ರಿಲ್ 1ನೇ ತಾರೀಖಿನವರೆಗೆ ಅಸೆಂಬ್ಲಿಯೇ ಇರುವುದಿಲ್ಲ, ಅಷ್ಟೊತ್ತಿಗೆ adjourned ಆಗಿರುತ್ತದೆ. VAT bill ಅನ್ನು ನಾವು ಅಪ್ರೂವ್ ಮಾಡದೇ ಇರುತ್ತೇವೆಯೇ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಿಂಧ್ಯರವರು ಹೇಳಿದ ಪ್ರಕಾರ ಇವತ್ತು ಮತ್ತು ನಾಳೆ ಪೂರ್ತಿ ಈ ವಿಷಯ ತೆಗೆದುಕೊಂಡು, 20ನೇ ತಾರೀಖು ಮಧ್ಯಾಹ್ನದ ಮೇಲೆ 3-4 ಬಿಲ್‌ಗಳನ್ನು ಬೆಳಿಗ್ಗೆ ತೆಗೆದುಕೊಳ್ಳೋಣ. ಸಿ.ಎಂ ರವರ ರಿಪ್ಲೈ ಆದಮೇಲೆ 3-4 ಬಿಲ್ಸ್ ತೆಗೆದುಕೊಳ್ಳೋಣವಂತೆ 20ನೇ ತಾರೀಖು ಮಧ್ಯಾಹ್ನದ ಮೇಲೆ ಏನೂ ವಿಷಯ ಇರುವುದಿಲ್ಲ ಅವತ್ತು ಅದನ್ನು ಚರ್ಚೆಗೆ ತೆಗೆದುಕೊಳ್ಳೋಣ. ನಾವು ವ್ಯಾಟ್ ಬಿಲ್ ಅನ್ನು ಪಾಸ್ ಮಾಡಲೇಬೇಕಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಈ ವ್ಯಾಟ್ ಬಿಲ್ ತಮಗೆ ಗೊತ್ತಿರುವ ಹಾಗೆ, ಏಪ್ರಿಲ್ 1ನೇ ತಾರೀಖು 2003ನೇ ಇಸವಿಗೆ ಜಾರಿಗೆ ಬರಬೇಕಾಗಿತ್ತು. ಮೊನ್ನೆ ಫೆಬ್ರವರಿ 28ನೇ ತಾರೀಖು Finance Minister of the Country ದೇಶದ ಆಯವ್ಯಯವನ್ನು ಮಂಡನೆ ಮಾಡುವಾಗ, ಏಪ್ರಿಲ್ 1ನೇ ತಾರೀಖು 2003ನೇ ಇಸವಿಯಿಂದ ಇದು ಇಡೀ ದೇಶದಲ್ಲಿ ಜಾರಿಗೆ ಬರುತ್ತದೆ ಎಂದು ಹೇಳಿದ್ದಾರೆ. ಈ ಒಂದು ಮಸೂದೆ ಇಲ್ಲಿ ಮಂಡನೆಯಾಗಿ, ಪಾಸ್ ಆಗಿ ರಾಷ್ಟ್ರಾಧ್ಯಕ್ಷರ ಅಂಕಿತಕ್ಕಾಗಿ ಹೋಗಬೇಕು. ಆದಕಾರಣ ಅರ್ಜೆಂಟ್ ಇದೆ, ಆದ್ದರಿಂದ ದಯಮಾಡಿ ಈ ವ್ಯಾಟ್ ಬಿಲ್ ಅನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು:- ಅದನ್ನೊಂದನ್ನು ಮಾಡಬಹುದಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ಈಗ ಟೈಮ್ ಇಲ್ಲ. Governor's address ಮೇಲೆ ಬಹಳಷ್ಟು ಜನ ಮಾತನಾಡುವವರಿದ್ದಾರೆ.

ಶ್ರೀ ಬಿ. ಸೋಮಶೇಖರ್:- ಬಜೆಟ್ ಮಂಡನೆಯಾದ ಮೇಲೂ ಸಹ ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಲು ನನಗೇನೂ ತೊಂದರೆ ಇಲ್ಲ.

ಶ್ರೀ ಬಿ. ಸೋಮಶೇಖರ್:- ಇನ್ನೂ 12 ದಿನ ಟೈಮ್ ಇದೆ. ಬಜೆಟ್ ಮಂಡನೆಯಾದ ಮೇಲೂ ಸಹಿತ ಆ ಬಿಲ್ ಅನ್ನು ಚರ್ಚೆಗೆ ತೆಗೆದುಕೊಳ್ಳಬಹುದು. Governor's address ಮೇಲೆ ಮಾತನಾಡುವುದಕ್ಕೆ ನಮಗೆ ಇನ್ನು ಎರಡೇ ದಿವಸ ಮಾತ್ರ ಟೈಮ್ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ದಯವಿಟ್ಟು ಇದೊಂದು ಬಿಲ್ ಪಾಸ್ ಆಗಲು ಸಹಕರಿಸಿ ರಾಜ್ಯಪಾಲರು ಭಾಷಣ ಮಾಡಿ ಈಗಾಗಲೇ 20-22 ದಿನ ಆಗಿದೆ.

ಶ್ರೀ ಬಿ. ಸೋಮಶೇಖರ್:- ಉಪಾಧ್ಯಕ್ಷರೇ Governor's address ಮೇಲೆ ಮಾತನಾಡುವುದಕ್ಕೆ ಇನ್ನು ಎರಡು ದಿನಗಳು ಮಾತ್ರ ಇವೆ. ಇನ್ನೂ ಬಹಳಷ್ಟು ಜನ ಸದಸ್ಯರುಗಳು ಮಾತನಾಡಬೇಕಾಗಿದೆ.

ಉಪಾಧ್ಯಕ್ಷರು:- ಮಾನ್ಯ ಸಿಂಧ್ಯಾರವರೇ, ಇದೊಂದು ಬಿಲ್ ಅನ್ನು ಪಾಸ್ ಮಾಡಿ ಕೊಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಹೊಸ ಸದಸ್ಯರಿಗೆ ಮತ್ತು ಸೀನಿಯರ್ ಮೆಂಬರ್ಸ್‌ಗೆ ಮಾತನಾಡುವುದಕ್ಕೆ

ಒಂದು ಅವಕಾಶ ಸಿಗುತ್ತದೆ. ಆದರೆ ಅದಕ್ಕೆ ಟೈಮ್ ಇಲ್ಲ. ಇವತ್ತು 2 ಗಂಟೆ ನಡೆಯಬಹುದು. ನಾಳೆ 2 ಗಂಟೆ ಆಗಬಹುದು. ಆಮೇಲೆ ಸಿ.ಎಂ ಇದಕ್ಕೆ ರಿಪ್ಲೈ ಮಾಡಬೇಕಾಗುತ್ತದೆ. ಆದುದರಿಂದ ದಯಮಾಡಿ ನೀವು ನಮಗೆ ಸಹಾಯ ಮಾಡಿ.

ಉಪಾಧ್ಯಕ್ಷರು:- ಹೊಸ ಸದಸ್ಯರಿಗೆ ನಾವು ಅವಕಾಶ ಕೊಡಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಆದರೆ ನಮ್ಮ ತೊಂದರೆ ಏನು ಅಂದರೆ........

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಹೊಸ ಸದಸ್ಯರಿಗೇ ಅವಕಾಶ ಕೊಡಿ. ಕಳೆದ 50 ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಸಂಪ್ರದಾಯದಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಅಪೋಸಿಷನ್ ಸೈಡ್ ಚರ್ಚೆಯನ್ನು initiate ಮಾಡಿದ್ದಾರೆ. ಹೊಸ ಸದಸ್ಯರುಗಳಿಗೇ ಮಾತನಾಡಲು ಅವಕಾಶ ಕೊಡಿ, ನಮ್ಮದೇನೂ ತೊಂದರೆ ಇಲ್ಲ. 2ನೇ ಸಾರಿ ಗೆದ್ದಿರುವವರಿಗೆ ಕೊಡಿ, 1ನೇ ಸಾರಿ ಗೆದ್ದಿರುವವರಿಗೆ ಕೊಡಿ. ದಯಮಾಡಿ ಗೌರ್ನಮೆಂಟ್‌ನವರು ನಮ್ಮ ಜೊತೆಯಲ್ಲಿ ಕೋಆಪರೇಟ್ ಮಾಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ನಿಮಗೆ ಕೊಡುತ್ತಾರೆ, ನೀವು ಅವರಿಗೆ ಸಲಹೆ ಕೊಡಬೇಕು. ಯಾರು ಎಂದು ಹೇಳವುದಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಬೇರೆ ಯಾವುದೋ ಒಂದು ಸಣ್ಣ ಇದ್ದರೆ ನಾವು ಪಾಸ್ ಮಾಡಿ ಬಿಡಬಹುದಾಗಿತ್ತು. ಆದರೆ ವ್ಯಾಟ್ ಬಗ್ಗೆ ಇವತ್ತು ರಾಜ್ಯಾದ್ಯಂತ ಚರ್ಚೆಯಾಗುತ್ತಿದೆ. ಬೇರೆ ಬೇರೆ ಇಂಡಸ್ಟ್ರಿಯಲಿಸ್ಟ್ ಇರಬಹುದು, ಛೇಂಬರ್ ಆಫ್ ಕಾಮರ್ಸ್‌ನಲ್ಲಿ ಇರಬಹುದು, ಓಪನ್ನಾಗಿ ಇವತ್ತು ಅದರ ಬಗ್ಗೆ ಚರ್ಚೆಯಾಗುತ್ತಿದೆ. ನಾವು ಅದರ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡದಿದ್ದರೆ ಅದಕ್ಕೇನು ಅರ್ಥ ಇರುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ:- ಡಿಬೇಟ್ ಮಾಡಬೇಡಿ ಎಂದು ನಾನು ಹೇಳಲಿಲ್ಲ, ಅರ್ಜೆನ್ಸಿ ಏನು ಇದೆ ಎಂಬುದನ್ನು ಮಾತ್ರ ನಾನು ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ಅರ್ಜೆನ್ಸಿಯನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಇಲ್ಲವೆಂದು ನಾನು ಹೇಳುತ್ತಿಲ್ಲ. 20ನೇ ತಾರೀಖು ಅದನ್ನು ಚರ್ಚೆಗೆ ಇಟ್ಟುಕೊಳ್ಳಿ.

ಶ್ರೀ ಬಿ. ಸೋಮಶೇಖರ್:- ಎರಡು ದಿನಗಳೊಳಗಾಗಿ Governor's address ಮೇಲೆ ರಿಪ್ಲೈ ಕೂಡ ಆಗಬೇಕು. ಮತ್ತು ವ್ಯಾಟ್ ಬಗ್ಗೆ ಚರ್ಚೆ ಕೂಡ ಆಗಬೇಕು ಎರಡೂ ಹೇಗೆ ಆಗಲಿಕ್ಕೆ ಸಾಧ್ಯ ಇದೇನೂ ಸಣ್ಣ ಬಿಲ್ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ರಾಜ್ಯಪಾಲರು ಈ ಸದನದಲ್ಲಿ ಭಾಷಣ ಭಾಷಣ 20 -22 ದಿವಸಗಳಾಯಿತು. ಯಾವ ಕಾಲಕ್ಕೂ ಇಲ್ಲ. 56 ದಿವಸಗಳಿಗೆ ಮುಗಿಸುತ್ತಿದ್ದೆವು. ನಾನು ಹಿಂದಕ್ಕೆ ಹೋಗುವುದಿಲ್ಲ. ವಾಸ್ತವವಾಗಿ.....

ಶ್ರೀ ಡಿ.ವಿ ಸದಾನಂದಗೌಡ:- ಅದಕ್ಕೆ ಕಾರಣಗಳೂ ಇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಎಲ್ಲಾ ಕಾಲಕ್ಕೂ ಕಾರಣಗಳು ಬೇಕಾದಷ್ಟು ಸಿಗುತ್ತವೆ. ಆದರೆ ಕೆಲವು ಮೌಲ್ಯಗಳಿಗನುಗುಣವಾಗಿ ನಾವು ನಡೆದುಕೊಂಡು ಬರಬೇಕಲ್ಲವೇ? ಆಯವ್ಯಯ ಮಂಡನೆಯಾಗುವವರೆಗೂ 20-22 ದಿವಸಗಳ ಆದ ನಂತರವೂ ನಾವು ಇನ್ನೂ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಗಿಸಲಿಲ್ಲ ಎಂದು ಹೇಳಿದರೆ ಅದು ಅವರಿಗೆ ಸಲ್ಲಬೇಕಾದಂತಹ

ಗೌರವ ಕೊಟ್ಟ ಹಾಗೆ ಆಗುವುದಿಲ್ಲ ಎಂದು ನನ್ನ ಅನುಭವದ ಆಧಾರದ ಮೇಲೆ ಹೇಳುತ್ತಿದ್ದೇನೆ. ಮುಂದಿನ ವಿಚಾರವನ್ನು ನಾನು ತಮಗೆ ಬಿಡುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಕಾರಣಗಳು ಹಲವಾರು ಇವೆ. ಈ ರೀತಿ ಸದನ ಮುಂದೆ ಹೋಗಲಿಕ್ಕೆ ಕಾರಣವೇನು ಎಂದು ಹೇಳಿದರೆ, ಇವರು ವರ್ಷಕ್ಕೆ 100 ದಿನ ಮಾಡುತ್ತೇವೆ, 60 ದಿನ ಮಾಡುತ್ತೇವೆ ಎಂದು ಹೇಳಿ, ಪ್ರಥಮ ಬಾರಿಗೆ ಇಷ್ಟು ದಿವಸ ಮಾಡುತ್ತಿದ್ದೀರಿ, ಈ ಸಾರಿ ಮಾಡಿದ್ದಕ್ಕಾಗಿ ನಿಮಗೆ ಅಭಿನಂದನೆಗಳು ಆದರೆ ಇಷ್ಟು ವರ್ಷದ್ದೆಲ್ಲಾ ಅಂದರೆ ಕಳೆದ 2-3 ವರ್ಷದ್ದೆಲ್ಲಾ ನಮಗೆ ಈಗ ಮಾತನಾಡಲಿಕ್ಕೆ ಈ ಸಾರಿ ಪುರಸೊತ್ತು ಆಗಿದೆ. ಪ್ರಥಮ ಬಾರಿಗೆ ನಮಗೆ ಪುರಸೊತ್ತು ಕೊಟ್ಟಿದ್ದೀರಿ, ನಿಮಗೆ ಅಭಿನಂದನೆಗಳು, ಇಷ್ಟರವರೆಗೆ ಅದನ್ನೆಲ್ಲಾ ಮಾತನಾಡಿದ್ದೇವೆ. ಸ್ವಲ್ಪ ನಮಗೆ ಪುರಸೊತ್ತು ಆಗಿದೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ ಇವತ್ತು ಮತ್ತು ನಾಳೆ ಇದು ಮಾಡಿ. 20ನೇ ತಾರೀಖಿಗೆ ಬೆಳಿಗ್ಗೆ ರಿಪ್ಲೈ ಆದ ನಂತರ ಪೂರ್ತಿ ಎಷ್ಟು ಬಿಲ್ ಆಗುತ್ತದೆಯೋ ಅಷ್ಟೂ ಬಿಲ್‌ಗಳನ್ನು ತೆಗೆದುಕೊಳ್ಳೋಣ. 20ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ 1.30 ಗಂಟೆಯ ಹೊತ್ತಿಗೆ ಉತ್ತರ ಕೊಟ್ಟ ತಕ್ಷಣ ಖಂಡಿತವಾಗಿ ಈ ವ್ಯಾಟ್ ಬಗ್ಗೆ ನಾವು ಮಾತನಾಡೋಣ. ನೀವು ದಿನಕ್ಕೆ ಎರಡು ಬಿಲ್ ಎಂದು ಹೇಳಿದ್ದರೂ ಕೂಡ ನಿನ್ನೆ ನಾವು ಮೂರು ಬಿಲ್‌ಗಳನ್ನು ಪಾಸ್ ಮಾಡಿ ಕೊಟ್ಟಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಆ ಬಿಲ್‌ಗಳಿಗೂ ಮತ್ತು finance bill ಗಳಿಗೂ ಬಹಳ ವ್ಯತ್ಯಾಸ ಇದೆ. ಇಲ್ಲಿ ಮಂಜೂರಾಗಿ ಮೇಲ್ಮನೆಯಲ್ಲಿ ಪಾಸ್ ಆಗಿ ರಾಷ್ಟ್ರಪತಿಗಳ ಅಂಕಿತ ಪಡೆದು ಅದು ಬರಬೇಕು.

ಉಪಾಧ್ಯಕ್ಷರು:- ಇದನ್ನು ಸಂಜೆ 6.30 ಗಂಟೆಗೆ ತೆಗೆದುಕೊಳ್ಳೋಣ. ಈಗ ಮಾನ್ಯ ಸಂಪಂಗಿಯವರು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೇ, This is a bad precedent. ಮಾನ್ಯ ವಿರೋಧ ಪಕ್ಷದ ನಾಯಕರಾದ ಮೇಲೆ ನಮ್ಮ ಪಕ್ಷದವರಿಗೆ ಮಾತನಾಡಲು ನಾವು ಅವಕಾಶ ಕೊಡಬೇಕಾಗಿತ್ತು. ತಾವು ಈಗ ಮಾನ್ಯ ಎಸ್.ಎಸ್. ಪಾಟೀಲ್‌ರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು:- ತಮ್ಮ ಪಕ್ಷದ ವತಿಯಿಂದ ಮಾತನಾಡಬೇಕಾದವರ ಪಟ್ಟಿಯನ್ನು ತಾವು ಇನ್ನೂ ಕೊಟ್ಟಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಬಚ್ಚೇಗೌಡರು ಹೆಸರುಗಳ ಪಟ್ಟಿಯನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು:- ಯಾವುದೇ ಪಟ್ಟಿ ಕೊಟ್ಟಿಲ್ಲ. ಹೊಸಬರಿಗೆ ಮಾತನಾಡಲು ಅವಕಾಶ ಕೊಡಿ ಎಂದು ಹೇಳುತ್ತೀರಿ. ಆದರೆ ಪಕ್ಷದ ವತಿಯಿಂದ ಮಾತನಾಡಬೇಕಾದವರ ಪಟ್ಟಿಯನ್ನೇ ತಾವು ಕೊಟ್ಟಿಲ್ಲ. ಆದ್ದರಿಂದ ನಾನು ಅವರ ಹೆಸರನ್ನು ಕರೆದೆ. ಮಾನ್ಯ ಸಂಪಂಗಿಯವರು ಸಿದ್ಧರಾಗಿಲ್ಲವೆಂದು ಕಾಣುತ್ತದೆ. ಮಾನ್ಯ ಎಸ್.ಎಸ್. ಪಾಟೀಲ್‌ರವರೇ ತಾವೇ ಮಾತನಾಡಿ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ):- ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಪ್ರಸ್ತಾವದ ಬಗ್ಗೆ ಮಾತನಾಡಲು ತಾವು ನನಗೆ

ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮೊದಲನೆಯದಾಗಿ, ನಾನು ಮಾತನಾಡುವ ಪೂರ್ವದಲ್ಲಿ ಈ ಸರ್ಕಾರದವರಿಗೆ ಕೆಲವು ಶರಣರು, ಸಂತರು, ದಾಸರು ಮತ್ತು ಸರ್ವಜ್ಞರು ಹೇಳಿದಂತಹ ಮಾತುಗಳನ್ನು ನೆನಪು ಮಾಡಿ ಮುಂದೆ ನಾನು ಆ ವಿಚಾರಕ್ಕೆ ಬರುತ್ತೇನೆ. ಇಲ್ಲಿ ಶರಣರು ಒಂದು ಮಾತನ್ನು ಹೇಳುತ್ತಾರೆ. "ಕಾಗೆಯ ಮರಿ ಕೋಗಿಲೆಯಾಗಬಲ್ಲದೇ, ಆಡಿನ ಮರಿ ಆನೆಯಾಗಬಲ್ಲದೇ, ಸೀಳು ನಾಯಿ ಸಿಂಹದ ಮರಿಯಾಗಬಲ್ಲದೇ, ಅರಿವು ಆಚಾರ ಸನ್ನದ್ ಜ್ಞಾನವ ಅರಿಯದೇ, ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವನ್ನು ನೋಡಲಾಗದು ಅಂಬುಗಲೇಶ್ವರ ಎಂದು ಶರಣರು ಹೇಳುತ್ತಾರೆ. ಆನೆಯ ಏರಿಕೊಂಡು ಹೋದಿರೇ ನೀವು, ಕುದುರೆಯನೇರಿಕೊಂಡು ಹೋದಿರೇ ನೀವು, ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೇ ನೀವು, ಸತ್ಯದ ನೆಲೆವನರಿಯದೇ ಹೋದಿರಲ್ಲಾ ಸದ್ಗುಣವೆಂಬ ಫಲವ ಬಿತ್ತದೇ ಬೆಳೆಯದೇ ಹೋದಿರಲ್ಲಾ, ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ ನಮ್ಮ ಕೂಡಲ ಸಂಗಮದೇವನರಿಯದೇ ನರಕಕ್ಕೆ ಭಾಜನವಾದಿರಲ್ಲಾ" ಎಂದು ಶರಣರು ಹೇಳುತ್ತಾರೆ. ನಮ್ಮ ಶರಣರು ಒಂದು ಕಡೆ ಹೇಳುತ್ತಾರೆ, "ಎಸಿಸು ಕಾಲ ಕಲ್ಲು ನೀರೊಳಗೆ ಇದ್ದರೇನು ಕರಗಿ ನೀರಾಗಬಲ್ಲದೇ, ಮುಸಿಯನೇಸು ಕಾಲ ಬೆಳಗಿದರೇನು ಬಿಳಿದಾಗಬಲ್ಲುದೇ, ಮೂರ್ಖಂಗೆ ಬುದ್ಧಿಯನ್ನು ನೂರ್ಕಾಲ ಬೆರೆದರೆ ಗೋರ್ಕಲ್ಲ ಮೇಲೆ ಮಳೆಗರೆದರೆ ಆ ಕಲ್ಲು ನೀರು ಕುಡಿಯುವುದೇ ಸರ್ವಜ್ಞ." ಎಂದು ಸರ್ವಜ್ಞರು ಹೇಳುತ್ತಾರೆ. ಇನ್ನು ಒಕ್ಕಲಿಗನ ಬಗ್ಗೆ ಹೇಳುತ್ತೇನೆ. ನೀವು ಬಹಳ ಮಟ್ಟಿಗೆ ಇದನ್ನು ತಿಳಿದುಕೊಳ್ಳಬೇಕಾಗುತ್ತದೆ. ಸರ್ವಜ್ಞ ಬೇಸಾಯಗಾರರ ಬಗ್ಗೆ ಏನು ಹೇಳಿದ್ದಾನೆ, ನಾವು ಏನು ಮಾಡುತ್ತಿದ್ದೇವೆ, ಎನ್ನುವುದು ತಾವು ತಿಳಿದುಕೊಳ್ಳಬೇಕಾಗುತ್ತದೆ.

"ಒಕ್ಕಲಿಗನುಕ್ಕಿದರೆ ಉಕ್ಕುವುದು ಜಗವೆಲ್ಲಾ. ಒಕ್ಕಲಿಗನುಕ್ಕದಿರೆ ಬಿಕ್ಕುವುದು ಜಗವೆಲ್ಲಾ. ಸರ್ವಜ್ಞ. ಒಕ್ಕಲನು ಅಲಗಿಸದೆ, ಲಿಕ್ಕವನು ಸಿಕ್ಕಿಸದೆ ಕಕ್ಕುಲತೆಯಿಂದ ನಡೆಸುವ ಅರಸುತಾ ಚಕ್ಕಂದವಿರುವ ಸರ್ವಜ್ಞ "ಭಂಡಾರ ತುಂಬಿ ನೀ ಬಂಡೆಯಲಿ ಹೇರುವರೆ ಮಂಡಲವನಾಳಿ ಮೆರೆಯುವರೆ, ಒಕ್ಕಲನು ಕೊಂಡಾಡಬೇಕು ಸರ್ವಜ್ಞ. ನಾಡವಾಳುವ ಅರಸು ರೂಢಿಗೀಶ್ವರ ನಕ್ಕು ಕಾಡು ಮಿಗದಂತೆ ಮೇರೆ ಧುರಿಯರ ನಾಡು ಕಾಡಾಗದಂತೆ ಸರ್ವಜ್ಞ. ಇದನ್ನು ನೀವು ನೆನಪಿಟ್ಟುಕೊಳ್ಳಿ. ಈಗ ನೀವೇ ದೊರೆಗಳು ಆಧುನಿಕ ದೊರೆಗಳು ನೀವು.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ದೊರೆತನ ಕೊಟ್ಟರೂ ನಾವು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು."

ಉಪಾಧ್ಯಕ್ಷರು:- ಪಾಟೀಲರೇ, ಒಂದು ದಿವಸ ಇದನ್ನೇ ಚರ್ಚೆ ಮಾಡೋಣ.

ಶ್ರೀ ಎಸ್.ಎಸ್. ಪಾಟೀಲ್:- ಅಧ್ಯಕ್ಷರೇ, ಇದನ್ನು ನೆನಪು ಹಾರಿ ನಾವು ಇಲ್ಲಿಗೆ ಬಂದಿದ್ದೇವೆ. ಆನ್ ಲೈನ್ ಲಾಟರಿ ಆಡಿಸುತ್ತಿದ್ದೀರಲ್ಲಾ ಅದಕ್ಕೆ ಹೇಳುತ್ತಿದ್ದೇನೆ. ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ ಎಂದು ಬಸವಣ್ಣ ಹೇಳುತ್ತಾನೆ. ಇಲ್ಲಿ ದುರ್ವಸನಿ ದುರಾಚಾರಿ ಆಗಿರಯ್ಯಾ ಎಂದು ಇವರು ಹೇಳುತ್ತಾರೆ. ಈ ಕಾರಣದಿಂದ ಇದು ಬೇಕಾಗಿದೆ. ಅಧ್ಯಕ್ಷರೆ, ಇವತ್ತು ನಾವು ನೆನಪು ಹಾರಿ ರಾಜಕೀಯದಲ್ಲಿ ಬರುತಿರುವುದರಿಂದ ಇಂತಹ ಸ್ಥಿತಿ ಈ ದೇಶಕ್ಕೆ ಬಂದಿದೆ, ಈ ರಾಜ್ಯಕ್ಕೆ ಬಂದಿದೆ. ಆ ಕಾರಣದಿಂದ ನೆನಪು ಮಾಡುತ್ತಿದ್ದೇನೆ. ಸ್ವಲ್ಪ ಇದನ್ನು

ಕೇಳೋಣ ತಪ್ಪೇನಲ್ಲ "ಬೆಕ್ಕು ಮನೆಯೊಳಗೆ ಲೇಸು ಮುಕ್ಕು ಕಲ್ಲಿಗೆ ಲೇಸು" ನಕ್ಕು ನಗಿಸುವ ನುಡಿ ಲೇಸು ಊರಿಂಗೆ ಒಕ್ಕಲಿಗನೇ ಸರ್ವಜ್ಞ. ನಮ್ಮ ದಾಸರು ಹೇಳುತ್ತಾರೆ, "ಧರ್ಮಕ್ಕೆ ಕೈಬಾರದೀಕಾಲ, ಪಾಪ ಕರ್ಮಕ್ಕೆ ಮನಸೋಲುವ ಈ ಕಾಲ, ದಂಡ ದ್ರೋಹಕ್ಕೆ ಉಂಟು ಪುಂಡು ಪೋಕರಿಗೆ ಉಂಟು, ಹೆಂಡತಿ ಮಕ್ಕಳಿಗಿಲ್ಲವೀ ಕಾಲ, ದೀಡೇರಿಗುಂಟು ಭಜಗ ಭಂಟರಿಗುಂಟು, ಅಂಡಲೇವರಿಗಿಲ್ಲವೀ ಈ ಕಾಲ, ಹತ್ಯೆ ಸುಳ್ಳರಿಗುಂಟು, ನಿತ್ಯ ಹಾದರಕ್ಕುಂಟು ಉತ್ತಮರಿಗಿಲ್ಲವೀ ಕಾಲ, ತೊತ್ತೇರಿಗುಂಟು, ತಾಟಕೀಗುಂಟು ಹೆತ್ತ ತಾಯಿಗಿಲ್ಲವೇ ಈ ಕಾಲ, ಜಿಟವಾಯಿತು, ರಸಹಾಸವಾಯಿತು, ಸೊಸೆ ಅತ್ತೆಯಾದಂತಾಯಿತು, ನೊಸಕಾಲ, ವಿಷಜಾಕ್ಷ ಪುರಂದರ ವಿಠಲನ ಮನದಲ್ಲಿ ಸ್ತುತಿಸುವವರಿಗಿಲ್ಲ ಈ ಕಾಲ, ಈ ಎಲ್ಲ ಶರಣರು, ದಾಸರು, ಸಂತರು ಹೇಳಿದಂತಹ ಮಾತನ್ನು ಇವರಿಗೆ ನೆನಪು ಮಾಡಿಕೊಟ್ಟು, ಹುಮ್ನಾಬಾದರ ಚುನಾವಣೆಯ ಗೆಲುವಿನ ಅಹಂಕಾರ ಮದವೇರಿ ಹೊರಟಂತಹ ಮದಗಜ, ನಮ್ಮ ಮುದ್ದಹನುಮೇಗೌಡರು ಇಲ್ಲ, ಅವರು ಬಹಳ ಹೇಳಿದರು, ನಾವು ಗೆದ್ದಿದ್ದೇವೆ, ಇಡೀ ರಾಜ್ಯವೇ ನಮ್ಮದು ಇದೆ, ಎಂದು ಹೇಳುತ್ತಿದ್ದರು. ಹುಮ್ನಾಬಾದ್ ಚುನಾವಣೆ ಹೇಗೆ ಗೆದ್ದಿದ್ದೀರಿ ಎಂದು ನೀವು ಸ್ವಲ್ಪ ಲೆಕ್ಕದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹುಮ್ನಾಬಾದ್ ಚುನಾವಣೆಯಲ್ಲಿ ನಿಮಗೆ ಮತ ಬಂದಿಲ್ಲ. ನಿಮಗೆ ಎಷ್ಟು ಮತ ಬಂದಿವೆ, 70 ಜನ ನಿಮ್ಮ ವಿರುದ್ಧವಾಗಿ ಮತ ನೀಡಿದ್ದಾರೆ. ನೀವು ಟೆಕ್ನಿಕಲ್ಲಾಗಿ ಆಯ್ಕೆಯಾಗಿದ್ದೀರಿ. ಇಲ್ಲವೆಂದು ಹೇಳುವುದಿಲ್ಲ. ನೀವು ಆರಿಸಿ ಬರುವುದಕ್ಕೆ ಕಾರಣವೇನು? ಅದು ತಾವು ತಿಳಿದುಕೊಳ್ಳಬೇಕಾಗುತ್ತದೆ. ನೀವು ಆರಿಸಿ ಬಂದಿದ್ದೀರಿ, ಎಮ್‌ಎಲ್‌ಎ ಆಗಿದ್ದೀರಿ, ನಮ್ಮ ಪಾಟೀಲರು ಇಲ್ಲ, ಪಾಟೀಲರು ಬಂದಿದ್ದು ನಮಗೆ ಬಹಳ ಸಂತೋಷ, ನಮ್ಮವರು ಒಬ್ಬರು ಒಳಗೆ ಬಂದರೆ ನಮಗೆ ಬಹಳ ಸಂತೋಷ ನೀವು ಹೇಗೆ ಆರಿಸಿ ಬಂದಿರಿ ಎನ್ನುವುದು ಸಂಸದೀಯ ವ್ಯವಹಾರಗಳ ಸಂಸ್ಥೆ ವರದಿ ಮಾಡಿದೆ, ಅದನ್ನು ನಮ್ಮ ಆತ್ಮೀಯ ಮಿತ್ರರಾದ ಜಯಚಂದ್ರರವರು ಮಾಡಿದ್ದಾರೆ ನೀವು ಓದಿರಬಹುದು. ತಾವು ಇದನ್ನು ಓದಿರುತ್ತೀರಿ. ನೀವು ಯಾವ ಯಾವ ರೀತಿ ಆರಿಸಿ ಬಂದಿದ್ದೀರಿ, ಏನಾಗಿದೆ ಎನ್ನುವುದನ್ನು ಹೇಳುತ್ತಾರೆ. ಏನು ಮಾಡಿದಿರಿ, ನಿಮ್ಮ ಗತಿ ಏನೇನಾಗಿದೆ, ಅದನ್ನೆಲ್ಲಾ ಈ ವರದಿಯಲ್ಲಿ ಹೇಳುತ್ತಾರೆ. ಕಾಂಗ್ರೆಸ್ ಪಕ್ಷ ಹುಮ್ನಾಬಾದ್ ಚುನಾವಣೆಯಲ್ಲಿ ಯಾವ ರೀತಿ ಆರಿಸಿಬಂದರು ಎನ್ನುವುದನ್ನು ಕೂಡ ಇಲ್ಲಿ ಹೇಳುತ್ತಾರೆ. ಇವರು ಸರ್ವೆ ಮಾಡಿರುವುದು ನೀವು ನಂಬುತ್ತೀರೋ ಇಲ್ಲವೋ? ಇದು ಸಹಿತ್ಯ ಪರಿಷತ್ತು ಹೌದು, ಇದು ಸದನ, ಈ ರಾಜ್ಯದ ಜನತೆ ಒಳ್ಳೆಯದು ಹೇಳತಕ್ಕಂತದ್ದು, ಒಳ್ಳೆಯದು ಕಲಿಸತಕ್ಕಂಥದ್ದು ಒಳ್ಳೆಯದು ಮಾಡತಕ್ಕಂಥದ್ದಕ್ಕೆ ನಮಗೆ ಕಳುಹಿಸಿದ್ದಾರೆ. ಇದು ಸಾಹಿತ್ಯ ಪರಿಷತ್ತು ಆಗಬೇಕಾಗುತ್ತದೆ, ಧರ್ಮ ಸಮ್ಮೇಳನ ಆಗಬೇಕಾಗುತ್ತದೆ. ಧರ್ಮ ಧರ್ಮದ ಜನರೇ ಇಲ್ಲಿ ಕೂರಬೇಕಾಗುತ್ತದೆ. ಧರ್ಮವೀರನ ಪ್ರಕಾರ ಇಲ್ಲಿ ಅಧಿಕಾರ ನಡೆಸಬೇಕಾಗುತ್ತದೆ. ನಮ್ಮ ರುದ್ರಪ್ಪ ಲಮಾಣಿಯವರಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿ. ಒಳ್ಳೆಯದು ಕಲಿಯಿರಿ, ಒಳ್ಳೆಯದು ನುಡಿಯಿರಿ, ಒಳ್ಳೆಯದು ಮಾಡಿ ನೀವು ಮಾಡಿರುವ ಆನ್ ಲೈನ್ ಲಾಟರಿಯಿಂದ ಪರಿಸ್ಥಿತಿ ಏನಾಗಿದೆ ಎಂದು ಮುಂದೆ ಹೇಳುತ್ತೇನೆ. ಈ ಜನರಿಗೆ ಕೇಳುವುದು ಬೇಕಾಗಿಲ್ಲ. ಅಧಿಕಾರ ಕೊಟ್ಟು ಬಿಟ್ಟರೆ ಬೇಕಾದ್ದು ಮಾಡಿ ಹೋಗೋಣ, ರಾಜ್ಯ ಹಾಳಾಗಿ ಹೋಗಲಿ ನಾವು ಅಧಿಕಾರ ನಡೆಸಿಕೊಂಡು ಹೋಗೋಣ ಎಂದು ತಿಳಿದುಕೊಂಡರೆ ಅದು ಆಗುವುದಿಲ್ಲ. ಶರಣರು, ದಾಸರು, ಸಂತರ ಬಗ್ಗೆ ತಿಳಿದುಕೊಳ್ಳಿ ಏಕೆಂದರೆ, ಹಿಂದೆ ರಾಜ ಮಹಾರಾಜರು ಇದ್ದರು. ಇವತ್ತು ನೀವೇ ರಾಜ ಮಹಾರಾಜರು.

ನೀವು ಏನು ಅಧಿಕಾರಕ್ಕೆ ಬಂದಿದ್ದೀರಿ, ನೀವೇ ರಾಜ ಮಹಾರಾಜರು ಇದ್ದ ಹಾಗೆ. ಅವರೂ ಆಳುತ್ತಿದ್ದರು, ನೀವು ಆಳುತ್ತಿದ್ದೀರಿ. ಅವರೆಲ್ಲರಿಗೂ ಧರ್ಮ ಪೀಠಗಳು ಇದ್ದುದ್ದರಿಂದ ಧರ್ಮ ಬೋಧನೆಗಳನ್ನು ನಡೆಸುತ್ತಿದ್ದರು. ರಾಜ ಹೇಗೆ ನಡೆದುಕೊಳ್ಳಬೇಕು, ನೀನು ಹೇಗೆ ಇರಬೇಕು, ಏನು ಮಾಡಬೇಕೆಂದು ಹೇಳುತ್ತಿದ್ದರು. ಇವತ್ತು ನಿಮಗೆ ಯಾರೂ ಹೇಳುವವರು ಕೇಳುವವರು ಇಲ್ಲದ ಹಾಗಾಗಿದೆ. ಈ ಕಾರಣದಿಂದ ಇವತ್ತು ನಾನು ಈ ಮಾತನ್ನು ಹೇಳಬೇಕಾಗಿದೆ. ಸಂಸದೀಯ ವ್ಯವಹಾರಗಳ ಸಂಸ್ಥೆ ವರದಿ ಮಾಡಿರುವುದನ್ನು ನೀವು ಓದಿದ್ದೀರಾ ಓದಿ ಹೇಳುವುದಕ್ಕೆ ಬಹಳ ಹೊತ್ತಾಗುತ್ತದೆ. ನೀವೇ ಓದಿ ತಿಳಿದುಕೊಳ್ಳಿ ಚುನಾವಣೆಯಲ್ಲಿ ಮುಖ್ಯ ಮಂತ್ರಿ ಎಸ್.ಎಂ. ಕೃಷ್ಣರವರ ಪ್ರಭಾವ ಅಷ್ಟೇನೂ ಆಗಿಲ್ಲ. ಒಂದು ವೇಳೆ ಮುಖ್ಯ ಮಂತ್ರಿಗಳ ಪ್ರಭಾವವಾಗಿದ್ದರೆ ಕಾಂಗ್ರೆಸ್ ಅಭ್ಯರ್ಥಿ ಅತಿ ಹೆಚ್ಚು ಮತಗಳ ಅಂತರದಿಂದ ವಿಜೇತರಾಗುತ್ತಿದ್ದರು. ಎಂದು ವರದಿಯಲ್ಲಿ ತಿಳಿಸಲಾಗಿದೆ.

ಒಬ್ಬ ಮಾನ್ಯ ಸದಸ್ಯರು:- ಹೆಚ್ಚು ಎಂದರೆ ತಮ್ಮ ಪ್ರಕಾರ 50,000 ಮತಗಳು ಬರಬೇಕಾಗಿತ್ತಾ? 10,000 ಬಂದಿದೆ ಇದು ಇನ್ನು ಕಡಿಮೆಯಾ? ವರದಿ ಏನೇ ಹೇಳಲಿ, ನೀವು ಏನು ಹೇಳುತ್ತೀರಿ? 27,000 ಮತಗಳು ಕಡಿಮೆಯಾ?

ಶ್ರೀ ಎಸ್.ಎಸ್. ಪಾಟೀಲ್:- ಚುನಾವಣೆ ಹೇಗಿದೆ ಎಂದರೆ, 10 ರಲ್ಲಿ 11 ಮತ ಬಿದ್ದವನು ಆರಿಸಿ ಬರುತ್ತಾನೆ. ನಮ್ಮ ಪಕ್ಷದ ಓಟಿನಿಂದನೇ ನೀವು ಆರಿಸಿಬಂದಿದ್ದೀರಿ ಎಂದು ಸಿದ್ದ ಮಾಡುತ್ತೇನೆ. ನನೇನೂ ಇಲ್ಲಿ ಶುಂಭನಾಗಿ ಮಾತನಾಡುತ್ತಿಲ್ಲ. ಶುಂಭ ನಿಶುಂಬರಾಗಿ ಇಲ್ಲಿ ಕುಳಿತ್ತಿರುವುದರಿಂದ, ಈ ಶುಂಭ ನಿಶುಂಭರ ಹೊಡೆದಾಟದಲ್ಲಿ ನೀವು ಆರಿಸಿ ಬಂದಿದ್ದೀರಿ. ನಮಗೆ ಎಷ್ಟು ಓಟು ಬಂದಿವೆ ಎನ್ನುವುದನ್ನು ಹೇಳುತ್ತೇನೆ. ಹುಮ್ನಾಬಾದ್ ಚುನಾವಣೆಯಲ್ಲಿ ಬರೀ 700,800 ಓಟುಗಳು ಬಂದಿವೆ,

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಪಾಟೀಲರೇ, ನೀವು ಹೇಳಿದ ಹಳೆಯ ಚರಿತ್ರೆಗಳಲ್ಲೆಲ್ಲಾ ಆನೆ ಮಾಲೆ ಹಾಕಿದರೆ ರಾಜ ಆಗುತ್ತಿದ್ದ. ಆದರೆ, ಈಗ ಇಲ್ಲಿ ಜನ ಓಟು ಕೊಟ್ಟು ಗೆಲ್ಲಿಸಿದರೂ ನೀವು ಒಪ್ಪುವುದಕ್ಕೆ ತಯಾರಿಲ್ಲವಲ್ಲ?

ಶ್ರೀ ಎಸ್.ಎಸ್. ಪಾಟೀಲ್:- ಮೈಸೂರು ಮಹಾರಾಜರನ್ನು ಇವತ್ತು ನೆನೆಸುತ್ತಾರೆ. ಅವರನ್ನು ಬಯುತ್ತಾ ಹೋದರೆ ನಿಮಗೆ ಬಯಸದೆ ಓಟಲ್ಲ ಸಮೀಪ ಬರುವುದಕ್ಕೂ ಬಿಡುವುದಿಲ್ಲ. ರಾಜಾ ಪ್ರತ್ಯಕ್ಷ ದೇವತಾ; ನೀವೂ ಕೂಡ ಹಾಗೆ ಆಗಬೇಕಾಗುತ್ತದೆ.

ಶ್ರೀ ಎ.ಎಸ್. ಗುರುಸ್ವಾಮಿ:- ಪಾಟೀಲರೇ, ಶುಂಭ ನಿಶುಂಭ ಎಂದು ಹೇಳಿದಿರಿ, ಹಾಗೆಂದರೇನು?

ಒಬ್ಬ ಮಾನ್ಯ ಸದಸ್ಯರು:- ಶುಂಭ ನಿಶುಂಭ ಯಾರು ಎನ್ನುವುದನ್ನು ದಯವಿಟ್ಟು ಹೇಳಿ. ಶುಂಭ ನಿಶುಂಭರ ಹೊಡೆದಾಟದಲ್ಲಿ ಗೆದ್ದು ಬಂದಿರಿ ಎಂದು ಹೇಳಿದಿರಿ, ಅದಕ್ಕೆ ಶುಂಭ ನಿಶುಂಭರು ಯಾರು ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್:- ನೀವೇನಾದರೂ ನಮಗೆ ಬರೀ 700-800 ಮತಗಳು ಇವೆ ಎಂದು ತಿಳಿದುಕೊಂಡಿದ್ದರೆ, ಅದನ್ನು ನಾನು ಹೇಳಬಾರದು, ಇನ್ನು ಒಂದೂವರೆ ವರ್ಷದ ನಂತರ ಚುನಾವಣೆ ಬಂದಾಗ ನಿಮಗೆ ತಿಳಿಯುತ್ತದೆ. ನಾನು ನಿಮಗೆ ಎಚ್ಚರಿಕೆ ಕೊಡುತ್ತೇನೆ, ನೀವು ತಿಳಿದುಕೊಂಡಿರಬಹುದು, ಭಾರಿ ಮತಗಳಿಂದ ಬಂದು ಬಿಟ್ಟಿದ್ದೇವೆ, ನಾವು ಏನು ಮಾಡಿದರೂ

ನಡೆಯುತ್ತದೆ, ಆನ್ ಲೈನ್ ಲಾಟರಿ ಆಡಿಸುತ್ತೇವೆ, ಏನೇನೋ ಮಾಡುತ್ತೇವೆ, ಜನರನ್ನು ದುರ್ಜನರಾಗಿ ಮಾಡುತ್ತೇವೆ, ಬೇಕಾದ್ದು ಮಾಡುತ್ತೇವೆಂದು ಹೇಳಿದರೆ, ಜನ ನಿಮಗೆ ಒಂದೂವರೆ ವರ್ಷದ ನಂತರ ಹೇಳುತ್ತಾರೆ. ನೀವು ಕೂಡಲ ಸಂಗಮ ಕ್ಷೇತ್ರದಿಂದ ಬಂದವರು ನೀವು ಓದಿಕೊಳ್ಳಿ, ನಾನು ನಿಮಗೆ ಹೇಳಬೇಕಾಗಿಲ್ಲ. ಆ ಸಂಪ್ರದಾಯದಲ್ಲಿ ಬೆಳೆದವರು ನೀವು. ನನಗಿಂತ ಚೆನ್ನಾಗಿ ನೀವು ಅಭ್ಯಾಸ ಮಾಡಿದ್ದೀರಿ. ಅದೇ ಕ್ಷೇತ್ರದಿಂದ ಬಂದವರು ಅದೇ ರಾಜಕೀಯ ಬೆರೆತ ಧರ್ಮ ಇರಬೇಕಾಗುತ್ತದೆ. ಧರ್ಮ ಬಿಟ್ಟು ರಾಜಕೀಯಕ್ಕೆ ಇಳಿದರೆ ದೇಶ ಹಾಳಾಗಿ ಹೋಗುತ್ತದೆ. ಈ ಎಚ್ಚರಿಕೆಯನ್ನು ನೀವು ಇಟ್ಟುಕೊಳ್ಳಿ. ನಮ್ಮ ಓಟು 700-800 ಇವೆ, ಇವರದೆಲ್ಲಾ ಇಡುಗಂಟೇ ಹೋಯಿತು ಎಂದು ತಿಳಿದು ಕೊಂಡರೆ ಅದು ಬಹಳ ಹುಚ್ಚತನವಾಗುತ್ತದೆ. ನಮ್ಮದು ಎಷ್ಟಿವೆ ನಾವು ಒಂದುವರೆ ವರ್ಷದ ನಂತರ ಹೇಳುತ್ತೇವೆ. ನಮ್ಮ ಜಗದೀಶ್ ಶೆಟ್ಟರ್‌ರವರು ಇಲ್ಲಿ ಕೂತಿದ್ದಾರೆ. ಹೋದ ಸಾರಿ ಜಗದೀಶ್ ಶೆಟ್ಟರ್‌ರವರ ಹೊಂದಾಣಿಕೆ ಇತ್ತು. ದಳದ ಓಟುಗಳೆಲ್ಲವೂ ಅಲ್ಲಿ ಬಿದ್ದವು ಗೆದ್ದು ಬಂದರು. ಏನೋ ನಮ್ಮ ದಾಯಾದಿ ತಯಾರಿದ್ದರು ಅಲ್ಲಿ ಅವರನ್ನು ಸೋಲಿಸಬೇಕು ಈ ಹುಚ್ಚುತನ ಮಾಡಿದೆವು ನಾವು. ಆದ್ದರಿಂದ ಆ ಓಟ್‌ಗಳೆಲ್ಲ ನಿಮಗೆ ಬಂದವು. ಬೇಕಾದರೆ ನೀವು ಪಾಟೀಲರನ್ನ ಕೇಳ್ರಿ, ಯಾರ ಓಟ್ ಬಂದಿವೆ ಎಂಬುದನ್ನು ಅವರಿಂದ ಕೇಳ್ರಿ, ಹದಿನೈದರಿಂದ ಇಪ್ಪತ್ತು ಸಾವಿರ ನಮ್ಮ ಮತ ಹಾಕಿದ್ದರಿಂದ ಅಷ್ಟು ಲೀಡ್‌ನಿಂದ ನೀವು ಗೆದ್ದು ಬಂದಿದ್ದೀರಿ. ಇಲ್ಲದೇ ಇದ್ದರೆ ನೀವೆಲ್ಲಿ ಆರಿಸಿ ಬರ್ತಿದ್ರಿ ಅಲ್ಲಿ. ಹೋಗಿ ಅಲ್ಲಿ ವಿಚಾರ ಮಾಡ್ರಿ ಅಲ್ಲಿ. ಸರ್ವೆ ಹೇಳ್ತದೆ, ನೀವು ಸರ್ವೆ ನಂಬುತ್ತೀರಲ್ರಿ. ಇಂಥ ಸರ್ವೆ ನೀವು ನಂಬ್ತೀರಿ. ನೀವೇ ಹೇಳ್ರಿ, ನಂಬ್ತೀರೋ ಇಲ್ವೋ ಇದನ್ನು. ನೀವು ಹೇಳಿ. ಸರ್ವೆ ರಿಪೋರ್ಟ್‌ಗಳನ್ನು ನೀವು ನಂಬ್ತೀರೋ ಇಲ್ವೋ ಎಂಬುದನ್ನು ನೀವು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಎಸ್.ಎಸ್. ಪಾಟೀಲರೇ, ನಾವು ನಂಬುವುದು ಯಾವ ಜನರನ್ನು ಜನರು ಆರಿಸಿ ಮನೆಗೆ ಕಳುಹಿಸುತ್ತಾರೋ ಅವರನ್ನು ಮಾತ್ರ ಬೇಕಾದಷ್ಟು ರೀತಿಯಲ್ಲಿ ಸರ್ವೆ ಮಾಡುತ್ತಾರೆ, ಒಂದು ಚುನಾವಣೆ ವಿಶ್ಲೇಷಣೆ ಬೇಕಾದಷ್ಟು ರೀತಿಯಲ್ಲಿ ನಡೆಯುತ್ತದೆ. ಶಾಸನಸಭೆಯಲ್ಲಿ ಯಾರು ಪ್ರತಿನಿದಿ ಎಂದು ಬರುತ್ತಾರೋ ಅದು ಸರಿಯಾದ ಕ್ರಮ. ಅದೇ ಜನತಂತ್ರ.

ಶ್ರೀ ಎಸ್.ಎಸ್. ಪಾಟೀಲ್:- ಈಗ ಅದಕ್ಕೆ ನಮ್ಮ ತಕರಾರೇನೂ ಇಲ್ಲ ಎಂದು ಹೇಳಿದೆನಲ್ಲಾ. ಆದರೆ ಇಂಥ ರೀತಿಯ ಸರ್ವೆ ರಿಪೋರ್ಟ್‌ನ್ನು ನಂಬುತ್ತೀರೋ ಇಲ್ಲವೋ?

ಶ್ರೀ ಬಿ.ಎನ್. ಬಚ್ಚೇಗೌಡ:- ಪಾಟೀಲ್‌ರೆ, ಮಾನ್ಯ ಚಂದ್ರೇಗೌಡರು ಹೇಳಿದಷ್ಟು ಸಿಂಪಲ್ ಆಗಿ ತಾವು ಇದನ್ನು ಹೇಳಲಿಲ್ಲ. ಉಪ ಚುನವಣೆಯಲ್ಲಿ ಯಾರು ಗೆದ್ದು ಬರ್ತಾರೆ ಎನ್ನುವ ಬಗ್ಗೆ ಸಾಕಷ್ಟು ಚರ್ಚೆಯಾಯಿತು, ಭವಿಷ್ಯದಲ್ಲಿ ಯಾವ ಸರ್ಕಾರ ಬರುತ್ತದೆ, ಏನು, ಇದಕ್ಕೆ ದಿಕ್ಸೂಚಿ ಹೇಗೆ? ಯಾರಿಗೆ ಜನ ಮತ ಕೊಡುತ್ತಾರೆ, ಹೀಗೆ ಸಾಕಷ್ಟು ಚರ್ಚೆ ಆಯಿತು. ಅದಕ್ಕೇ ಈ ಎಲ್ಲವನ್ನೂ ಅವರು ಹೇಳುತ್ತಾ ಇರತಕ್ಕಂಥದ್ದು.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಬಚ್ಚೇಗೌಡರವರೆ, ಈ ವರದಿಯನ್ನು ನೀವು ನಂಬುತ್ತೀರೋ ಇಲ್ಲವೋ ಎಂದು ಹೇಳಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಲಮಾಣಿ ರುದ್ರಪ್ಪ:- ಬೇಕಾದಷ್ಟು ಜನರು ನಿಮ್ಮ ಬಗ್ಗೆಯೂ ಹೇಳಿದರು. ಇವರು ಇನ್ನೂ ಒಂದಾಗಲಿಲ್ಲ ಎಂದು.

ಶ್ರೀ ಎಸ್.ಎಸ್. ಪಾಟೀಲ್:- ಅದರ ಬಗ್ಗೆ ಹೇಳುತ್ತೇನೆ. ಒಂದೂವರೆ ವರ್ಷವಾದ ಮೇಲೆ ಹೇಳುತ್ತೇವೆ ನಿಮಗೆ. ಏನಾಗುತ್ತದೆ? ಏನಾಗಿ ಬರ್ತೀದೆ ಎಂಬ ಬಗ್ಗೆ ಒಂದೂವರೆ ವರ್ಷವಾದ ಮೇಲೆ ನಿಮಗೂ ತಿಳಿಯುತ್ತದೆ. ನಮ್ಮ ನಾಯಕರು ಮಧ್ಯಾಹ್ನವೇ ಹೇಳಿದ್ದಾರೆ ನಿಮಗೆ. ಬಂದು ಆ ಕಡೆಯಲ್ಲಿ ಕುಳಿತುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಈಗ ಹೇಳುವುದು ಬೇಡ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಪಾಟೀಲರೆ, ನೀವು ಚೆನ್ನಾಗಿ ಸರ್ವಜ್ಞನ ವಚನಗಳನ್ನು ಹೇಳುತ್ತೀರಿ. ಇನ್ನೂ ಇದ್ದರೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್:- ಬೇಡ್ರಿ, ಸಧ್ಯಕ್ಕೆ ಇಷ್ಟು ಸಾಕು. ಏಕೆಂದರೆ ನಮ್ಮ ಉಪಾಧ್ಯಕ್ಷರು ಈಗಾಗಲೇ ಬಹಳ ವಚನಗಳನ್ನು ಹೇಳುವುದಕ್ಕೆ ಹೊರಟಿದ್ದೀರಿ ನೀವು, ಎಲ್ಲಾ ಶುರುವಾಯಿತು ಎನ್ನುತ್ತಿದ್ದಾರೆ.

ಉಪಾಧ್ಯಕ್ಷರು:- ಇಲ್ಲ, ಇಲ್ಲ, ನಿಮಗೆ ಅರ್ಧ ಗಂಟೆ ಟೈಮನ್ನು ಅಲಾಟ್ ಮಾಡಿದ್ದೀನಿ. ನೀವು ಕಥೆಯನ್ನಾದರೂ ಹೇಳಿ, ಪ್ರವಚನವನ್ನಾದರೂ ಮಾಡಿ, ರಾಜ್ಯಪಾಲರ ಭಾಷಣದ ಮೇಲಾದರೂ ಮಾತನಾಡಿ. ಅರ್ಧ ಗಂಟೆ ಟೈಮ್ ಅಲಾಟ್ ಮಾಡಿದ್ದೇನೆ. ಏನಾದರೂ ಮಾತನಾಡಿ ನೀವು. ಪರವಾಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳ್ತೀನೆ, ಇದನ್ನು ಪ್ರತಿಸಲ ಹೇಳಿದ್ದೇನೆ. ಬೇಡ ಎಂದು ಹೇಳಿದರೆ ಇಲ್ಲೇ ಈಗಲೇ ಕೊಡುತ್ತೇನೆ. ಏಕೆಂದರೆ ಅಧ್ಯಕ್ಷರು ಪ್ರತಿ ಭಾರಿ ಏನು ಹೇಳುತ್ತಿದ್ದರೆಂದರೆ ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಎಲ್ಲವನ್ನೂ ಮಾತನಾಡಿ ಎಂದಿದ್ದರು. ಟೈಮ್ ಕೊಡುತ್ತೇನೆ, ಎಲ್ಲವನ್ನೂ ಮಾತನಾಡಿ ಎಂದು ಹೇಳಿರುವಾಗ ಈಗ ಅರ್ಧ ತಾಸು ಮಾತ್ರ ಮಾತನಾಡಿ ಎಂದರೆ ಹೇಗೆ? ನಾವೆಲ್ಲಾ ಎಲ್ಲಾ ವಿಷಯಗಳ ಬಗ್ಗೆ ಮಾತನಾಡಲು ಹದಿನೈದು ದಿನಗಳ ಕಾಲ ತಯಾರು ಮಾಡಿಕೊಂಡು ಬಂದಿರುತ್ತೇವೆ, ಅದನ್ನು ನಾವು ಹೇಳಬೇಕೋ, ಇಲ್ಲವೋ? ಅರ್ಧ ಗಂಟೆ ಹೇಗೆ ಸಾಕಾತ್ತದೆ? ಆ ಕಾರಣದಿಂದ ನಾನು ಮಾತನಾಡುತ್ತಿದ್ದೇನೆ. ಮಾನ್ಯ ಚಂದ್ರೇಗೌಡರ, ಬಹುಶ; ತಾವು ಇಂಥ ವರದಿಯನ್ನು ನಂಬುತ್ತೀರಿ ಎಂದು ನಾನು ತಿಳಿದುಕೊಂಡಿರುತ್ತೇನೆ. ನಂಬುತ್ತೀರೋ ಇಲ್ಲವೋ ಎಂಬ ಬಗ್ಗೆ ತಾವು ಹೇಳಬೆಕು. ನಂಬುತ್ತೀರಿ ತಾನೇ? ನೀವು ವರದಿಯನ್ನು ನಂಬುತ್ತೀರಿ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಒಂದು ಜೋಕ್ ಹೇಳುತ್ತೇನೆ. ಈಗ ನಮ್ಮ ಪಾಟೀಲರು ವಚನಗಳನ್ನು ಹೇಳುತ್ತ ಇದ್ದ ಸಂದರ್ಭದಲ್ಲಿ ನಾವೆಲ್ಲಾ ಕೇಳಿ ನಮಗೆ ಸಂತೋಷವಾಯಿತು. ಭಾಷಣ ಮಾಡ್ರಿ ಎಂದರೆ ಅವರು ವಚನಕ್ಕೇ ಹೋದರು. ನಾವು ಬೆಳಿಗ್ಗೆ ಹೊತ್ತು ಟಿ.ವಿ.ಯಲ್ಲಿ ಸರ್ವಜ್ಞನ ವಚನಗಳನ್ನು ಕೇಳುತ್ತಿರುತ್ತೇವೆ. ನಮ್ಮ ಎಸ್.ಎಸ್. ಪಾಟೀಲರು ಬಹುಶಃ ಅಲ್ಲಿಗೆ ಬಂದರೆ ಅದ್ಭುತವಾಗಿ ಅವರಿಗಿಂತ ಚೆನ್ನಾಗಿ ವಚನಗಳನ್ನು ಹೇಳಬಹುದು ಎಂದು ಕಾಣುತ್ತದೆ. ಟಿ.ವಿ.ಯಲ್ಲಿ ವಚನ ಹೇಳುವಂಥವರು ನಮ್ಮ ಡಿ.ಬಿ. ಚಂದ್ರೇಗೌಡ ಮತಕ್ಷೇತ್ರದವರು. ಹಿರೇಮಗಳೂರು ಸ್ಥಳದ ಕಣ್ಣನ್‌ರವರು ವಚನ ಹೇಳುತ್ತಾರೆ. ಅವರಿಗಿಂತಲೂ ಕೂಡ ಚೆನ್ನಾಗಿ ಪಾಟೀಲರು ಹೇಳುತ್ತಾರೆ ಎಂದು ನನಗೆ ಅನ್ನಿಸುತ್ತದೆ. ಇದಲ್ಲದೆ. ನೀವೇನು ವಚನ ಹೇಳುತ್ತಿದ್ದಿರಿ ಅದನ್ನು ಕೇಳಿ ನನಗೂ ಒಂದು ಹೊಸ ವಚನ ಹೇಳಬೇಕು ಎಂದೆನಿಸುತ್ತಿದೆ. ಅಲ್ಲಿದ್ದವರು ಇಲ್ಲಿದ್ದಾಗ ಮಾಡಿದ್ದು ಅದೇ, ಇಲ್ಲಿದ್ದವರು ಅಲ್ಲಿ ಹೋದಾಗ ವೇದ ಹೇಳಿದ್ದು ಅದೇ ಕೇಳು ಸರ್ವಜ್ಞ!

ಶ್ರೀ ಎಸ್.ಎಸ್. ಪಾಟೀಲ್:- ಯಾರಿದ್ದು ಮಾಡುವುದು ಅದೇ. ಹೇಳು ಸರ್ವಜ್ಞ. ಮಾನ್ಯ ಉಪಾಧ್ಯಕ್ಷರೆ, ಇವರು ವರದಿಯನ್ನು ನಂಬಬೇಕೆಂದು ನಾನು ಹೇಳುತ್ತೇನೆ. ಆದರೆ ಅವರಿಗೆ ಅದನ್ನು ಹೇಳಲು ಧೈರ್ಯವಿಲ್ಲವಷ್ಟೆ. ಮಾನ್ಯ ಚಂದ್ರೇಗೌಡರೆ, ನಂಬರ್ ಒನ್ ಎಂದು ನಿಮ್ಮ ಪಕ್ಷವನ್ನು ಹೇಳಿ ಬರೆದಾಗ ನೀವು ಆ ಸರ್ವೆ ರಿಪೋರ್ಟ್‌ನ್ನು ನಂಬಿದಿರಿ ತಾನೆ? ನಂಬಿದಿರಿ. ಹಾಗಿರುವಾಗ ಅವೋತ್ತು ಸರ್ವೆ ರಿಪೋರ್ಟ್ ನಂಬಿದವರು ಇವತ್ತು ಏಕೆ ನಂಬುವುದಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆದ್ದರಿಂದ ನಾನು ಇದರ ಬಗ್ಗೆ ಇಷ್ಟನ್ನು ಹೇಳಿ ಈಗಾಗಲೇ ನಡೆದಿರುವ ಹುಮ್ನಾಬಾದ್ ಚುನಾವಣೆ ಬಗ್ಗೆ ದಯವಿಟ್ಟು ಇವರು ಕೊಚ್ಚಿಕೊಳ್ಳುವುದನ್ನು ಬಿಡಬೇಕು ಎಂದು ಹೇಳುತ್ತೇನೆ. ಏಕೆಂದರೆ ಅದೇ ಹುಚ್ಚುತನ ಇಟ್ಟುಕೊಂಡು, ಅದೇ ಮದವೇರಿದ ಗಜ ಹೊರಟಂತೆ ಹೊರಟರೆ ಮುಂದೆ ನಿಶ್ಚಿತವಾಗಿ ತಮಗೆ ಜನ ಪೆಟ್ಟು ಕೊಡುತ್ತಾರೆ ಎನ್ನುವಂಥ ಮಾತನ್ನು ಹೇಳುತ್ತೇನೆ. ಇನ್ನು ತಾವು ಸರ್ಕಾರದಲ್ಲಿ ದುಡ್ಡಿಲ್ಲ, ಬಹಳ ತ್ರಾಸ್ ಇದೆ ಎನ್ನುವ ಮಾತನ್ನು ಹೇಳುತ್ತೀರಿ. ಹೇಳುತ್ತೀರಿ ತಾನೆ? ದುಡ್ಡು ಇದೆಯೋ ನಿಮ್ಮ ಹತ್ತಿರ? ಇಲ್ಲ. ಕುಮಾರ್ ಬಂಗಾರಪ್ಪನವರು ಇಲ್ಲಿಯೇ ಇದ್ದಾರೆ, ಕೇಂದ್ರ ಸರ್ಕಾರದವರು 37 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು, ಇವರೇನು ಅದರಲ್ಲಿ ಪಗಾರ ಕೊಟ್ಟರೋ, ಏನು ಮಾಡಿದರೋ ಅದು ತಿಳಿಯಲೇ ಇಲ್ಲ. 37 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಜೂನ್ ತಿಂಗಳಿನಲ್ಲಿ ಬಿಡುಗಡೆ ಮಾಡಿದರು. ಬಹುಶಃ ನೀವು ಕೇಂದ್ರ ಸರ್ಕಾರವನ್ನು ನೆನಸಬೇಕಾಗುತ್ತದೆ. ಉಪಾಧ್ಯಕ್ಷರೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಸಹಾಯ ಮಾಡಿರುವುದು ಇತಿಹಾಸದಲ್ಲಿಯೆ ಇಲ್ಲ. ಇತಿಹಾಸದಲ್ಲಿಯೇ ಇಲ್ಲ. ಬರ ಇದ್ದಾಗ ನಾನೇ ಪಿ.ವಿ. ನರಸಿಂಹರಾವ್ ಇದ್ದಾಗ ಹೋಗಿದ್ದೆ, ಆಗ ಏನು ಒಂದು ಅರವತ್ತು ಕೋಟಿ ರೂಪಾಯಿ ಕೊಡಬೇಕಾಗಿತ್ತೋ ಅಷ್ಟನ್ನೇ ಕೊಟ್ಟರೆ ಹೊರತು ಬೇರೆ ಏನೇನೂ ಕೊಡಲಿಲ್ಲ. ಆದರೆ ಈಗಿನ ಕೇಂದ್ರ ಸರ್ಕಾರ ಸಾಕಷ್ಟು ಕೊಟ್ಟಿದ್ದಾರೆ, ಇನ್ನೂ ಕೊಡುತ್ತಿದ್ದಾರೆ. ದುರ್ದೈವದಿಂದ ಅದನ್ನು ಕೂಡ ತಾವು ಬಳಸಿಕೊಳ್ಳುವುದಿಲ್ಲ ಎಂದು ನಾನು ಇಲ್ಲಿ ಹೇಳುತ್ತಿದ್ದೇನೆ. ನೀವು ನೇಮಕ ಮಾಡಿದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರು ಆದ ಹಾರ್ನಳ್ಳಿ ರಾಮಸ್ವಾಮಿಯವರು ಏನು ಹೇಳಿದ್ದಾರೆಂದರೆ "ಆಡಳಿತ ಸುಧಾರಣೆಗೆ ಮಂತ್ರಿಗಳ ಅಡ್ಡಗಾಲು ಎಂದಿದ್ದಾರೆ." ಯಾರು ಆ ಮಂತ್ರಿಗಳು ಎನ್ನುವ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಏಕೆಂದರೆ ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿರುವುದರಿಂದ ಇದನ್ನು ಗಮನಿಸಬೇಕಾಗುತ್ತದೆ. ಅಡ್ಡಗಾಲು ಹಾಕುತ್ತಿರುವ ಮಂತ್ರಿಗಳು ಯಾರು ಎಂಬ ವಿಷಯ ಬಯಲಿಗೆ ಬರಬೇಕಾಗುತ್ತದೆ. ಅವರು ಚಿತ್ರದುರ್ಗದಲ್ಲಿ ಸುದ್ದಿಗಾರರೊಂದಿಗೆ ಏನು ಮಾತನಾಡಿದರು ಎನ್ನುವ ಬಗ್ಗೆ ಹೇಳಿ ಬಿಡುತ್ತೇನೆ. ಹಾರ್ನಳ್ಳಿ ರಾಮಸ್ವಾಮಿಯವರು ಸುದ್ದಿಗಾರರೊಡನೆ ಮಾತನಾಡುತ್ತಾ "ಆಯೋಗ ನೀಡುವ ವರದಿಯು ಅನುಷ್ಠಾನಗೊಳ್ಳುವಲ್ಲಿ ಮುಖ್ಯಮಂತ್ರಿಗಳು ಉತ್ಸುಕ ಹೊಂದಿದ್ದಾರೆ. ಆದರೆ ಇದಕ್ಕೆ ಅಡ್ಡಿ ಪ್ರಜಾಪ್ರಭುತ್ವದ ವ್ಯವಸ್ಥೆಯೇ ಇದೆ ಎಂದು ಹೇಳಿದರು, ಆಡಳಿತ ಪಾರದರ್ಶಕವಾಗಿ ಹಾಗೂ ಚುರುಕಾಗಿ ನಡೆಯಬೇಕೆಂದು ಆಯೋಗದ ಆಶಯ, ದೂರದೃಷ್ಟಿತ್ವದ ಕೊರತೆಯೇ ಅನುಮಾನಕ್ಕೆ ಅಡ್ಡಿ ಎಂದು ವಿಷಾಧಿಸಿದರು, ಆಯೋಗದ ಸಲಹೆಗಳನ್ನು ಕೇರಳ, ಛತ್ತೀಸ್‌ಗಡ ಹಾಗೂ ಮತ್ತಿತರ ರಾಜ್ಯಗಳು ಆಚರಣೆಗೆ ತರುತ್ತಿವೆ, ಪ್ರಧಾನ ಮಂತ್ರಿಗಳೂ ಕೂಡ ಆಯೋಗದ ಸಲಹೆಗಳನ್ನು ಕುರಿತು ಆಸಕ್ತಿ ವಹಿಸಿದ್ದಾರೆ. ಆದರೆ ರಾಜ್ಯದಲ್ಲಿ ಇದು ಸಂಪೂರ್ಣ ಅನುಷ್ಠಾನ ಸಾಧ್ಯವಾಗದಿರುವುದು

ದುರಂತ ಎಂದು ಹೇಳಿದರು. ಮಾಹಿತಿ ತಂತ್ರಜ್ಞಾನದ ಹಿನ್ನಲೆಯಲ್ಲಿ ನಾಲ್ಕನೇ ದರ್ಜೆಯ ನೌಕರರು ಏಕೆ ಬೇಕು? ಗುತ್ತಿಗೆ ಆಧಾರದಲ್ಲಿ ನೌಕರಿ ನೀಡಿದರೆ ಸಾಲದೆ? ನೈರ್ಮಲ್ಯ ಮತ್ತಿತರ ಕಾರ್ಯಕ್ರಮಗಳನ್ನು ಖಾಸಗಿಯವರಿಗೆ ವಹಿಸುವುದು ಸೂಕ್ತವಲ್ಲವೇ ಎಂಬ ಪ್ರಶ್ನೆಗಳನ್ನು ರಾಮಸ್ವಾಮಿಯವರು ಎತ್ತಿದರು. ರಾಜ್ಯದ ಆರು ಲಕ್ಷ ನೌಕರರಲ್ಲಿ ಆರರಲ್ಲಿ ಒಂದು ಅಂಶ ಕಡಿಮೆ ಮಾಡಬೇಕು ಎಂದಿದ್ದಾರೆ. ಇಲ್ಲಿ ಗಮನ ಕೊಡಿ ತಾವು. ಗುತ್ತಿಗೆ ಆಧಾರದಲ್ಲಿ ನೌಕರಿ ನೀಡಬೇಕು. ಆಗ ಮಾತ್ರ ಸರ್ಕಾರಕ್ಕೆ ಆರ್ಥಿಕ ಹೊರೆ ಕಡಿಮೆ ಆಗುತ್ತದೆಂದು ಅಭಿಪ್ರಾಯ ಪಟ್ಟರು. ವಿಧಾನ ಸೌಧವನ್ನು ಸ್ವಚ್ಛಗೊಳಿಸಲು 605 ಜನ ನೌಕರರು ಬೇಕೆ? ಇದನ್ನೂ ಅವರು ಹೇಳುತ್ತಾರೆ. ಇದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ಆಯೋಗವನ್ನಾದರೂ ಏಕೆ ನೇಮಿಸಬೇಕು. ಸ್ವಚ್ಛಗೊಳಿಸುವ ಇಂಥ ಕೆಲಸವನ್ನು ಖಾಸಗಿಯವರಿಗೆ ವಹಿಸಿಕೊಟ್ಟರೆ ತಪ್ಪೇನಿದೆ ಎಂದು ಕೇಳಿದರು. ಅಧಿಕಾರಿಗಳಿಗೆ ನೀಡುವ ವಾಹನವನ್ನು ವಾಪಸ್ಸು ಪಡೆದು ಬಾಡಿಗೆ ವಾಹನ ವ್ಯವಸ್ಥೆ ಮಾಡಬೇಕು. ಮಾಹಿತಿ ತಂತ್ರಜ್ಞಾನದಲ್ಲಿ ಮುಂದಿರುವ ಪ್ರಸಕ್ತ ಸಂದರ್ಭದಲ್ಲಿ ನಾಲ್ಕನೇ ದರ್ಜೆ ನೌಕರಿ ಏಕೆ ಬೇಕು ಎಂದು ಪ್ರಶ್ನಿಸಿದರು. ಶಿಕ್ಷಣ ಇಲಾಖೆಯಲ್ಲಿ ಹೆಚ್ಚುವರಿ ಹುದ್ದೆಗೆ ಕತ್ತರಿ ಹಾಕಬೇಕು, ನೌಕರರ ವರ್ಗಾವಣೆಗೆ ಕಟ್ಟುನಿಟ್ಟಿನ ಕಾನೂನು ರೂಪಿಸಬೇಕು ಎಂಬುದೂ ಸೇರಿದಂತೆ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ನೀಡಿದೆ. ಇವುಗಳನ್ನು ಕಾಲಮಿತಿ ಹಾಕಿಕೊಂಡು ಅನುಷ್ಠಾನಗೊಳಿಸಿದರೆ ಮಾತ್ರ ಅದರ ಸಮಗ್ರ ಅಭಿವೃದ್ಧಿ ಸಾಧ್ಯಾವಗುತ್ತದೆಂದು ಹೇಳಿದರು. ರಾಜ್ಯದ ಹಣಕಾಸು ಪರಿಸ್ಥಿತಿ ಗಂಭೀರವಾಗಿದೆಯೆಂದು ಹೇಳಿದ್ದಾರೆ. ಇದನ್ನು ನಾವು ಹೇಳುತ್ತಿಲ್ಲ. ನಿಮ್ಮ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರೇ ಈ ಮಾತನ್ನು ಹೇಳುತ್ತಿದ್ದಾರೆ. "ರಾಜ್ಯದ ಆರ್ಥಿಕ ಸ್ಥಿತಿ ಗಂಭೀರವಾಗಿದ್ದು 2004ನೇ ಇಸವಿಯ ಹೊತ್ತಿಗೆ ಸರ್ಕಾರಕ್ಕೆ ಬರುವ ಆದಾಯ ಸಂಬಳ ಮತ್ತು ಬಡ್ಡಿಗೆ ಸಾಕಾಗುವುದಿಲ್ಲವೆಂದಿದ್ದಾರೆ." ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಮಹತ್ವ ಇರತಕ್ಕಂಥದ್ದಾಗಿದೆ. 2004ನೇ ಇಸವಿಯ ಹೊತ್ತಿಗೆ ಎಂದಿದ್ದಾರೆ, ಬಹುಶ! ನೀವು ಹೋಗಿರುತ್ತೀರಿ, ಸರ್ಕಾರದ ವರಮಾನ ಸಾಲದ ಬಡ್ಡಿಯ ಕಂತಿಗೆ ಸಾಲುವುದಿಲ್ಲವೆಂದು ರಾಮಸ್ವಾಮಿಯವರು ಹೇಳುತ್ತಿದ್ದಾರೆ. ನಾವು ಇದನ್ನು ಹೇಳಿಲ್ಲ. ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರೇ ಈ ಮಾತನ್ನು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ (ಬಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿರುವುದೇ ಬ್ರಹ್ಮವಾಕ್ಯವೇ? ಆಯೋಗದ ಅಧ್ಯಕ್ಷರು ಯಾರಿದ್ದಾರೆ ಅವರ ಬಗ್ಗೆ ನಮಗೆ ಗೌರವ ಇದೆ. ಅವರು ಕೆಲವು ಸಜೆಶನ್ಸ್‌ಗಳನ್ನು ಕೊಟ್ಟಿದ್ದಾರೆ. ಅವರು ಹೇಳಿರುವುದೆಲ್ಲವೂ ಬ್ರಹ್ಮವಾಕ್ಯವೆ?

ಶ್ರೀ ಎಸ್.ಎಸ್. ಪಾಟೀಲ್:- ಅವರು ಒಳ್ಳೆಯ ವರದಿ ಕೊಟ್ಟಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:- ಆ ವರದಿ ಬಗ್ಗೆ ನಾನು ಡಿಬೇಟ್ ಮಾಡ್ತಿಲ್ಲ. ಅವರು ಬಹಳ ಬುದ್ಧಿವಂತರು. ಅವರು ವರದಿ ಕೊಟ್ಟಿದ್ದಾರೆ. ಅದರಲ್ಲಿ ಕೆಲವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇನ್ನು ಕೆಲವನ್ನು ತರುವುದಕ್ಕೆ ಪ್ರಯತ್ನ ಮಾಡಬಹುದು. 2004 ನೇ ಇಸವಿಯ ಹೊತ್ತಿಗೆ ಹಾಗಾಗುತ್ತದೆ, ಹೀಗಾಗುತ್ತದೆ ಎಂದಿದ್ದಾರೆ ಎಂದು ಹೇಳಿದರೆ ಹೇಗೆ? ಅದೇನು ಭವಿಷ್ಯವಾಣಿಯೇನು? ನೋಡಿ ಎಸ್. ಎಸ್. ಪಾಟೀಲರೇ, ಮೊನ್ನೆ ಯೂನಿಯನ್ ಫೈನಾನ್ಸ್ ಮಿನಿಸ್ಟರ್ ಬಜೆಟ್ ಪ್ರೆಸೆಂಟ್ ಮಾಡಿದರು.

ಶ್ರೀ ಎಸ್.ಎಸ್. ಪಾಟೀಲ್:- ನಾನು ಈ ಮಾತನ್ನು ಹೇಳುತ್ತಿಲ್ಲ. ಆಡಳಿತ ಸುಧಾರಣಾ ಅಯೋಗದ ಅಧ್ಯಕ್ಷರೇ ಹೇಳಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ:- ನಾವೇ ನೇಮಕ ಮಾಡಿರುವುದು. ಅವರ ಬಗ್ಗೆ ನಮಗೆ ಗೌರವ ಇದೆ. ನಾವೇ ಅಪಾಯಿಂಟ್ ಮಾಡಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀವು ಏಕೆ ತಲೆ ಕೆಡಿಸಿಕೊಳ್ಳುತ್ತೀರಿ? ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಂಜುಂಡಪ್ಪನವರ ವರದಿ, ಮೊಯಿಲಿ ಸಾಹೇಬರ ವರದಿ, ಹಾರ್ನಳ್ಳಿ ರಾಮಸ್ವಾಮಿಯವರ ವರದಿ, ಇವ್ಯಾವುದರ ಬಗ್ಗೆಯೂ ನಾವು ತಲೆ ಕೆಡಿಸಿಕೊಂಡಿಲ್ಲ. ಇವರೇ ಗಿಳಿ ಹೇಳಿದ ಹಾಗೆ ಪ್ರತಿ ರಾಜ್ಯಪಾಲರ ಭಾಷಣದಲ್ಲೂ ಅವರ ಹೆಸರುಗಳೆಲ್ಲವನ್ನೂ ಹೇಳಿದ್ದಾರೆ. ಮಾಡಿದ್ದೇವೆ, ಮಾಡಿದ್ದೇವೆ, ಎಂದು ಅಂತೇಳಿ ಅದಕ್ಕೇ ಅವರು ಪ್ರಸ್ತಾಪ ಮಾಡಿದ್ದಾರೆ.

4.40 ಪಿ.ಎಂ

ಶ್ರೀ ಆರ್.ವಿ.ದೇಶಪಾಂಡೆ:- ನೋಡಿ, ಪ್ರಾಮಾಣಿಕವಾಗಿ ಅವರ ಅಭಿಪ್ರಾಯ ಕೊಟ್ಟಿದ್ದಾರೆ. ಅವರ ಬಗ್ಗೆ ನಮಗೆ ಗೌರವ ಇದೆ. ಅವರು ಒಳ್ಳೆಯ ವರದಿ ಕೊಟ್ಟಿದ್ದಾರೆ. ಕೆಲವು ವಿಚಾರಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇನ್ನು ಕೆಲವು ತರಬೇಕಾಗಿದೆ. ತಾವು ಬಹಳ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ಒಂದೇ ಸಲ ಎಲ್ಲಾ ಮಾಡುವುದಕ್ಕೆ ಸಾಧ್ಯವಿದೆಯಾ? ಇನ್ನು ಎರಡನೆಯದಾಗಿ, ತಾವು ವಿಚಾರ ಮಾಡಬೇಕು. ಇವತ್ತು ಈ ರಾಜ್ಯಸರ್ಕಾರಗಳು ಇವೆಯಲ್ಲಾ, ಎಲ್ಲಾ ರಾಜ್ಯಸರ್ಕಾರಕ್ಕಿಂತ ಮಹಾರಾಷ್ಟ್ರ ಒಂದು ಕಾಲದಲ್ಲಿ one of the finest financially managed states. ಆದರೆ ಇವತ್ತು ಪರಿಸ್ಥಿತಿ ಏನಿದೆ, ಕರ್ನಾಟಕ ನೂರು ಪಟ್ಟು ಬೆಟರ್ ಇದೆ. What is the position of Andhra ಹಾಗಾಗಿ ಯೂನಿಯನ್ ಫೈನಾನ್ಸ್ ಮಿನಿಸ್ಟರ್ ಏನು ಹೇಳಿದರು? State Governments high servicing debts ನಲ್ಲಿ ಇವೆ ಅದನ್ನು ಕಡಿಮೆ ಮಾಡಿ. there are certain ways to do it. ಹಾಗಾಗಿ ಎಲ್ಲ ರಾಜ್ಯಸರ್ಕಾರಗಳು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದುದರಿಂದ ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಹೇಳುತ್ತಿರುವುದು ಅವರ ಒಳ್ಳೆಯ ಸಲಹೆಗಳನ್ನು ರಾಜ್ಯ ನಡೆಸಬೇಕಾದರೆ ನಾವು ಸ್ವೀಕಾರ ಮಾಡಬೇಕಾಗುತ್ತದೆ. ನೀವೆ ಮಾಡಿದಂತಹ ಅಯೋಗ. ಮಹಾಜನ್ ವರದಿಗೆ ನಮ್ಮ ಕರ್ನಾಟಕದವರು ವಿರೋಧ ಮಾಡಿದ್ದೆವು. ಆದರೆ ಮಹಾರಾಷ್ಟ್ರದವರು ಅವರೇ ಮಾಡಿ ಆ ವರದಿಯನ್ನು ಅವರು ಒಪ್ಪುವುದಕ್ಕೆ ತಯಾರಿಲ್ಲ. ಆ ರೀತಿಯಾಗಿ ನೀವು ಇಲ್ಲಿ ಮಾಡುತ್ತಿದ್ದೀರಿ. ಅದೇ ಮಹಾಜನ್ ವರದಿಯನ್ನು ನಾವು ಒಪ್ಪಿಕೊಳ್ಳುತ್ತೇವೆಂದು ಒಪ್ಪಿಕೊಂಡರೂ ಅದನ್ನು ಮಹಾರಾಷ್ಟ್ರದವರು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಅದೇ ರೀತಿ ನೀವು ನೇಮಿಸಿದಂತಹ ಆಯೋಗದವರು ಒಂದು ವರದಿ ಕೊಟ್ಟರೆ ಅದನ್ನು ತಾವು ಒಪ್ಪುವುದಕ್ಕೆ ತಯಾರಿಲ್ಲ. ಇದು ದುರ್ದೈವದ ಸಂಗತಿ. ಹಾಗಾದರೆ ಅದನ್ನು ಏಕೆ ಮಾಡಬೇಕಾಗಿತ್ತು? ಅವರು ಅಭ್ಯಾಸ ಮಾಡಿ ಮಾಡಿರುತ್ತಾರೆ. ಇದನ್ನು ಮುಂದೆ ಸ್ವಲ್ಪ ತಿಳಿದುಕೊಳ್ಳಿ. 2004ರ ಹೊತ್ತಿಗೆ ಸರ್ಕಾರದ ಆದಾಯ ಸಂಬಳ ಮತ್ತು ಬಡ್ಡಿಗೆ ಸಾಕಾಗುವುದಿಲ್ಲ. 2004 ರ ವೇಳೆಗೆ ಬಡ್ಡಿ 19,500 ಕೋಟಿ ರೂಪಾಯಿಯಾಗುತ್ತದೆ. ಸಾಲದ ಹೊರೆ 40 ಸಾವಿರ ಕೋಟಿ ರೂಪಾಯಿ ಆಗಲಿದೆ. ಎಲ್ಲಿಂದ ನೀವು ಸಂಬಳ ಕೊಡುತ್ತೀರಿ.?

ಶ್ರೀ ಆರ್.ವಿ.ದೇಶಪಾಂಡೆ:- ಇಂತಹ ಭಾರ ಇಟ್ಟುಕೊಂಡು ನೀವು ಈ ಜಾಗಕ್ಕೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದು ಸರಿಯೋ ತಪ್ಪೋ ವಿಚಾರ ಮಾಡಿ.

ಶ್ರೀ ಎಸ್. ಎಸ್. ಪಾಟೀಲ್:- ತಮ್ಮ ಹಣೆಬರಹ ಆದಾಗಿತ್ತು. ಪಾಪ ಆಗ ನಮ್ಮ ಜೊತೆ ನೀವೂ ಇದ್ದಿರಿ.

ಶ್ರೀ ಆರ್.ವಿ.ದೇಶಪಾಂಡೆ:- ಈ ಭಾರ ಇಟ್ಟುಕೊಂಡು ನೀವು ಏಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಎಸ್. ಎಸ್. ಪಾಟೀಲ್:- ರಾಜ್ಯ ಹಾಳಾಗಿ ಹೋಗುತ್ತದೆ ಎಂದು ಜನ ನಮಗೆ ಹೇಳುವುದಕ್ಕೆ ಹತ್ತಿದ್ದಾರೆ. ನಿಮಗೆ ಇನ್ನು ಬುದ್ಧಿ ಬರುವುದಿಲ್ಲ, ಜನ ನಮಗೆ ಕೂಡಿಕೊಳ್ಳಿರಿ ಕೂಡಿಕೊಳ್ಳಿರೇ ಎಂದು ಎಲ್ಲಿ ಹೋದರೂ ಕೂಡ ಹೇಳುತ್ತಿದ್ದಾರೆ. ಮುಂದೆ ಪಗಾರ ಇಲ್ಲದ ಹಾಗೆ ಆಗುತ್ತದೆ. ಎಲ್ಲಾ ಬಂದ್ ಆಗಿ ಹೋಗುತ್ತದೆ. ಕುಡಿಯುವುದಕ್ಕೆ ನೀರಿಲ್ಲ, ವಿದ್ಯುತ್ ಇಲ್ಲ, ಈ ಎಲ್ಲಾ ದೃಷ್ಟಿಯಿಂದ ಜನ ನಮಗೆ ಹೇಳುವುದಕ್ಕೆ ಹತ್ತಿದ್ದಾರೆ. ಒಂದು ರೀತಿಯಲ್ಲಿ ಬರದ ತೊಂದರೆ ಇದೆ. ಅದು ನಮಗೆ ಗೊತ್ತಿದೆ, ಆದರೂ ಕೂಡ ಈ ರಾಜ್ಯದ ಹಿತದೃಷ್ಟಿಯಿಂದ..

ಶ್ರೀ ಎಸ್. ಪಿ. ಮುದ್ದಹನುಮೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಮಗೆ ದುಃಖ ಏನೆಂದರೆ ನೀವು ಪಾಪ, ಸಮರ್ಥರಿದ್ದೀರಿ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಐದು ವರ್ಷ ನಿಮಗೇನಾದರೂ ಅವಕಾಶ ಕೊಟ್ಟರೆ, ಐದು ವರ್ಷ ಇಲ್ಲಿ ಕುಳಿತುಕೊಂಡು ಗುದ್ದಾಡಿಬಿಡುತ್ತೀರಿ. ಮತ್ತು ಐದು ವರ್ಷ ಸರಿಮಾಡಿಕೊಳ್ಳುವುದಕ್ಕೆ ಅಲ್ಲಿ ಹೋಗಿ ಕುಳಿತುಕೊಳ್ಳುತ್ತೀರಿ. ರಾಜ್ಯದಲ್ಲಿ ನೀವು ಮಾಡಿದ ಸಾಧನೆ ಏನು? ರಾಜ್ಯದ ಉದ್ಧಾರಕ್ಕೋಸ್ಕರ ನಿಮ್ಮ ಕಾರ್ಯಕ್ರಮಗಳೇನು? ಐದು ವರ್ಷ ಗುದ್ದಾಡುವುದು, ಐದು ವರ್ಷ ಸರಿ ಮಾಡಿಕೊಳ್ಳುವುದು ಆಗಿ ಬಿಟ್ಟರೆ.

ಶ್ರೀ ಎಸ್. ಎಸ್. ಪಾಟೀಲ್:- ನಮಗೆ ಜನ ಗುದ್ದಾಡಿದರೂ ಒಳ್ಳೆಯ ಕೆಲಸ ಮಾಡುತ್ತಿದ್ದರು, ಆದರೆ ಇವರು ಪಂಡಿತರು ಒಳಗೊಳಗೆ ಗುದ್ದಾಡಿ ರಾಜ್ಯವನ್ನೆಲ್ಲಾ ಹಾಳು ಮಾಡುವುದಕ್ಕೆ ಹತ್ತಿದ್ದಾರೆ ಎಂದು ಹೇಳುವುದಕ್ಕೆ ಹತ್ತಿದ್ದಾರೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ:- ನಾವು ಗುದ್ದಾಡಿದರೂ ನಮ್ಮಲ್ಲಿ ಬಹಳಷ್ಟು ಜನ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಂಬಿಕೆ ಇರುವವರಿದ್ದಾರೆ. ಆದರೆ ನಿಮ್ಮಲ್ಲಿ ಪ್ರಜಾತಂತ್ರ ಇಲ್ಲ. ಹೈಕಮಾಂಡ್‌ನಿಂದ ಒಂದು ಸಣ್ಣ ಲೆಟರ್ ಬಂದರೂ ಕೂಡ ಒಬ್ಬರೂ ಬಾಯಿ ಬಿಡುವುದಿಲ್ಲ. ಪ್ರಜಾತಂತ್ರದಲ್ಲಿ ನಂಬಿಕೆ ಇರುವಂತಹ ಜನ ನಮ್ಮಲ್ಲಿ ಇದ್ದು, ನಾವು ಗುದ್ದಾಡುತ್ತೇವೆ ಹಾಗೂ ಒಂದಾಗುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಹೈಕಮಾಂಡ್ ಅಲ್ಲ, ಅದು ಶಿಸ್ತು.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ:- ಶಿಸ್ತು ಬರಿ ಹೈಕಮಾಂಡ್‌ನಿಂದ ಬರುವುದಿಲ್ಲ. ಅದು ನಿಮ್ಮಿಂದ ಬರಬೇಕು. ನೀವು ಅದನ್ನು ಹೇಳಬೇಕು. ನಾನು ಮಾತನಾಡುವಾಗ ಎಲ್ಲಾ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:-ಮಾನ್ಯ ಉಪಾಧ್ಯಕ್ಷರೆ, ಅವರು ನಮ್ಮ ವರದಿಯಲ್ಲಿ ಈ ರೀತಿ ಪ್ರಸ್ತಾಪಿಸಿದ್ದಾರೆ. ಸಾಲದ ಹೊರೆ 40 ಸಾವಿರ ಕೋಟಿ ರೂಪಾಯಿ ಆಗಲಿದೆ: ಕಳೆದ ವರ್ಷ ತೆರಿಗೆ ಸುಮಾರು 10 ಸಾವಿರ ಕೋಟಿ ರೂಪಾಯಿ ಆಗಿದೆ. ಈ ಸಾಲಿನಲ್ಲಿ ಇದರ ಪ್ರಮಾಣ ಇನ್ನು ಒಂದೆರಡು ಕೋಟಿ ಜಾಸ್ತಿಯಾಗಬಹುದು. ವಿಶ್ವ ಬ್ಯಾಂಕ್ ಆರ್ಥಿಕ ನೆರವಿನಿಂದ

ಪ್ರಸ್ತುತ ಅಭಿವೃದ್ಧಿ ಕೆಲಸ ಚೆನ್ನಾಗಿ ನಡೆಯುತ್ತಿದೆ. ಈ ಹಣಕಾಸಿನ ಭಾರ ಕಡಿಮೆ ಮಾಡದೆ ಹೋದರೆ ಆಡಳಿತದ ಮೇಲೆ ಏಳು ಬೀಳುತ್ತದೆ. ಫಲಶ್ರುತಿ ದೊರೆಯಬಲ್ಲುದು ಎಂದು ಹೇಳಿದರೆ. ಇದು ಸ್ಪಷ್ಟವಾಗಿ ಅವರೇ ಹೇಳುತ್ತಿದ್ದಾರೆ. ತಾವು ದಯವಿಟ್ಟು ಎಚ್ಚರದಿಂದ ನೋಡಿಕೊಳ್ಳಿ. ನೀವು ಬರೀ ಅವರು ನಮ್ಮ ವಿರೋಧ ಹೇಳುತ್ತಾರೆ ಎಂದು ಹೇಳುವುದು ಅಲ್ಲ. ಮಾನ್ಯ ಬಿ.ಎಸ್. ಪಾಟೀಲ್ ಸಾಹೇಬರು ಇಲ್ಲ. ನಮ್ಮ ಗೆಳೆಯರಾದ ಮಾರ್ಕೆಟಿಂಗ್ ಮಂತ್ರಿಗಳು ಇದ್ದುದ್ದು ಇದ್ದಹಾಗೆ ಹೇಳುತ್ತಾರೆ. ಹಾಗೆ ಹೇಳಬಾರದು, ಅದು ಮುಜುಗರವಾಗುತ್ತದೆ. ಕ್ಯಾಬಿನೆಟ್ ಮಂತ್ರಿಗಳ ಮಾತನ್ನು ಒಬ್ಬ ಡಿ.ಸಿ. ಕೇಳುವುದಿಲ್ಲವೆಂದರೆ ನಿಮ್ಮ ಪರಿಸ್ಥಿತಿ ಏನು? ಮಾನ್ಯ ಮುಖ್ಯಮಂತ್ರಿಗಳ ಪರಿಸ್ಥಿತಿ ಏನು? ಏಕೆ ಕೇಳುವುದಿಲ್ಲ? ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇವೆ ನಿಮಗೆ, ಸರ್ಕಾರಿ ನೌಕರುದಾರರ ಒಂದು ಸರ್ಕಾರ ಇದೆ. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರದೇ ಒಂದು ಸರ್ಕಾರ ಇದೆ. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರದೇ ಒಂದು ಸರ್ಕಾರ ಇದೆ. ಅವರದೇ ಒಂದು ಸರ್ಕಾರ. ಇದನ್ನು ನೋಡಿದರೆ ಇಲ್ಲಿ ನೀವು ಗಾಬರಿಯಾಗುತ್ತೀರಿ. ನನಗೆ ಒಂದು ಟಪಾಲು ಬಂದಿದೆ, ಯೂರೋ ಕಳುಹಿಸಿಕೊಟ್ಟಿದ್ದಾರೆ. ದಿ: 17.02.03 ರಂದು ಹತ್ತು ಗಂಟೆಗೆ ಆಳಂದದಲ್ಲಿ, ಗುರುಭವನದ ಆವರಣದಲ್ಲಿ ನೌಕರರ ಬಹಿರಂಗ ಸಭೆ. ಒಂದು ಟೂರ್ ಪ್ರೋಗ್ರಾಂ ಕಳುಹಿಸಿದ್ದಾರೆ. ತಾವು ಅದನ್ನು ಯಾರೂ ನೋಡಿರುವುದಿಲ್ಲ. ಆ ಟೂರ್ ಪ್ರೋಗ್ರಾಂ ನೋಡಿ, ಅಲ್ಲಿನ ಡಿಸಿಯವರು ಏನು ಮಾಡುತ್ತಿದ್ದರು. ಇದು ಗಾಬರಿ ಹುಟ್ಟಿಸುವಂತಾದ್ದು. ನೀವು ಸರ್ಕಾರ ಹೇಗೆ ನಡೆಸುತ್ತೀರಿ? ಇದು ಕಚೇರಿ ಆದೇಶ. "ದಿನಾಂಕ 17.02.03 ರಂದು ಸನ್ಮಾನ್ಯ ಸಿಪ್ಪೇಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು, ಕೇಂದ್ರ ಸಂಘದ ಪದಾಧಿಕಾರಿಗಳು ಮತ್ತು ಸನ್ಮಾನ್ಯ ಸೂರ್ಯಕಾಂತ ಕದಂಬ, ಅಧ್ಯಕ್ಷರು, ಗುಲ್ಬರ್ಗಾ ಜಿಲ್ಲಾ ಜಿಲ್ಲಾಧ್ಯಕ್ಷರು ಪದಾದಿಕಾರಿಗಳು ನೌಕರರ ಸಂಘದ ಸಂಘಟನೆಗಾಗಿ ಆಳಂದ ತಾಲ್ಲೂಕಿಗೆ ಆಗಮಿಸಿರುತ್ತಾರೆ. ಕಾರಣ ರಾಜ್ಯ ಸರ್ಕಾರಿ ನೌಕರರ ಸಂಘಟನೆಗಾಗಿ ಬಹಿರಂಗ ಸಭೆಯನ್ನು ಗುರುಭವನದ ಮೈದಾನದಲ್ಲಿ ಅಂದು ಬೆಳಗ್ಗೆ 10.30 ಗಂಟೆಗೆ ಏರ್ಪಡಿಸಲಾಗಿದೆ. ಆದುದರಿಂದ ಸದರಿ ಕಾರ್ಯಕ್ರಮದ ಸಂಪೂರ್ಣ ಯಶಸ್ವಿಗಾಗಿ ದಿ: 7.02.03 ರಂದು ಜರುಗಿದ ಕಾರ್ಯಕಾರಿ ಸಮಿತಿಯ ಸಾಮಾನ್ಯ ತುರ್ತು ನಿರ್ಣಯದ ಪ್ರಕಾರ ಈ ಕೆಳಕಂಡ ಸಮಿತಿಗಳನ್ನು ರಚಿಸಿ ಈ ಮೂಲಕ ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆ." ಈ ಸಭೆ ನಡೆದ ದಿವಸ ಅಲ್ಲಿ ಸೂಟ್ ಇಲ್ಲ. ಅಂದು ರಜೆ ದಿವಸ ಕೂಡ ಅಲ್ಲ. ನಂತರ ಮುಂದೆ ನೋಡಿ. ಇಲ್ಲಿ ನಮ್ಮ ವಿದ್ಯಾ ಸಚಿವರು ಇಬ್ಬರೂ ಕಾಣುವುದಿಲ್ಲ. ಇದು ಗುಲ್ಬರ್ಗಾದಲ್ಲಿ ನಡೆದಿದೆ. ನಾನು ಇಲ್ಲಿ ಎಲ್ಲಾ ಓದುವುದಕ್ಕೆ ಆಗುವುದಿಲ್ಲ. ಅದಕ್ಕೆ ಒಂದೊಂದು ಕಮಿಟಿ ಮಾಡಿದ್ದಾರೆ. ಖಜೂರಿಬಾದ್‌ನಲ್ಲಿ ಸ್ವಾಗತ ಕಮಾನ ನಿರ್ಮಿಸುವುದು ಹಾಗೂ ಮಾಲಾರ್ಪಣೆ ಮಾಡುವುದು. ಕೆ.ಇ.ಬಿ. ಕಚೇರಿಯಿಂದ ಗುರುಭವನದವರೆಗೆ ತೆರೆದ ಜೀಪಿನಲ್ಲಿ ಮೆರವಣಿಗೆ ಮಾಡುವುದು. ಎಲ್ಲಾ ಅವರೆ ಒಂದೊಂದು ಕೆಲಸ ಹಂಚಿದ್ದಾರೆ. ನಂತರ ಸ್ವಾಗತ ಕಮಾನಿನಿಂದ ಗುರುಭವನದವರೆಗೆ ತೆರೆದ ಜೀಪಿನಿಂದ ಇಳಿಸಿ ಕಾಲ್ನಡಿಗೆಯಲ್ಲಿ ಕರೆತರುವುದು ನಂತರ ಗೇಟ್‌ನಲ್ಲಿ ಶಾಲಾ ಬಾಲಕಿಯರಿಂದ ಆರತಿ. ಅಲ್ಲಿಯವರೆಗೆ ಕರೆದುಕೊಂಡು ಬರಬೇಕು. ಅವರಿಗೆ ಮಾಲಾರ್ಪಣೆ, ಪಟಾಕಿ ಮಾಡುವುದು ಮತ್ತು ಮಂಗಳವಾದ್ಯ ನುಡಿಸುವುದು. ಸಭಾಮಂಟಪದವರೆಗೂ ಫೂಟ್ ಮ್ಯಾಟ್ ಮೇಲೆ ಬರುವಾಗ ಎರಡು ಬದಿಯಿಂದ ಶಾಲಾ ಬಾಲಕಿಯರಿಂದ ಅತಿಥಿಗಳ ಮೇಲೆ

ಹೂಮಳೆಗರೆಯುವುದು." ಇದು ಆದೇಶ! ಮಾನ್ಯ ಉಪಾಧ್ಯಕ್ಷರೆ, ಇದು ನಡೆದಿದೆ. ನಮ್ಮ ಮಾಜಿ ಸಚಿವರಾದ ಗೋವಿಂದೇಗೌಡರಾಗಲಿ ನೀವಾಗಲಿ ಮಾಡುತ್ತಿದ್ದೀರಾ? ಇಲ್ಲಿ ಹಳೇ ಮಂತ್ರಿಗಳು ಕುಳಿತುಕೊಂಡಿದ್ದಾರೆ. ನೀವು ಯಾರಾದರೂ ಹುಡುಗರನ್ನು ನೇಮಿಸಿ ಕೊಡುತ್ತಿದ್ದೀರಾ? ಇದನ್ನು ಇನ್ನು ಓದಿಕೊಳ್ಳುತ್ತಾ ಹೋದರೆ ಬಹಳ ಇದೆ. ಸಿಪ್ಪೇಗೌಡರು, ಅವರದೇ ಒಂದು ಸರ್ಕಾರ. ಅಲ್ಲಿಯ ಡಿ.ಸಿ. ಏನು ಮಾಡುತ್ತಿದ್ದರು, ಆ ದಿವಸ ಕಚೇರಿಗೆ ಘೋಷಣೆ ಅಲ್ಲ ರಜಾ ಇನ್ನು ಬಹಳ ಇದೆ. ಬ್ಯಾನರ್ ಕಟ್ಟುವುದು, ನಾನು ಉಳಿದದ್ದೆಲ್ಲಾ ಓದಿಲ್ಲ. ಶಾಲಾ ಬಾಲಕಿಯರು ಹೂ ಮಳೆಗೆರೆದು ಅವರನ್ನು ಸ್ವಾಗತ ಮಾಡಿ ಅಲ್ಲಿಯವರೆಗೆ ಕರೆ ತಂದು ಅಲ್ಲಿ ಅದಕ್ಕೆ ಶಾಲಾ ಬಾಲಕಿಯವರನ್ನು ನಿಲ್ಲಿಸುತ್ತಾರೆ ಇನ್ನು ಏನು ಮಾಡಿದ್ದಾರೋ ಏನೋ ಯಾರಿಗೆ ಗೊತ್ತು? ಇದು ನಡೆದಂತಹ ಆದೇಶ. ಇದು ಅಸತ್ಯ ಅಲ್ಲ. ಇದು ನನ್ನ ಕೈಸೇರಿದೆ. ಪೋಸ್ಟ್‌ನಲ್ಲಿ ನನಗೆ ಕಳುಹಿಸಿದ್ದಾರೆ, ಇದು ಗುಲ್ಬರ್ಗದಲ್ಲಿ ನಡೆದಿದೆ. ಅಲ್ಲಿ ಗೃಹಸಚಿವರು ಏನು ಕ್ರಮ ಮಾಡಿದರು?? ಮತ್ತು ಅಲ್ಲಿ ಡಿಸಿ ಏನು ಮಾಡಿದರು? ಅಲ್ಲಿ ಜಿಲ್ಲಾಧಿಕಾರಿಗಳನ್ನು ಒಪ್ಪಿಸಿ ಈ ಸಮಾಚಾರವನ್ನು ಮಾಡಿದ್ದಾರೆ. ಎಂದು ಮಾತನಾಡುತ್ತಿದ್ದರು. ಅವರು ಜಿಲ್ಲಾದಿಕಾರಿಗಳು ಯಾರೋ ಇದ್ದರೋ, ಅಂಜುಬುರುಕರು, ಅವತ್ತು ಡ್ಯೂಟಿ ಬಿಟ್ಟಿದ್ದಾರೆ, ಮತ್ತು ರಜೆಯನ್ನು ಕೂಡ ಯಾರೂ ಹಾಕಿಲ್ಲ. ಇದು ನಡೆದಿರುವುದು. ಈ ರೀತಿಯಾಗಿ ಅವರೇ ಒಂದು ಸರ್ಕಾರವನ್ನು ನಡೆಸುವುದಾದರೆ, ಇದೇನು? ಈ ರಾಜ್ಯ ಎಲ್ಲಿಗೆ ಹೋಗುತ್ತದೆ? ಎಲ್ಲಾ ರಾಜ್ಯವನ್ನು ನೌಕರರ ಕೈಗೆ ಕೊಡುತ್ತೀರಾ? ಇದು ನನ್ನ ಪ್ರಶ್ನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು. ಇನ್ನು ಇದರಲ್ಲಿ ಬಹಳ ಇದೆ, ಇದನ್ನು ನಾನು ಕಳುಹಿಸಿಕೊಡುತ್ತೇನೆ. ಇದನ್ನು ಹೇಳುವುದಕ್ಕೆ ನನಗೆ ಬಹಳ ನೋವು ಎನ್ನಿಸುತ್ತದೆ.

ಶ್ರೀ ಎಂ.ಚಂದ್ರಪ್ಪ:- ಮಾನ್ಯ ಉಪಾಧ್ಯಕ್ಷರೆ, ನಾಯಿ ಬಾಲವನ್ನು ಅಲ್ಲಾಡಿಸುತ್ತಿಲ್ಲ, ಬಾಲನೇ ನಾಯಿಯನ್ನು ಅಲ್ಲಾಡಿಸುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್:- ವಿಶ್ವನಾಥ್‌ರವರೆ, ತಾವು ಏಕೆ ನಗುತ್ತೀರಿ? ನಮಗೆ ಸಿಟ್ಟು ಬರುತ್ತದೆ ಶಾಲಾ ಬಾಲಕಿಯರು, ನಾಳೆ ಯಾರಾದರೂ ಏನಾದರೂ ನಿಂತುಕೊಂಡು ಹಾಳಾಗಿ ಹೋಗಿ. ನೀವು ಮಂತ್ರಿಗಳಾದಾಗ ಯಾರನ್ನು ನಿಲ್ಲಿಸಿದಿರಿ? ನನಗೆ ಗೊತ್ತಿದೆ. ನಿಲ್ಲಿಸಬಾರದು ಎಂದು ಆದೇಶ ಮಾಡಿದ್ದಿರಿ. ಶಾಲಾ ಬಾಲಕಿಯರು, ನೌಕರ ಸಂಘದ ಅಧ್ಯಕ್ಷರು ಹೋದಾಗ ಅವರೆಲ್ಲಾ ನಿಂತುಕೊಂಡು ಹೂವಿನ ಹಾರ ಹಾಕುವುದು. ಮತ್ತು ಹೂವಿನ ಸುರಿಮಳೆ ಹಾಕುವುದು. ಆದೇಶವನ್ನು ಹೊರಡಿಸಿದ್ದಾರೆ. ಈ ರೀತಿ ಸರ್ಕಾರದ ಮುಖ್ಯಮಂತ್ರಿಗಳು ಹೋದಾಗಲೂ ಯಾರೂ ಮಾಡಿಲ್ಲ. ಇದು ಸಾಧ್ಯನೇ ಇಲ್ಲ. ಎಂದರೆ ಮತ್ತೊಂದು ಸರ್ಕಾರವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ? ಈ ರಾಜ್ಯವನ್ನು ಎಲ್ಲಿ ಇಡುತ್ತೀರಿ? ಇದರ ಬಗ್ಗೆ ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ.

ಆ ಕಾರಣದಿಂದ ಇದಕ್ಕೆ ಸರಿಯಾದ ಉತ್ತರ ಕೊಡಬೇಕಾಗುತ್ತದೆ. ಇಲ್ಲಿ ನಾನು ಸುಮ್ಮನೆ ಬಿಡುವುದಕ್ಕೆ ಆಗುವುದಿಲ್ಲ. ಇದು ಏಕೆ ಆಯಿತು, ಯಾವ ರೀತಿ ಬಂತು ಎನ್ನುವ ಬಗ್ಗೆ, ತಾವು ಉತ್ತರವನ್ನು ಕೊಡಬೇಕಾಗುತ್ತದೆ. ಇನ್ನು ಇವರು ಹೇಳಿದಂತೆ ಕಷ್ಟವಿದೆ, ನಾನು ಮಾನ್ಯ ಚಂದ್ರಶೇಖರ್ ಬೆಲ್ಲದರವರು ಮಾತನಾಡಿದ ಹಾಗೆ ಇಲ್ಲಿ ನಾನು ಮಾತನಾಡುವುದಕ್ಕೆ ಆಗುವುದಿಲ್ಲ. ನೀವು ಕೇಂದ್ರದಲ್ಲಿರುವವರು, ಅದಕ್ಕೆ ಸುಮ್ಮನೆ ಇರುತ್ತೀರಿ, ನೀವು ಇಲ್ಲಿ ಬೇಕಾದ್ದು ಮಾತನಾಡಬಹುದು,

ಏಕೆಂದರೆ ಇಲ್ಲಿ ನೀವು ಸರ್ಕಾರವನ್ನು ನಡೆಸಿಲ್ಲ? ಆದರೆ ಇಲ್ಲಿ ನಾವು ಸರ್ಕಾರವನ್ನು ನಡೆಸಿದ್ದೇವೆ. ಆ ಸರ್ಕಾರ ನಡೆಸುವಾಗ ಆಗುವಂತಹ ಆರ್ಥಿಕ ಹೊರೆ ಕಷ್ಟ, ನಷ್ಟಗಳು ನಮಗೆ ಗೊತ್ತಿದೆ. ಅದನ್ನು ಹೇಗೆ ನಿಭಾಯಿಸಬೇಕೆಂಬುದು ನಮಗೆ ಗೊತ್ತಿದೆ, ಬರಗಾಲವನ್ನು ಹೇಗೆ ನಿಭಾಯಿಸಬೇಕೆಂಬುದು ಗೊತ್ತಿದೆ, ನಾನು ಆ ಕಾರಣದಿಂದ ಹೇಳುತ್ತಿದ್ದೇನೆ, ಹಲವಾರು ಸಂದರ್ಭಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೂ ಹೇಳಿದ್ದೇನೆ. ಈಗ ಇಷ್ಟು ಜನ ಮಂತ್ರಿಗಳು ಏಕೆ ಬೇಕು? ಇದನ್ನು ನೀವು ಹೆಳಿ. ಕೆಲವು ಮಂತ್ರಿಗಳು ಇದ್ದಾರೆ, ಅವರ ಹೆಸರುಗಳನ್ನು ಹೇಳಬಾರದು ಅವರು ಗೂಟದ ಕಾರಿನಲ್ಲಿ ಕೆಂಪು ದೀಪವನ್ನು ಹಾಕಿಕೊಂಡು ಕುಳಿತುಕೊಳ್ಳುತ್ತಾರೆ, ಇದು ಏಕೆ ಬೇಕು? ಇಲ್ಲಿ ಸುಕಾಲವೆಂದರೆ, ಚೆನ್ನಾಗಿ ಇದ್ದರೆ, ಈ ಬಗ್ಗೆ ಮಾನ್ಯ ಜಗದೀಶ್‌ಶೆಟ್ಟರ್‌ರವರು ಹೇಳಿದರು, ಎಂಭತ್ತು ಜನ ಮಂತ್ರಿಗಳು ಇದ್ದಾರಂತೆ, ಹಾಗಾದರೂ ಮಾಡಿಬಿಡಿ. ಆಗ ರಾಜ್ಯವಾದರೂ ಹಾಳಾಗಲಿ, ದೇಶವೂ ಹಾಳಾಗಲಿ, ಜನರಿಗೆ ಏನಾದರೂ ಆಗಲಿ, ನಿಮಗೆ 27ಜನ ಮಂತ್ರಿಗಳಾದರೆ ಸಾಕು, ಇಲ್ಲಿ ಆನ್ ಲೈನ್ ಮಂತ್ರಿಗಳು ಇರಲಿ, ಏಕೆಂದರೆ ಅವರ ಬಗ್ಗೆ ಮುಂದೆ ಹೇಳುತ್ತೇನೆ, ಇವರಿಂದ ರಾಜ್ಯಕ್ಕೆ ದೊಡ್ಡ ಉತ್ಪನ್ನ ಬರುತ್ತದೆ. ಇವರು ರಾಜ್ಯದಲ್ಲಿ ಆನ್‌ಲೈನ್ ಲಾಟರಿ ಮಾಡಿ, ಈ ರಾಜ್ಯಕ್ಕೆ, ಈ ವಿಚಾರವಾಗಿ ನಾನು ಮುಂದೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಹೇಳುವಂಥಾದ್ದು ಇವತ್ತು ಮಾನ್ಯ ಹಾರ್‍ನಳ್ಳಿ ರಾಮಸ್ವಾಮಿಯವರು ಹೇಳಿರುವಂತಹ ವರದಿಯಲ್ಲಿ, ಅವರು ಹೇಳಿರುವಂತಹ ಮಾತುಗಳು, ನಾವು ಅದನ್ನು ಲಕ್ಷ್ಯದಲ್ಲಿಟ್ಟುಕೊಂಡು, ಮುಂದೆ ಇಲ್ಲಿಗೆ ನಾವು ಬರುತ್ತೇವೋ ನೀವು ಬರುತ್ತಿರೋ, ಮಾನ್ಯ ಜಗದೀಶ್ ಶೆಟ್ಟರ್ ಬರುತ್ತಾರೋ, ಇದನ್ನು ಯಾರು ಕಂಡಿದ್ದಾರೆ? ಇದನ್ನು ಯಾರೂ ಕಂಡಿಲ್ಲ. ಈಗ ನಾವು ಬರುತ್ತೇವೆ, ನೀವು ಬರುತ್ತೀರೆಂದರೆ ಅದನ್ನು ಮುರ್ಖತನವೆಂದು ಆಗುತ್ತದೆ, ಅದಕ್ಕೆ ಆ ಮಾತು ಬೇಡ. ಆದರೆ ಪರಿಸ್ಥಿತಿ ಹೇಳುತ್ತೇನೆ. ಇಲ್ಲಿ ಯಾರೇ ಬಂದರೂ, ಈ ರಾಜ್ಯ ಉಳಿಯಬೇಕು, ಈ ರಾಜ್ಯವನ್ನು ನಡೆಸಬೇಕಾಗುತ್ತದೆ, ಆ ಕಾರಣದಿಂದ ಈ ಹಣಕಾಸಿನ ನಿರ್ವಹಣೆ, ಅವರು ಹೇಳಿರುವಂತೆ ಖರ್ಚನ್ನು ಕಡಿಮೆ ಮಾಡಬೇಕಾಗುತ್ತದೆ, ತಾವು ಅದನ್ನು ಬಿಟ್ಟಿದ್ದೀರಿ, ನೀವು ಒಂದು ವಿಷಯನ್ನು ಇಮ್ಮೀಡಿಯಟ್ ಆಗಿ ತೀರ್ಮಾನ ಮಾಡಿಬಿಡಿ; ಈಗ ಮತ್ತೊಂದು ಅನುಕೂಲವನ್ನು ಹೇಳಿಕೊಂಡಿದ್ದಾರೆ, ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗಡಿನಾಡನ್ನು ಕಾಯುವುದಕ್ಕೆ ಒಬ್ಬರನ್ನು ಮಂತ್ರಿ ಮಾಡಿ ಎಂದು. ಇದು ಮಾಡಬೇಕು, ಇದು ಸತ್ಯವಾಗಿ ಇದೆ, ಮತ್ತೆ ಯೋಗ್ಯವಾದದ್ದು ಆಗಿದೆ. ಇದಕ್ಕೆ ಒಬ್ಬ ದಕ್ಷರೇ ಆಗಬೇಕಾಗುತ್ತದೆ, ಇಲ್ಲಿ ಬಹಳ ತೊಂದರೆ ಇದೆ, ಮಾಡಿ ಇದಕ್ಕೆ ಹೊಸದಾಗಿ ಆಯ್ಕೆಯಾಗಿರುವವರನ್ನು ಮಾಡಬೇಡಿ, ಇಲ್ಲಿ ಮಾನ್ಯ ದನದ ಮಂತ್ರಿಯವರು ಮಲಗಿಬಿಟ್ಟಿದ್ದಾರೆ.

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):- ನಾನು ನಿಮ್ಮನ್ನೇ ನೋಡುತ್ತಿದ್ದೇನೆ, ನೀವು ಮಲಗಿದ್ದನೆಂದು ಹೇಳುತ್ತಿದ್ದೀರಿ,

ಶ್ರೀ ಎಸ್.ಎಸ್. ಪಾಟೀಲ್:- ನಾನು ದನದ ಮಂತ್ರಿಗಳು, ಕಾಡು ಮಂತ್ರಿಗಳು ಜನದ ಮಂತ್ರಿಗಳು, ಈ ಮೂರು ಮಂತ್ರಿಗಳ ವಿಚಾರವನ್ನು ಇಲ್ಲಿ ಹೇಳುತ್ತೇನೆ. ಇವರ ಬಗ್ಗೆ ಏನೇನು ಇದೆಯೆಂಬುದನ್ನು ಹೇಳುತ್ತೇನೆ. ಇನ್ನು ಸಹಕಾರ ಮಂತ್ರಿಗಳ ಬಗ್ಗೆ, ಇವರ ಬಗ್ಗೆ ಮುಂದೆ ಏನು ಸಹಕಾರ, ಅಸಹಕಾರವೆಂಬುದನ್ನು ಮುಂದೆ ಹೇಳುತ್ತೇನೆ. ಇನ್ನು ಪೌರಾಡಳಿತ ಮಂತ್ರಿಗಳು,

ಕೇಂದ್ರ ಸರ್ಕಾರದಿಂದ ಬಂದಂತಹ ರೊಕ್ಕವನ್ನು ಬಳಸಿಕೊಂಡು ಬಿಟ್ಟರು, ಈ ಹಣವನ್ನು ಯಾರ್‍ಯಾರಿಗೆ ಕೊಟ್ಟರೋ, ಎಲ್ಲೆಲ್ಲಿ ಇಟ್ಟರೋ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಲೆವೆನ್ತ್ ಫೈನಾನ್ಸ್‌ಗೆ ಆರ್ಡರ್ಸ್ ಕೊಟ್ಟು ಪೂರ್ತಿ ಎಲ್ಲರಿಗೂ ಹಣ ತಲುಪಿದೆ, ಎಂದು ಹೇಳಿದ್ದಾರೆ. ಇಲ್ಲಿ ನೀವು ಒಬ್ಬರೇ ಹಣ ಬಂದಿಲ್ಲವೆಂದು ಹೇಳುತ್ತಿರುವುದು.

ಶ್ರೀ ಎಸ್.ಎಸ್. ಪಾಟೀಲ್:- ನಿಮ್ಮ ದೊಡ್ಡ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ? ಜೂನ್ ತಿಂಗಳಲ್ಲಿ ಹಣ ಬಂದಿದ್ದು ಮುಂದೆ ಬಿಡುಗಡೆ ಮಾಡುತ್ತೇವೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ:- ನಮ್ಮ ಮಾನ್ಯ ಮಂತ್ರಿಯವರು ಏನು ಉತ್ತರವನ್ನು ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ನಮ್ಮ ಪೌರಾಡಳಿತದಿಂದ ಲೆವೆನ್ತ್ ಫೈನಾನ್ಸ್ ಎಲ್ಲರಿಗೂ ದುಡ್ಡನ್ನು ಕಳುಹಿಸಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:- ನೀವು ಒಳ್ಳೆಯವರೆಂದು ನಮಗೆ ಗೊತ್ತಿದೆ, ಸಂಭಾವಿತರು, ಒಳ್ಳೆಯ ಮನುಷ್ಯರು, ಮಾನ್ಯ ಎಸ್.ಬಂಗಾರಪ್ಪನವರ ಮಗ, ನಮ್ಮ ಆತ್ಮೀಯ ಗೆಳೆಯರ ಮಗ, ನಮಗೆ ಎಲ್ಲಾ ಗೊತ್ತಿದೆ, ನಮಗೆ ಗೌರವವಿದೆ, ಮುಂಡರಗಿಗೆ ಬಂದಾಗ ಔಷಧ ಇಲ್ಲ ಅಂದರೆ ಇಲ್ಲ ಇತ್ತು ಅಂದರು ಅದನ್ನು ಮುಂದೆ ಹೇಳುತ್ತೇನೆ. ಇನ್ನು ಮಾನ್ಯ ಮುನಿಯಪ್ಪನವರು ಗಣಿಯನ್ನು ಶುದ್ಧ ಮಾಡಿ ಬಿಟ್ಟಿದ್ದಾರೆ, ಈ ಕಡೆ ಇವರು ಕುಳಿತಾಗ ಏನು ಹಾರಾಡುತ್ತಿದ್ದರು. ಶ್ರೀ ಮುನಿಯಪ್ಪನವರ ಹಾರಾಟವನ್ನು ನೋಡಿದರೆ ನಮ್ಮ ಮಾನ್ಯ ಬೈರೇಗೌಡರ ಬಾಯಿ ಸಹ ಹೊಲಿದುಕೊಂಡು ಬಿಟ್ಟಿದ್ದರು. ಈಗ ಶ್ರೀ ಮುನಿಯಪ್ಪನವರೆ ಇದ್ದರೋ ಇಲ್ಲವೋ ಎನ್ನುವ ರೀತಿ ಇದೆ. ಇವರ ವಿಚಾರವಾಗಿ ಮುಂದೆ ಮಾತನಾಡುತ್ತೇನೆ ಈಗ ಸದನಲ್ಲಿ ಇದ್ದಾರೋ, ಇಲ್ಲವೋ, ಎನ್ನುವ ಹಾಗೆ ಇದ್ದಾರೆ. ಈ ಕಡೆ ಇದ್ದಾಗ ಕುರ್ಚಿ, ಟೇಬಲ್, ಮುರಿದು ಹೋಗಿವೆ.

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಹೆಳುವುದು ಬಹಳ ಸುಲಭ, ಆದರೆ ಕಾರ್ಯಗತ ಮಾಡುವಂಥಾದ್ದು, ಮತ್ತೆ ಏನೇನು ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ, ಇಂಥಿಂಥ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ, ಇಂತಹ ದೊಡ್ಡ ದೊಡ್ಡ, ಸಾಧನೆಗಳನ್ನು ಮಾಡಿದ್ದೇವೆ, ಇಂಥಿಂಥ ಲ್ಯಾಪ್ಸಸ್‌ಗಳು ಇವೆ, ಎಂಬುದನ್ನು ಹೇಳಿ, ಸುಮ್ಮನೆ ಇಲ್ಲಿ ಸರ್ವಜ್ಞನ ವಚನಗಳನ್ನು, ಬೇರೆ ಬೇರೆ ಕತೆಗಳನ್ನು ಕಟ್ಟಿ ಹೇಳಿದರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಮುನಿಯಪ್ಪನವರೇ, ಅದನ್ನು ಹೇಳುತ್ತೇನೆ. ಒಂದೂವರೆ ವರ್ಷದ ಮೇಲೆ ಈ ರಾಜ್ಯದ ಜನತೆ ಆಶೀರ್ವಾದ ಮಾಡಿದರೆ ನಾವು ಅದನ್ನು ಬಂದು ತೋರಿಸುತ್ತೇವೆ, ನಾವು ಏನು ಮಾಡುತ್ತೇವೆಂಬುದನ್ನು, ಮಾಡಿ ತೋರಿಸುತ್ತೇವೆ, ದುಡ್ಡು ಏನಾಗಿದೆ ಎಂಬುದನ್ನು ತೋರಿಸುತ್ತೇವೆ. ಜನ ಆಶೀರ್ವಾದ ಮಾಡಿದರೆ, ಮಾಡದಿದ್ದರೆ ಇಲ್ಲೇ ಕೂರುತ್ತೇವೆ, ಹೊರಗಿದ್ದರೆ ಹೊರಗೆ ಇರುತ್ತೇವೆ, ಆ ಮಾತು ಬೇರೆ. ನಾವು ಇಲ್ಲಿ ಬಂದೆ ತೀರುತ್ತೇವೆಂದು ಅಲ್ಲ, ಈ ಬಗ್ಗೆ ಜನರು ತೀರ್ಮಾನ ಮಾಡುತ್ತಾರೆ, ಇನ್ನು ನಮ್ಮ ಮಿತ್ರರಾದ ಮಾನ್ಯ ರೋಷನ್ ಬೇಗ್‌ರವರು, ಇವರ ಬಗ್ಗೆ ಆಮೇಲೆ ನೋಡೋಣ. ಇನ್ನು ಈ ವಿನೋದ ಸಾಕು, ದೀರ್ಘವಾಗಿ ಚರ್ಚೆಗೆ ಬರೋಣ, ಇಲ್ಲಿ ನಾವು ರಾಜ್ಯಪಾಲರ ಭಾಷಣದ ಮೇಲೆ

ಹುಡುಗಾಟಿಕೆಯ ಮಾತುಗಳನ್ನು ಆಡಿ ಹೋದರೆ, ಈ ರಾಜ್ಯ ನಾಳೆ ದಿವಸ ಕತ್ತಲೆಯಲ್ಲಿ ಉಳಿಯುತ್ತದೆ, ಆದುದರಿಂದ ಈಗ ಮಾನ್ಯ ಆರ್.ವಿ.ದೇಶಪಾಂಡೆಯವರಿಗೆ ಹೇಳುತ್ತೇನೆ, ಏಕೆಂದರೆ ಇವರಿಗೆ ಕಲ್ಪನೆ ಇದೆ, ಏಕೆಂದರೆ ಇವರು ಬರಗಾಲದ ಸರ್ಕಾರದಲ್ಲೂ ಇದ್ದವರು, ಸುಖಕಾಲದಲ್ಲಿ ಇದ್ದಂತಹ ಸರ್ಕಾರದಲ್ಲೂ ಇದ್ದಂಥವರು. ನೀವು ಬರಗಾಲ ಬಂದ ಸಂದರ್ಭದಲ್ಲೇ ಅಲ್ಲಿಗೆ ಹೋಗಿದ್ದೀರಿ, ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೇಳುವುದೇನೆಂದರೆ ಈ ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಇವರು 27ಜನ ಮಂತ್ರಿಗಳನ್ನು ಇಟ್ಟುಕೊಳ್ಳಬೇಕು, ಈ ವಿಚಾರವಾಗಿ ಒಂದು ಆದರ್ಶವನ್ನು ಇಟ್ಟುಕೊಳ್ಳಿ, ಈಗ ಒಂದೂವರೆ ವರ್ಷ ಇದೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ಮಾನ್ಯ ಪಾಟೀಲ್‌ರವರೇ, ತಾವು 27ಜನ ಮಂತ್ರಿಗಳನ್ನು ಮಾಡಿ ಎಂದು ಹೇಳುತ್ತಿದ್ದೀರಿ, ಅವರು ಯಾರ್‍ಯಾರು ಇರಬೇಕೆಂಬ ಪಟ್ಟಿಯನ್ನು ಕೊಡಿ, ಒಳ್ಳೆಯದಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಅದನ್ನು ಹೇಳು ಎಂದರೆ ಹೇಳಬಿಡುತ್ತೇನೆ, ಮಾನ್ಯ ಮುಖ್ಯಮಂತ್ರಿಯವರು ಹೇಳಲಿ, ನಿರುಪಯೋಗ ಮಂತ್ರಿಗಳು ಯಾರ್‍ಯಾರನ್ನು ಇಟ್ಟಿದ್ದೀರೆಂಬುದನ್ನು ಹೇಳುತ್ತೇನೆ. ಇದರ ಬಗ್ಗೆ ನಿಮಗೂ ಅನುಭವವಿದೆ, ನನಗೂ ಅನುಭವವಿದೆ, ಇಲ್ಲಿ ಕ್ಯಾಬಿನೆಟ್ ಮಂತ್ರಿಗೆ ಒಬ್ಬ ಸಹಾಯಕ ಮಂತ್ರಿಗಳನ್ನು ಇಟ್ಟಿರುವಂಥಾದ್ದು ತಪ್ಪು. ಅವರು ಹೆಸರಿಗೆ ಗೂಟದ ಕಾರಿಗೆ ಇರುವುದು ಇಲ್ಲಿ ಸಹಾಯಕ ಮಂತ್ರಿಗಳು ಇದ್ದಾರೆ, ಅವರಿಗೆ ಏನು ಕೆಲಸ ಇದೆ, ಇನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಸಹಾಯಕ ಮಂತ್ರಿಗಳು ಬೇಕಾಗುತ್ತದೆ, ಇದನ್ನು ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಏನೇನು ಖಾತೆಗಳನ್ನು ಇಟ್ಟುಕೊಂಡಿರುತ್ತಾರೋ, ಅದಕ್ಕೆ ಸಹಾಯಕರ ಮಂತ್ರಿಗಳು ಬೇಕಾಗುತ್ತದೆ. ಇಲ್ಲಿ ನಿಮಗೆ ಏಕೆ ಬೇಕು? ನಾವು ಇಲ್ಲಿ ಅಧಿಕಾರವನ್ನು ನಡೆಸಿದ್ದೇವೆ, ಇವರು ಏಕೆ ಬೇಕು, ಯಾವುದಾದರೂ ಇಲಾಖೆಗಳನ್ನು ದೊಡ್ಡ, ದೊಡ್ಡದನ್ನು ಇಟ್ಟುಕೊಳ್ಳಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮೈನರ್ ಇರೀಗೇಷನ್ ಏಕೆ ಬೇಕಾಗಿತ್ತು? ಇದನ್ನು ತಾವು ಹೇಳಬೇಕಾಗುತ್ತದೆ, ನಾನು ಹೇಳಬೇಕಾದರೆ ಬೇಕಾದಷ್ಟು ಹೇಳುತ್ತೇನೆ, ಯಾರ್‍ಯಾರನ್ನು ತೆಗೆಯಬೇಕೆಂಬುದನ್ನು ಹೇಳುತ್ತೇನೆ. ಯಾರು ನಿರುಪಯೋಗ ಮಂತ್ರಿಗಳು ಎಂಬುದನ್ನು ಹೇಳುತ್ತೇನೆ, ಆದರೆ ಪರಿಣಾಮ ಕೆಟ್ಟದಾಗುತ್ತದೆ, ಮೊದಲು ನಾವು ನೋಟೀಸ್ ಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಬುದ್ಧಿವಂತರಾಗಿದ್ದಾರೆ, ಅವರು ಏನೂ ದಡ್ಡರಲ್ಲ. ಅವರು ಬಹಳ ಜಾಣ ಮುಖ್ಯಮಂತ್ರಿಗಳಾಗಿದ್ದಾರೆ, ಅವರು ಈ ಮೂರೂವರೆ ವರ್ಷಗಳು ನಿಮ್ಮ ಹೊಡೆತವನ್ನು ತಡೆದುಕೊಂಡಿದ್ದಾರೆ, ಇಲ್ಲದಿದ್ದರೆ ಈಗ ಹೋಯಿತು, ಮುಗಿಯಿತು, ಖುಲಾಸ್ ಆಯಿತು, ಎಂದು ಕೆಲವು ಮಂದಿ ಹಿಂದೆ ಹಿಂದೆ ಹಾರ ಹಾಕಲು ಹೋಗಿದ್ದರು, ಆದರೆ ಕೆಲಸವಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಹಳ ಬುದ್ಧಿವಂತರು, ಅವರು ನಿಮ್ಮ ಯಾರ ಕೈಯಲ್ಲೂ ಇಲ್ಲ; ಆ ರೀತಿ ಯಾರೂ ಆಗುವುದಿಲ್ಲ. ಆದರೆ ಇಲ್ಲಿ 27 ಜನ ಮಂತ್ರಿಗಳು ಆಗಬೇಕು, ಇನ್ನು ಮಾನ್ಯ ಆರ್.ವಿ.ದೇಶಪಾಂಡೆಯವರು ಎನ್.ಜಿ.ಎಫ್ ಅನ್ನು ಮುಚ್ಚುವುದಕ್ಕೆ ಅಧ್ಯಕ್ಷರನ್ನು ಮಾಡುತ್ತಾರೆ ಅವರಿಗೆ ಕ್ಯಾಬಿನೆಟ್‌ಗೆ ಸಮಾನವಾಗಿ ರ್‍ಯಾಂಕ್ ಕೊಡುವುದು. ಇವರು ಮಂತ್ರಿಗಳಿಗೆ ಸರಿಸಮಾನವಾಗಿ ಇರುವುದು, ಎಲ್ಲಾ ಸೌಲಭ್ಯಗಳು ಇವೆ, ಇದರಂತೆ ಇಲ್ಲದರಲ್ಲೂ ಕೊಟ್ಟಿದ್ದೀರಿ, ಇದೆಲ್ಲವನ್ನೂ ಹೇಳುತ್ತಾ ಹೋದರೆ ಸಮಯ ಬೇಕಾಗುತ್ತದೆ.

ಇವರನ್ನೆಲ್ಲ ತೆಗೆಯಿರಿ. ಇವರು ಏಕೆ ಬೇಕು? ಅವರೆಲ್ಲ ಕಾರ್ಯಕರ್ತರು, ಅವರನ್ನೆಲ್ಲಾ ಅನಿವಾರ್ಯವಾಗಿ ತ್ಯಾಗ ಮಾಡಬೇಕು, ಈಗ ಪರಿಸ್ಥಿತಿ ಕಷ್ಟದಲ್ಲಿದೆ, ಅವರನ್ನೆಲ್ಲಾ ಕಡಿಮೆ ಮಾಡಿ.

ಶ್ರೀ ಎಂ. ಮಹದೇವ್:-ಮಾನ್ಯ ಪಾಟೀಲ್‌ರವರೇ, ತಾವು ಬಹಳ ಲೇಟಾಗಿ ಸಲಹೆಯನ್ನು ಕೊಡುತ್ತಿದ್ದೀರಿ,

ಶ್ರೀ ಎಸ್.ಎಸ್. ಪಾಟೀಲ್:- ನಾನು ಕಳೆದ ಮೂರುವರೆ ವರ್ಷದಿಂದಲೂ ಕೊಡುತ್ತಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಎಸ್. ಎಸ್. ಪಾಟೀಲ್‌ರವರು ಏನು ಯೋಚನೆಯನ್ನು ಮಾಡಿದ್ದಾರೆಂದರೆ ಮಾನ್ಯ ಮುಖ್ಯಮಂತ್ರಿಯವರು ಮೂರುವರೆ ವರ್ಷಗಳು ಆಡಳಿತ ನಡೆಸಿದ್ದಾರೆ, ಇನ್ನು ಒಂದೂವರೆ ವರ್ಷಗಳು ಹೇಗೆ ಆಡಳಿತವನ್ನು ಮಾಡಬೇಕೆಂಬ ಬಗ್ಗೆ ನಿಮಗೆ ಸಲಹೆಯನ್ನು ಕೊಡುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಕಳೆದ ಮೂರು ವರ್ಷಗಳಿಂದಲೂ ಮಾನ್ಯ ಮುಖ್ಯಮಂತ್ರಿಯವರಿಗೆ ಸಲಹೆಯನ್ನು ಕೊಟ್ಟಿದ್ದೇನೆ, ನೀವು ಸಿಂಗಪೂರವನ್ನು ಮಾಡುವುದಕ್ಕೆ ಹೊರಟಿದ್ದೀರಿ. ನೀವು ಏನೂ ನೋಡಿಲ್ಲವೆಂದು ಅಲ್ಲ, ಸಿಂಗಪೂರವನ್ನು ನೋಡಿಕೊಂಡು ಬನ್ನಿ. ಅಲ್ಲಿ ಅವರು ಯಾವ ರೀತಿಯಾಗಿ ಬೆಳೆಸಿಕೊಂಡರೆಂದರೆ ಶೇಕಡ 30 ಎಲ್ಲರ ಪಗಾರವನ್ನು ಕಡಿಮೆ ಮಾಡಿದ್ದಾರೆ, ನಾವು ಇಲ್ಲಿ ಇನ್ನೂರು ಮಂದಿ ಪಗಾರವನ್ನು ಬಿಟ್ಟರೆ ರಾಜ್ಯ ಉದ್ಧರವಾಗುವುದಿಲ್ಲ, ನಾವು ಮೊದಲು ನಮ್ಮ ಎಲ್ಲಾ ಶಾಸಕರಗಳ ಪಗಾರವನ್ನು ಕಡಿಮೆ ಮಾಡಿ, ನಮ್ಮ ಮಿತ್ರರನ್ನು ಒಪ್ಪಿಸುತ್ತೇನೆ, ಶೇಕಡ 30ರಷ್ಟು ಕಡಿಮೆ ಮಾಡಿ. ಎಲ್ಲಾ ಸರ್ಕಾರಿ ನೌಕರರ ಪಗಾರವನ್ನು ಖರ್ಚು ಕಡಿಮೆ ಮಾಡಿ, ಆಗ ನಮಗೆ ಸಾಲವೇ ಬೇಕಾಗುವುದಿಲ್ಲ. ತಾವು ಎಷ್ಟು ದಿವಸವೆಂದು ಸಾಲ ಮಾಡುತ್ತೀರಿ? ಸಾಲ ಸಿಗುವುದೇ ಇಲ್ಲವೆಂದರೆ ಏನು ಮಾಡುತ್ತೀರಿ? ಈಗ ವಿಶ್ವ ಬ್ಯಾಂಕ್‌ನವರು ಸಾಲವನ್ನು ಕೊಟ್ಟಿದ್ದಾರಾ? ಇವರು 12,000 ಕೋಟಿ ರೂಪಾಯಿಗಳನ್ನು ಕೊಡುತ್ತಾರೆಂದು ಹೇಳಿದ್ದಿರಲ್ಲಾ, ಕೊಟ್ಟರಾ? ಯಾರೂ ನಮ್ಮ ರಾಜ್ಯಕ್ಕೆ ಸಾಲವನ್ನು ಕೊಡುವುದಿಲ್ಲ. ಆ ಕಾರಣದಿಂದ ದಯವಿಟ್ಟು ಇವೆಲ್ಲವನ್ನು ಕಡಿಮೆ ಮಾಡಿ, ಮಾನ್ಯ ಹೆಗಡೆಯವರು ಇಲ್ಲೇ ಕುಳಿತಿದ್ದಾರೆ, ಕೋರ್ಟ್‌ಗೆ ಹೋಗಿದೆ, ಅದು ಆಗುತ್ತಿಲ್ಲ, ಯಾವ ರಾಜ್ಯದವರೂ ಕೊಟ್ಟಿಲ್ಲ, ಎಂ.ಪಿ.ಗಳಿಗೆ ಸವಲತ್ತುಗಳು ಏಕೆ ಬೇಕಾಗಿತ್ತು? ನಮ್ಮದು ಕಷ್ಟದಲ್ಲಿರುವಂತಹ ರಾಜ್ಯ, ಕುಡಿಯುವುದಕ್ಕೆ ನೀರಿಲ್ಲ ತಿನ್ನುವುದಕ್ಕೆ ಕೂಳಿಲ್ಲ, ಎಲ್ಲಾ ಸವಲತ್ತುಗಳನ್ನು ಇವರಿಗೆ ಏಕೆ ಕೊಟ್ಟಿದ್ದೀರಿ ಇದನ್ನು ಕೊಡುವುದಕ್ಕೆ ಕಾರಣ ಏನು? ಯಾವ ರಾಜ್ಯದಲ್ಲಿ ಕೊಟ್ಟಿದ್ದಾರೆ? ಇಂತಹ ಕಷ್ಟದಲ್ಲಿ ಈ ಸವಲತ್ತುಗಳನ್ನು ಕೊಡುವಂತಹ ಅವಶ್ಯಕತೆ ಏನಿತ್ತು? ಅವರು ನಮ್ಮವರೇ, ಇದೆಲ್ಲವನ್ನು ಹಿಂದಕ್ಕೆ ತೆಗೆದುಕೊಳ್ಳಿ, ನಮ್ಮದು 10 ಲಕ್ಷ ರೂ 50 ಲಕ್ಷ ರೂಪಾಯಿಗಳು ಹಿಡಿದುಕೊಳ್ಳಿ ಅದೆಲ್ಲವನ್ನು ತೆಗೆದುಕೊಳ್ಳಿ, ಅದರಲ್ಲಿ ತಪ್ಪು ಏನಿಲ್ಲ; ನಾವು ರಾಜ್ಯಕ್ಕಾಗಿ ತ್ಯಾಗ ಮಾಡಬೇಕಾಗುತ್ತದೆ. ಇಲ್ಲಿ ಎಂ.ಪಿ. ಗಳದ್ದು ಎಷ್ಟು ಹಣವನ್ನು ತೆಗದುಕೊಂಡಿದ್ದೀರಿ? ಅವರು ಇವತ್ತು ಸರ್ಕಾರಕ್ಕೆ ಎರಡು ಕೋಟಿ ರೂಪಾಯಿಗಳನ್ನು ಇವತ್ತು ಕೊಟ್ಟು ಬರಬೇಕು ಈ ಇರುವ ಬರಗಾಲಕ್ಕೆ ಅವರು ತ್ಯಾಗ ಮಾಡಬೇಕಾಗುತ್ತದೆ,

ಅದನ್ನೆಲ್ಲಾ ಪೂಲ್ ಮಾಡಿಕೊಂಡು ನಿಮ್ಮ ಹತ್ತಿರ ಇಟ್ಟುಕೊಳ್ಳಿ ಎಲ್ಲೆಲ್ಲಿ ಬರ ಇದೆ ಅಲ್ಲಿ ಈ ಹಣವನ್ನು ಹಂಚಿ ಸ್ವಾಮಿಗಳ ಬಗ್ಗೆ ಮಾತನಾಡಿ ಅದನ್ನು ಕೈ ಬಿಟ್ಟಿದ್ದೀರಿ ವಿಶ್ವನಾಥ್‌ರವರೆ, ಇದನ್ನು ಒಪ್ಪುತ್ತೀರಿಲ್ಲಾ ಈಗ ಇಲ್ಲಿ ಬಂದು ಆ ವೀರ ಶೈವ ಬ್ಯಾಂಕಿಗೆ ತಾವು ಬೆನ್ನು ಹತ್ತಿದಿರಿ ಅದು ಶುರುವಾಗಿದೆ.

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):- ಮಾನ್ಯ ಪಾಟೀಲರೆ, ನಿನ್ನೆಯೂ ಕೂಡ ತಾವು ವೀರಶೈವ ಬ್ಯಾಂಕ್ ಎಂದು ಹೇಳಿದಿರಿ, ತಮಗೆ ಅದರ ಒಂದು ಪಟ್ಟಿಯನ್ನು ಕಳುಹಿಸಿಕೊಡುತ್ತೇವೆ, ತಾವು ಅದನ್ನು ಓದಿ.

ಶ್ರೀ ಎಸ್.ಎಸ್. ಪಾಟೀಲ್:- ತಪ್ಪಾಗಿದ್ದರೆ ಜೈಲಿಗೆ ಕಳುಹಿಸಿರಿ, ನಾನು ಹೇಳುವುದನ್ನು ಕೇಳಿ, ನನಗೆ ಬಂದಿದ್ದನ್ನು ಹೇಳುತ್ತಿದ್ದೇನೆ. ತಾವು ಉತ್ತರದಲ್ಲಿ ಹೇಳಿ; ತಪ್ಪಾಗಿದ್ದರೆ ಜೈಲಿಗೆ ಕಳುಹಿಸಿ, ನಾನು ಬೇಡವೆಂದು ಹೇಳುವುದಿಲ್ಲ, ಯಾರು ತಪ್ಪುಮಾಡಿದ್ದಾರೆ ಅವರಿಗೆ ಶಿಕ್ಷೆ ಆಗಲೇ ಬೇಕು, ಅವನು ವೀರಶೈವ ಇರಲಿ, ಹರಿಜನ ಇರಲಿ, ಯಾರೇ ಆಗಿರಲಿ; ಶಿಕ್ಷೆ ಆಗಲೇ ಬೇಕು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನಗೆ ಬಂದ ಮಾಹಿತಿ ಪ್ರಕಾರ ಏನು ಅಂಥ ದೊಡ್ಡ ತಪ್ಪು ಮಾಡಿಲ್ಲ, ಆದರೂ ಮಾಡಿದ್ದಾರೆಂದು ತಂದು ನಿಮ್ಮ ಮುಂದೆ ಇಟ್ಟೆ, ನಾನೇನು ಒಳಗೆ ಮುಚ್ಚಿಟ್ಟಿಲ್ಲ, ಈ ಸದನದಲ್ಲಿಡುತ್ತಿದ್ದೇನೆ.

ಶ್ರೀ ಹೆಚ್.ವಿಶ್ವನಾಥ್:-ತಾವು ಮಂತ್ರಿಯಾಗಿದ್ದವರು, ತಮಗೂ ಗೊತ್ತು, ಸಾಮಾನ್ಯ ವೀರಶೈವರು, ರಿಟೆರ್ಡ್ ಟೀಚರ್ಸ್, ರಿಟೈರ್ಡ್ ನರ್ಸಗಳು, ರಿಟೈರ್ಡ್ ಪೋಲಿಸ್ ಕಾನ್ಸ್‌ಟೇಬಲ್ಸ್ ಏನು ಹಣ ಇಟ್ಟಿದ್ದರು, ನಾನು ಆ ಬ್ಯಾಂಕ್ ಅನ್ನು ಸೂಪರ್‌ಸೀಡ್ ಮಾಡಿದ್ದರಿಂದ ಅವರು ಸಂತೋಷವಾಗಿದ್ದಾರೆ, ಯಾರು ಅವರ ಪರವಾಗಿ ಹೋಗುತ್ತಿದ್ದಾರೆ ಅವರು ಸ್ವಲ್ಪ ಮಾತನಾಡುತ್ತಿದ್ದಾರೆ, ತಮಗೆಲ್ಲಾ ಗೊತ್ತಿದೆ, ಪಟ್ಟಿ ಕಳುಹಿಸಿಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- ಅವರುಗಳು ತಪ್ಪು ಮಾಡಿದ್ದಾರೆ ಬಿಟ್ಟೇ ಬಿಡಿ ಎಂದು ಹೇಳಲಿಲ್ಲ, ನಾನು ವಿಷಯನ್ನು ತಂದು ತಮ್ಮ ಮುಂದೆ ಇಟ್ಟೆ, ಅದನ್ನು ಸರಿಮಾಡಿದ್ದರೆ ತಪ್ಪೇನೂ ಅಲ್ಲ. ನಾನು ಹೇಳುವುದೇನೆಂದರೆ, ದಯವಿಟ್ಟು ಆ ಎಂಪಿಗಳಿಗೆ ನೀಡುವ ಫಂಡ್ಸ್‌ನ್ನು ಕಡಿಮೆ ಮಾಡಿ, ಅವರಿಂದ ಎರಡು ಕೋಟಿ ರೂಪಾಯಿ ತೆಗೆದುಕೊಂಡು ಪೋಲ್ ಮಾಡಿ ಆಮೇಲೆ ಎಂಎಲ್‌ಸಿಗಳು ಹತ್ತತ್ತು ಲಕ್ಷ ತೆಗೆದುಕೊಂಡಿದ್ದಾರೆ, ಅವರು ಎಲ್ಲಿ ಕೊಟ್ಟರೋ ಗೊತ್ತಾಗಲಿಲ್ಲ, ಎಲ್ಲೆಲ್ಲೋ ಕೊಡುತ್ತಾರೆ. ಎಂಎಲ್‌ಎಗಳಿಗೆ ನಿರ್ದಿಷ್ಟವಾದ ಕ್ಷೇತ್ರವಿರುತ್ತದೆ, ನಮ್ಮ ಕ್ಷೇತ್ರವನ್ನು ಬಿಟ್ಟು ಬೇರೆ ಕಡೆಗೆ ಕೊಡುವುದಕ್ಕೆ ಹೋಗುವುದಿಲ್ಲ. ಅವರದು ಎಲ್ಲೆಲ್ಲೋ ಕ್ಷೇತ್ರಗಳು ಇರುತ್ತವೆ ಆದಷ್ಟನ್ನು ನೀವೇ ಸರ್ಕಾರದವರು ತೆಗೆದುಕೊಂಡು ಎಂಎಲ್‌ಎ, ಎಂಪಿ, ಎಂಎಲ್‌ಸಿಗಳದೆಲ್ಲಾ ಕೂಡಿಟ್ಟು ಆ ಹಣವನ್ನು ಶೇಖರಣೆ ಮಾಡಿಕೊಂಡು ಯಾವ್ಯಾವ ಕ್ಷೇತ್ರಕ್ಕೆ ಹಂಚಿಕೆ ಮಾಡಬೇಕೆನ್ನುವುದನ್ನು ನಮ್ಮ ಮಂತ್ರಿಗಳಾದ ಮಲ್ಲಿಕಾರ್ಜುನ್ ನಾಗಪ್ಪ ಹಾಗೂ ಶ್ರೀಕಂಠಯ್ಯನವರಿಗೆ ಆ ಹಣವನ್ನು ಕೊಡಿ. ನಾನು ಈ ಸಲಹೆ ಏತಕ್ಕೆ ಮಾಡುತ್ತಿದ್ದೇನೆಂದರೆ, ನನ್ನ ಕ್ಷೇತ್ರದಲ್ಲಿ ಕೆಲಸಗಳೇ ಬಂದ್ ಆಗಿದ್ದಾವೆ, ದುಡ್ಡಿಲ್ಲ, ಕಾಳಿಲ್ಲ ನಾವೇನು ಮಾಡುವುದು ಜನರಿಂದ ತಪ್ಪಿಸಿಕೊಂಡು ಓಡಿ ಬಂದಿದ್ದೇನೆ. ಕಾಳೇ ಇಲ್ಲ, ಒಂದು ಲಕ್ಷ 65 ಸಾವಿರ ಟನ್ ಕಾಳೇನು ಕೊಟ್ಟಿದ್ದಾರಲ್ಲಾ, ಆ ಕಾಳು ಬಂದ ಮೇಲೆ ಇವರದ್ದು ಶುರು, ಅಲ್ಲಿಯವರೆಗೆ ಇವರದ್ದು ಬಂದ ಕೇಂದ್ರ ಸರ್ಕಾರದವರು

ಬಿಡುಗಡೆ ಮಾಡಿದ ಹಣವನ್ನು ಇವರು ಬಿಡುಗಡೆ ಮಾಡಿಲ್ಲ, 184 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ ಆದರೆ ನೀವು 58-60 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ ಉಳಿದ ಹಣವನ್ನು ಏನು ಮಾಡಿದಿರಿ, ಕೇಂದ್ರ ಸರ್ಕಾರದ ಹಣವನ್ನು ಏತಕ್ಕಾಗಿ ಪೂರ್ಣ ಬಿಡುಗಡೆ ಮಾಡಲಿಲ್ಲ, ನಿಮ್ಮ ಕೈಯಲ್ಲಂತೂ ಆಗುವುದೇ ಇಲ್ಲ, ನಾವು ಹಾಕುತ್ತೇವೆಂದು ಸುಳ್ಳು ಹೇಳುತ್ತೀರಿ. ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಕೂಡ ನೀವು ಸಂಪೂರ್ಣವಾಗಿ ಬಿಡುಗಡೆ ಮಾಡಿಲ್ಲ, ಆದುದರಿಂದ ತೀವ್ರದಲ್ಲೇ ಸಂಪೂರ್ಣವಾಗಿ ಆ ಹಣವನ್ನು ಬಿಡುಗಡೆ ಮಾಡಿ ಎಂದು ಹೇಳುತ್ತಿದ್ದೇನೆ. ಇನ್ನು ರಾಜ್ಯಪಾಲರ ಬಗ್ಗೆ ನನಗೆ ತುಂಬಾ ಗೌರವವಿದೆ, ಆದರೆ ದುರ್ದೈವದಿಂದ ಅವರ ಬಾಯಲ್ಲಿ ಹೇಳಿಸಿದ್ದಾರೆ ಏನು ಮಾಡುವುದು? ಇದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಅಷ್ಟೆ ಗೌರವವಿದೆ, ರಾಜ್ಯಪಾಲರಿಗೆ ಎಷ್ಟು ಗೌರವ ಕೊಡುತ್ತೇವೆಯೋ ಅಷ್ಟೇ ಗೌರವ ಕೊಡುತ್ತೇವೆ, ಆದರೆ ಈ ರೀತಿಯ ಹೇಳಿಕೆಯನ್ನು ಏತಕ್ಕೆ ಕೊಡಬೇಕು? ರಾಜ್ಯಪಾಲರ ಭಾಷಣದಲ್ಲಿ ಏನಿದೆ? ಒಂದು ಸಪ್ಪೆಯಾದಂಥ ಭಾಷಣ ಹೊಸದಾಗಿ ಏನೂ ಕಾಣುತ್ತಿಲ್ಲ. ಇವರು ಮೊದಲನೆ ವರ್ಷ ಭ್ರಷ್ಟಾಚಾರ ನಿರ್ಮೂಲನ ಮಾಡುತ್ತೇವೆಂದು ಹೇಳಿದ್ದರು, ಇದರ ವಿರುದ್ಧ ಯುದ್ಧೋಪಾದಿಯಲ್ಲಿ ಸಮರ ಸಾರುತ್ತೇವೆ ಎಂದು ಹೇಳಿದ್ದರು. ಇವತ್ತು ಏನೂ ಹೇಳಿಲ್ಲವೆಂದರೆ ರಾಜ್ಯದಲ್ಲಿ ಭ್ರಷ್ಟಾಚಾರ ಹೋಗಿಬಿಟ್ಟಿದೆ, ಇಲ್ಲವೇ ಇಲ್ಲವೆಂದಾಯಿತು. ಅದರ ಬಗ್ಗೆ ಏನೂ ಹೇಳೇ ಇಲ್ಲ ಇಷ್ಟು ಪ್ರಮಾಣ ಆಗಿದೆ, ನಮ್ಮ ಕೈಯಲ್ಲಿ ಮಾಡಲಾಗಿಲ್ಲ ಅಥವಾ ಅದನ್ನು ನಿಲ್ಲಿಸುತ್ತೇವೆಂದು ಹೇಳಿಲ್ಲ. ಇನ್ನು ಲೋಕಾಯುಕ್ತರ ಬಗ್ಗೆ ಅವರಿಗೆ ನಾನು ಬಹಳ ಶಕ್ತಿ ಕೊಡುತ್ತೇನೆ, ಏನೋ ಮಾಡುತ್ತೇವೆಂದು ಹೇಳಿದ್ದೀರಿ, ಅದರ ಬಗ್ಗೆ ಏನೋ ಹೇಳಿಲ್ಲ. ಈ ಬರಗಾಲದ ವಿಷಯದಲ್ಲಿ ಸಂಪೂರ್ಣವಾಗಿ ಕೇಂದ್ರವನ್ನೇ ಅವಲಂಬಿಸಿದ್ದಾರೆ ಕೇಂದ್ರ ಸರ್ಕಾರದವರು ಬರದೇ ಇದ್ದರೆ, ಆ ಬರಗಾಲವನ್ನು ನಿಭಾಯಿಸುವಂತಹ ಧೈರ್ಯ ಆ ರಾಜ್ಯಪಾಲರ ಭಾಷಣದಲ್ಲಿ ನಾವು ಕಾಣುತ್ತಿಲ್ಲ, ಕೇಂದ್ರ ಸರ್ಕಾರ ಏನೂ ಕೂಡ ಒಂದು ವೇಳೆ ಕೊಡದೇ ಇದ್ದರೆ ಬರಗಾಲವನ್ನು ನಿಭಾಯಿಸುವಂತಹ ಧೈರ್ಯ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತಿಲ್ಲ; ಅದರಲ್ಲಿ ಜನಪರವಾದ ಹೊಸ ಯಾವ ಯೋಜನೆಗಳೂ ಕಾಣುತ್ತಿಲ್ಲ. ಜನಪರವಾದ ಹೊಸ ಹೊಸ ಕಾರ್ಯಕ್ರಮಗಳನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾಗುತ್ತದೆ. ಅದ್ಯಾವುದನ್ನು ಹೇಳಿಲ್ಲ. ರೈತರಿಗೆ ಬೇಕಾದ ಕೃಷಿ ಕೈಗಾರಿಕೆಗಳು ಸಂಪೂರ್ಣವಾಗಿ ನಶಿಸಿ ಹೋಗಿದ್ದಾವೆ, ನಮ್ಮ ಕೋಪರೇಟಿವ್ ಇಂಡಸ್ಟ್ರೀಸ್ ಸಂಪೂರ್ಣವಾಗಿ ಹಾಳಾಗುತ್ತಿವೆ, ರೈತರಿಗೆ ಬೇಕಾದ ಕೈಗಾರಿಕೆಗಳೆಲ್ಲಾ ಹಾಳಾಗುತ್ತಿವೆ, ಅವನ್ನು ಪುನಶ್ಚೇತನಗೊಳಿಸಲು ಯಾವ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ ಎನ್ನುವುದು ಕೂಡ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತಿಲ್ಲ. ಇನ್ನು ವಿದ್ಯುತ್ ಅಭಾವದ ಬಗ್ಗೆ ನಮ್ಮ ನಾಯಕರೆಲ್ಲಾ ಮಾತನಾಡಿದ್ದಾರೆ, 12,3, 2 ಗಂಟೆ ವಿದ್ಯುತ್ ಕೊಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ, ಅದೆಲ್ಲಾ ಸುಳ್ಳು ಆದರೆ ಆ ವಿದ್ಯುತ್ ತುರ್ತು ಪರಿಸ್ಥಿತಿಯನ್ನು ನಾವು ಹೇಗೆ ನಿಭಾಯಿಸುತ್ತೇವೆ, ಇದನ್ನು ಹೇಗೆ ಮಾಡಬಲ್ಲೆವು ಎನ್ನುವುದರ ಬಗ್ಗೆಯೂ ಕೂಡ ಆ ರಾಜ್ಯಪಾಲರ ಭಾಷಣದಲ್ಲಿ ಏನೂ ಕಾಣುತ್ತಿಲ್ಲ. ಇನ್ನು ಹೊಸ ಉದ್ಯೋಗಗಳು ಸೃಷ್ಟಿಯಾಗಬೇಕಲ್ಲವೇ? ಅದರ ಬಗ್ಗೆಯೂ ಇಲ್ಲಿ ಏನೂ ಹೇಳಿಕೆ ಇಲ್ಲ. ರೈತರಿಗೆ ನೇರವಾಗಿ ಸಾಲ ಕೊಡುತ್ತೇವೆಂದು ಹೇಳಿದಿರಿ. ಹಿಂದಿನ ಸಹಕಾರ ಮಂತ್ರಿಗಳು ಇದ್ದಾಗ ಇದು ಆಗುವುದಿಲ್ಲ

ಸರಿಯಲ್ಲವೆಂದು ಹೇಳಿದೆ ಅಪೆಕ್ಸ್ ಬ್ಯಾಂಕ್‌ನಿಂದ ನೇರವಾಗಿ ಸೊಸೈಟಿಗಳಿಗೆ ಕೊಡುವುದು, ಡಿಸಿಸಿಬ್ಯಾಂಕ್ ಅನ್ನು ತೆಗೆದುಬಿಡುತ್ತೇವೆ ನಬಾರ್ಡ್‌ನಿಂದ ನೇರವಾಗಿ ಸೊಸೈಟಿಗೆ ಕೊಡುತ್ತೇವೆ ಆದರಿಂದ ಬಡ್ಡಿ ಬಹಳ ಕಡಿಮೆಯಾಗುತ್ತದೆಂದು ಹೇಳಿದ್ದರು, ಇದು ನಿಮ್ಮಿಂದ ಸಾಧ್ಯವಿಲ್ಲ, ನಡೆಯುವುದಿಲ್ಲ ಎಂದು ನಾನು ಮುಖ್ಯಮಂತ್ರಿಗಳಿಗೆ ಹೇಳಿದ್ದೆ ಅದು ಹೇಗೆ ನಡೆಯುವುದಿಲ್ಲ ಮಾಡೇ ತೀರುತ್ತೇವೆಂದು ಹೇಳಿದರು ಮಾಡಿದರೆ? ನೇರವಾಗಿ ಅಪೆಕ್ಸ್ ಬ್ಯಾಂಕ್ ಬಿಟ್ಟು ಸಾಲ ಕೊಡಲು ನಿಮಗೆ ಇವತ್ತು ಸಾಧ್ಯವಿದೆಯೇ? ಸಾಧ್ಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು):- ಮಾನ್ಯ ಮುಖ್ಯಮಂತ್ರಿಗಳಿಗೆ ನೀವು ಹೇಳಲಿಲ್ಲ ಡಿ.ಕೆ. ಶಿವಕುಮಾರ್‌ಗೆ ಹೇಳಿದಿರಿ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ, ಪುನಃ ಅವರು ನನಗೆ ಪ್ರಶ್ನೆ ಮಾಡಿ ಕೇಳಿದರು, ಪಾಟೀಲರೇ ನೀವೇ ಹೇಳುತ್ತೀರಿ, ಅಧಿಕಾರಿಗಳನ್ನು ಕೇಳಿಕೊಂಡು ಬಂದು ಅವರು ಆಗುವುದಿಲ್ಲವೆಂದು ಹೇಳಿದರು, ಆದರೂ ಕೊನೆಗೆ ನಾವು ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ನಿನ್ನೆ ಎಲ್ಲರೂ ಬಾವಿಗೆ ಬಿದ್ದಿದ್ದವು, ಆ ಬಯಲು ಸೀಮೆ ಅಭಿವೃದ್ಧಿ ಮಂಡಳಿಗಳನ್ನು ರದ್ದು ಮಾ ಡಿ ಎಂದು ಹೇಳಿದ್ದಕ್ಕೆ ಹಣ ಬರುತ್ತಿದೆ ಅದನ್ನು ಕೆಡಿಸುವುದಕ್ಕೆ ಹೊರಟಿದ್ದೇವೆಂದು ನಿಮಗೆ ಸಿಟ್ಟು ಬಂತು. ಹೈದರಾಬಾದ್‌ಗಿಂತ ಬಯಲುಸೀಮೆ ಕೆಟ್ಟಿದೆ, ನೀವು ಬಹಳ ಹಿಂದುಳಿದ್ದೀರಿ, ನೀವು ಅಭಿವೃದ್ಧಿ ಹೊಂದುವುದಕ್ಕೆ ನಮ್ಮ ಅಭ್ಯಂತರವಿಲ್ಲ ಸಂತೋಷ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಬಯಲು ಸೀಮೆ ನಮ್ಮ ಹೈದರಾಬಾದ್‌ಗಿಂತಲೂ ಕೆಟ್ಟಿದೆ ಎಂದು ಹೇಳುತ್ತಿರಿ, ನಾವು ಕರ್ನಾಟಕದಲ್ಲಿದ್ದೇವೆ, ಕಲ್ಬುರ್ಗಿಯವರು ನಾವು, ನಿಮ್ಮ ಹೈದರಾಬಾದ್‌ಗಿಂತ ಬಯಲು ಸೀಮೆ ಕೆಟ್ಟಿದೆ ಎಂದು ಹೇಳಿದರೆ ಏನು ಮಾಡುವುದು, ಸಭಾಧ್ಯಕ್ಷರೆ ತಾವೇ ನ್ಯಾಯ ಬಗೆಹರಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್:- ತಾವೆಲ್ಲಾ ಗುರುವಿಟ್ಟಲ್‌ನಿಂದ ಏಳೇಳು ಸಲ ಆರಿಸಿ ಬಂದು ಎಲ್ಲಾ ಟಾರ್ ರೋಡ್ ಮಾಡಿಕೊಂಡು ನಮ್ಮನ್ನು ಅಲ್ಲಿ ಕುಳ್ಳಿರಿಸಿದ್ದೀರಿ, ಹಾಗಾದರೆ ನೀವೇನೂ ಅಲ್ಲಿ ಏನು ಮಾಡೇ ಇಲ್ಲವಾ ಏಳೇಳು ಸಲ ಆಯ್ಕೆ ಆಗಿ ಬಂದು ಯಾವಾಗ ಬಂದರೂ ಅಧಿಕಾರದಲ್ಲೇ ಇದ್ದೀರಿ, ವಿರೋಧಪಕ್ಷದಲ್ಲಿದ್ದರೂ ವಿರೋಧಪಕ್ಷದ ನಾಯಕರಾಗಿದರುತ್ತೀರಿ.

ಶ್ರೀ ಹಂಪನಗೌಡ ಬಾದರ್ಲಿ:- ಪಾಟೀಲರೆ, ಖರ್ಗೆಯವರು ಮಾಡಿಕೊಂಡಿದ್ದಾರೆಂದರೆ ಹೈದರಾಬಾದ್‌ಕರ್ನಾಟಕ ಏರಿಯಾ ಎಲ್ಲಾ ಅಭಿವೃದ್ಧಿಯಾಗಿದೆ ಎಂದರ್ಥವೇ?

ಮಾನ್ಯ ಸದಸ್ಯರೊಬ್ಬರು:- ಹಿಂದೆ ಮಂತ್ರಿಗಳಾಗಿದ್ದಾಗ ಮಾನ್ಯ ಎಸ್‌ಎಸ್. ಪಾಟೀಲರು ಹೈದರಾಬಾದ್ ಕರ್ನಾಟಕವನ್ನು ನೋಡಿಲ್ಲ ಎಂದು ಕಾಣುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ:- ಕೆ.ಹೆಚ್ ಪಾಟೀಲರು ಗದಗನ್ನು ಡೆವಲಪ್ ಮಾಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಹೇಳುವುದೇನೆಂದರೆ, ಇದೆಲ್ಲಾ ನಂಜುಂಡಪ್ಪನವರ ವರದಿಯಲ್ಲಿ ಬಂದಿದೆ, ನಮ್ಮ ಹಳೆಯ ಮೈಸೂರಿನಲ್ಲಿ ಎಲ್ಲಾ ಮುಂದುವರೆದಿದೆ ಎಂದಿಲ್ಲ, ನಾನು ಹಾಗಾದರೆ ಬಾಂಬೆ ಕರ್ನಾಟಕವೆಲ್ಲಾ ಕೋಆಪರೇಟಿವ್ ಏರಿಯಾದಲ್ಲಿ ಡೆವಲಪ್

ಆಗಿದೆ ಎಂದು ಅರ್ಥವೇನು? ಮಾನ್ಯ ರೇವಣ್ಣನವರ ಕ್ಷೇತ್ರಕ್ಕೆ ಹೋಗಿದ್ದೇನೆ ಅಲ್ಲಿ ರಸ್ತೆಯಲ್ಲಿ ಎತ್ತಿನಗಾಡಿ ಹೋಗುವುದಿಲ್ಲ. ಇಡೀ ರಾಜ್ಯದಲ್ಲಿ ಯಾವ್ಯಾವ ಕ್ಷೇತ್ರಗಳು ಹಿಂದುಳಿದಿದ್ದಾವೆ, ಯಾವುದಕ್ಕೆ ಎಷ್ಟು ಹಣ ಕೊಡಬೇಕು ಎಂಬುದನ್ನು ನಂಜುಂಡಪ್ಪನವರು ಹೇಳಿದ್ದಾರೆ. ಆದುದರಿಂದ ದಯವಿಟ್ಟು ಆ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಸ್ವಲ್ಪ ಹಣವನ್ನಾದರೂ ಕೊಡಿ ಇಲ್ಲದಿದ್ದರೆ ತೆಗದುಬಿಡಿ. ರಾಜುಗೌಡರು ಬಯಲುಸೀಮೆ ರಾಜ್ಯ ಮಂತ್ರಿಗಳು ಅವರು ಇಲ್ಲ, ನಮ್ಮ ಕ್ಷೇತ್ರಕ್ಕೆ ಕರೆದುಕೊಂಡು ಹೋಗಬೇಕೆಂದಿದ್ದೆ, ಅವರು ಬರಲೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅದೇನೆಂದು ಗೊತ್ತಿಲ್ಲ ನಿಮ್ಮ ಕ್ಷೇತ್ರಕ್ಕೆ ಬರಲು ನಿಮ್ಮ ಮುಖ್ಯಮಂತ್ರಿಗಳು ಹೆದರಿದರು, ಆಮೇಲೆ ಚಾಮರಾಜನಗರ, ಪಾವಗಡ, ಇವಕ್ಕೆ ಯಾರೂ ಹೋಗುವುದಿಲ್ಲ ಏತಕ್ಕೆ ಏನೋ ಗೊತ್ತಿಲ್ಲ, ಒಂದು ಸಾರಿ ತೋರಿಸಿ.

ಶ್ರೀ ಎಸ್.ಎಸ್. ಪಾಟೀಲ್:- ಅಧ್ಯಕ್ಷರೇ ತಮಗೂ ಗೊತ್ತಿದೆ ಮುಖ್ಯಮಂತ್ರಿಗಳು ಬಂದರೆ ಸರ್ಕಾರ ಬೀಳುತ್ತೆಂದು ಇದೆ, ಇವರದ್ದೇ ಹೇಳುತ್ತೇನೆ, ಅಧ್ಯಕ್ಷರೆ, ಇವರು ಶಿಕ್ಷಣ ರಾಜ್ಯ ಮಂತ್ರಿಯಾಗಿದ್ದಾಗ ಮುಂಡರಗಿಗೆ ಬಂದರು ನಂತರ ಕೂಡಲೇ ಸಚಿವಸಂಪುಟದ ಮಂತ್ರಿಯಾದರು ಈಗ ಏನಾದರೂ ಅಲ್ಲಿ ಬಂದರೆ ಡೈರೆಕ್ಟ್ ಮುಖ್ಯಮಂತ್ರಿಗಳಾಗುತ್ತಾರೆ. ಇವರು ಒಂದೂವರೆ ವರ್ಷದಲ್ಲಾದರೂ ಆಗಬಹುದು, ಹೇಳುವುದಕ್ಕೆ ಆಗುವುದಿಲ್ಲ. ಈಗ ಮುಂಡರಗಿ ಬರಲಿ, ಮುಖ್ಯಮಂತ್ರಿ ನಿಕ್ಕೆ, ಕಷ್ಟವೇನಾದರೂ ಬಂದರೆ ಅದೇನೇ ಇರಲಿ ಸರ್ಕಾರ ಸಚಿವರೇ, ತಾವು ಮೊದಲನೇ ವರ್ಷ ಹೇಳಿದ್ದೀರಿ ಆಗ ತಾವು ಇರಲಿಲ್ಲ.

5.10 ಪಿ.ಎಂ

ಸಹಕಾರಿ ತತ್ವಗಳು ಏನಿವೆ ಆ ತತ್ವಗಳಂತೆ ನಾವು ನಡೆಯುತ್ತೇವೆ, ಸರ್ಕಾರದ ಹಸ್ತಕ್ಷೇಪವನ್ನು ತೆಗೆಯುತ್ತೇವೆ, ಇನ್ನಷ್ಟು ಫ್ರೀ ಆಗಿ ಬಿಡುತ್ತೇವೆಂದು ಎಲ್ಲಾ ಹೇಳಿದ್ದೀರಿ ಹಿಂದಿನ ಸಹಕಾರ ಸಚಿವರು ಇದನ್ನು ಮೊದಲನೇ ವರ್ಷದಲ್ಲಿ ಹೇಳಿದ್ದರು. ಶ್ರೀ ವಿಶ್ವನಾಥ್‌ರವರೇ, ನೀವು ಆಗ ಸಹಕಾರ ಸಚಿವರಾಗಿರಲಿಲ್ಲ. ಹಿಂದಿನವರು ತೀರ್ಪು ಕೊಟ್ಟು ಹೋದರು. ಈಗ ಬಂದು ಬೈಸಿಕೊಳ್ಳುವುದಕ್ಕೆ ನೀವು ಇದ್ದೀರಿ. ನಿಮ್ಮ ಮೇಲೆ ಗದಾಪ್ರಹಾರ ಶುರುವಾದವು. ಸಹಕಾರಿ ಕ್ಷೇತ್ರದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಮೊದಲನೇ ವರ್ಷದಲ್ಲಿ ಹೇಳಿದ್ದರೂ; ಈಗ ಏನೂ ಹೇಳಲಿಲ್ಲ. ಹಸ್ತಕ್ಷೇಪ ಮಾಡುತ್ತೇವೆಂದಲಾದರೂ ಹೇಳಬೇಕಾಗಿತ್ತು. ರಾಜ್ಯಪಾಲರ ಭಾಷಣ್ಣದಲಿ ಸಹಕಾರಿ ಕ್ಷೇತ್ರದ ಬಗ್ಗೆ ಒಂದು ಚಕಾರ ಶಬ್ದವನ್ನು ತೆಗೆದಿಲ್ಲ. ಇನ್ನು ವಿದ್ಯಾರ್ಥಿನಿಯರಿಗೆ ಉಚಿತ ಊಟ, ಶಿಕ್ಷಣ ಮುಂತಾದವನ್ನೆಲ್ಲ ಒದಗಿಸುತ್ತೇವೆಂದು ಹೇಳಿದ್ದರು. ಸರ್ಕಾರಿ ಶಾಲೆಗಳಲ್ಲಿ ಇರುವ ವಿದ್ಯಾರ್ಥಿನಿಯರಿಗೆ ಮಾತ್ರ ಪುಕ್ಕಟೆಯಾಗಿ ಶಿಕ್ಷಣ ಕೊಡುತ್ತೇವೆಂದು ಹೇಳಿರುವುದಕ್ಕೆ ನಾನು ಕಳೆದ ಸಾರಿಯೇ ಹೇಳಿದ್ದೆ. ಬರೀ ಸರ್ಕಾರಿ ಶಾಲೆಯವರಿಗೆ ಮಾತ್ರ ಎಂದರೆ ಇದರಿಂದ ಉತ್ತರ ಕರ್ನಾಟಕದಲ್ಲಿ ಓದುವಂಥ ಮಕ್ಕಳಿಗೆ ಅನ್ಯಾಯವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಶೇಕಡ 90 ಭಾಗ ಖಾಸಗಿ ಸಂಸ್ಥೆಗಳೇ ಇವೆ. ಆ ಶಾಲೆಗಳಲ್ಲಿ ಓದುತ್ತಿರುವಂಥವರು ಹೆಣ್ಣುಮಕ್ಕಳಲ್ಲವೇ? ಸರ್ಕಾರಿ ಶಾಲೆಗಳು ಎಂದರೆ ಇಲ್ಲಿರುವ ಮಕ್ಕಳಿಗೆ ಮಾತ್ರ ಅನುಕೂಲವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಓದುವಂಥ ಮಕ್ಕಳಲ್ಲಿ ಬಡವರು ಇಲ್ಲವೇ, ಅಲ್ಲಿ ಹೆಣ್ಣುಮಕ್ಕಳು ಇಲ್ಲವೇ? ಅದರ ಬಗ್ಗೆ ದಯವಿಟ್ಟು ಸೂಕ್ತ ಗಮನಹರಿಸಿ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾನು ಸಲಹೆ

ಮಾಡುವುದೇನೆಂದರೆ ಎಲ್ಲಾ ಮಕ್ಕಳಿಗೆ ಅರಿವೆ ಕೊಡುತ್ತೇವೆ, ಇಲ್ಲಾ ಮಕ್ಕಳಿಗೆ ಊಟ ಕೊಡುತ್ತೇವೆ, ಎಲ್ಲಾ ಮಕ್ಕಳಿಗೆ ಫ್ರೀ ಆಗಿ ಶಿಕ್ಷಣ ಕೊಡುತ್ತೇವೆ ಎಂದರೆ ಅದು ತಪ್ಪು. ಹರಿಜನರು ಇರಬಹುದು, ಬ್ರಾಹ್ಮಣರು ಇರಬಹುದು, ಲಿಂಗಾಯಿತರು ಇರಬಹುದು, ಆದರೆ ಬಡವರ ಮಕ್ಕಳಿಗೆ ಮಾತ್ರ ಬಟ್ಟೆಗಳನ್ನು ಕೊಡಬೇಕು, ಬಡವರ ಮಕ್ಕಳಿಗೆ ಮಾತ್ರ ಶಾಲೆಗಳಲ್ಲಿ ಊಟ ಕೊಡಬೆಕು, ಬಡವರ ಮಕ್ಕಳಿಗೆ ಮಾತ್ರ ಫ್ರೀ ಆಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡಬೇಕು. ಆ ರೀತಿ ಕೊಟ್ಟರೆ ಮಾತ್ರ ಸರ್ಕಾರಕ್ಕೆ ದುಡ್ಡು ಉಳಿಯುತ್ತದೆ ಮತ್ತು ಎಲ್ಲಾ ಶಾಲೆಗಳಲ್ಲಿ ಇರುವ ಬಡ ಮಕ್ಕಳಿಗೆ ಕೊಡಬಹುದು. ನಮ್ಮ ಸರ್ಕಾರ ಇದ್ದಾಗಲೂ ಶಾಲೆಗಳಲ್ಲಿ ಇದ್ದಂತ ಎಲ್ಲಾ ಮಕ್ಕಳಿಗೂ ಕೊಡಬೇಕೆಂದು ಏನೋ ಒಂದು ತತ್ವ ನನಗೆ ಹೇಳಿದರು. ಏನೆಂದರೆ ಶ್ರೀಮಂತರ ಮಗ ಶಾಲೆಗೆ ಬರುವಾಗ ಒಳ್ಳೆಯ ಬಟ್ಟೆಯನ್ನು ಹಾಕಿಕೊಂಡು ಬರುವುದು, ಬಡವರ ಮಕ್ಕಳು ಕಡಿಮೆ ದರ್ಜೆಯ ಬಟ್ಟೆ ಹಾಕಿಕೊಂಡು ಬರುವುದರಿಂದ ಶಾಲೆಗಳಲ್ಲಿ ಮಕ್ಕಳ ಮಧ್ಯೆ ಮಾನಸಿವಾಗಿ ಬೇದಭಾವ ಕೀಳರಿಮೆಯಾಗುತ್ತದೆ, ಅದಕ್ಕಾಗಿ ನಾವು ಎಲ್ಲಾ ಮಕ್ಕಳಿಗೂ ಒಂದೇ ತರಹದ ಬಟ್ಟೆಯನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದರು. ನನ್ನ ಪ್ರಕಾರ ಇದ್ದವರು ಅಂದರೆ ಶ್ರೀಮಂತರ ಮಕ್ಕಳಿಗೆ ಸುಮ್ಮನೆ ಕೊಡುವ ಅವಶ್ಯಕತೆಯಿಲ್ಲ. ನಾನು ನೋಡಿದ್ದೇನೆ. ಶ್ರೀಮಂತರ ಮಕ್ಕಳು ಒಬ್ಬರೂ ಸಹ ಸರ್ಕಾರದಿಂದ ಕೊಟ್ಟ ಬಟ್ಟೆಯನ್ನು ಹಾಕಿಕೊಂಡು ಬರುವುದಿಲ್ಲ. ಒಬ್ಬರನ್ನಾದರೂ ತೋರಿಸಿಬಿಡಿ ನೋಟೋಣ. ಆದ್ದರಿಂದ ದಯವಿಟ್ಟು ಈ ಬಟ್ಟೆಬರೆಗಳನ್ನೆಲ್ಲಾ ಪುಕ್ಕಟೆಯಾಗಿ ಹರಿಜನರಿಂದ ಹಿಡಿದು ಬ್ರಾಹ್ಮಣ ಜಾತಿಯವರೆಗೆ ಯಾರು ಬಡವರು ಇದ್ದಾರೆ ಅವರ ಮಕ್ಕಳಿಗೆ ಮಾತ್ರ ಕೊಡಬೇಕು. ಈ ರೀತಿ ಮಾಡಿದರೆ ಮಾತ್ರ ಎಲ್ಲಾ ಶಾಲೆಗಳಲ್ಲಿರುವ ಬಡಮಕ್ಕಳಿಗೆ ಬಟ್ಟೆ ಕೊಡುವ ವ್ಯವಸ್ಥೆಯನ್ನು ಮಾಡಬಹುದು. ಇನ್ನು ಈ ರಾಜ್ಯಪಾಲರ ಭಾಷಣದಲ್ಲಿ ನಮ್ಮ ದನದ ಮಂತ್ರಿಗಳ ಇಲಾಖೆಯ ಬಗ್ಗೆ, ಜನದ ಮಂತ್ರಿಗಳ ಇಲಾಖೆಯ ಬಗ್ಗೆ, ಕಾಡು ಮಂತ್ರಿಗಳ ಇಲಾಖೆಯ ಬಗ್ಗೆ ಏನೂ ಇಲ್ಲ. ಈ ರಾಜ್ಯದ ದನಗಳೆಲ್ಲ ನೀರು ಮೇವು ಇಲ್ಲದೆ ಸಾಯುತ್ತಿವೆ. ಯಾವ ದವಾಖಾನೆಯಲ್ಲೂ ಔಷಧಿಯಿಲ್ಲ. ಡಾಕ್ಟರುಗಳು ಇಲ್ಲ, ಇದರ ಬಗ್ಗೆ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಏನೂ ಹೇಳಿಲ್ಲ. ಆಗದಿರುವಂಥವನ್ನು ಸುಮ್ಮನೆ ಹೇಳಿದ್ದೀರಿ ಅಷ್ಟೇ. ಶ್ರೀ ಕಾಗೋಡು ತಿಮ್ಮಪ್ಪನವರು ಸದನದಲ್ಲಿ ಇಲ್ಲ. ಅವರು ಜನರ ಮಂತ್ರಿಗಳು ಅಂದರೆ ಜನರ ಆರೋಗ್ಯವನ್ನು ಕಾಪಾಡುವಂಥ ಮಂತ್ರಿಗಳು. ಮತ್ತು ಶ್ರೀ ಮಹದೇವ್ ಇವರು ದನದ ಆರೋಗ್ಯವನ್ನು ಕಾಪಾಡುವಂಥವರು.

ಉಪಾಧ್ಯಕ್ಷರು:- ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆ ಆಯಿತು. ಬೇಗ ಮಾತನಾಡಿ ಮುಗಿಸಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್:- ಇನ್ನೂ ಮುಗಿದಿಲ್ಲ ಮಾನ್ಯ ಉಪಾಧ್ಯಕ್ಷರೆ, ಬೇಡ ಎಂದರೆ ನಾನು ಇಷ್ಟಕ್ಕೆ ನಿಲ್ಲಿಸಿ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ನಾನು ಹೇಳುವುದೇನೆಂದರೆ, ನಾನು ಇನ್ನೂ ಸಿ.ಇ.ಟಿ. ವಿಚಾರದಲ್ಲಿ ಮಾತನಾಡಿಲ್ಲ. ಬರಗಾಲದ ಬಗ್ಗೆ ಮಾತನಾಡಿಲ್ಲ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಬೇಕಾದಷ್ಟು ಇಲ್ಲರೂ ಮಾತನಾಡಿರಿ, ಫ್ರೀ ಆಗಿ ಬೇಕಾದಷ್ಟು ಸಮಯವಕಾಶ ಕೊಡುತ್ತೇನೆಂದು ಅಧ್ಯಕ್ಷರು ಹೇಳಿದ್ದರು. ಈಗ ಮಾತನಾಡಿದ್ದು ಸಾಕು ಎಂದು ಹೇಳಿ ನಾನು ಮಾತನಾಡುವುದನ್ನು ನಿಲ್ಲಿಸಿದರೆ ಹೇಗೆ?

ಉಪಾಧ್ಯಕ್ಷರು:- ನಾವು ಒಬ್ಬರೇ ಗಂಟೆಗಟ್ಟಲೆ ಮಾತನಾಡಿದರೆ ಹೇಗೆ ಟೈಮ್ ಎಲ್ಲಿ ಇದೆ?

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಸರ್ಕಾರದವರು ಎಲ್ಲವನ್ನೂ ಚೆನ್ನಾಗಿ ನಡೆಸಿದ್ದರೆ ನಾವು ಹೆಳುವುದೇ ಬೇಕಾಗಿರಲಿಲ್ಲ. ನೀವೇ ಆ ರೀತಿ ಹೇಳಿಬಿಟ್ಟರೆ ನಾವು ಏನು ಮಾಡುವುದು?

ಉಪಾಧ್ಯಕ್ಷರು:- ಇಲ್ಲಿ ಕೇಳಿ, ಈಗಾಗಲೇ ನಾವು ಅನೌನ್ಸ್‌ಮೆಂಟ್ ಮಾಡಿದ್ದೆವು. ತಾವೂ ಕೂಡ ಅದಕ್ಕೆ ಒಪ್ಪಿಕೊಂಡಿದ್ದಿರಿ. ಏನೆಂದರೆ, 19ನೇ ಮಾರ್ಚ್ 2003ರ ಬುಧವಾರದ ದಿವಸ ಸಾಯಂಕಾಲ 4 ಗಂಟೆಗೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಮುಕ್ತಾಯಗೊಂಡು ಸರ್ಕಾರದಿಂದ ಉತ್ತರ ಎಂದು ಇದೆ. ಎಲ್ಲರೂ ಕೂಡ ಗಂಟೆಗಟ್ಟಲೆ ಮಾತನಾಡಿದರೆ ಹೇಗೆ? ಆ ಮೇಲೆ ಹೊಸಬರಿಗೆ ಅವಕಾಶ ಕೊಡಿ ಎಂದು ಹೇಳುತ್ತೀರಿ. ಹಳೆಬರು ಗಂಟೆಗಟ್ಟಲೆ ಮಾತನಾಡಿದರೆ ಹೊಸಬರಿಗೆ ಅವಕಾಸ ಕೊಡುವುದಕ್ಕೆ ಸಮಯ ಎಲ್ಲಿರುತ್ತದೆ?

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಈ ಅಸೆಂಬ್ಲಿ ಪ್ರಾರಂಭವಾಗಿ ರಾಜ್ಯಪಾಲರ ಭಾಷಣವನ್ನು ಮಂಡಿಸಿ ಇಷ್ಟು ದಿವಸವಾದರೂ ಸದನದಲ್ಲಿ ಇದು ಚರ್ಚೆಗೆ ಬರುತ್ತಿರಲಿಲ್ಲ. ಇದು ಯಾರ ತಪ್ಪು? ಹೇಳಿರಿ ನೋಡೋಣ.

ಉಪಾಧ್ಯಕ್ಷರು:- ಹಾಗಾದರೆ ಬೇರೆಯವರು ಮಾತನಾಡುವುದು ಬೇಡವೇ?

ಶ್ರೀ ಎಸ್.ಎಸ್. ಪಾಟೀಲ್:- ಬೇರೆಯವರು ಮಾತನಾಡುವುದಕ್ಕೂ ಅವಕಾಶ ಕೊಡಿ. ಮಾತನಾಡಲಿ. ಇನ್ನೊಂದು ನಿಯಮಾವಳಿ ಮಾಡಿ. ನಾವೇನು ಮಾಡೋಣ ಅದಕ್ಕೇ?

ಉಪಾಧ್ಯಕ್ಷರು:- ಹಾಗಲ್ಲ, ಆ ರೀತಿ ನಿಯಮಾವಳಿಯನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲ. ದಯವಿಟ್ಟು ಇನ್ನೊಂದು ಐದು ನಿಮಿಷ ಮಾತನಾಡಿ ಮುಗಿಸಿ.

ಶ್ರೀ ಎಸ್.ಎಸ್. ಪಾಟೀಲ್:- ಇನ್ನು ಜನದ ಮಂತ್ರಿಗಳ ಇಲಾಖೆಯ ಬಗ್ಗೆ ಹೇಳುವುದಾದರೆ ಅಲ್ಲಿ ದವಾಖಾನೆಗೆ ಡಾಕ್ಟರುಗಳು ಇಲ್ಲ, ಔಷಧಿ ಇಲ್ಲ, ಆ ಮೇಲೆ ಆ ಆಸ್ಪತ್ರೆಗಳು ಬಿದ್ದು ಹೋಗುವ ರೀತಿಯಲ್ಲಿ ಇವೆ. ಈ ರೀತಿ ದನದ ಮತ್ತು ಜನರ ಆಸ್ಪತ್ರೆಗಳು ಇವೆ. ಅದರ ಒಳಗೆ ಹಂದಿ ಕೂಡ ಹೋಗುವುದಿಲ್ಲ. ಆ ಮಟ್ಟದಲ್ಲಿ ಆ ಆಸ್ಪತ್ರೆಗಳು ಇವೆ. ಇವುಗಳನ್ನೆಲ್ಲಾ ಜಿಲ್ಲಾಪಂಚಯತ್‌ನವರಿಗೆ ಕೊಟ್ಟುಬಿಟ್ಟಿದ್ದಾರಂತೆ. ಒಂದಕ್ಕೂ ಸಹ ಸುಣ್ಣಬಣ್ಣ ಹಚ್ಚಿಲ್ಲ. ಆ ಆಪರೇಷನ್ ಥಿಯೇಟರ್ ಹೇಗಿದೆ ಎಂದರೆ ಹಂದಿಯನ್ನು ಆಪರೇಷನ್ ಥಿಯೇಟರ್‌ಗೆ ತೆಗೆದುಕೊಂಡು ಹೋದರೂ ಅಲ್ಲಿಯ ಅವ್ಯವಸ್ಥೆ ನೋಡಿ ಕೂಡಲೇ ಹೊರಕ್ಕೆ ಓಡಿ ಬರುತ್ತವೆ. ಆ ರೀತಿ ಇವೆ. ಬಡವರನ್ನು ಆಪರೇಷನ್ ಮಾಡತಕ್ಕಂಥ ಸ್ಥಳ ಇದು. ಇದು ನಿಮಗೆಲ್ಲಾ ಗೊತ್ತಿದೆ. ಇದನ್ನು ಸುಮ್ಮನೆ ಹೇಳುವಂಥ ಮಾತಲ್ಲ ಗದಗ್‌ನಲ್ಲಿರುವ ನಮ್ಮ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಹೋಗಿ ನೋಡಿದಾಗ ಇಲ್ಲಿ ದನ ಕೊಯ್ಯುವುದಕ್ಕೆ ಯೋಗ್ಯ ಸ್ಥಳವಾಗಿದೆಯೇ, ಹಂದಿ ಯನ್ನಾದರೂ ಕೊಯ್ಯುವುದಕ್ಕೆ ಯೋಗ್ಯವಾಗಿದೆಯೇ ಎಂದು ಡಾಕ್ಟರನ್ನು ಕೇಳಿದೆ. ಅಲ್ಲಿಯೇ ಎಲ್ಲವನ್ನೂ ತುಂಬಿದ್ದಾರೆ. ನಾವು ಇಲ್ಲಿ ನಮ್ಮಂಥ ಪಂಡಿತರು ಸರ್ಕಾರದಿಂದ ಪುಕ್ಕಟೆ ಹಣ ತೆಗೆದುಕೊಂಡು ಹೋಗಿ ದೊಡ್ಡ ದೊಡ್ಡ ಹಾಸ್ಪಿಟಲ್‌ನಲ್ಲಿ ಆಪರೇಷನ್ ಮಾಡಿಸಿಕೊಳ್ಳುತ್ತೇವಲ್ಲಾ

ಇಲ್ಲಿ ಹೇಗಿದೆ ಮತ್ತು ಹಳ್ಳಿಗಳಲ್ಲಿ ಇರುವ ಆಸ್ಪತ್ರೆಗಳು ಬಡವರದ್ದು ನೋಡಬೇಕು, ಆಗ ಯಾವ ರೀತಿಯ ಅವ್ಯವಸ್ಥೆ ಇದೆ ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಜನರ ಮಂತ್ರಿಗಳು ಅಲ್ಲಿಯ ಆಸ್ಪತ್ರೆಗಳಿಗೆ ಡಾಕ್ಟರ್‌ಗಳು ವ್ಯವಸ್ಥೆ ಮಾಡಬೇಕು, ಸರಿಯಾಗಿ ಅಲ್ಲಿ ಸ್ವಚ್ಛತೆ ಇಡಬೇಕು, ಆಪರೇಷನ್ ಥಿಯೇಟರ್ ಸರಿಯಾಗಿರಬೇಕು, ಆಸ್ಪತ್ರೆಗಳಿಗೆ ಸುಣ್ಣಬಣ್ಣ ಹಚ್ಚಬೇಕು, ಎಲ್ಲಾ ರೀತಿಯಲ್ಲಿ ಇಲ್ಲಿ ಏನು ದೊಡ್ಡವರಿಗೆ ಸವಲತ್ತು ಸಿಗುತ್ತದೆ ಆ ಸವಲತ್ತು ಹಳ್ಳಿಗಾಡಿನಲ್ಲಿ ಇರುವ ಆಸ್ಪತ್ರೆಗಳಲ್ಲಿ ಕೂಡ ಇವರು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಶ್ರೀ ಬನ್ನಿಕೋಡ್‌ರವರೇ ಕರೆಕ್ಟ್, ಈಗ ಕಾಂಗ್ರೆಸ್‌ಗೆ ಸೇರಿ ತಾವು ಬಹಳ ಜಾಣರಾಗಿದ್ದೀರಿ, ಏಕೆಂದರೆ ರೈತರಿಗೆ ಕೈಬಿಟ್ಟಿರಿ. ಸಾಹೆಬ್ರೇ ನೀವು ರೈತರ ಹೆಸರಿನಲ್ಲಿ ಆರಿಸಿ ಬಂದಿದ್ದಿರಿ. ರೈತರ ಬಿಟ್ಟರೆ ಈ ಸಲ ಬಹಳ ಕಷ್ಟ ಇದೆ. ನೀವು ಎಲ್ಲಾ ರೈತ ಮೂವ್‌ಮೆಂಟ್‌ನಿಂದ ಬೆಳೆದು ಬಂದವರು. ರೈತರ ಬಗ್ಗೆ ಮಾತನಾಡುವಾಗ ನಗಬೇಡಿ. ನಿಮಗೂ ರೈತರ ಕಷ್ಟ ಗೊತ್ತಿದೆ. ಹಿರೇಕೆರೂರಿನಲ್ಲಿ ನೀವೇ ನನಗೆ ಹತ್ತು ಸಲ ಹೇಳಿದ್ದೀರಿ. ಎಲ್ಲರಿಗೂ ಗೊತ್ತಿದೆ. ಆದರೂ ಕೆಲವನ್ನು ವಿನೋದವಾಗಿ ಮಾತನಾಡಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಗಡಿ ಸಮಸ್ಯೆ ಬಗ್ಗೆ ಮಹಾಜನ್ ವರದಿಯೇ ಅಂತಿಮ ಎಂದು ಹೇಳಿದ್ದೇವೆ, ಈ ಬಗ್ಗೆ ಹಿಂದೆಯೇ ಅಸೆಂಬ್ಲಿಯಲ್ಲಿ ನಮ್ಮೆಲ್ಲರಿಂದ ನಿರ್ಣಯ ಆಗಿದೆ. ದುರ್ದೈವದಿಂದ ಅಂತಿಮ ಎಂದು ನಾವು ಏಕೆ ಹೇಳುತ್ತೇವೆ ಎಂದರೆ ಪುಕ್ಕರು ನಾವು. ಅನಿವಾರ್ಯವಾಗಿ ಹೇಳುತ್ತಿದ್ದೇವೆ. ನಿಜವಾಗಿಯೂ ಮಹಾಜನ್ ವರದಿಯಿಂದ ನಮಗೆ ಸಂಪೂರ್ಣವಾಗಿ ಲಾಭ ಆಗಿಲ್ಲ. ನಮ್ಮ ಸೋಲಾಪುರ ಬೇರೆ ರಾಜ್ಯಕ್ಕೆ ಹೋಯಿತು. ನಮ್ಮ ನಿಪ್ಪಾಣಿ ಹೋಗುತ್ತದೆ. ಆ ವರದಿಯಿಂದ ಕೂಡ ನಮ್ಮ ರಾಜ್ಯಕ್ಕೆ ಸಾಕಷ್ಟು ಅನ್ಯಾಯ ಆಗುತ್ತದೆ. ಆದರೂ ಕೂಡ 'ಹೂಂ' ಎಂದಿದ್ದೇವೆ. ಆದರೂ ಕೂಡ ಅವರು ಕೇಳುತ್ತಿಲ್ಲ, ಈಗ ಬೆಳಗಾಂ ಬೇಕೆಂದು ಅದರ ಹಿಂದೆ ಆ ಸರ್ಕಾರ ಬಿದ್ದಿದೆ. ಆ ಕಾರಣದಿಂದ ಮತ್ತೊಮ್ಮೆ ಈ ರಾಜ್ಯಪಾಲರ ಮುಖಾಂತರ ಹೇಳಿಸಬೇಕಾಗಿತ್ತು. ಆ ರೀತಿ ಹೇಳಿಸಿದರೆ ತಪ್ಪೇನಿಲ್ಲ. ರಾಜ್ಯಪಾಲರು ಆ ಮಾತನ್ನು ಹೇಳಿಲ್ಲ. ಇನ್ನು ರಾಜ್ಯಪಾಲರ ಭಾಷಣದಲ್ಲಿ ನಾಗಪ್ಪನವರ ಬಗ್ಗೆ ಸರ್ಕಾರ ಮೊಸಳೆ ಕಣ್ಣೀರು ಸುರಿಸಿದೆ. ಅಯ್ಯೋ ಕರ್ಮ ಶ್ರೀಕಂಠಯ್ಯಾಜಿ ಒಬ್ಬ ಎಂಥ ಪ್ರಾಮಾಣಿಕರನ್ನು ಕೊಂದ್ರಪ್ಪಾ, ಶಿವ ಶಿವ... ದೇವರಿಗೇ ಗೊತ್ತು. ಅದನ್ನು ನೆನೆಸಿದರೆ ನೋವು ಆಗುತ್ತದೆ, ದುಃಖವಾಗುತ್ತದೆ. ಯಾರದ್ದು ಸರ್ಕಾರ ಇದೆಯೋ ಅವರು ಕೊಂದರು ಎಂದು ಹೇಳುತ್ತೇನೆ. ನೀವು ಕೊಂದಿಲ್ಲ. ಆದರೆ ಅವರನ್ನು ಬಿಡಿಸಿಕೊಂಡು ಬರಲಿಕ್ಕೆ ಆಗಲಿಲ್ಲ ಅಪವಾದ ನಿಮ್ಮ ಮೇಲೆ, ಸರ್ಕಾರದ ಮೇಲೆ ಬಂದಿದೆ. ಇವತ್ತು ಕೂಡ ಇವರು ಏನು ಮಾಡಿದ್ದಾರೆಂದರೆ, ಒಂದು ಕಡೆ ಬಸವಣ್ಣನವರು ಈ ಸ್ಥಿತಿ ಹೇಳುತ್ತಾರೆ.

'ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ಅಯ್ಯಾ,'

ಹುತ್ತ ಬಡಿಯುತ್ತಿದ್ದಾರೆ. ಅಲ್ಲಿ ಹಾವು ಇಲ್ಲವೇ ಇಲ್ಲ. ಹುತ್ತ ಬಡಿಯುವುದಕ್ಕೆ ಶುರು ಮಾಡಿದ್ದಾರೆ. ಮೊನ್ನೆ ಹಿಡಿದೇ ಬಿಟ್ಟವರ ಹಾಗೆ ಹೇಳಿದ್ದನ್ನು ನೋಡಬೇಕಾಗಿತ್ತು. ಹಿಡಿದುಬಿಟ್ಟವರ ಹಾಗೆ ಹೇಳಿಬಿಟ್ಟರು. ಆ ಮೇಲೆ ಅವತ್ತು ಅಲ್ಲಿ ನಾಗಪ್ಪನವರು ಇದ್ದಂಥ ಸಮಯದಲ್ಲಿ ಏಕ್‌ದಂ ಸಿಕ್ಕೇಬಿಟ್ಟ, ಸುತ್ತು ಹಾಕೇಬಿಟ್ಟೆವು, ಎಂದು ಹೇಳಿದರು. ಅಲ್ಲಿ ಹಾವು ಇಲ್ಲವೇ ಇಲ್ಲ, ಬರೀ ಹುತ್ತ ಬಡಿಯುತ್ತಾ ಇವರು ಕುಳಿತುಬಿಟ್ಟಿದ್ದಾರೆ. ನಿಮ್ಮ ಕಡೆಯಿಂದ ಅವನನ್ನು ಹಿಡಿಯುವುದಕ್ಕೆ ಆಗುತ್ತದೆಯೋ

ಇಲ್ಲವೋ ಎಂಬುದನ್ನು ಹೇಳಿಬಿಡಿ. ಆಗದಿದ್ದರೆ ಸುಮ್ಮನೆ ಕೇಂದ್ರಸರ್ಕಾರದವರಿಗೆ ನಮ್ಮಿಂದ ಹಿಡಿಯುವುದಕ್ಕೆ ಆಗುವುದಿಲ್ಲ. ನೀವಾದರೂ ಹಿಡಿದು ಕೊಡಿ ಎಂದು ಹೇಳಿಬಿಡಿ. ನಿಮ್ಮ ಕಡೆಯಿಂದ ಖಂಡಿತ ಆಗುವುದಿಲ್ಲ. ಇನ್ನೊಂದು ಆಶ್ಚರ್ಯವಾಗುವಂಥದ್ದನ್ನು ಹೇಳುತ್ತೇನೆ. ಒಂದು ವೇಳೆ ನಾವು ಹೀಗೆಯೇ ಅವನನ್ನು ಕೈಬಿಟ್ಟರೆ ಈಗಾಗಲೇ ಮಾಜಿ ಸಚಿವರನ್ನು ಹಿಡಿದುಕೊಂಡು ಹೋಗಿದ್ದಾನೆ. ಮುಖ್ಯಮಂತ್ರಿಗಳನ್ನು ಹಿಡಿದುಕೊಂಡು ಹೋದರೆ ಆಶ್ಚರ್ಯಪಡಬೇಕಾಗಿಲ್ಲ. ಮುಖ್ಯಮಂತ್ರಿಗಳನ್ನು ಅವರ ಮನೆಗೆ ಬಂದು ಹಿಡಿದುಕೊಂಡು ಹೋದರೆ ಆಶ್ಚರ್ಯಪಡಬೇಕಾಗಿಲ್ಲ. ಅಂಥ ಪೋಲೀಸ್ ವ್ಯವಸ್ಥೆ ನಮ್ಮಲ್ಲಿ ಇದೆ. ಅಲ್ಲಿ ಕಾವಲು ಇಟ್ಟಂಥ ಪರಿಸ್ಥಿತಿ ಆ ರೀತಿ ಇದೆ. ನಾಗಪ್ಪನವರನ್ನು ಹಿಡಿದುಕೊಂಡು ಹೋಗಿ ಆದ ಪ್ರಕರಣದ ನಂತರ ಇನ್ನು ಯಾರನ್ನೂ ಮಧ್ಯಸ್ಥಗಾರರನ್ನು ಕಳುಹಿಸಬಾರದು ಎನ್ನುವ ತೀರ್ಮಾನ ಆಗಿದೆ. ಯಾರನ್ನೇ ಆಗಲಿ ಮುಖ್ಯಮಂತ್ತಿಗಳನ್ನು ಸಹ ಹಿಡಿದುಕೊಂಡು ಹೋದರೂ ಅಟ್ಯಾಕ್ ಮಾಡಿಯೇ ಬಿಡಿಸಿಕೊಂಡು ಬರುವುದೆಂದು ತೀರ್ಮಾನ ಆಗಿಹೋಗಿದೆ. ಆದರೆ ಮುಖ್ಯಮಂತ್ರಿಗಳಂಥವರನ್ನು, ಗೃಹಮಂತ್ರಿಗಳನ್ನು ಹಿಡಿದುಕೊಂಡು ಹೋದರೆ ಸರ್ಕಾರದ ಮರ್ಯಾದಿ ಏನು? ಇವತ್ತು ರಾಜ್ಯದಲ್ಲಿ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಕಾರಣದಿಂದ ನಿಮಗೆ ಎಚ್ಚರಿಕೆ ಕೊಡುತ್ತೇನೆ. ಅದರ ಬಗ್ಗೆ ವಿವರವಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಲೇ ಇಲ್ಲ. ಬರೀ ನಾಗಪ್ಪನವರ ಬಗ್ಗೆ ಒಂದಿಷ್ಟು ಮೊಸಳೆ ಕಣ್ಣೀರು ಸುರಿಸಿಬಿಟ್ಟಿದ್ದಾರೆ. ವಿಶ್ವನಾಥರವರೇ. ನೀವು ಹುಷಾರಾಗಿ ಅಲ್ಲಿ ಓಡಾಡಿ. ಹೇಳುವುದಕ್ಕೆ ಬರುವುದಿಲ್ಲ. ಇಲ್ಲಿ ನಗುತ್ತಿದ್ದೀರಿ. ಅಲ್ಲಿ ನಗುತವುದಕ್ಕಾಗುವುದಿಲ್ಲ. ಹಿಡಿದುಕೊಂಡು ಹೋದರೆ ಅಲ್ಲಿ ಅಳಬೇಕಾಗುತ್ತದೆ. ನಾಗಪ್ಪನವರನ್ನು ಭೇಟಿ ಆಗಿದ್ದಿದ್ದರೆ ನಿಮಗೆ ಗೊತ್ತಾಗುತ್ತಿತ್ತು. ಆ ಮಾತು ಬೇರೆ ಈ ಜನರ ಮಂತ್ರಿಗಳ ಬಗ್ಗೆ ಹೇಳುವುದಾದರೆ, ಮಿತ ಸಂತಾನದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೂ ಹೇಳಿಲ್ಲ. ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇವತ್ತು ಎಲ್ಲಾ ಸಮಸ್ಯೆಗೂ ಅದು ಮೂಲ, ಹೀಗೆ ಜನಸಂಖ್ಯೆಯನ್ನು ಬೆಳೆಸಿಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ. ನಾವು ಶೂರರು. ಯಾವುದಕ್ಕೆ ಶೂರರು ಎಂದರೆ ವರ್ಷಕ್ಕೆ ಒಂದು ಆಸ್ಟ್ರೇಲಿಯ ಖಂಡವನ್ನು ತಯಾರು ಮಾಡುವುದಕ್ಕೆ ನಮ್ಮ ಭಾರತೀಯರು ಶೂರರು. ಅದರಲ್ಲಿ ಕರ್ನಾಟಕದವರಾದ ನಾವು ಮಹಾ ಶೂರರು ಆ ಕಾರಣದಿಂದ ಮಿತ ಸಂತಾನದ ಬಗ್ಗೆ ಸರ್ಕಾರದ ಕಡೆಯಿಂದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ ಈ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಇದ್ದರೆ ಎಂದೆಂದಿಗೂ ಈ ರಾಜ್ಯ ಉದ್ಧಾರ ಆಗುವುದಕ್ಕೆ ಸಾಧ್ಯವಿಲ್ಲ..

ಶ್ರೀ ವಿಜಯಕುಮಾರ್ ಶೆಟ್ಟಿ:- ಸರ್, ಮಿತ ಸಂತಾನದ ಬಗ್ಗೆ ಹೇಳಿದಿರಲ್ಲಾ ತಮ್ಮ ಪ್ರೋಗ್ರಾಂ ಏನು ಎಂದು ಕೇಳಿದೆ.

ಶ್ರೀ ಎಸ್.ಎಸ್. ಪಾಟೀಲ್:- ನಮ್ಮ ಪ್ರೋಗ್ರಾಂ ಏನೆಂದರೆ ನಾವು ಇಲ್ಲಿಗೆ ಬರುವುದಕ್ಕೆ ಮೊದಲೇ ಒಂದು ಏಳೆಂಟು ಹಡೆದುಕೊಂಡುಬಿಟ್ಟಿವಿ. ಹಳೆಮಂದಿಯೆಲ್ಲಾ ಹೀಗೆ ಮಾಡಿಬಿಟ್ಟಿದ್ದೇವೆ. ಈಗ ಎಲ್ಲ ಹುಡುಗರಿಗೆ ಮಿತ ಸಂತಾನದ ಬಗ್ಗೆ ಹೇಳುತ್ತಿದ್ದೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಶ್ರೀ ಎಸ್.ಎಸ್. ಪಾಟೀಲ್ ಅವರು ಏನು ಹೇಳಿದರು ಎಂದರೆ ನಾವಂತೂ ದಾರಿತಪ್ಪಿದ್ದೇವೆ, ಮುಂದಾದರೂ ದಾರಿ ಹಿಡಿದುಕೊಂಡು ಹೋಗ್ರಪ್ಪಾ, ನಾವು ಇಲ್ಲಿಂದ ದಾರಿ ತಪ್ಪಿದ್ದೇವೆ, ಈಗ ಇಲ್ಲಿ ಬಂದಿದ್ದೇವೆ, ನೀವು ದಾರಿ ಹಿಡಿದುಕೊಂಡು ಹೋಗಿ, ಮಿತ ಸಂತಾನದಲ್ಲೂ ದಾರಿ ತಪ್ಪಿದ್ದೇವೆ, ಉಳಿದವರು ದಾರಿ ತಪ್ಪಬೇಡಿರಿ ಎಂದು ಬುದ್ಧಿ ಹೇಳುತ್ತಿದ್ದಾರೆ. ಇವರಿಗೆ ಕೆಟ್ಟ ಮೇಲೆ ಬುದ್ಧಿ ಬಂದೈತೆ.

ಶ್ರೀ ಎಸ್.ಎಸ್. ಪಾಟೀಲ್:- ಆ ದೃಷ್ಟಿಯಿಂದ 400 ವರ್ಷದ ಹಿಂದೆ ಸರ್ವಜ್ಞ ಹೇಳಿದ್ದಾನೆ. ಸ್ವಾತಂತ್ರ ಬಂದ ಮೇಲೂ ನಮಗೆ ಬುದ್ದಿ ಬಂದಿಲ್ಲ. ಸರ್ವಜ್ಞ ಅವರು ಎಲ್ಲಾ ಹಂತದಲ್ಲಿ ಹೇಳಿದ್ದಾರೆ.

'ಬೆಳೆದಂತೆ ಸಂತತಿಯು ಬೆಳೆಯುವುದೆ ಹೊಲ ಮನೆಯು
ಮಿತವಿರಲಿ ಸಂಸಾರ ಸುಖದಲ್ಲಿರುವುದು
ತಿಳಿಯುವುದು ನೀ ನೋಡೆಂದ ಸರ್ವಜ್ಞ.'

ಇದನ್ನು 400 ವರ್ಷಗಳ ಹಿಂದೆಯೇ ಎಚ್ಚರಿಕೆ ಕೊಟ್ಟಿದ್ದಾನೆ. ನಾವು ತಪ್ಪಿದ್ದೇವೆ. ಸ್ವಾತಂತ್ರ್ಯ ಬಂದು 55 ವರ್ಷ ಆದರೂ ನಾವು ನೋಡಿಲ್ಲ. ನಮ್ಮ ನೆಹರೂಜಿ ಮಾಡಿದ್ದು ಅದೇ ತಪ್ಪು. ಅದಕ್ಕೆ ಹೆಚ್ಚು ಒತ್ತು ನೆಹರೂಜಿ ಕೊಡಲಿಲ್ಲ. ಇನ್ನು ಈ ಮಿತ ಸಂತಾನ ಯಾರು ಮಾಡುತ್ತಾರೆ ಅವರಿಗೆ ಒಂದು ಅನ್ಯಾಯವಾಗುತ್ತದೆ. ನಾನು ಮಂತ್ರಿಯಾಗಿದ್ದಾಗ ಹಿರೆಕೆರೂರಿನ ಚಿಕ್ಕಎಡಚಿ ಎನ್ನುವ ಒಂದು ಗ್ರಾಮಕ್ಕೆ ಹೋದೆ. ಚಿಕ್ಕ ಎಡಚಿ ಗ್ರಾಮ ಅದು ಒಂದು ದೊಡ್ಡ ಗ್ರಾಮ. ಅದಕ್ಕೆ ಎರಡು ಸಣ್ಣ ಹಳ್ಳಿಗಳು ಸೇರಿಕೊಂಡಿತ್ತು. ಈ ಚಿಕ್ಕಎಡಚಿ ಗ್ರಾಮದವರು ಮಿತಸಂತಾನದಲ್ಲಿ ರಾಷ್ಟ್ರಕ್ಕೇ ಪ್ರಥಮ ಪ್ರಶಸ್ತಿ ತೆಗೆದುಕೊಂಡುಬಿಟ್ಟರು. ಅವರ ಜನಸಂಖ್ಯೆ ಕಡಿಮೆ ಆಯಿತು. ಆದರೆ ಈ ಎರಡು ಹಳ್ಳಿಯಲ್ಲಿದಂಥ ಸರದಾರರು ಅವರು ಹೊಡ್ದಂತ ಇದ್ದುಬಿಟ್ಟರು. ಇವರ ಜನಸಂಖ್ಯೆ ಹೆಚ್ಚಾಗಿಬಿಟ್ಟಿತು. ಇಲ್ಲಿ ಜನಸಂಖ್ಯೆ ಹೆಚ್ಚಾಗಿ ಮುಂದೆ ಏನು ಮಾಡಿದರು ಎಂದರೆ ಆ ಊರಿನ ಹೆಡ್‌ಕ್ವಾರ್ಟರ್‌ನಲ್ಲಿ ಮೊದಲು ಜನಸಂಖ್ಯೆ ಹೆಚ್ಚು ಇತ್ತು ಎಂದು ಅಲ್ಲಿ ಮಾಡಿದಂತ ಗ್ರಾಮಪಂಚಾಯತಿಯನ್ನು ಈ ಹಳ್ಳಿಯಲ್ಲಿ ಜನಸಂಖ್ಯೆ ಹೆಚ್ಚಾಯಿತು ಎಂದು ಈ ಊರಿಗೆ ತಂದರು. ನಾನು ಮಂತ್ರಿಯಾದ ಮೇಲೆ ಆ ಊರಿಗೆ ಹೋಗಿ ಸೊಸೈಟಿ ತೆಗೆದು ಈ ಊರಿಗೆ ಹಾಕಿದೆ ಅಂದರೆ ಜನಸಂಖ್ಯೆ ಹೆಚ್ಚಿರುವ ದೊಡ್ಡ ಊರಿಗೆ ಹಾಕಿದೆ. ಇದನ್ನು ಕೂಡ ನಾವು ಎಚ್ಚರಿಕೆಯಿಂದ ನೋಡಬೇಕಾಗುತ್ತದೆ. ಈಗ ಡಿ ಲಿಮಿಟೇಷನ್ ಇದನ್ನು ಕೂಡ ಇವತ್ತು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ರಾಷ್ಟ್ರಕ್ಕೆ, ರಾಜ್ಯಕ್ಕೆ ಹೇಳುವುದೇನೆಂದರೆ, ಎಲ್ಲಿ ಬರ್ತ್ ಕಂಟ್ರೋಲ್ ಮಾಡಿರುತ್ತಾರೆ ಅವರಿಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಇಲ್ಲಂದ ರಾಂಗ್ ಸಿಗ್ನಲ್ ಹೋಗುತ್ತದೆ. ಶ್ರೀ ಪಾಟೀಲರ್‌ರು ಏನು ಹೇಳುತ್ತಿದ್ದರು ಎಂದರೆ ಈಗ ಆಗತಕ್ಕಂಥ ಡಿ ಲಿಮಿಟೇಷನ್‌ಗೆ ಮತ್ತು ಪಾಪ್ಯುಲೇಷನ್‌ಗೆ ಹೋಲಿಸಿ ಹೇಳುತ್ತಿದ್ದಾರೆ. ಇಲ್ಲಿ ಡಿ - ಲಿಮಿಟೇಷನ್ಸ್ ಕೆಲವು ವರ್ಗದಲ್ಲಿ ಹೆಚ್ಚಿಗೆ ಆಗಿತ್ತು ಅದನ್ನು ಪಾಪ್ಯುಲೇಷನ್ ಹೆಚ್ಚಿಗೆ ಆಗಿದ್ದಕ್ಕೆ ಮಾಡಿದ್ದಲ್ಲ. ಆ ಷೆಡ್ಯೂಲ್‌ನಲ್ಲಿ ಹಚ್ಚಿನ ಜಾತಿಗಳನ್ನು ಸೇರಿಸಿ ಏನು ಜನಸಂಖ್ಯೆ ಆಗಿದೆ. 1978 ರಲ್ಲಿ ಏನಾಗಿತ್ತು....

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಸಚಿವರು ಇತ್ತ ಕಡೆ ದಯಮಾಡಿ ಗಮನಹರಿಸಬೇಕು. ಇಲ್ಲಿಯ ಪ್ರಶ್ನೆ ಇಷ್ಟೆ. ಎಲ್ಲಿ ಜನಸಂಖ್ಯೆ ನಿಯಂತ್ರಣ ಮಾಡಿ 20 ವರ್ಷದಿಂದ ಆ ಜನಸಂಖ್ಯೆ ಎಷ್ಟಿತ್ತು 1500 ಅಷ್ಟನ್ನೇ ಉಳಿಸಿಕೊಂಡು ಬಂದರು. ಒಂದೂ ಹೆಚ್ಚು ಆಗಿಲ್ಲ. ರಾಷ್ಟ್ರೀಯ ಒಂದು ನೀತಿಗೆ....

ಶ್ರೀ ಎಸ್.ಎಸ್. ಪಾಟೀಲ್:- ಅದೇ ನಾನು ಈಗ ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ಸೊಸೈಟಿ ಪಂಚಾಯತಿದು ಹೇಳುತ್ತಿಲ್ಲ.

ಶ್ರೀ ಬಿ.ಆರ್.ಪಿ. ಬನ್ನಿಕೋಡ್:- ಅದನ್ನೇ ಅವರು ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ದೇಶದಲ್ಲಿ ಇದು ಪ್ರಚಾರ ನಡೆದಿದೆ. ಡಿ - ಲಿಮಿಟೇಷನ್ ಏಕೆ ಆಗುತ್ತಿದೆ ಮತ್ತು ಕೆಲವು ಜನರಲ್ ಸೀಟ್ ಹೋಗಿ ರಿಸರ್ವ್ ಸೀಟ್ ಹೆಚ್ಚಿಗೆ ಆಗುತ್ತಿವೆ, ಬಹುಶಃ ಇದು ಪಾಪ್ಯುಲೇಷನ್ ಹೆಚ್ಚಿಗೆ ಆಗಿದ್ದಕ್ಕಾಗಿ ಈ ರೀತಿ ಮಾತನಾಡುತ್ತಿದ್ದಾರೆ ಎಂದು ಅವರ ಭಾವನೆಯಾಗಿದೆ. ಆದರೆ 1978 ರಲ್ಲಿ ಷೆಡ್ಯೂಲ್ ಕಾಸ್ಟ್ ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಏನು ಜನಸಂಖ್ಯೆ ಸೇರಿದೆ ಆ ಬೇಸಿಸ್ ಮೇಲೆಯೇ ಹೊರತಾಗಿ ಬೇರೆಯದರಲ್ಲಿ ಅಲ್ಲ....

ಶ್ರೀ ಎಸ್.ಎಸ್. ಪಾಟೀಲ್:- ಇನ್ನು ಈ ಆನ್‌ಲೈನ್ ಲಾಟರಿ ಬಗ್ಗೆ ಹೇಳಬಯಸುತ್ತೇನೆ. ಹಿಂದೆ ದಿವಂಗತ ಇಂದಿರಾಗಾಂಧಿಯವರು 20 ಅಂಶದ ಕಾರ್ಯಕ್ರಮವನ್ನು ತಂದಿದ್ದರು. ಇದನ್ನು ಅದರಲ್ಲಿ ಕಾಣಲಿಲ್ಲ. ಇವತ್ತು ಏನಾದರೂ** ಕಾರ್ಯಕ್ರಮದಲ್ಲಿ ಈ ಆನ್‌ಲೈನ್ ಲಾಟರಿ ಕಾರ್ಯಕ್ರಮ ಬಂದಿದೆಯೇ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- I am sorry ಶ್ರೀಮತಿ ಸೋನಿಯಾ ಗಾಂದಿಯವರು ಇಲ್ಲಿ ಮೆಂಬರ್ ಆಗಿದ್ದಾರೆಯೇ?

ಶ್ರೀ ಎಸ್.ಎಸ್. ಪಾಟೀಲ್:- ನಾನು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಹೊರಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:-ನೀವು ಟೀಕೆ ಮಾಡಿ ಬೇಡ ಎಂದು ಹೇಳುವುದಿಲ್ಲ. ಬೇಕಾದರೆ ಎಸ್.ಎಂ.ಕೃಷ್ಣ ಅವರ ಮೇಲೆ ಟೀಕೆ ಮಾಡಿ, ನಮ್ಮ ಮೇಲೆ ಟೀಕೆ ಮಾಡಿ, ಒಪ್ಪಿಕೊಳ್ಳುತ್ತೇವೆ. ಆದರೆ ಈ ಮನೆಯ ಸದಸ್ಯರಲ್ಲದವರ ಬಗ್ಗೆ ಏತಕ್ಕಾಗಿ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:-ಯಾರು ಈ ಮನೆಯ ಸದಸ್ಯರಲ್ಲ, ಸಂಬಂಧ ಇಲ್ಲ, ಅವರ ಹೆಸರನ್ನು ತೆಗೆದುಕೊಂಡು ಈ ರೀತಿಯಾಗಿ ಹೇಳತಕ್ಕಂಥದ್ದು ಸರಿಯಲ್ಲ. ಸಮಂಜಸವಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ ಉಪಾಧ್ಯಕ್ಷರೇ ಆದರೆ ಇನ್ನು ಮೇಲೆ ** ಹೆಸರು ಹೇಳಿಕೊಂಡು ಉತ್ತರ ಕೊಡಬಾರದು.

ಶ್ರೀ ಕೆ. ಅಭಯಚಂದ್ರ:- ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಿ. ಏನ್ರೀ, ಆ ಮಾತನ್ನು ಹಿಂಕದಕ್ಕೆ ತೆಗೆದುಕೊಳ್ಳಿ. ಏನು ನಾಲಗೆ ಉದ್ದವಾಗಿ ಇದೆಯೆಂದು ಮಾತನಾಡುತ್ತೀರಿ? ಏನು ಖುಷಿ ಬಂದ ಹಾಗೆ ಮಾತನಾಡುತ್ತೀರಿ? ಬಾಯಿಗೆ ಬೀಗ ಹಾಕಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:-20 ಅಂಶದ ಕಾರ್ಯಕ್ರಮ ಅಂದರೆ ಒಂದು ರೀತಿಯಿಂದ ಹೀಯಾಳಿಸಿ ಮಾತನಾಡಿದ್ದಾರೆ. ಆದ್ದರಿಂದ ಅವರ ಹೆಸರನ್ನು ಕಡತದಿಂದ ತೆಗೆದುಹಾಕಬೇಕು.

(ಗೊಂದಲ)

ಉಪಾಧ್ಯಕ್ಷರು:-ಅದನ್ನು ತೆಗೆದುಹಾಕಿ

ಶ್ರೀ ಎಸ್.ಎಸ್ ಪಾಟೀಲ್:- ಬಳ್ಳಾರಿಯಲ್ಲಿ ** ಎಂದೇ ಹೇಳಿದ್ದೀರಿ.

** ಉಪಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಸಿ.ಆರ್.ಸಗೀರ್ ಅಹಮ್ಮದ್:- ದಯಮಾಡಿ ಕೇಳಬೇಕು. ತಮ್ಮೊಬ್ಬರು ಮಾಜಿ ಸಚಿವರು ಆಗಿದ್ದೀರಿ. ಈ ಸದನದ ಹಿರಿಯ ಸದಸ್ಯರಾಗಿದ್ದೀರಿ. ಯಾವುದೇ ದಾಖಲಾತಿಗಳಲ್ಲಿ ಆ ರೀತಿ ಬರೆದಿರುವಂಥ ವಿಚಾರವನ್ನು ತಾವು ತೋರಿಸಿ. ಎಲ್ಲಿದೆ.

ಶ್ರೀ ಎಸ್.ಎಸ್ ಪಾಟೀಲ್:- ಆಯಿತು, ನಾನು ತಂದು ತೋರಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್:- ಯಾವ ದಾಖಲಾತಿಗಳಲ್ಲಿದೆ ಸ್ವಾಮಿ, ಏಕೆ ಸುಮ್ಮನೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಪಿ.ಟಿ. ಪರಮೇಶ್ವರ ನಾಯಕ್:- ಮಾನ್ಯ ಉಪಾಧ್ಯಕ್ಷರೆ, ಬಳ್ಳಾರಿ ಪ್ಯಾಕೇಜ್ ಬಗ್ಗೆ ಸನ್ಮಾನ್ಯ ಎಸ್.ಎಸ್. ಪಾಟೀಲರು ಮಾತನಾಡಿದ್ದಾರೆ. ** ಅದಕ್ಕೆ ಪ್ಯಾಕೇಜ್ ಎಂದು ಸರ್ಕಾರ ಹೆಸರಿಟ್ಟಿಲ್ಲ. ಬಳ್ಳಾರಿ ವಿಶೇಷ ಅಭಿವೃದ್ಧಿ ಯೋಜನೆ ಎಂದು ಮಾಡಿದೆ. ದಯಮಾಡಿ ಶ್ರೀ ಎಸ್ ಎಸ್. ಪಾಟೀಲರು ಸಾಬೀತು ಪಡಿಸುತ್ತಾರಾ?

ಶ್ರೀ ಎಸ್.ಎಸ್. ಪಾಟೀಲ್:- ದಯವಿಟ್ಟು ಕೇಳಿ. ಅದು ಏನೂ ದೊಡ್ಡ ಅನಾಹುತ ಅಲ್ಲ. ಇದರ ಬಗ್ಗೆ ಹೆಚ್ಚು ಮಾತು ಬೇಡ. ನಾನು ಇನ್ನು ಯಾರಿಗೂ ಯೀಲ್ಡ್ ಆಗುವುದಿಲ್ಲ.

ಉಪಾಧ್ಯಕ್ಷರು:- ನೀವು ಯೀಲ್ಡ್ ಆಗುವುದು ಬೇಡ. ಇಲ್ಲಿಗೆ ನಿಮ್ಮ ಭಾಷಣವನ್ನು ಮುಗಿಸಿಬಿಡಿ. ನಿಮಗೆ ಕಾಲಾವಕಾಶ ಸುಮಾರು ಒಂದೂ ಕಾಲು ಗಂಟೆ ಕೊಟ್ಟಿದ್ದೇವೆ. ಇನ್ನು ನಿಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಇನ್ನು ಐದು ನಿಮಿಷದಲ್ಲಿ ನೀವು ಮುಗಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿಗೆ ಮುಗಿಸುವುದಕ್ಕೆ ಆಗುವುದಿಲ್ಲ. ನೀವು ನನಗೆ ಆರೂವರೆ ಗಂಟೆ ವರೆಗೆ ಮಾತನಾಡುವುದಕ್ಕೆ ಹೇಳಿದ್ದಿರಿ. ದಯವಿಟ್ಟು ಕ್ಷಮಿಸಿ. ನೀವೇ ನನ್ನ ರಕ್ಷಣೆಗೆ ಬರದಿದ್ದರೆ ನಾನೇನು ಮಾಡುವುದು? ಇನ್ನು ಬಹಳಷ್ಟು ಮಾತನಾಡುವುದು ಇದೆ.

ಉಪಾಧ್ಯಕ್ಷರು:- ಬಹಳಷ್ಟು ಮಾತನಾಡುವುದಕ್ಕೆ ಇದ್ದರೆ ಬಜೆಟ್ ಮೇಲೆ ಮಾತನಾಡುವಾಗ ತಾವು ಮಾತನಾಡಬಹುದು.

ಶ್ರೀ ಎಸ್.ಎಸ್. ಪಾಟೀಲ್:- ಆನ್‌ಲೈನ್ ಲಾಟರಿಯನ್ನು ಹೆಂಗಸರು ಅವರವರ ಗಂಡಂದಿರನ್ನು ತಡೆಯುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆಂದರೆ ನಿಮ್ಮ ಸೌಂದರ್ಯದಿಂದ ಅವರ ಮನ ಒಲಿಸಿ ನಿಲ್ಲಿಸಿ. ಬಹಳ ಸುಂದರವಾಗಿ ಹೇಳಿದ್ದಾರೆ. ಶ್ರೀ ಖರ್ಗೆ ಸಾಹೇಬರೇ, ಈಗ ನಿಮಗೆ ಹೇಳುತ್ತೇನೆ. ಈ ಆನ್‌ಲೈನ್ ಲಾಟರಿಯನ್ನು ನಿಲ್ಲಿಸುವುದಕ್ಕೆ ಹೇಳಿದರೆ, ಇವರೇನೋ ಲಾಟರಿಯಿಂದ ರಾಜ್ಯಕ್ಕೆ ಉತ್ಪನ್ನ ಬರುತ್ತದೆಂದು ಅಲ್ಲಿ ಉತ್ತರ ಕೊಟ್ಟರು ಹೆಣ್ಣುಮಕ್ಕಳೆಲ್ಲ ಕೋರ್ಟಿಗೆ ಹೋಗಿ ಆನ್‌ಲೈನ್ ಲಾಟರಿಯನ್ನು ನಿಲ್ಲಿಸಿಬಿಟ್ಟರು ಎಂದು ತಿಳಿದುಕೊಳ್ಳಿರಿ, ಹಾಗಾದರೆ, ಉತ್ಪನ್ನ ಬರುವುದಿಲ್ಲ. ಮುಂದೆ ಏನು ಮಾಡುತ್ತೀರಿ? ಅದಕ್ಕೆ ಏನು ಹುಡುಕುತ್ತೀರಿ? ಐದು ವರ್ಷದಲ್ಲಿ ಸಾವಿರ ಕೋಟಿ ರೂಪಾಯಿ ಆದಾಯ ರಾಜ್ಯಕ್ಕೆ ಬರುತ್ತದೆಂದು ಹೇಳಿದ್ದಿರಲ್ಲಾ, ಅದು ಮೊದಲು ಹೇಳಿದ ರೀತಿಯಲ್ಲಿ ನಿಂತುಬಿಟ್ಟರೆ ಆಗ ನೀವು

** ಈ ಪದಗಳನ್ನು ಉಪಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಏನು ಮಾಡುತ್ತೀರಿ? ಇದರ ಬಗ್ಗೆ ಕೂಡ ಸರ್ಕಾರ ಗಮನಹರಿಸಬೇಕಾಗುತ್ತದೆ. ಆ ಮೇಲೆ ಮಾನ್ಯ ಗೃಹಸಚಿವರಿಗೆ ಹೇಳುವುದೇನೆಂದರೆ, ಇನ್ನು ಮೇಲೆ ಅಲ್ಲಿ ಅವನ ಹೆಂಡತಿಯನ್ನು ಹೊಡೆದು ಕೊಂದ, ಇಲ್ಲಿ ಇವನ ಹೆಂಡತಿಯನ್ನು ಹೊಡೆದು ಕೊಂಡ ಇವೆಲ್ಲಾ ಬರುತ್ತದೆ. ಪೋಸ್ಟ್‌ಮಾರ್ಟಂ ಅವು ಇವೆಲ್ಲ ರೂಂ ರೆಡಿಮಾಡಿ ಇಡಿ. ಅಲ್ಲಲ್ಲೇ ಹೆಣ್ಣುಮಕ್ಕಳನ್ನು ಕೊಲ್ಲುತ್ತಾರೆ. ಅದರ ಕಷ್ಟ ಅವರಿಗೇ ಗೊತ್ತು. ಅದನ್ನು ನಿಲ್ಲಿಸುತ್ತೇವೆಂದು ಯಾರಿಗಾದರೂ ಇಲ್ಲಿ ಧೈರ್ಯ ಇದೆಯೇ ಕೇಳಿರಿ. ಸಾಧ್ಯವಿಲ್ಲ. ಅದು ಆಗುವುದಿಲ್ಲ. ಅದು ಸಾಧ್ಯವಿಲ್ಲದ ಮಾತು. ಅದು ಮಂಗ್ಯಾ. ಮಂಗ್ಯಾನ ಮುಂದಾ ಒಂದು ಹಣ್ಣು ಇಟ್ಟು ತಿನ್ನಬ್ಯಾಡಾ ಎಂದು ಹೇಳಿದರೆ ಅದು ಬಿಡುತ್ತದೆಯೇ? ಅದು ಬಿಡುವುದಿಲ್ಲ, ಕುಡಿಯುವುದನ್ನು ನಿಲ್ಲಿಸಲು ಆಗಲಿಲ್ಲ. ಶರಣರು ಒಂದು ಕಡೆ ದುರ್ವ್ಯಸನಿ ದುರಾಚಾರಿ ಎಂದಿನಿಸದಿರಯ್ಯ ಎಂದು ಹೇಳುತ್ತಾರೆ. ನಿಮ್ಮದು ಹೇಗಿದೆ ಎಂದರೆ ನನಗೆ ಈ ಮಾತು ಹೇಳುವುದಕ್ಕೆ ಬಹಳ ನೋವು ಆಗುತ್ತದೆ. ಮಾನ್ಯ ಹನುಮಂತಯ್ಯನವರು "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಬರೆದಿದ್ದಾರೆ. ನೀವು "ಸರ್ಕಾರದ ಕೆಲಸ ಆನ್ ಲೈನ್ ಲಾಟರಿ ನಡೆಸುವ ಕೆಲಸ" ಎಂದು ಬರೆಸಿಬಿಡಿ. ನಿಮ್ಮ ಹತ್ತಿರ ಒಳ್ಳೆಯ ಮಾತುಗಳು ಇರಬಾರದು ಅವೆಲ್ಲವನ್ನೂ ತೆಗೆದು ಹಾಕಿ ನಾನು ಈಗ ಹೇಳುವಂಥವುಗಳನ್ನು ಬರೆಸಿಬಿಡಿ. ಏನೆಂದರೆ, ಶರಣರುದುರ್‌ವ್ಯಸನಿ ದುರಾಚಾರಿ ಎಂದಿನಿಸದಿರಯ್ಯ ಎಂದು ಹೇಳಿದ್ದರೆ ನೀವು ದುರ್‌ವ್ಯಸನಿ ದುರಾಚಾರಿ ಆಗಯ್ಯ ಎಂದು ಬರೆಸಿರಿ, ಭ್ರಷ್ಟಾಚಾರ ಶಿಷ್ಟಾಚಾರ ಮಾಡುವುದು ಸರ್ಕಾರದ ಕೆಲಸ ಎಂದು ಬರೆಯಿರಿ ಪಾಪಿಯ ಧನ ಕೊಡಿಸುವುದು ಸರ್ಕಾರದ ಕೆಲಸ, ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂದು ಹೇಳಿದರೆ ನೀವು ಆಚಾರವೇ ನರಕ ಅನಾಚಾರವೇ ಸ್ವರ್ಗ ಎಂದು ಬರೆಸಿಬಿಡಿ. ಇವೆಲ್ಲವನ್ನು ಬರೆದುಕೊಳ್ಳಿ, ಅವೆಲ್ಲವನ್ನೂ ತೆಗೆದು ಹಾಕಿ ಇವೆಲ್ಲವನ್ನೂ ಬರೆಸಿಬಿಡಿ. ಒಳ್ಳೆಯ ಮಾತೇ ಇರಬಾರದು ನಾನು ಇನ್ನು ಹೇಳುವುದು ಬಹಳ ಇತ್ತು ಇವರು ದುರ್ವ್ಯಸನಿಗಳನ್ನು ಮಾಡುತ್ತಾರೆ, ದುರಾಚಾರಿಗಳನ್ನು ಮಾಡುತ್ತಾರೆ, ಇದು ಸರಿಯಲ್ಲ. ನಾನು ಇಲ್ಲಿ ಒಂದು ಮಾತು ಹೇಳಿದರೆ ನಿಮಗೆ ಸಿಟ್ಟು ಬರುತ್ತದೆ, ಇಲ್ಲಿ ಒಬ್ಬರು ಪ್ರೊ. ಕೆ.ಸಿ. ಬಸಪ್ಪ ಎನ್ನುವವರು ಒಂದು ಲೇಖನ ಬರೆದಿದ್ದಾರೆ, ಅದನ್ನು ಓದುತ್ತೇನೆ.

> "ಒಂದು ವೇಳೆ ಉತ್ಪಾದನೆ ಯಾವುದೇ ಮಾರ್ಗಗಳಿಂದ ಅಭಿವೃದ್ಧಿ
> ಕಾರ್ಯಗಳಿಗೆ ಸಂಪನ್ಮೂಲಗಳನ್ನು ಸಂಯೋಜಿಸಲು
> ಸರ್ಕಾರ ಅಸಮರ್ಥವಾಗಿದೆ ಎಂದು ತೀರ್ಮಾನಿಸಿದ್ದೇ ಆದರೆ
> ಬರಿ ಜೂಜು ಮಾತ್ರ ಏಕೆ, ಥೈಲ್ಯಾಂಡ್ ದೇಶವು
> ಸೂಳೆಗಾರಿಕೆಯನ್ನೇ ಉದ್ಯೋಗ ಮಾಡಿಕೊಂಡು
> ಆಧಾಯ ಗಳಿಸುತ್ತಿರುವಂತೆ ಕರ್ನಾಟಕವೂ ಈ ಬಗ್ಗೆ
> ಯೋಚಿಸಬಹುದು."

ಎಲ್ಲಿಗೆ ಹೋಯಿತು ನಿಮ್ಮ ಸ್ಥಿತಿ? ನೋಡಿ ಇವರು ಲೇಖನವನ್ನು ಬರೆದಿದ್ದಾರೆ, ಥೈಲ್ಯಾಂಡ್ ದೇಶದಲ್ಲಿ ಸೂಳೆಗಾರಿಕೆಯನ್ನು ಸರ್ಕಾರ ನಡೆಸುತ್ತದೆಯಂತೆ ನೀವು ಅದನ್ನು ಮಾಡುತ್ತೀರಾ? ಈ ಭವ್ಯ ಪರಂಪರೆ ಇದ್ದಂಥ ರಾಜ್ಯ, ದೇಶ, ಕಿತ್ತೂರು ರಾಣಿ ಚೆನ್ನಮ್ಮ ಬೆಳವಡಿ ಮಲ್ಲಮ್ಮ ಒನಕೆ ಓಬವ್ವ, ಹೀಗೆ ಮಹಾನ್, ಪತಿವ್ರತೆಯರು ಇದ್ದಂಥ ನಮ್ಮರಾಜ್ಯದಲ್ಲಿ ಇನ್ನು ಏನೇನು ಆ ಹೆಣ್ಣು ಮಕ್ಕಳ ಮೇಲೆ ನಡೆಸುತ್ತೀರಿ? ಇದು ಅನ್ಯಾಯವಾಗುತ್ತಿದೆ ದಯಮಾಡಿ ಅದನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀ ಕೆ.ಎನ್. ಗಡ್ಡಿ (ಅರಣ್ಯ ರಾಜ್ಯ ಸಚಿವರು):- ತಾವು ಈಗ ಏನು ಹೇಳಿದಿರಲ್ಲಾ ಅದನ್ನು ನಿಮ್ಮ ಸರ್ಕಾರ ಇದ್ದಾಗ ಬರೆದಿರುವುದು ನಮ್ಮ ಸರ್ಕಾರ ಇದ್ದಾಗ ಬರೆದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಆಯಿತು ಅದಕ್ಕೇ ನಾವು ಇಲ್ಲಿ ಕುಳಿತಿರುವುದು, ನಿಮ್ಮದು ಹೇಳುತ್ತೇನೆ ನಾನು ಇನ್ನು ಕಾಡಿನ ಬಗ್ಗೆ ಹೇಳಿಲ್ಲ ಪಾಪ ಸುಮ್ಮನೆ ನಿಮ್ಮನ್ನು ಮಂತ್ರಿಯನ್ನಾಗಿ ಮಾಡಿದ್ದಾರೆ, ಏನೂ ಇಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ, ನೋಡಿ ನನ್ನ ಹತ್ತಿರ ಒಂದು ಚಿತ್ರ ಇದೆ ನಾನು ಅದನ್ನು ತಮಗೆ ಕಳುಹಿಸಿ ಕೊಡುತ್ತೇನೆ, ನೀವು ಈ ರೀತಿಯಾಗಿ ಹೆಣ್ಣು ಮಕ್ಕಳನ್ನು ದುರುಪಯೋಗ ಮಾಡಿಕೊಂಡರೆ, ಹೆಣ್ಣುಮಕ್ಕಳೆಲ್ಲರೂ ನೀವು ಸುಮ್ಮನೆ ಇರುತ್ತೀರಾ? ಇಲ್ಲಿ ನೋಡಿ ಉಪಾಧ್ಯಕ್ಷರೆ, ಇದನ್ನು ನೋಡಿದರೆ ಮುದುಕರೂ ಕೂಡ ಬಾಯಿ ಚಪ್ಪರಿಸಬೇಕು. ಇದು ಪ್ರಚಾರ ಹೆಣ್ಣಿನ ದುರುಪಯೋಗ, ಇದೂ ಕೂಡ ನಿಮ್ಮ ಧರ್ಮದ ಕೆಲಸ, ನೀವು ಬರೀ ಧರ್ಮದತ್ತಿ ಇಲಾಖೆ ಎಂದರೆ ದುಡ್ಡು ಹಂಚಿ ಗುಡಿಗಳಿಗೆ ಅಡ್ಡಾಡುವುದಲ್ಲ, ಇದು ಎಲ್ಲಾ ಧರ್ಮ ಪ್ರಚಾರ ಮಾಡಿ ತಿಳಿ ಹೇಳಬೇಕಾಗುತ್ತದೆ. ಇಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಇಲ್ಲ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಇಲ್ಲ, ಮಾನ್ಯ ಉಪಾಧ್ಯಕ್ಷರೆ, ಈ ಫೋಟೋ ತಮಗೆ ಕಳುಹಿಸುತ್ತೇನೆ ನೋಡಿ ಹೇಗಿದೆ ಹೆಣ್ಣಿನ ದುರುಪಯೋಗ. ಇದನ್ನು ನೋಡಿದರೆ ಬಹಳ ಗಾಭರಿಯಾಗುತ್ತದೆ ಈ ರಾಜ್ಯದಲ್ಲಿ ಇನ್ನೇನು ಮಾಡಬೇಕು? ಹೆಣ್ಣಿನ ಪರಿಸ್ಥಿತಿ ಏನಾಗುತ್ತಿದೆ? ಇದರ ಬಗ್ಗೆ ಕೂಡ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಂಥಿಂಥ ಚಿತ್ರಗಳು, ಇಂಥಿಂಥ ಪ್ರಚಾರಗಳನ್ನು ಮಾಡಿ ಅವರ ಮಾನ ಮಾರ್ಯಾದೆಗಳನ್ನು ಹರಾಜು ಹಾಕುತ್ತೀರಾ? ಇದು ನಿಮ್ಮ ರಾಜ್ಯದ ನೀತಿಯೇ? ಹೆಣ್ಣು ಮಕ್ಕಳ ಘನತೆ ಗೌರವಗಳನ್ನು ಕಳೆಯುತ್ತೀರಾ? ನೀವು ಇದನ್ನು ಯಾರು ನೋಡಿಲ್ಲವೆ ಎಲ್ಲಾ ಹೆಣ್ಣು ಮಕ್ಕಳು ಇದರ ವಿರುದ್ಧ ಪುಟಿದೇಳಬೇಕಾಗುತ್ತದೆ. ನಾನು ಇನ್ನು ಕೃಷಿ, ಬರಗಾಲ, ಇದರ ಬಗ್ಗೆ ಹೆಚ್ಚಿಗೆ ಮಾತನಾಡಬೇಕಾಗಿತ್ತು, ಕಾಡಿನ ಬಗ್ಗೆ ನಾನು ಇನ್ನು ಹೇಳಿಲ್ಲ, ನಾನು ಈ ಚಿತ್ರವನ್ನು ತಮ್ಮ ಮೂಲಕ ಮಾನ್ಯ ವಿಶ್ವನಾಥ್‌ರವರಿಗೆ ಇದನ್ನು ಕಳುಹಿಸಿ ಕೊಡುತ್ತೇನೆ.

ಉಪಾಧ್ಯಕ್ಷರು:- ಆಯಿತು ತಾವು ಕಳುಹಿಸಿ ಕೊಡಿ, ಬೇಗ ಮುಗಿಸಿ ತಾವು ಮಾತನಾಡಲಿಕ್ಕೆ ಪ್ರಾರಂಬಿಸಿ ಒಂದೂಕಾಲು ಗಂಟೆಯಾಯಿತು ಬೇಗ ಮುಗಿಸಿಬಿಡಿ. ದಯವಿಟ್ಟು ಎಲ್ಲಾ ವಿಚಾರಗಳು ಮುಗಿದಿದೆ ಮುಕ್ತಾಯ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್:- ಆಯಿತು ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದ ಹಾಗೆ ಮುಕ್ತಾಯ ಮಾಡಿ ಬಿಡುತ್ತೇನೆ. ಈ ಆನ್ ಲೈನ್ ಲಾಟರಿಯ ಬಗ್ಗೆ ಮಾನ್ಯ ಸಚಿವೆ ಅವರು ಸದನದಲ್ಲಿ ಇದು ಅವರು ಆಡಿರುವ ಮಾತು ಇಲ್ಲ, "ಜೂಜು ನಿಲ್ಲಿಸುವುದು ಸರ್ಕಾರ ಕೆಲಸವಲ್ಲ" ರಕ್ಷಣೆ ಸತೀಶ್. ಒಬ್ಬ ಹೆಣ್ಣುಮಗಳಾಗಿ ಕನ್ನಡ, ಸಂಸ್ಕೃತಿ ಇಲಾಖೆಯ ಸಚಿವೆಯರಾಗಿ ಜೂಜು ನಿಲ್ಲಿಸುವುದು ಸರ್ಕಾರದ ಕೆಲಸವಲ್ಲ ಎಂದು ಹೇಳುತ್ತಾರೆ. ಇವರ ಗಂಡಂದಿರು ಮಾಡಿದ್ದನ್ನು ಇವರು ನಿಲ್ಲಿಸುವುದಕ್ಕೆ ಆಗುತ್ತದೆಯೇ? ಎಲ್ಲವನ್ನೂ ತೆಗಿಸಿ ಪ್ರಚಾರ ಮಾಡಿಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಪಾಟೀಲ್‌ರವರೆ, ಪತ್ರಿಕೆಯಲ್ಲಿ ಬಂದಂಥ ಭಾವಚಿತ್ರವನ್ನು ಸದನದಲ್ಲಿ ತೋರಿಸಿದಿರಿ, ವಿಶ್ವಸುಂದರಿ ಸ್ಪರ್ಧೆ ನಡೆಸಿದಿರಲ್ಲಾ ಅದು ನಿಮ್ಮ ಕಾಲದಲ್ಲೋ, ನಮ್ಮ ಕಾಲದಲ್ಲೋ?

ಶ್ರೀ ಎಸ್.ಎಸ್. ಪಾಟೀಲ್:- ಆ ವಿಶ್ವ ಸುಂದರಿ ಸ್ಪರ್ಧೆ ಏನಿತ್ತು ಅದನ್ನು ನಾನು ಸ್ವತಃ ಹೋಗಿ ನೋಡಿದ್ದೇನೆ ಅದು ಇದರಷ್ಟು ಹೊಲಸು ಇದ್ದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಹೀಗಾಗಿ ನಾವು ಆ ವಿಚಾರಗಳನ್ನು ಮಾತನಾಡುವುದಕ್ಕೆ ಪ್ರಾರಂಭಿಸಿದರೆ ಬಹಳಷ್ಟು ವಿಚಾರಗಳು ಬರುತ್ತವೆ.

ಶ್ರೀ ಎಸ್.ಎಸ್. ಪಾಟೀಲ್:- ಇಷ್ಟೊಂದು ಹೊಲಸು ಅದು ಇದ್ದಿಲ್ಲ, ಇಷ್ಟೊಂದು ಹೆಣ್ಣು ಮಕ್ಕಳನ್ನು ಬೆತ್ತಲೆಯಾಗಿ ತೋರಿಸುವಂಥದ್ದು ಇದ್ದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಹೆಣ್ಣು ಮಕ್ಕಳ ಘನತೆ - ಗೌರವಗಳ ಬಗ್ಗೆ ಚಿಂತನೆ ಮಾಡುವಂಥವರು ತಾವು ಇವತ್ತು ನಮಗೆ ಬುದ್ಧಿ ಹೇಳುತ್ತೀರಲ್ಲಾ.

ಶ್ರೀ ಕೆ.ಎನ್. ಗಡ್ಡಿ:- ಪಾಟೀಲರು ಇಷ್ಟೊಂದು ಹೆಣ್ಣು ಮಕ್ಕಳ ಬಗ್ಗೆ ಕಾಳಜಿ ತೋರಿಸುತ್ತಾರೆ ಅವರ ಕಾಲದಲ್ಲಿ, ಮೂರನೇ ಮಹಡಿಯಲ್ಲಿ ಅಮಿತಾಬಚ್ಚನ್ ಬಂದಾಗ ವಿಶ್ವಸುಂದರಿ ಸ್ಪರ್ಧೆಯನ್ನು ತೋರಿಸಿದರು ಆಗ ನಿಮ್ಮ ಕಾಳಜಿ ಎಲ್ಲಿ ಹೋಗಿತ್ತು?

ಶ್ರೀ ಎಸ್.ಎಸ್. ಪಾಟೀಲ್:- ಈಗ ಟೈಮಿಲ್ಲ ಇಲ್ಲದಿದ್ದರೆ ಹೇಳುತ್ತಿದ್ದೆ, ತಾವು ಅರಣ್ಯ ಸಚಿವರು ತಾವು ಯುವಕರಿದ್ದೀರಿ ಚೆನ್ನಾಗಿ ಕೆಲಸ ಮಾಡಿ ಅರಣ್ಯ ಬಹಳ ಮಹತ್ವವಾದದ್ದು, ಒಂದು ಕಡೆ ನಾವು ಮಕ್ಕಳನ್ನು ಕಡಿಮೆ ಮಾಡಬೇಕು, ಮತ್ತೊಂದು ಕಡೆ ಅರಣ್ಯವನ್ನು ಹೆಚ್ಚಿಗೆ ಬೆಳಸಬೇಕು, ಇದರಲ್ಲಿ ಅರಣ್ಯದ ಬಗ್ಗೆ ಪರಿಸರದ ಬಗ್ಗೆ ಹೇಳಿಲ್ಲ, ಅರಣ್ಯಕ್ಕಾಗಿಯೇ ಒಬ್ಬ ಹಿರಿಯ ಹಾಗೂ ಕಿರಿಯ ಮಂತ್ರಿಗಳು ಇಬ್ಬರು ಇದ್ದೀರಿ ನೀವು ಏನು ಮಾಡುತ್ತೀರಿ? ಇದರಲ್ಲಿ ಏನು ಹೇಳಿದ್ದೀರಿ? ರಾಜ್ಯಪಾಲರ ಭಾಷಣದಲ್ಲಿ ಅರಣ್ಯದ ಸುದ್ದಿ ಏನೂ ಇಲ್ಲ ಪರಿಸರದ ಬಗ್ಗೆ ಮಾತೇ ಇಲ್ಲ. ಬಹಳ ಮಹತ್ವದ್ದು ಎಂದರೆ ನಿಮ್ಮ ಇಲಾಖೆ ಏಕೆಂದರೆ ಇವತ್ತು ಮಳೆ ಇಲ್ಲದೇ ಬರ ಬರುವುದಕ್ಕೆ ಕಾರಣ ಅರಣ್ಯ ನಾಶ ಮಾಡಿದ್ದು. ಪರಿಸರ ಹಾಳುಮಾಡಿದ್ದು, ಹೀಗಾಗಿ ನಿಮ್ಮ ಇಲಾಖೆ ಬಹಳ ಮಹತ್ವದ ಇಲಾಖೆ, ನೀವು ಯುವಕರಾಗಿದ್ದೀರಿ ಚೆನ್ನಾಗಿ ಕೆಲಸ ಮಾಡಿ. ನೀವು ಚೆನ್ನಾಗಿ ಅಡ್ಡಾಡಿ ಅರಣ್ಯ ಬೆಳೆಸಿರಿ, ನಿಮಗೆ ಅಧಿಕಾರ ಇಲ್ಲ ಅದು ಬೇರೆ ಮಾತು ಸುಮ್ಮನೆ ನಿಮಗೆ ಗೂಟದ ಕಾರು ಅಡ್ಡಾಡುವುದಕ್ಕೆ ಮಾತ್ರ ಇದ್ದೀರಿ. ಈ ಸರ್ಕಾರದಿಂದ ಬರಗಾಲ ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ, ಈ ಸರ್ಕಾರದಿಂದ ಜನರನ್ನು ದುರ್‌ವೆಸನಿ, ದುರಾಚಾರಿಗಳನ್ನಾಗಿ ಮಾಡುತ್ತಾರೆ. ಇವರಿಂದ ಯಾವುದೂ ಮಾಡುವುದಕ್ಕೆ ಸಾಧ್ಯವಿಲ್ಲ. ಶ್ರೀಮತಿ ರಾಣಿ ಸತೀಶ್‌ರವರು ಮಾನ್ಯ ಹೆಚ್.ಎಂ. ಚನ್ನಪ್ಪನವರ ಮಗಳು, ಇಡೀ ರಾಜ್ಯಕ್ಕೆ ಒಂದು ಹನಿ ಸೆರೆ ಇಲ್ಲದ ಹಾಗೆ ಮಾಡುತ್ತೇವೆ, ದುರ್ಜನರನ್ನು, ದುಷ್ಟರನ್ನು, ತೆಗೆದು ಬಿಡುತ್ತೇನೆ ಎಂದು ಹೇಳಿದ್ದಂಥ ಒಬ್ಬ ವ್ಯಕ್ತಿಯ ಮಗಳು ಇವತ್ತು ಈ ರೀತಿಯ ಈ ಹೇಳಿಕೆ ನೀಡುತ್ತಿರುವುದು ಬಹಳ ದುರ್ದೈವದ ಸಂಗತಿ. ಬಹಳ ನೋವು ಆಗುತ್ತದೆ, ಮಾನ್ಯ ಮುಖ್ಯಮಂತ್ರಿ ಹೇಳಿದ್ದನ್ನು ಸಮರ್ಥಿಸಬೇಕು ಇಲ್ಲದಿದ್ದರೆ ಮಂತ್ರಿ ಪದವಿ ಹೋಗುತ್ತದೆ ಎನ್ನುವ ಅಂಜಿಕೆಯಿಂದ ಆ ಮಾತು ಹೇಳಿದಿರೋ ಏನೋ ನನಗಂತೂ ಗೊತ್ತಿಲ್ಲ. ಆ ರೀತಿ ಅನ್ನಬೇಡವ್ವಾ ತಾಯಿ ನೀವು ಎಲ್ಲರೂ ಗಟ್ಟಿಯಾಗಬೇಕಾಗುತ್ತದೆ, ನಿಮಗೆಲ್ಲಾ ಗೊತ್ತಿರುವಂತೆ, ಯಾರಿಗಾದರೂ ಗಂಡ ಕುಡುಕ ಇದ್ದರೆ ಆ ಹೆಣ್ಣು ಮಕ್ಕಳ ಕಷ್ಟ ಎಷ್ಟು ಎಂಬುದು ನಿಮಗೆ ಗೊತ್ತಾಗುತ್ತದೆ, ಅವರು ಹೇಳುವುದಿಲ್ಲ ಅವರ ಗಂಡ ಕುಡುಕರು ಇದ್ದರೆ ಅವನು ಅನುಭವಿಸಿಗೊಂಡು ಹೋಗುವಂಥ ಸ್ಥಿತಿ ಅವರಿಗೆ ಮಾತ್ರ ಗೊತ್ತಿರುತ್ತದೆ. ಹೀಗಿರುವಾಗ ಇದನ್ನು ಬಿಡಿಸುವುದಕ್ಕೆ ಆಗುತ್ತದೆಯೇ? ಮಂಗ್ಯಾನ ಮುಂದೆ

ಹಣ್ಣು ಇಟ್ಟು ತಿನ್ನಬೇಡ ಎಂದು ಹೇಳಿದರೆ ಅದು ಕೇಳುತ್ತದೆಯೇ? ಆ ಕಾರಣದಿಂದ ಈ ಸರ್ಕಾರ ಮಾಡದನ್ನೂ ನಿಭಾಯಿಸುವುದಕ್ಕೆ ಆಗುವುದಿಲ್ಲ. ಇವರು ಇನ್ನು ಒಂದೂವರೆ ವರ್ಷದಲ್ಲಿ ಬಹುಶಃ ಈ ರಾಜ್ಯವನ್ನು ಬಹಳ ಕೆಟ್ಟ ಸ್ಥಿತಿಗೆ ತೆಗೆದುಕೊಂಡು ಹೋಗಿ, ಅನೀತಿ, ಅನಾಚಾರ, ಇವೆಲ್ಲ ಬೆಳೆಯಲಿಕ್ಕೆ ಸಹಾಯ ಮಾಡುತ್ತಾರೆ, ಇದರಿಂದ ದೀವಾಳಿ ಎದ್ದು ಹೋಗುತ್ತಾರೆ, ಆ ಕಾರಣದಿಂದ ಪುನಃ ಮಹಾತ್ಮಾ ಗಾಂಧೀಜಿಯವರು ಹುಟ್ಟಿ ಬರಲಿ,

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ"

ಎಂದು ಹೇಳುವಂತೆ ಆ ಕೃಷ್ಣಪರಮಾತ್ಮ ಹುಟ್ಟಿ ಬಂದು ಈ ಕೃಷ್ಣನಿಗೆ ಬುದ್ಧಿ ಹೇಳಲಿ, ರಾತ್ರಿ ಹೋಗಿ ಕಿವಿಯಲ್ಲಿ ಬುದ್ಧಿ ಹೇಳಲಿ, ನಮ್ಮ ಸಹೋದರಿ ಪ್ರೇಮಾರವರು ಇವರಿಗೆ ಸರಿಯಾಗಿ ಬುದ್ಧಿ ಹೇಳಲಿ, ಇವರು ಆಗಲೇ ಬೈಯಿಸಿಕೊಂಡಿದ್ದಾರೆ, ಅವರು ಈ ಸಂದರ್ಭದಲ್ಲಿ ಇಲ್ಲ ಪ್ರೇಮಾಕ್ಕರವರು ಇವರನ್ನು ಬೈಯ್ದಿದ್ದಾರೆ. ಬೈಯಿಸಿಕೊಂಡಿದ್ದಾರೆ, ಆದರೆ ಅಲ್ಲಿ ಅವರು ಹೇಳುವುದಕ್ಕಾಗುವುದಿಲ್ಲ, ಮಾನ್ಯ ಗೃಹ ಸಚಿವರೂ ಕೂಡ ಮನೆಯಲ್ಲಿ ಬೈಯಿಸಿಕೊಂಡಿದ್ದಾರೆ, ನಮಗೆ ಗೊತ್ತಿದೆ. ನಾನು ಯಾವ ವಿಷಯವನ್ನು ಮಾತನಾಡಲಿಲ್ಲ, ಸುಮ್ಮನೆ ಸ್ವಲ್ಪ ಮಾತನಾಡಿದೆ, ಇಷ್ಟಾದರೂ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೂ ಹಾಗೂ ಬಹಳ ಶಾಂತ ರೀತಿಯಿಂದ ಕೇಳಿದ ನನ್ನ ಮಿತ್ರರೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5.40 ಪಿ.ಎಂ

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ):- ಮಾನ್ಯ ಉಪಾಧ್ಯಕ್ಷರೆ, ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನರ್ಪಿಸುತ್ತೇನೆ. ಇದುವರೆವಿಗೂ ಕೂಡ ಮಾನ್ಯ ಎಸ್.ಎಸ್. ಪಾಟೀಲ್‌ರವರು ಪ್ರವಚನವನ್ನು ಕೇಳಿದ್ದೇವೆ. ಮಾನ್ಯ ಎಸ್.ಎಸ್. ಪಾಟೀಲ್‌ರವರ ಈ ಕಾಲಕ್ಕೆ ತಮ್ಮ ಭಾಷಣವನ್ನು ಮುಗಿಸುವುದಿಲ್ಲವೆಂದು ಮತ್ತು ನನಗೆ ಇವತ್ತು ಚಾನ್ಸ್ ಸಿಗುವುದಿಲ್ಲವೆಂದು ನನ್ನ ಸರಕನ್ನು ಈಗಾಗಲೇ ಪ್ಯಾಕ್ ಮಾಡಿಕೊಂಡಿದ್ದೆ. ಒಟ್ಟಿನಲ್ಲಿ ಇದುವರೆವಿಗೂ ಕೂಡ ವಚನ ಸಾಹಿತ್ಯವನ್ನು ಹರಿಸಿದಂಥ ಶ್ರೀಮಾನ್ ಪಾಟೀಲ್‌ರವರಿಗೆ ವಂದಿಸುತ್ತಾ ನಾನೂ ಕೂಡ ಆ ವಚನ ಸಾಹಿತ್ಯ ದೃಷ್ಟಿಯಲ್ಲಿ ಮತ್ತು ಧರ್ಮದ ದೃಷ್ಟಿಯಿಂದ ರಾಜಕಾರಣವನ್ನು ಯಾವರೀತಿಯಾಗಿ ನಡೆಸಬೇಕು ಎನ್ನತಕ್ಕಂಥವರ ಬಗ್ಗೆ ಎರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿ ಭಾಷಣ ಮಾಡಿದ್ದಾರೆ. ಅದಕ್ಕೆ ವಂದನಾ ನಿರ್ಣಯ ಮಾಡತಕ್ಕಂಥದ್ದಕ್ಕೆ ನನ್ನ ಸಹಭಾಗಿತ್ವವನ್ನು ಹೇಳುತ್ತಾ ಅದನ್ನು ಒಪ್ಪಿ ಮತ್ತು ಅನುಮೋದಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ರಾಜ್ಯಪಾಲರ ಭಾಷಣ ಪ್ರತಿ ವರ್ಷವೂ ಕೂಡ ಕಾನ್‌ಸ್ಟಿಟ್ಯೂಷನ್ ಪ್ರಕಾರ ನಡೆಯುವ ಒಂದು ವಿಧಿ ವಿಧಾನವಾಗಿದೆ. ರಾಜ್ಯಪಾಲರು ಮಾಡತಕ್ಕಂಥ ಭಾಷಣ ವಿಶೇಷವಾಗಿ ನಮ್ಮೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಹಿಂದೆ ಏನು ನಡೆದಿತ್ತು ಮುಂದೆ ಏನು ನಡೆಯುತ್ತದೆ ಎನ್ನತಕ್ಕಂಥದ್ದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗುತ್ತದೆ. ಹಿಂದೆ ನೋಡಿ ನಡೆ ಮುಂದೆ ಎನ್ನತಕ್ಕಂಥ ಮಾತನ್ನು ಒಬ್ಬ ವಿದ್ವಾಂಸ ಹೇಳಿದ್ದಾನೆ. ಅಂದರೆ, ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಹಿಂದೆ ಏನು ಮಾಡಿದೆ ಮತ್ತು ಮುಂದೆ ಏನು ಮಾಡಬೇಕು ಎನ್ನತಕ್ಕಂಥ ಅನೇಕ ವಿಚಾರಗಳನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ

ಇಷ್ಟಪಡುವುದಿಲ್ಲ. ಈ ಸರ್ಕಾರ ಸಾಕಷ್ಟು ಸಾಧನೆ ಮಾಡಿರತಕ್ಕಂಥದ್ದನ್ನು ರಾಜ್ಯಪಾಲರ ಭಾಷಣದಲ್ಲಿ ನಾವು ಓದಿದ್ದೇವೆ. ಹಾಗೆಯೇ ತಿಳಿದುಕೊಂಡಿದ್ದೇವೆ. ಇವತ್ತಿನ ದಿವಸ ಜನತೆಯ ಕಲ್ಯಾಣವನ್ನು ಬಯಸತಕ್ಕಂಥ ಪ್ರಜಾಪ್ರಭುತ್ವದ ಸರ್ಕಾರ ಜನತೆಗಾಗಿ ಏನು ಒಳಿತನ್ನು ಮಾಡಬೇಕಾಗಿತ್ತೋ ಅದೆಲ್ಲವನ್ನೂ ಮಾಡಿದೆ ಎನ್ನತಕ್ಕಂಥದರಲ್ಲಿ ಎರಡು ಮಾತಿಲ್ಲ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ನನ್ನ ತಲೆ ಕೆಡಿಸಿದಂಥ ವಿಚಾರ ಏನೆಂದರೆ, ನನ್ನ ಎಲ್ಲಾ ವಿರೋಧಪಕ್ಷದ ಮಿತ್ರರು ನನಗಿಂತ ಹೆಚ್ಚಿನ ವಿಚಾರಗಳನ್ನು ತಿಳಿದುಕೊಂಡಿರತಕ್ಕಂಥ ನನ್ನ ಸ್ನೇಹಿತರು ಅನೇಕ ವಿಚಾರಗಳನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಆದರೆ, ಒಂದು ವಿಚಾರದಲ್ಲಿ ನಾನು ಅವರ ಸಹಮತವನ್ನು ಬಯಸಲಿಲ್ಲ. ಅದೇನೆಂದರೆ, ಇವತ್ತಿನದಿವಸ ಇರತಕ್ಕಂಥ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ನಮ್ಮಲ್ಲಿರತಕ್ಕಂಥ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಯಾರೂ ಕೂಡ ಹೆಚ್ಚಿನ ಸಲಹೆಗಳನ್ನು ಕೊಡಲಿಲ್ಲ ಎನ್ನತಕ್ಕಂಥದ್ದು ನನ್ನ ಮನಸ್ಸಿಗೆ ವ್ಯಥೆಯಾಗಿದೆ. ಸರ್ಕಾರದಿಂದ ಕೆಲವು ತಪ್ಪುಗಳು ಆಗುತ್ತವೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆ ತಪ್ಪುಗಳನ್ನು ಎತ್ತಿ ತೋರಿಸಿದ್ದಾರೆ. ಆದರೆ, ಇದನ್ನು ಸರಿಪಡಿಸಿ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂಥದ್ದು ಸರ್ಕಾರದ ಧರ್ಮ. ಇವತ್ತಿನದಿವಸ ನಮ್ಮ ಸರ್ಕಾರ ಇರಬಹುದು ಅಥವಾ ಜನತಾದಳ ಸರ್ಕಾರ ಇರಬಹುದು ಅಥವಾ ಮತ್ತೊಂದು ಪಕ್ಷದ ಸರ್ಕಾರ ಇರಬಹುದು. ಆದರೆ ಸರ್ಕಾರ ಮಾತ್ರ ಬದಲಾವಣೆ ಆಗುತ್ತದೆಯೇ ಹೊರತು ಬಾಡಿ ಮಾತ್ರ ಅದೇ ಇರುತ್ತದೆ. ಅಂದರೆ, ಬಾಡಿಯ ಕ್ಯಾಪ್ ಮಾತ್ರ ಬದಲಾವಣೆಯಾಗುತ್ತಿದೆಯಷ್ಟೆ. ನಾನು ಯಾವ ರೀತಿ ಕ್ಯಾಪ್‌ನ್ನು ಬದಲಾಯಿಸುತ್ತೇನೆಯೋ ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ಕ್ಯಾಪ್ ಬದಲಾವಣೆಯಾಗುತ್ತದೆಯೇ ಹೊರತು ಬಾಡಿ ಮಾತ್ರ ಅದೇ ಇರುತ್ತದೆ. ಕೆಟ್ಟಿರತಕ್ಕಂಥ ಬಾಡಿಯನ್ನು ಯಾವರೀತಿಯ ಸರಿಪಡಿಸಬೇಕು ಎನ್ನತಕ್ಕಂಥದರ ಬಗ್ಗೆ ವಿರೋದ ಪಕ್ಷದ ಮಿತ್ರರು ಯಾವುದೇ ರೀತಿಯ ಸಲಹೆಗಳನ್ನು ಕೊಡಲಿಲ್ಲವೆಂದು ನನ್ನ ಮನಸ್ಸಿಗೆ ವ್ಯಥೆಯಾಗಿದೆ. ಕಳೆದ ಎರಡು ವರ್ಷದಿಂದ ಆಗಿರತಕ್ಕಂಥ ಡಿಬೇಟ್ ನೋಡಿದಾಗ ನಾವು ಪ್ರತಿ ವರ್ಷ ಕೂಡ ರಾಜ್ಯಪಾಲರ ಭಾಷಣದ ಮೇಲೆ ನಾವು ಏನು ಹೇಳಿದ್ದೇವೆ ಮತ್ತು ಕೇಳಿದ್ದೇವೆ, ಅದನ್ನೇ ಪ್ರತಿ ವರ್ಷ ಕೂಡ ಕೇಳುತ್ತಿದ್ದೇವೆ. ಆದರೆ, ಕಿಂಚಿತ್ತು ಬದಲಾವಣೆಗಳನ್ನು ನಾವು ಕಾಣುತ್ತಿಲ್ಲ. ಆದರೆ, ಆ ಬದಲಾವಣೆಗಳನ್ನು ಬಯಸುವುದರಲ್ಲಿ ನಾನೂ ಒಬ್ಬ 'ಜಗತ್ತು ಪರಿವರ್ತನೆಯ ನಿಯಮ' ಎಂದು ಮಾತು ಭಗವದ್ಗೀತೆಯಲ್ಲಿ ಬರುತ್ತದೆ. ಅಂದರೆ, ಜಗತ್ತು ಬದಲಾವಣೆಯಾಗುತ್ತಿರುತ್ತದೆ. ನೆನ್ನೆ ಇದ್ದಂಥ ವಸ್ತು ಇವತ್ತು ನಮ್ಮದು ಆಗಿರುತ್ತದೆ ಮತ್ತು ಇವತ್ತು ನಮ್ಮ ಹತ್ತಿರ ಇರತಕ್ಕಂಥ ವಸ್ತು ಮತ್ತೊಬ್ಬರದ್ದು ಆಗಿರುತ್ತದೆ. ಈ ರೀತಿ ಬದಲಾವಣೆ ಆಗುತ್ತಿರುವುದನ್ನು ನಾವು ನಿತ್ಯ ಕಾಣುತ್ತಿದ್ದೇವೆ. ಇದೇ ರೀತಿಯಲ್ಲಿ ರಾಜಕಾರಣದಲ್ಲಿಯೂ ಕೂಡ ಈ ವಿಭಿನ್ನ ಪರಿಸ್ಥಿತಿಗೆ ಬದಲಾಯಿಸತಕ್ಕಂಥ ವ್ಯವಸ್ಥೆ ನಮ್ಮ ಕಣ್ಣಿಗೆ ಬೀಳುತ್ತಿಲ್ಲ ಎನ್ನತಕ್ಕಂಥ ಮಾತು ಇವತ್ತಿನದಿವಸ ನನ್ನಲ್ಲಿ ಕೊರಗುತ್ತಿದೆ. ಕಳೆದ ಸಲ ಜನತಾದಳ ಸರ್ಕಾರ ಇತ್ತು ಆ ಸಂದರ್ಭದಲ್ಲಿ ಅಲ್ಲಿರತಕ್ಕಂಥವರು ಆಡಳಿತ ನಡೆಸುತ್ತಿದ್ದರು. ಆದರೆ, ಚುನಾವಣೆಯಲ್ಲಿ ಫಲಿತಾಂಶ ಬೇರೆ ಆಯಿತು. ಇದರಿಂದ ಅವರು ಆ ಕಡೆ ಹೋಗಿದ್ದಾರೆ, ನಾವು ಈ ಕಡೆ ಬಂದಿದ್ದೇವೆ. ಆದರೆ, ಕ್ಯಾಪ್ ಮಾತ್ರ ಬದಲಾವಣೆಯಾಯಿತು. ಸಿಸ್ಟಮ್ ಮಾತ್ರ ಅದೇ ಇದೆ. ಈ ಸಿಸ್ಟಮ್ ಎನ್ನತಕ್ಕಂಥ ಬಾಡಿಯನ್ನು ಬದಲಾವಣೆ ಮಾಡುವುದರ ಬಗ್ಗೆ ಏನು ಮಾಡಬೇಕು ಎನ್ನತಕ್ಕಂಥದರ ಬಗ್ಗೆ ಉಪಯುಕ್ತವಾದ ಸಲಹೆಗಳನ್ನು ನನ್ನ ಸ್ನೇಹಿತರಿಂದ

ನಾನು ಅಪೇಕ್ಷೆ ಪಟ್ಟಿದೆ. ಆದರೆ, ಆ ವಿಷಯಗಳನ್ನು ಅವರಿಂದ ಬರಲಿಲ್ಲ. ಇದರಿಂದ ನನ್ನ ಮನಸ್ಸಿಗೆ ಬಹಳ ಖೇದವಾಗಿದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನಮ್ಮಲ್ಲಿರತಕ್ಕಂಥ ಸಿಸ್ಟಮ ಬಗ್ಗೆ ಹೇಳುವುದೇನೆಂದರೆ, ಸರ್ಕಾರದಲ್ಲಿರತಕ್ಕಂಥ ಸಿಸ್ಟಮ್‌ನ್ನು ಬದಲಾಯಿಸುವುದರಲ್ಲಿ ನಾವ್ಯಾರೂ ಕೂಡ ಎಳಷ್ಟು ಕಾಣಿಕೆಯನ್ನು ಸಲ್ಲಿಸಿಲ್ಲ ಎನ್ನತಕ್ಕಂಥ ಮಾತನ್ನು ಇವತ್ತು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರದ ನಡವಳಿಗಳನ್ನು ನಡೆಸುವವರು ಯಾರೇ ಇರಲಿ, ಒಟ್ಟಿನಲ್ಲಿ ನಮ್ಮಲ್ಲಿರತಕ್ಕಂಥ ವ್ಯವಸ್ಥೆಯನ್ನು ಬದಲಾವಣೆ ಮಾಡತಕ್ಕಂಥ ದೃಷ್ಟಿಯ ಮೇಲೆ ನಮ್ಮ ವಿರೋಧ ಪಕ್ಷದ ಮಿತ್ರರು ಮತ್ತು ಹಿರಿಯ ಸ್ನೇಹಿತರು ಅನೇಕ ಸಲಹೆಗಳನ್ನು ಕೊಡುತ್ತಾರೆಂದು ನಾನು ಅಪೇಕ್ಷೆ ಪಟ್ಟಿದೆ. ಆದರೆ, ಇದು ಅವರಿಂದ ಬಾರದೆ ಕೇವಲ ಟೀಕೆ ಟಿಪ್ಪಣಿ ವಿಚಾರಗಳಲ್ಲಿಯೇ ಕಾಲಕಳೆದರು ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಇದರಿಂದ ನನ್ನ ಮನಸ್ಸಿಗೆ ನೋವಾಗಿದೆ. ಇವರಲ್ಲಿ ಇರತಕ್ಕಂಥ ಅಪಾರ ಅನುಭವದಲ್ಲಿ ಸರ್ಕಾರನ್ನು ಯಾವ ರೀತಿಯಾಗಿ ನಡೆಸಬೇಕು ಎನ್ನತಕ್ಕಂಥ ಸಲಹೆಗಳನ್ನು ಕೊಡುತ್ತಾರೆಂದು ನಾನು ಭಾವಿಸಿಕೊಂಡಿದ್ದೆ. ನನ್ನ ಸ್ನೇಹಿತರು ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು ಮಾತನ್ನು ಹೇಳುವುದನ್ನು ಮರೆತ್ತಿದ್ದಾರೆ ಅದೇನೆಂದರೆ, ನಮ್ಮಲ್ಲಿರತಕ್ಕಂಥ ಕೇವಲ 2 ಪರ್ಸೆಂಟ್ ಜನ ಉಳಿದ 98 ಪರ್ಸೆಂಟ್ ಜನರ ಮೇಲೆ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ 2 ಪರ್ಸೆಂಟ್ ಜನರು ಯಾರು ಎಂದರೆ, ಸರ್ಕಾರದಲ್ಲಿರತಕ್ಕಂಥ ನೌಕರರು. ಇವರು 98 ಪರ್ಸೆಂಟ್‌ನಷ್ಟು ಇರತಕ್ಕಂಥ ಜನಸಂಖ್ಯೆ ಮೇಲೆ ಏನೊಂದು ಆಡಳಿತವನ್ನು ನಡೆಸತಕ್ಕಂಥ ವಿಧಿವಿಧಾನ ಇದೆ, ಅದನ್ನು ಬದಲಾವಣೆ ಮಾಡುವುದಕ್ಕೆ ಅತ್ಯಮೂಲ್ಯವಾದ ಸಲಹೆಗಳನ್ನು ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಮೇಲೆ ಮಾತನಾಡುತ್ತಿರುವ ಸಂದರ್ಭದಲ್ಲಿ ನಾನು ನೀಡಲಿಕ್ಕೆ ಇಚ್ಚೆ ಪಡುತ್ತೇನೆ. ಇವತ್ತಿನದಿವಸ 2 ಪರ್ಸೆಂಟ್ ಜನರಿಗೆ ಇರತಕ್ಕಂಥ ಸವಲತ್ತು ಮತ್ತು ರಕ್ಷಣೆ 98 ಪರ್ಸೆಂಟ್‌ನಷ್ಟು ಜನಸಂಖ್ಯೆಗೆ ಇಲ್ಲ. ಆದ್ದರಿಂದ, ಇದನ್ನು ಯಾವರೀತಿಯಾಗಿ ಬದಲಾಯಿಸಬೇಕು ಎನ್ನತಕ್ಕಂಥದರ ಬಗ್ಗೆ ನಾವು ನೀವು ಚಿಂತನೆ ಮಾಡಬೇಕು. ಮೊದಲಿನಿಂದಲೂ ಏನ್ನೊಂದು ಸಿಸ್ಟಮ್ ಬೆಳೆದುಕೊಂಡು ಬಂದಿದೆ ಅದನ್ನು ಬದಲಾಯಿಸುವುದಕ್ಕೆ ನಾವು ಸರ್ವ ಪ್ರಯತ್ನ ಮಾಡಬೇಕಾಗಿರತಕ್ಕಂಥದು ಬಹಳ ಮುಖ್ಯವಾಗಿರತಕ್ಕಂಥದ್ದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಸಣ್ಣ ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇನೆಂದರೆ, ಇವತ್ತಿನದಿವಸ ಯಾವುದೇ ಒಬ್ಬ ಸರ್ಕಾರಿ ನೌಕರ ಸಸ್‌ಪೆಂಟ್ ಆದರೆ, ಆತನಿಗೆ 50 ರಿಂದ 90 ಪರ್ಸೆಂಟ್‌ನಷ್ಟು ಅಲೋಯೆನ್ಸ್ ಕೊಡುತ್ತಾರೆ. ಆತ ಮನೆಯಲ್ಲಿದ್ದರೂ ಕೂಡ ಈ ಒಂದು ಸೌಲಭ್ಯ ಪಡೆದು ಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ನಾನು ಹೇಳತಕ್ಕಂಥದ್ದು ಏನೆಂದರೆ, ಆತ ತನಗೆ ಬೇಕಾದ ಎಲ್ಲಾ ರಕ್ಷಣೆಗಳನ್ನು ಮಾಡಿಕೊಂಡಿದ್ದಾನೆ. ಆದರೆ, ಇವರನ್ನು ಹೊರತುಪಡಿಸಿ ಉಳಿದಿರತಕ್ಕಂತ 98 ಪರ್ಸೆಂಟ್ ಜನ ಸಸ್‌ಪೆಂಡ್ ಆಗಲಿ ಅಥವಾ ಸತ್ತರೂ ಅಥವಾ ಬದುಕಿದ್ದರೂ ಯಾವುದೇ ಒಂದು ಸೌಲಭ್ಯ ಸಿಗುವುದಿಲ್ಲ. ಈ ರೀತಿಯಾದ ಪರಿಸ್ಥಿತಿ ಏಕೆ ಉದ್ಭವವಾಯಿತು? ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದರ ಬಗ್ಗೆ ಇಲ್ಲಿರತಕ್ಕಂಥ ಹಿರಿಯ ಸ್ನೇಹಿತರು ಕಿಂಚಿತ್ತದರೂ ಚಿಂತನೆ ಮಾಡಬೇಕು ಎನ್ನತಕ್ಕಂಥದ್ದು ನನ್ನ ಕಳಕಳಿಯಾಗಿದೆ. ಮಾನ್ಯ ಹಾರ್‍ನಳ್ಳಿ ರಾಮಸ್ವಾಮಿಯವರು ಆಡಳಿತ ಸುಧಾರಣೆಗೆ ಸಂಬಂಧಪಟ್ಟಂತೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅವರು

ಮಾಡಿರತಕ್ಕಂಥ ಅನೇಕ ಶಿಫಾರಸ್ಸುಗಳನ್ನು ಆಡಳಿತದಲ್ಲಿ ತರಬೇಕೆಂದು ಇವತ್ತಿನದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಯಸಿದ್ದಾರೆ. ಅವರು ಮಾಡಿರತಕ್ಕಂಥ ಎಲ್ಲಾ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಬೇಕು. ಮೂರ್‍ನಾಲ್ಕು ವಿಚಾರಗಳ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಇವತ್ತಿನದಿವಸ ಆಡಳಿತ ನಡೆಸತಕ್ಕಂಥ ಯಾವುದೇ ಒಂದು ಪಕ್ಷವಿರಲಿ, ಒಟ್ಟಿನಲ್ಲಿ ಬದಲಾವಣೆ ಆಗುತ್ತಿರುವ ದಿಕ್ಕಿನಲ್ಲಿ ಅಕೌಂಟಬಿಲಿಟಿ ಮತ್ತು ರೆಸ್ಪಾನ್ಸಿಬಿಲಿಟಿ ಹಾಗೂ ಅನ್ಸರಬಿಲಿಟಿ ಎನ್ನತಕ್ಕಂಥ ಎಲಿಮೆಂಟ್ಸ್‌ನ್ನು ಆಡಳಿತದಲ್ಲಿ ತರದಿದ್ದರೆ, ಆಡಳಿತ ನಡೆಸತಕ್ಕಂಥ ಗುರಿ ತಲುಪುವುದರಲ್ಲಿ ಬಹಳ ಕಷ್ಟವಾಗುತ್ತವೆ. ಈ ನಿಟ್ಟಿನಲ್ಲಿ ರಾಜ್ಯಪಾಲರ ವಂದನಾನಿರ್ಣಯದ ಮೇಲೆ ಚರ್ಚೆಯಲ್ಲಿ ವಿರೋಧಪಕ್ಷದ ಮಿತ್ರರು ಹೆಚ್ಚಿನ ರೀತಿಯಲ್ಲಿ ಬೆಳಕನ್ನು ಚೆಲ್ಲುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ, ಅವರು ಸಾಕಷ್ಟು ಸಲಹೆಗಳು ಬರಲಿಲ್ಲ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್:- ರಾಜ್ಯಪಾಲರ ಭಾಷಣ ವಂದನಾ ನಿರ್ಣಯದ ಮೇಲೆ ಮಾತನಾಡುವವರು ಇನ್ನೂ ಇದ್ದಾರೆ. ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ತಾವು ಹೇಳಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ಸಲಹೆಗಳನ್ನು ಕೊಡುತ್ತಾರೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದಂತೆ ಮುಂದೆ ಮಾತನಾಡತಕ್ಕಂಥ ಸೀನಿಯರ್ ಮೆಂಬರ್ ಈ ನಿಟ್ಟಿನಲ್ಲಿ ತಮ್ಮ ಸಲಹೆಗಳನ್ನು ಕೊಡುತ್ತಾರೆಂದು ನಾನು ಅಪೇಕ್ಷೆ ಮಾಡುತ್ತೇನೆ. ನಮ್ಮ ಸಿಸ್ಟಮ್ ಎನ್ನತಕ್ಕಂಥ ಬಾಡಿಗೆ ಉತ್ತಮವಾದ ಔಷಧಿ ಕೊಡಬೇಕಾಗುತ್ತದೆ. ನಾಳೆದಿವಸ ಸರ್ಕಾರದವರನ್ನು ನೀವೂ ಕೂಡ ನಡೆಸಬಹುದು. ನಾವೂ ಕೂಡ ಇನ್ನು ಒಂದು ವರ್ಷಗಳ ಕಾಲ ಸರ್ಕಾರ ನಡೆಸುತ್ತೇವೆ. ಸರ್ಕಾರ ನಡೆಸತಕ್ಕಂಥ ಸಂದರ್ಭದಲ್ಲಿ ಉತ್ತಮವಾದ ಫಲಿತಾಂಶ ಇರಬೇಕಾಗುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ:- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬಾಡಿ ಸಂಪೂರ್ಣವಾಗಿ ಕೊಳೆತು ಹೋಗಿದೆ. ಆದ್ದರಿಂದ, ಕೊಳೆತು ಹೋಗಿರತಕ್ಕಂಥ ಬಾಡಿಗೆ ಸಲಹೆ ಕೊಟ್ಟರೂ ಸಹ ಪುನಃ ವಾಸಿ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ:- ಒಂದೇ ವರ್ಷದಲ್ಲಿ ಈ ಬಾಡಿ ಕೆಟ್ಟು ಹೋಗಿಲ್ಲ. ಯಾವುದೇ ಒಂದು ರೋಗವು ಒಂದೇ ಸಾರಿ ಬರುವುದಿಲ್ಲ. ಒಂದು ರೋಗ ಬರಬೇಕಾದರೆ ಒಂದು ವರ್ಷದ ವಿಶೇಷ ಪರಿಣತೆ ಇರುತ್ತದೆ. ಬಹಳ ವರ್ಷದಿಂದ ಇರತಕ್ಕಂಥ ಕಾಯಿಲೆಯನ್ನು ಯಾವ ರೀತಿಯಾಗಿ ತಪ್ಪಿಸಬೇಕು ಎನ್ನತಕ್ಕಂಥವರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಈ ವಿಚಾರವನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಆಡಳಿತ ಸುಧಾರಣಾಯೋಗದವರು ನೀಡಿರತಕ್ಕಂಥ ವರದಿಯನ್ನು ಓದಿರತಕ್ಕಂಥ ಮಿತ್ರರೆಲ್ಲರೂ ಒಂದು ಮಾತನ್ನು ಗಮನಿಸಬೇಕಾಗುತ್ತದೆ. ಬಹಳಷ್ಟು ಹೊಸ ವಿಚಾರಗಳನ್ನು ಆಡಳಿತದಲ್ಲಿ ಬದಲಾವಣೆ ತರುವುದಕ್ಕೆ ನಾವು ಇಚ್ಛೆಪಟ್ಟಿದ್ದೇವೆ. ಈಗಾಗಲೇ ಬದಲಾವಣೆ ತರತಕ್ಕಂಥ ದಿಕ್ಕಿನಲ್ಲಿ ನಾವು ಹೊರಟಿದ್ದೇವೆ. ಇದಕ್ಕೆ ತಾವು ಪ್ರೋತ್ಸಾಹ ಕೊಡಬೇಕು. ಇದಕ್ಕೆ ತಮ್ಮೆಲ್ಲರ ಬೆಂಬಲವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ನಮ್ಮ ಆಡಳಿತವನ್ನು ಚುರುಕು ಮಾಡುವುದಕ್ಕೆ ನಿಮ್ಮ ಆಶೀರ್ವಾದ ಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಮರೆತೆನು. ನಮ್ಮ ಆಡಳಿತದಲ್ಲಿ ಈಗ ಸಾಕಷ್ಟು ಬದಲಾವಣೆಗಳನ್ನು ತರಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ

ಶ್ರೀಮಾನ್ ಎಸ್.ಎಂ. ಕೃಷ್ಣಾರವರು ಪ್ರಯತ್ನವನ್ನು ಪಟ್ಟಿದ್ದಾರೆ. ನಮ್ಮ ಆಡಳಿತವೂ ಕೂಡ ಆ ದೃಷ್ಟಿಯಲ್ಲಿ ನಡೆದಿದೆ. ಆ ಆದರೆ ಆ ಆಡಳಿತನ್ನು ನಡೆಸುವಂಥ ದಿಕ್ಕಿನಲ್ಲಿರತಕ್ಕಂಥ ಚುಕ್ಕಾಣಿಯನ್ನು ಹಿಡಿದಿರತಕ್ಕಂಥ ಕೆಲವು ಜನ ಆ ದೃಷ್ಟಿಯಲ್ಲಿ ಸ್ಪಂದಿಸದೇ ಕೆಲವು ವಿಚಾರದಲ್ಲಿ ತೊಂದರೆಯಾಗಿರಬಹುದು. ಎಡರು ತೊಡರುಗಳು ಆಗಿರಬಹುದು ಇಲ್ಲವೆಂದು ಅಲ್ಲ. ಅದನ್ನು ಸರಿಪಡಿಸುವುದು ಹೇಗೆ ಎನ್ನುವುದರ ಬಗ್ಗೆ ನೀವು ಸಲಹೆಯನ್ನು ಕೊಡಿ. ನಾಳೆ ದಿವಸ ನೀವು ಇದ್ದರೂ ಕೂಡ ಅದೇ ಅಧಿಕಾರಿಗಳು ಇರುತ್ತಾರೆ. ಅದಕ್ಕೆ ಏನೆಂದರೆ, ಫೇಸ್ ಹಾಗೂ ಬ್ಲಡ್ ಬದಲಾವಣೆಯಾಗಬೇಕಾಗುತ್ತದೆ. ವಿಶೇಷವಾದಂಥ ಪರಿವರ್ತನೆಗಳಾದರೆ, ಆಡಳಿತವು ಚುರುಕು ಆಗಬಹುದೆಂದು ಹೇಳುವುದಕ್ಕೆ ನಾನಾದರೂ ಭಾವಿಸಿಕೊಂಡಿದ್ದೇನೆ. ಏಕೆಂದರೆ ರೋಗಿಯನ್ನು ಟ್ಯೂಬ್ಸ್ ಎಲ್ಲಾ ಹಾಕಿ ಇಟ್ಟಂತೆ, ನಮ್ಮ ಆಡಳಿತವು ಉತ್ತಮವಾಗಿ ನಡೆಯಲು ತಮ್ಮ ಸಲಹೆಗಳನ್ನು ನಾನು ನಿರೀಕ್ಷೆ ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ಬಹುಶಃ ನಮ್ಮ ಸರ್ಕಾರದ ಸಾಧನೆ ಏನೆನಿಟೆ, ಸಾಕಷ್ಟು ಸ್ತ್ರೀಶಕ್ತಿ ಇರಬಹುದು, ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರುವುದರ ಬಗ್ಗೆ ಒಂದು ವಿಚಾರವನ್ನು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮೊನ್ನೆ ಮಾನ್ಯ ನಂಜುಂಡಪ್ಪನವರ ವರದಿಯ ಬಗ್ಗೆ ಒಂದು ಸಣ್ಣ ಚರ್ಚೆಯಾಯಿತು. ಏನೆಂದರೆ, ಹೈದ್ರಾಬಾದ್ ಕರ್ನಾಟಕ ಬೋರ್ಡ್, ಬ್ಯಾಕ್‌ವರ್ಡ್ ಪ್ಲೇಸಸ್‌ಗೆ ಹೀಗೆ ಬೇಕಾದಷ್ಟು ಬೋರ್ಡ್‌ಗಳನ್ನು ಮಾಡಿದ್ದಾರೆ, ಈ ಬೋರ್ಡ್‌ಗಳನ್ನು ರದ್ದು ಮಾಡಬೇಕು. ಆ ರದ್ದುಮಾಡಿದ ಹಣವನ್ನು ಶಾಸಕರುಗಳಿಗೆ ಅವರ ಡಿಸ್ಕ್ರಿಷನರಿ ಅಮೌಂಟ್‌ಗೆ ಕೊಟ್ಟು ಬಿಡಬೇಕು ಎನ್ನುವ ಮಾತನ್ನು ಹೇಳಿದರು. ಇವತ್ತು ಒಂದು ಸತ್ಯಾಂಶವನ್ನು ಹೇಳಬೇಕಾಗುತ್ತದೆ, ಅವತ್ತಿನ ನಂಜುಂಡಪ್ಪನವರ ವರದಿ ಇವತ್ತು ಏನು ಬಂದಿದೆ, ಈ ಅಂಶವನ್ನು ಅವತ್ತು ಯೋಚನೆ ಮಾಡಿದ್ದರು. ಈ ಏರಿಯಾ ಬ್ಯಾಕ್‌ವರ್ಡ್ ಇದ್ದಾವೆ, ಏರಿಯಾವನ್ನು ಮುಂದುವರೆಸುವುದಕ್ಕೆ ಬೋರ್ಡ್‌ಗಳನ್ನು ಮಾಡಬೇಕು. ಸ್ಪೆಷಲ್ಲಾಗಿ ಬೋರ್ಡ್‌ಗಳನ್ನು ಮಾಡಿ ಸ್ಪೆಷಲ್ಲಾಗಿ ಹಣವನ್ನು ಒದಗಿಸಬೇಕೆಂದು ಹೇಳಿ, ಮಲೆನಾಡುಸೀಮೆ ಮುಂತಾದ ಬೋರ್ಡ್‌ಗಳನ್ನು ಏನು ಮಾಡಿದ್ದಾರೆ, ಪುನಃ ಅವುಗಳನ್ನು ಬೇಡವೆಂದು ಹೇಳಿದರೆ ನಾವು ನಂಜುಂಡಪ್ಪನವರ ವರದಿಯನ್ನು ವಿರೋಧ ಮಾಡಿದಂತಾಗುತ್ತದೆ. ಆದ್ದರಿಂದ ಆ ದೃಷ್ಟಿಯಲ್ಲಿ ನಾವು ಯೋಜನೆ ಮಾಡತಕ್ಕಂಥದ್ದು ಅಷ್ಟು ಸರಿಯಾಗಿಲ್ಲವೆನ್ನತಕ್ಕಂಥದ್ದನ್ನು ಇವತ್ತು ಹೇಳುತ್ತೇನೆ. ಹಾಗೆಯೇ ಈ ಒಂದು ವಿಚಾರವನ್ನು ಹೇಳತಕ್ಕಂಥ ಸಂದರ್ಭದಲ್ಲಿ ನಮ್ಮ ಸರ್ಕಾರದ ಸಾಧನೆಗಳನ್ನು ಹೇಳುವಾಗ ಈ ಕೆರೆಗಳ ಬಗ್ಗೆ, ಬರ ಕಾರ್ಯಕ್ರಮದಲ್ಲಿ ನಾವು ನೀರು ಇಲ್ಲದೆ ಇವತ್ತು ಅನುಭವಿಸುತ್ತಿದ್ದೇವೆ, ಕೆರೆ ಯೋಜನೆಯ ಬಗ್ಗೆ ಒಂದು ಅಥಾರಿಟಿಯನ್ನು ಮಾಡಿದ್ದಾರೆ. ಇದೊಂದು ಒಳ್ಳೆಯ ಕಾರ್ಯಕ್ರಮ ಇದನ್ನು ಯಶಸ್ವಿ ಮಾಡುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲವೆನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಮುಂದುವರೆದು, ತಾವು ನಮ್ಮ ಸಾಧನೆಗಳ ಪಟ್ಟಿಯನ್ನು ತೆಗೆದು ನೋಡಿದಾಗ ಗೊತ್ತಾಗುತ್ತದೆ. ಈ ಒಂದು ಸರ್ವ ಪ್ರಯತ್ನವನ್ನು ಎಲ್ಲಾ ದೃಷ್ಟಿಯಿಂದಲೂ ಕೂಡ ಸರ್ವಜನ ಸುಖಿನೋಭವಂತು ಎನ್ನುವಂಥ ನಮ್ಮ ಮಾತು ಏನಿದೆ, ಆ ಮಾತನ್ನು ಜಾರಿಗೆ ಗೊಳಿಸುವುದಕ್ಕೆ ಸರ್ಕಾರ ಬಹಳ ಮುನ್ನುಗ್ಗಿ ನಡೆಸಿಕೊಂಡು ಬರುತ್ತದೆ. ಎನ್ನತಕ್ಕಂಥ ಮಾತನ್ನು ನಾನು ಇವತ್ತು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಆದರೆ ಒಂದು ವಿಚಾರ ಸರಣಿ ಇದೆ. ಅದೇನೆಂದರೆ, you build a house with the material available in the place. ಎಂದು ಹೇಳುತ್ತಾರೆ. ಯಾರಾದರೂ ಮನೆಯನ್ನು ಕಟ್ಟಬೇಕೆಂದರೆ, ಆ ಮೊಹಲ್ಲಾದಲ್ಲಿ ಆ ಹತ್ತಿರದಲ್ಲಿ ಸಿಕ್ಕುವಂಥ ಮಟೀರಿಯಲ್ಸ್‌ನಲ್ಲಿ ಕಟ್ಟುತ್ತಾರೆ ಎನ್ನುವ ಒಂದು ವಾದದ ಸರಣಿ ಇದೆ. ಯಾವ ಉತ್ತಮವಾದ ಇಟ್ಟಿಗೆ ಸಿಗುತ್ತದೆ ಅದರಿಂದ ಉತ್ತಮವಾದ ಮನೆಯನ್ನು ಕಟ್ಟಬಹುದು, ಇಲ್ಲವಾದರೆ ಸಣ್ಣ ಮನೆಯನ್ನು ಕಟ್ಟುತ್ತಾರೆ. ಆ ಒಂದು ಮಟೀರಿಯಲ್ ಏನು ಸಿಗುತ್ತದೆ ಅದರಲ್ಲಿ ಮನೆಯ ಗುಣಮಟ್ಟ, quality of the house ಗೊತ್ತಾಗುತ್ತದೆ ಎನ್ನತಕ್ಕಂಥ ಮಾತನ್ನು ಹೆಳುತ್ತಾರೆ. ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ರಾಜಕಾರಣದಲ್ಲಿ ಪಬ್ಲಿಕ್ ಲೈಫ್‌ನಲ್ಲಿ ಆ ಒಂದು ಚಿಹ್ನೆಯನ್ನು ನಾವು ಕಾಣುತ್ತಿದ್ದೇವೆ. ಅದನ್ನು ಬದಲಾಯಿಸುವುದು ಹೇಗೆ ಎನ್ನುವುದರ ಬಗ್ಗೆ ಒಂದಿಷ್ಟು ಚಿಂತನೆಯನ್ನು ಹರಿಸಬೇಕು ಎನ್ನುವ ಮಾತನ್ನು ಹೇಳುತ್ತಾ, ಇವತ್ತು ಹಲವಾರು ಕ್ಷೇತ್ರಗಳಲ್ಲಿ ಸರ್ಕಾರ ಹಲವಾರು ಸಾಧನೆಗಳನ್ನು ಏನು ಮಾಡಿದೆ, ಅದೆಲ್ಲವನ್ನೂ ಕೂಡ ಯಶಸ್ವಿಯಾಗಿ ಜಾರಿಗೆ ಗೊಳಿಸುತ್ತದೆ ಸರ್ಕಾರ ಅದರಲ್ಲಿ ಏನೂ ಎಳ್ಳಷ್ಟು ಸಂಶಯವಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಆ ಎಲ್ಲಾ ಬದಲಾವಣೆಗಳನ್ನು ತರುವುದರಲ್ಲಿ ಎಲ್ಲಾ ಸ್ನೇಹಿತರ ಒಂದು ಸಹಕಾರವನ್ನು ಕೇಳುತ್ತಾ, ಮಾನ್ಯ ಎಸ್.ಎಂ. ಕೃಷ್ಣರವರು ನೇತ್ರತ್ವದಲ್ಲಿರುವಂಥ ನಮ್ಮ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಮುನ್ನುಗ್ಗುತ್ತಿದೆ, ಅದಕ್ಕೆ ಎಲ್ಲರ ಸಹಕಾರವನ್ನು ಕೋರುತ್ತಾ, ಇಲ್ಲಿ ನಾನು ಹೆಚ್ಚಾಗಿ ಮಾತನಾಡದೇ ಈ ಒಂದು ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಅವರು ಜಂಟಿ ಅಧಿವೇಶನದಲ್ಲಿ ಅದು ಅತ್ಯುತ್ತಮವಾಗಿ ಕನ್ನಡದಲ್ಲಿ ಭಾಷಣವನ್ನು ಮಾಡಿದ್ದಾರೆ. ಅವರು ಹಿಂದಿ ಪ್ರದೇಶದಿಂದ ಬಂದಿರುವಂಥ ಗೌರ್ನರು, ಕನ್ನಡದಲ್ಲಿ ಬಹಳ ಚೆನ್ನಾಗಿ ಮಾತನಾಡಿದರು. ಅದಕ್ಕಾಗಿ ಈ ಸಂದರ್ಭದಲ್ಲಿ ಅವರನ್ನು ವಂದಿಸುತ್ತಾ, ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ್):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸುತ್ತೇನೆ. ಪ್ರಥಮವಾಗಿ ಮಾನ್ಯ ಕಂದಾಯ ಸಚಿವರು ಅವರಿಗೆ ಕಳೆದ ಅಧಿವೇಶನದಲ್ಲಿ ನಾನು ಒಂದು ಸಲಹೆಯನ್ನು ಕೊಟ್ಟು ಒಂದು ಬೇಡಿಕೆಯನ್ನು ಇಟ್ಟಿದ್ದೇನೆ. 94 ಸಿಎಡಿಯಲ್ಲಿ ಏನು ಸರ್ಕಾರಿ ಭೂಮಿಯಲ್ಲಿ ಮನೆಯನ್ನು ಕಟ್ಟಿಕುಳ್ಳಿತವರಿಗೆ ಒಂದು ರೇಟನ್ನು ಫಿಕ್ಸ್ ಮಾಡಿದ್ದರು ಅದನ್ನು ಕಡಿಮೆ ಮಾಡಬೇಕು, ಏಕೆಂದರೆ 94 ಬಿಎಡಿ ಯಲ್ಲಿ ಏನು ರೇಟ್ ಮಾಡಿದ್ದರು ಅದಕ್ಕಿಂತ 2000 ಪಟ್ಟು ಜಾಸ್ತಿಯಾಗುತ್ತದೆ ಎಂದು ಹೇಳಿದಾಗ, ಅದಕ್ಕೆ ತಿದ್ದುಪಡಿ ತರುವುದಕ್ಕೆ ಒಪ್ಪಿ ಇವತ್ತು ಡ್ರಾಫ್ಟ್ ರೂಲ್ಸ್‌ನ್ನು ಪಬ್ಲಿಷ್ ಮಾಡಿದ್ದಾರೆ, ಅದಕ್ಕಾಗಿ ಅವರಿಗೆ ತುಂಬು ಹೃದಯದ ಅಭಿನಂದನೆಗಳು. ಅದರಲ್ಲಿ ಸರ್ಕಾರಿ ಭೂಮಿಯಲ್ಲಿ ಪಟ್ಟಣ ಪ್ರದೇಸದಲ್ಲಿ 20X30 ಮತ್ತು ಗ್ರಾಮೀಣ ಪ್ರದೇಶದಲ್ಲಿ 40X30 ಸೈಟನ್ನು ಬಿಪಿಎಸ್ ಅವರಿಗೆ ಉಚಿತವಾಗಿ ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಇದಕ್ಕೂ ಮಿಕ್ಕಿ ಸ್ವಾಧೀನದಲ್ಲಿದ್ದರೆ ಅಲ್ಲಿಯ ಲೋಕಲ್ ಮಾರ್ಕೆಟ್ ರೇಟ್ ಪ್ಲಸ್ ಕನ್‌ವರ್ಷನ್ ಚಾರ್ಜ್‌ಸ್ ಕೊಡುವ ವ್ಯವಸ್ಥೆ ಜಮ ಮಾಡಿರುವುದರಿಂದ ಅವರಿಗೆ ನನ್ನ ತುಂಬು ಹೃದಯದ ಅಭಿನಂದನೆಗಳನ್ನು ಮತ್ತು ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಇಲ್ಲದಿದ್ದರೆ ಬಡವರಿಗೆ ಆಶ್ರಯ ಮನೆಗಳನ್ನು ಕಟ್ಟಿ ಕುಳಿತುಕೊಳ್ಳುವುದಕ್ಕೆ ಸ್ವಂತ ತಳಹದಿ ಇಲ್ಲದಿದ್ದರೆ ಬಹಳ, ದುಬಾರಿಯಾಗಿ 10 ರಿಂದ 15 ಸಾವಿರ ರೂಪಾಯಿಗಳನ್ನು ಕೊಟ್ಟು ಸರ್ಕಾರಿ ಭೂಮಿಯನ್ನು ಖರೀದಿ ಮಾಡುವಂಥ ಪರಿಸ್ಥಿತಿಯಲ್ಲಿದ್ದರು. ಮಾನ್ಯ ಚಿಂಚಸನೂರ್ ಅವರಿಗೆ ತಿಳಿಸುವುದೆನೆಂದರೆ ಈಗಾಗಲೇ ನಮ್ಮ ಮಾನ್ಯ ಎಸ್. ಎಸ್. ಪಾಟೀಲ್‌ರು ಆನ್‌ಲೈನ್ ಲಾಟರಿ ಬಗ್ಗೆ ಮಾತನಾಡಿದ್ದಾರೆ, ಇದರ ಜೊತೆಗೆ ಇನ್ನು ಎರಡು ಮೂರು ಮುಖ್ಯವಾದ ಮಾತುಗಳನ್ನು ನಾನು ಹೇಳಬೇಕಾಗಿದೆ. ಸಾವಿರ ಕೋಟಿ ರೂಪಾಯಿಗಳ ಆದಾಯದ ಬಗ್ಗೆ ಹೇಳಿದರು, ಪ್ರಾಯಶಃ ಮಾನ್ಯ ಮುಖ್ಯಮಂತ್ರಿಗಳೂ ಸಹ ಇದು ಲಾಟರಿ ರೆಗ್ಯುಲೇಶನ ಆ್ಯಕ್ಟ್ ಅದರ ಅಡಿಯಲ್ಲಿ ಇದನ್ನು ತಂದಿರುವುದು ಎಂದು ಹೇಳಿದರು. section 2: Definition of 'Lottery'. ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಎರಡು ಸೆಕ್ಷನ್‌ಗಳನ್ನು ಓದುತ್ತೇನೆ.

"In this Act unless there is anything reqpugnant in the subject or context, Bumper Draw of a Lottery means a special draw of a lottery conducted or drawn during any festival or on a special occasions wherein the prize money offered is greater than the prize money in the case of other ordinary draw of lotteries.

(b) Lotteries means, a scheme in whatever form and by whatever name called, for distribution of prizes by draw of lot or chances to those persons participating in the chances of prizes by purchasing tickets.

(c) Prescribed means, prescribed by rules made under this act

Section 4: Prohibition of Lottery:

Conditions subject to which lotteries may be organised;

A State Government may organise, conduct or promote a lottery, subject to the following conditions viz.,

(a) Prizes shall not be offered on any preannounced number or on the basis of a single digit

(c) The state Government shall print lottery ticket bearing the imprint and logo of the state in such a manner that the authenticity of the Lottery Ticket is ensured.

There is no logo of the State here.

ಇದು ಯಾವ ಟಿಕೇಟ್‌ನಲ್ಲಿ ನಿಮ್ಮ ಲೋಗೊವಿಲ್ಲ ಮತ್ತು ಸಿಂಗಲ್ ಡಿಜಿಟ್ ನಂಬರನ್ನು ಕೊಟ್ಟು ಕಟ್ಟ ಮಾಡುವಂಥದ್ದು, ಅದಕ್ಕೆ ಲಾಟರಿ ಎಂದು ಹೇಳುವುದಿಲ್ಲ, ಇದಕ್ಕೆ ಕೋಲ್ ಎಂದು ಹೇಳುತ್ತೇವೆ. ಇದು ವೆಷ್ಟನ್ ಕಂಟ್ರಿಯಿಂದ ಬಂಥದ್ದು. What is kol? ಎಂದು ಹೇಳುವುದನ್ನು ತಮ್ಮ ಗಮನಕ್ಕೆ ತರುತ್ತೇನೆ 'we have to first understand what the Kol is and

what is its purpose. We will take up the game called Lotto ಇದಕ್ಕೆ ಲೋಟೋ ಎಂದು ಹೇಳುತ್ತಾರೆ. which is prominent in most of the western countries. In the game a player is required to select or bet any six numbers from a range of numbers 1 to 49 ಎಂದು ಇದೆ. 1 ರಿಂದ 49ನೇ ನಂಬರಿನಲ್ಲಿ ಬರುವಂಥದ್ದನ್ನು ಕಟ್ ಮಾಡುವಂಥದ್ದು, ಆದ್ದರಿಂದ ಇದಕ್ಕೆ ಕೋಲ್ ಎನ್ನುತ್ತಾರೆ. What is Kol ಅಂದರೆ In Kol, what is called a Lottery Ticket is not actually a Lottery Ticket, but is a betting slip indicating the numbers which a player is betting on an amount of bet. ಇವತ್ತು ಟಿಕೇಟ್‌ನೊಳಗೆ ಇದರಲ್ಲಿ ಸರ್ಕಾರದ ಲೋಗೋ ಇಲ್ಲ ಒಂದು ಫಿಕ್ಸೆಡ್ ನಂಬರ್ ಇಲ್ಲ. 1 ರಿಂದ 49 ನಂಬರ್ ಇರುವಂಥದ್ದು. ಅದರಲ್ಲಿ ಅವರು ನಂಬರ ಎತ್ತಿ ಏನು ಕೊಡುತ್ತಾರೆ ಅದನ್ನು ಕಟ್ ಮಾಡುವಂಥದ್ದು, ಅದನ್ನು ಕಂಪ್ಯೂಟರ್‌ನಲ್ಲಿ ಮಾಡುತ್ತಾರೆ. ಆದ್ದರಿಂದ This is a Government sponsored 'Matka'. This is not a lottery. ನೀವು ಲಾಟರಿಯಿಂದ ಸರ್ಕಾರಕ್ಕೆ ಆದಾಯವು ಬರುತ್ತದೆ ಎಂದು ಹೇಳಬಹುದು. ಆದರೆ ಲಾಟರಿಯನ್ನು ಸರ್ಕಾರವು ನಡೆಸುತ್ತಿಲ್ಲ, ಅದನ್ನು ಬೇರೆಯ ಏಜೆನ್ಸಿಗೆ ನಡೆಸುವುದಕ್ಕೆ ಕೊಟ್ಟಿದ್ದೀರಿ, ನಿಮ್ಮ ಸರ್ಕಾರಕ್ಕೆ ಬರುವ ಲಾಭಕ್ಕಿಂತ ಆ ಏಜೆನ್ಸಿಯವರಿಗೆ ಇದರಲ್ಲಿ ಲಾಭ ಹೆಚ್ಚಾಗಿ ಬರುತ್ತದೆ. ನೀವು ಜನರ ಆಸಕ್ತಿಯನ್ನು ಕಡೆಗಣಿಸಿ ಈ ಲಾಟರಿಯನ್ನು ಪ್ರಾರಂಭ ಮಾಡಿದ್ದೀರಿ, ಇದು ಕಾನೂನಿಗೆ ವಿರೋಧವಾಗಿದೆ. ಇವತ್ತು ತಮಿಳುನಾಡಿನಲ್ಲಿ ಲಾಟರಿಯನ್ನು ಬ್ಯಾನ್ ಮಾಡುತ್ತಾರೆ, ತಮಿಳುನಾಡು ಸರ್ಕಾರ ಮಾಡಿರುವುದು ಸರಿ ಎಂದು ಹೈಕೋರ್ಟ್ ಆದೇಶವನ್ನು ಮಾಡುತ್ತದೆ. Permit sale of Certified Tickets: High Court. ಅಲ್ಲಿ ಸರ್ಕಾರವು ಒಂದು ತೀರ್ಮಾನವನ್ನು ತೆಗೆದುಕೊಂಡು ಲಾಟರಿಯನ್ನು ಬ್ಯಾನ್ ಮಾಡಿದ್ದನ್ನು ಹೈಕೋರ್ಟಿನವರು ಎತ್ತಿ ಹಿಡಿಯುತ್ತಾರೆ, ನೀವು ಇಲ್ಲಿ ಹೊಸ ಒಂದು ಜೂಜನ್ನು ತರುತ್ತೀರಿ. ತಮ್ಮ ತೃಪ್ತಿಗೋಸ್ಕರ ಇದು ಜೂಜಲ್ಲವೆಂದು ಹೇಳಿ, ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದೀರಿ. ಕುಡಿಯುವುದರ ಒಟ್ಟಿಗೆ ಇನ್ನೊಂದು ಜೂಜನ್ನು ತಂದು ಬೆಳಿಗ್ಗೆಯಿಂದ ರಾತ್ರಿಯವರೆಗೆ ಈ ಲಾಟರಿಯಿಂದ ಎಷ್ಟು ಸಂಪಾದನೆಯನ್ನು ಮಾಡುತ್ತಾರೆ, ಇಲ್ಲಿ ನಿಮ್ಮ "ಶನಿಭಕ್ತನಿಗೆ ಶುಕ್ರದೆಸೆ" ಎರಡು ಕೋಟಿ ರೂಪಾಯಿಗಳ ಜಾಕ್‌ಪಾಟ್" ಅವನು ಏನು ಹೇಳುತ್ತೇನೆಂದರೆ, ದಿವಸಕ್ಕೆ 100 ರೂಪಾಯಿಗಳನ್ನು ಈ ಲಾಟರಿಯ ಮೇಲೆ ಹಾಕುತ್ತಿದ್ದ, ಒಂದೆರಡು ಅಲ್ಲ, ಆತನು ದಿವಸಕ್ಕೆ ನೂರು ರೂಪಾಯಿಗಳನ್ನು ಹಾಕಿ ಯಾವುದೋ ಒಬ್ಬನಿಗೆ ಎರಡು ಕೋಟಿ ರೂಪಾಯಿಗಳು ಬಂದಿರುವುದು, ತಾವು ಇದರ ಬಗ್ಗೆ ಆಲೋಚನೆಯನ್ನು ಮಾಡಬೇಕು. ನೀವು ಈ ಹಣವನ್ನು ರಾಜ್ಯದ ಅಭಿವೃದ್ಧಿಗೆ ಉಪಯೋಗ ಮಾಡಬೇಕಾಗಿಲ್ಲ, ನೀವು ಜನರನ್ನು ಹಾಳುಮಾಡಿ ರಾಜ್ಯದ ಅಭಿವೃದ್ಧಿಯನ್ನು ಏನು ಮಾಡುತ್ತೀರಿ? ಇದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಈ ಲಾಟರಿಯನ್ನು ಮಹಿಳೆಯರೂ ಕೂಡ ಆಡುವುದಕ್ಕೆ ಪ್ರಾರಂಭ ಮಾಡಿದ್ದಾರೆ, ಮಹಿಳೆಯರು ಗಂಡಸರನ್ನು ಲಾಟರಿ ಆಡುವುದಕ್ಕೆ ಬಿಡಬೇಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ನೀವು ಈ ಲಾಟರಿಯನ್ನು ಜಾರಿಗೆ ತಂದು ಮಹಿಳೆಯರು ಗಂಡಸರಿಗೆ ಲಾಟರಿ ಆಡುವುದನ್ನು ತಪ್ಪಿಸಿ ಎಂದು ಹೇಳಿದರೆ ಹೇಗೆ?

ಶ್ರೀ ಎಸ್.ಎನ್. ಪಾಟೀಲ್:-ಹೂಂ ಮಹಿಳೆಯರೆ, ಲಾಟರಿ ಆಡುವುದಕ್ಕೆ ಶುರು ಮಾಡಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಗಡೆ:- ಮಹಿಳೆಯರು, ಮಕ್ಕಳು, ಇವತ್ತು ಕಾಲೇಜಿಗೆ ಹೋಗುವುದಕ್ಕೆ ಬಸ್ ಚಾರ್ಜನ್ನು ಕೊಟ್ಟಿದ್ದರೆ, ಅದನ್ನು ತೆಗೆದುಕೊಂಡು ಹೋಗಿ ಸೂಪರ್ ಲೋಟ್ಟೋ ಟಿಕೇಟನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಬಾಬುರಾವ್ ಚಿಂಚಸೂರ್(ಸಣ್ಣ ಉಳಿತಾಯ ಮತ್ತು ಲಾಟರಿ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೆ, ಇದು ಒಂದು ಮನೋರಂಜನಾ ಕಾರ್ಯಕ್ರಮವಾಗಿದೆ ಇದು ಒಂದು ಲಾಭದಾಯಕವಾದ ಉದ್ಯೋಗವಾಗಿದೆ. ಇದು ಅಷ್ಟೇ ಅಲ್ಲ, ಯಾರೋ ಹುಚ್ಚು ಎಂದು ಹುಚ್ಚಾಸ್ಪತ್ರೆಗೆ ಹೋಗಿಲ್ಲ. ಇವರ ಬಗ್ಗೆ ನಿರ್ದಿಷ್ಟವಾದ ಮಾಹಿತಿಯು ಸರ್ಕಾರಕ್ಕೆ ಬಂದಿಲ್ಲ, ಇದರಿಂದಾಗಿ ಯಾರೂ ಹುಚ್ಚರಾಗಿಲ್ಲ ಮತ್ತು ಬೀದಿಪಾಲಾಗಿಲ್ಲ ತಿರುಗಿಲ್ಲ, ಇದರಿಂದಾಗಿ ನಾವು 25 ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಗಡೆ:- ಇದರಿಂದಾಗಿ ನೀವು ಎಷ್ಟು ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತಿದ್ದೀರಿ? ನೀವು ಎಷ್ಟು ಮನೆಗಳನ್ನು ಹಾಳು ಮಾಡುತ್ತಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸಚಿವರೆ, ತಾವು ಆಮೇಲೆ ಉತ್ತರವನ್ನು ಕೊಡಿ. ಅವರು ಏನು ಹೇಳುತ್ತಾರೋ ಅದನ್ನು ಕೇಳಿ ಕೊನೆಗೆ ಉತ್ತರವನ್ನು ಕೊಡಿ.

ಶ್ರೀ ಅರಗ ಜ್ಞಾನೇಂದ್ರ:-ಮಾನ್ಯ ಉಪಾಧ್ಯಕ್ಷರೆ, ಹುಚ್ಚಾಸ್ಪತ್ರೆಯಲ್ಲಿ ದಯವಿಟ್ಟು ಹೋಗಿ ಆ ಫಿಗರ್ಸ್‌ನ್ನು ತರಿಸಿ ಎಷ್ಟಾಗಿದೆ ಎಂದು ತಾವು ಕೇಳಿ ನಿಮ್ಹಾನ್ಸ್‌ಗೆ ಎಷ್ಟು ಜನರು ಸೇರಿದ್ದಾರೆಂದು ಫಿಗರ್ಸ್‌ನ್ನು ತರಿಸಿಕೊಳ್ಳಿ;

ಶ್ರೀ ಬಾಬುರಾವ್ ಚಿಂಚಸನೂರ್:- ಒಬ್ಬರೂ ಸಹ ಅಡಿಕ್ಟ್ ಆಗಿಲ್ಲ. ಅದೆಲ್ಲವೂ ಶುದ್ಧ ಸುಳ್ಳಾಗಿದೆ.

ಶ್ರೀ ಅರಗ ಜ್ಞಾನೇಂದ್ರ:- ಇಲ್ಲ ಅಂದರೆ ಹುಚ್ಚರೆಲ್ಲರನ್ನು ನಿಮ್ಮ ಮನೆ ಹತ್ತಿರ ಕರೆದುಕೊಂಡು ಬರಬೇಕಷ್ಟೇ? ನಮಗೆ ಲೆಕ್ಕ ಸಿಗಬೇಕಾದರೆ ನಾವು ಅದನ್ನೇ ಮಾಡಬೇಕಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ (ಕಡುವನಹಳ್ಳಿ):- ನೀವು ಮನೋರಂಜನೆಗೋಸ್ಕರ ಲಾಟರಿಯನ್ನು ಮಾಡುತ್ತೀರೆಂದರೆ, ಇನ್ನು ಬೇರೆ ಬೇರೆ ಮನೋರಂಜನೆಗಳಿಗಾಗಿ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ. ಮಾಡಿರಿ, ಇದನ್ನು ಮಾಡಿದರೆ ಬಹಳ ಒಳ್ಳೆಯ ಮನೋರಂಜನೆಯು ಸಿಗುತ್ತದೆ. ಇದನ್ನು ಏತಕ್ಕಾಗಿ ಮಾಡುತ್ತೀರಿ ಸ್ವಾಮಿ? ಈ ಲಾಟರಿ ಮಾಡುವುದನ್ನು ನೀವು ಮನೋರಂಜನೆಗೋಸ್ಕರ ಮಡುತ್ತೇವೆಂದು ಚಿಂತನೆಯಿದ್ದರೆ ** ಮಾಡಿರಿ ಅದರಿಂದ ಸರ್ಕಾರಕ್ಕೆ ಒಳ್ಳೆಯ ಸರ್ಕಾರಕ್ಕೆ ಆದಾಯ ಬರುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಗಡೆ:- ಏಕೆ ತಾವು ** ಮಾಡಬಾರದು?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ತಾವು ಬಂದ ಮೇಲೆ ಅದನ್ನು ಪ್ರಾರಂಬ ಮಾಡುವಿರಂತೆ? ಸಧ್ಯಕ್ಕೆ ಈ ಸ್ಕೀಂ ಇದೆ ಅದು ಇರಲಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ತಾವು ಇಂಥದ್ದನ್ನು ಮಾಡುತ್ತೇವೆಂದು ಹೇಳಲಿಲ್ಲ. ಮಾನ್ಯ ಸಚಿವರು ಅದು ಮನೋರಂಜನಾ ಕಾರ್ಯಕ್ರಮವೆಂದು ಹೇಳಿದರೆ ನಾವು,

---

** ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಇನ್ನೇನು ಹೇಳುವುದು, ಅದರ ಬಗ್ಗೆ ತಾವು ಬೇರೆಯದನ್ನು ಹೇಳಲಿ, ನಮಗೆ ಆದಾಯವಿಲ್ಲ, ಸರ್ಕಾರಕ್ಕೆ ಆದಾಯ ಬೇಕು ಅದರಿಂದಾಗಿ ನಾವು ಇದನ್ನು ತಂದಿದ್ದೇವೆಂದು ಹೇಳಿ. ಇದನ್ನು ಮನೋರಂಜನೆಗೋಸ್ಕರ ತಂದಿದ್ದೇವೆಂದು ಹೇಳಿದರೆ, ಮನೋರಂಜನೆಗಾಗಿ ಇನ್ನು ಬೇಕಾದಷ್ಟು ಇದೆ.

ಶ್ರೀ ಬಾಬುರಾವ್ ಚಿಂಚಸನೂರ್:- ಇವತ್ತು ವಿಸ್ಕಿಯನ್ನು ಕುಡಿದರೆ ದುಡ್ಡನ್ನು ಕಳೆದುಕೊಳ್ಳುತ್ತೇವೆ. ಬೀಡಿ ಸಿಗರೇಟನ್ನು ಸೇದಿದರೆ ದುಡ್ಡು ಕಳೆದುಕೊಳ್ಳುತ್ತೇವೆ. ಇವತ್ತು ಲಾಟರಿಯನ್ನು ತೆಗೆದುಕೊಂಡರೆ ದುಡ್ಡು ಸಹ ಸಿಗುತ್ತದೆ. ಮನೋರಂಜನಾ ಕಾರ್ಯಕ್ರಮದಿಂದ ದುಡ್ಡು ಸಹ ಸಿಗುತ್ತದೆ. ಅದಕ್ಕೆ ಇದು ಜೂಜು ಅಲ್ಲ ಇದು ಮಟ್ಕಾ ಕೂಡ ಅಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್:- ಇದು ಯಾವ ರೀತಿಯ ಮನೋರಂಜನಾ ಕಾರ್ಯಕ್ರಮವೆಂಬುದು ನನಗೆ ಗೊತ್ತಿಲ್ಲ. ಆದರೆ ಮಂತ್ರಿಗಳು ಕೊಟ್ಟಂತಹ ಉತ್ತರವೇ ನಮಗೆ ಮನೋರಂಜನೆಯಾಗಿದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಮಂತ್ರಿಗಳಿಗೆ ಏನಾಗಿದೆ ಎಂದರೆ ಆನ್‌ಲೈನ್ ಲಾಟರಿಯನ್ನು ನಿಲ್ಲಿಸಿಬಿಟ್ಟರೆ ಎಲ್ಲಿ ತಮಗೆ ಮಂತ್ರಿ ಸ್ಥಾನ ಹೋಗುತ್ತದೆ ಎಂದು ಬಹಳ ಕಾತುರದಿಂದ ಉತ್ತರವನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು:- ಮಾನ್ಯ ಜಯಪ್ರಕಾಶ್ ಹೆಗಡೆಯವರು ಮಾತನಾಡುವಾಗ ಬಳಸಿದ ಪದವನ್ನು ಅದನ್ನು ಕಡತದಿಂದ ತೆಗೆದುಹಾಕಲಾಗಿದೆ.

Sri K. Srinivasa Gowda Kuduvanahalli:- It is not in good taste.

(ಗೊಂದಲ)

ಶ್ರೀ ಕೆ. ಜಯಪ್ರಕಾಶ ಹೆಗ್ಗಡೆ:- ಅದು ಅನ್‌ಪಾರ್ಲಿಮೆಂಟರಿ ವರ್ಡ್ ಆಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ):- ಅದು ಅನ್‌ಪಾರ್ಲಿಮೆಂಟರಿ ವರ್ಡ್ ಅಲ್ಲ.

ಉಪಾಧ್ಯಕ್ಷರು:- ಲಾಟರಿ ನಡೆಸುವುದರ ಬದಲು ಇದನ್ನು ನಡೆಸಿ ಎಂದು ಹೇಳುತ್ತಿದ್ದಾರೆ. ಅಂತಹ ವರ್ಡ್‌ಗಳನ್ನು ಉಪಯೋಗಿಸಬಾರದು.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ):- ಇಂತಹ ಪದಗಳನ್ನು ಹೇಗೆ ಕಡತದಿಂದ ತೆಗೆಯುತ್ತೀರಿ? ಜೂಜು ವೆಜಾಜು ಇವೆಲ್ಲವೂ ಸಮಾಜದಲ್ಲಿ ನಡೆಯುತ್ತಿವೆ. ಇದನ್ನು ಕಡತದಿಂದ ತೆಗೆಯಬಾರದು ಸ್ವಾಮಿ.

ಶ್ರೀ ಸಿ.ಎಸ್. ನಾಡಗೌಡ:- ಮಾನ್ಯ ಉಪಾಧ್ಯಕ್ಷರೆ ಅವರು ಹೇಳತಕ್ಕಂಥದ್ದು ಅನ್‌ಪಾರ್ಲಿಮೆಂಟರಿ ಅಲ್ಲ, ಅದು ಎಲ್ಲಾ ಸದಸ್ಯರಿಗೂ ಗೊತ್ತಾಗುತ್ತದೆ. ಅವರು ಹೇಳತಕ್ಕಂತಹ ರೀತಿ ಏನು ಇದೆಯಲ್ಲಾ ಈ ಸದನದ ಗೌರವಕ್ಕೆ ಸರಿಯಾದಂತಹ ಘನತೆ ಬರುವುದಿಲ್ಲ, ಇಂತಹ ವಿಚಾರಗಳನ್ನು ವೆಡ್ಜ್ ಮಾಡಬೇಡಿ.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ):- ಅವರ ಅಭಿಪ್ರಾಯಗಳೇನಾದರೂ ಇದ್ದರೆ ಅವರು ಹೇಳಲಿ.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ):- ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ನನಗೆ ಹಕ್ಕಿದೆ.

ಶ್ರೀ ಸಿ.ಎಸ್. ನಾಡಗೌಡ:- ಮಾನ್ಯ ಎಸ್.ಎಸ್. ಪಾಟೀಲರು ಥೈಲಾಂಡ್ ದೇಶದ ಉದಾಹರಣೆಯನ್ನು ತೆಗೆದುಕೊಂಡು ಹೇಳಿದರು. ಥೈಲಾಂಡ್ ದೇಶದ್ದು ಲೀಗಲೈಸ್ಡ್ ಇಲ್ಲ. ಅದನ್ನು ನೂರು ಬೇಕಾದರೂ ಮಾಡಿಕೊಳ್ಳಬಹುದು ಎಂದು ಹೇಳಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ):- ಅವರ ಅಭಿಪ್ರಾಯವನ್ನು ಹೇಳುವುದಿದ್ದರೆ ಅವರು ಹೇಳಿಕೊಳ್ಳಲಿ.

ಶ್ರೀ ಸಿ.ಎಸ್. ನಾಡಗೌಡ:- ಯಾರು ಬೇಕಾದರೂ ಮಾಡಿಕೊಳ್ಳಲಿ ಎಂದು ಹೇಳಿಲ್ಲ. ಯಾವ ದೇಶದಲ್ಲಿಯೂ ಕೂಡ ಈ ಪರಿಪಾಠವನ್ನು ಎಲ್ಲಿಯೂ ಹಾಕಿಲ್ಲ. ದಯವಿಟ್ಟು ತಾವು ತಪ್ಪು ಗ್ರಾಹಿಕೆಯನ್ನು ಮಾಡಿಕೊಳ್ಳುತ್ತಿದ್ದೀರಿ ಅಷ್ಟೆ.

ಶ್ರೀ ಅರಗಜ್ಞಾನೇಂದ್ರ:- ಮಹಾರಾಷ್ಟ್ರದಲ್ಲಿ ವೇಶ್ಯಾವಾಟಿಕೆಯನ್ನು ನಡೆಸುವುದಕ್ಕೆ ಲೈಸೆನ್ಸ್‌ನ್ನು ಕೊಟ್ಟಿದ್ದಾರೆ. ಅವರಿಗೆ ಸರ್ಕಾರವೇ ಪರವಾನಿಗೆಯನ್ನು ಕೊಟ್ಟಿದೆ. ಅದು ಅನ್‌ಪಾರ್ಲಿಮೆಂಟರಿಯೇ?

ಶ್ರೀ ಎಸ್.ಎಸ್. ಪಾಟೀಲ್:- ಅದು ಅನ್‌ಪಾರ್ಲಿಮೆಂಟರಿ ಅಲ್ಲ.

ಶ್ರೀ ಕೆ. ಶ್ರೀನಿವಾಸಗೌಡ:- ದೆಹಲಿಯಲ್ಲಿ ಲೈಸೆನ್ಸ್ ಕೊಟ್ಟಿದೆ, ಕಲ್ಕತ್ತಾದಲ್ಲಿ ಕೊಟ್ಟಿದ್ದಾರೆ.

ಶ್ರೀ ಅರಗಜ್ಞಾನೇಂದ್ರ:- ಸರ್ಕಾರಕ್ಕೆ ಆದಾಯ ಬರುತ್ತದೆಂದು ಅದು ಒಂದು ಆದಾಯದ ಮೂಲವಾದರೆ ಅದಕ್ಕಾಗಿ ಅವರು ಹೇಳಿವುದು.

ಉಪಾಧ್ಯಕ್ಷರು:- ಇಂತಹ ವರ್ಡ್‌ಗಳನ್ನು ಬಳಸಬಾರದು.

ಶ್ರೀ ಅರಗಜ್ಞಾನೇಂದ್ರ:- ಈ ಲೋಟೋ ಅಂತಹ ಲಾಟರಿಯನ್ನು ಮಾಡಿದರೆ ಆದಾಯವು ಬರುತ್ತದೆ, ಅಭಿವೃದ್ಧಿ ಕೆಲಸವು ಜಾಸ್ತಿಯಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಆವತ್ತಿನಿಂದ ಉವಾಚ ಅದನ್ನು ಅವರು ಹೇಳುತ್ತಲೇ ಇದ್ದರೆ. ಆ ಮಂತ್ರಿಗಳು ಬಹಳ ಚೆನ್ನಾಗಿ ಅಡ್ವಟೈಸ್‌ಮೆಂಟನ್ನು ಮಾಡುತ್ತಾರೆ, ಯಾವ ಟಿವಿಯಲ್ಲಿ ಆಗಲಿ ಯಾವುದೇ ಅಡ್ವರ್‌ಟೈಸ್‌ಮೆಂಟ್ ಏಜೆನ್ಸಿಗಳು ಆ ರೀತಿಯಾಗಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅವರು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ನಿಜವಾಗಿ ಇವರ ಮಾತುಗಳಿಂದ ಇದರಿಂದಾಗಿ ಜನರು ಅಟ್ರಾಕ್ಟ್ ಆಗುತ್ತಿದ್ದಾರೆ.

ಶ್ರೀ ಕೆ. ಶ್ರೀನಿವಸಗೌಡ (ಕುಡುವನಹಳ್ಳಿ):- ಮಾನ್ಯ ನಾಡಗೌಡರು ಯಾವಾಗಲಾದರೂ ಥೈಲಾಂಡ್‌ಗ ಹೋಗಿ ಬನ್ನಿ. ಆಮೇಲೆ ಇದು ಏನು ಎಂಬುದು ನಿಮಗೆ ಗೊತ್ತಾಗುತ್ತದೆ.

ಶ್ರೀ ಸಿ.ಎಸ್. ನಾಡಗೌಡ:- ನಾನು ಥೈಲಾಂಡ್, ಬ್ಯಾಂಕಾಕ್ ನಾವು ಎಲ್ಲಾ ಕಡೆಗಳಲ್ಲೂ ಹೋಗಿ ಬಂದಿದ್ದೇನೆ. ಗೌಡರೆ ನೀವು ಒಬ್ಬರೆ ಜಗತ್ತನ್ನು ಸುತ್ತಾಡಿಲ್ಲ ದಯವಿಟ್ಟು ಈ ಸದನದಲ್ಲಿ ಆ ರೀತಿಯ ಪದಗಳ ಬಳಕೆ ಸರಿಯಾಗಿಲ್ಲ, ಮಾನ್ಯ ಉಪಾಧ್ಯಕ್ಷರೆ, ಆ ಪದವನ್ನು ದಯವಿಟ್ಟು ಕಡತದಿಂದ ತೆಗೆಸಿಬಿಡಿ.

ಉಪಾಧ್ಯಕ್ಷರು:- ನಾನು ಆ ಪದವನ್ನು ತೆಗೆದುಹಾಕುವುದಕ್ಕೆ ಹೇಳಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ಮಾನ್ಯ ಉಪಾಧ್ಯಕ್ಷರೆ, ತಾವು ಅದನ್ನು ಕಡತದಿಂದ ತೆಗೆಸಿಹಾಕಿದಿರಿ, ಇದು ಕಾನೂನಿಗೆ ವಿರೋದವಾದುದು ಎಂದು ಲಾಟರಿ ರೆಗ್ಯುಲೇಷನ್ ಆ್ಯಕ್ಟ್‌ನ್ನು ಈಗಾಗಲೇ ಓದಿ ತೋರಿಸಿದ್ದೇನೆ. ಹಾಗಾದರೆ ಅದನ್ನು ಸಹ ಬ್ಯಾನ್ ಮಾಡುವುದಕ್ಕೆ ಆದೇಶವನ್ನು ಕೊಡಿ. ಕಾನೂನಿಗೆ ವಿರೋಧವಾಗಿರುವುದನ್ನು ಸರ್ಕಾರದವರು ಮಾಡಿದಾಗ ಅದನ್ನು ಅವರ ಗಮನಕ್ಕೆ ತಂದಾಗ ಅದು ತಪ್ಪಲ್ಲ, ನೀವು ಇನ್ನು ಆಡಿ ಎಂದು ಇವರು ಹೇಳುತ್ತಾರಲ್ಲಾ.

ಉಪಾಧ್ಯಕ್ಷರು:- ಹಾಗಲ್ಲಾ ಹೆಗಡೆಯವರೆ, ನೀವು ಮಾತನಾಡಿದಂತಹ ಧಾಟಿ ಹೇಗಿತ್ತೆಂದರೆ, ಮಾತನಾಡಿದ್ದೀರಿ

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ):- ಅವರೆಲ್ಲಾ ಈ ಮಾತನ್ನು ಆಡಿರುವುದು, ಪಾಪ ಅವರ ಮೇಲೆ ಯಾತಕ್ಕಾಗಿ ಹೇಳುತ್ತೀರಿ? ನಾನೇ ಅದನ್ನು ಹೇಳಿದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ಜನ ಯಾವ ಮನೋರಂಜನೆಯನ್ನು ಕೇಳುತ್ತಾರೆ ಅದು ವರ್ಗ ಜನರಲ್ಲಿ ಎಲ್ಲರೂ ಎಂದು ಹೇಳುವುದಿಲ್ಲ. ಇನ್ನೊಂದು ವರ್ಗವು "ಕಾಸಿನೋ" ನಡೆಸಿ ಎಂದು ಕೇಳುತ್ತಾರೆ ಅದನ್ನು ಮಾಡುತ್ತೀರಾ? ಹಾಗಾದರೆ ಈ ರೆಡ್‌ಲೈಟ್ ಸ್ಟ್ರೀಟ್‌ನ್ನು ಮಹಾರಾಷ್ಟ್ರದಲ್ಲಿ ರೆಗ್ಯುಲರೈಸ್ ಮಾಡಿದ್ದಾರೆ. ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಇದನ್ನೆಲ್ಲವನ್ನೂ ನಾವು ಚರ್ಚೆ ಮಾಡಬೇಕಾಗುತ್ತದೆ. ಅದನ್ನು ಇಲ್ಲಿ ಮಾತನಾಡುವುದಲ್ಲವೆಂದು ತೆಗೆದುಹಾಕಿದರೆ ಇನ್ನು ಯಾವುದನ್ನು ಚರ್ಚೆ ಮಾಡಬೇಕು? ಈಗ ಜನರ ಬಗ್ಗೆ ಚರ್ಚೆಯನ್ನು ಮಾಡುವಾಗ ಇಂಥದ್ದು ಸದನದಲ್ಲಿ ಸರಿಯೋ ತಪ್ಪೋ ಎಂದು ಚರ್ಚೆಯನ್ನು ಮಾಡಬೇಕಾಗುತ್ತದೆ. ಅದನ್ನು ನಾನು ಅಷ್ಟಕ್ಕೆ ಬಿಡುತ್ತೇನೆ, ಇದರ ಬಗ್ಗೆ ಸ್ವಲ್ಪ ಆಲೋಚನೆಯನ್ನು ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಲಾಟರಿ ರೆಗ್ಯುಲೇಷನ್ ಆಕ್ಟ್‌ನ ಅಡಿಯಲ್ಲಿ ಇದನ್ನು ನಾವು ತಂದಿದ್ದೇವೆ ಎಂದು ಹೇಳಿದರು ಅದು ಕಾನೂನಿಗೆ ವಿರೋಧವಾಗಿದೆಂದು ನಾನು ಹೇಳಿದ್ದೇನೆ. ಅದನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ, ಅದು ಅವರ ವಿವೇಚನೆಗೆ ಬಿಟ್ಟಿರುವಂಥದ್ದು. ಬಜೆಟ್‌ನಲ್ಲಿ ಉತ್ತರವನ್ನು ನೀಡುವಾಗ ಹೇಳುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೋಸ್ಕರ ಪುನಃ ಇದನ್ನು ಅವರ ಗಮನಕ್ಕೆ ತರಬೇಕಾಯಿತು. ಇವತ್ತು ರಾಜ್ಯಪಾಲರ ಭಾಷಣವನ್ನು ಹಿಂದಿನ ವರ್ಷಕ್ಕೆ ಹೋಲಿಸಿದರೆ ಅಪರಾಧಗಳ ಸಂಖ್ಯೆ ಇಳಿಮುಖ ಎಂದು ಹೇಳಿದ್ದಾರೆ. ಆದರೆ ಹೊಸ ವಿಷಯಗಳು ಪ್ರಾರಂಭವಾಗಿದೆ. ಅಪರಾಧ ಎಷ್ಟು ಕಡಿಮೆಯಾಗಿದೆ ಎಂದು ನನಗೆ ಸರಿಯಾದಂತಹ ಮಾಹಿತಿ ಇಲ್ಲ. ಆದರೆ ಪೊಲೀಸರೇ ಡಕಾಯಿತರಾಗಿ ಅವರಿಂದ ಅಪರಾಧಗಳು ಜಾಸ್ತಿಯಾಗುವಂಥದ್ದನ್ನು ನಾವು ನೋಡುತ್ತಿದ್ದೇವೆ. ಇದನ್ನು ಎಲ್ಲಿಯಾದರೂ ಹಿಡಿತಕ್ಕೆ ತರದೆಹೋದರೆ, ನಿಲ್ಲಿಸದೆ ಹೋದರೆ ಬೇಲಿಯೇ ಎದ್ದು ಹೊಲವನ್ನು ಮೇಯ್ದಂತೆ ಆಗುತ್ತದೆ. ಇವತ್ತು ಜನರಿಗೆ ಪೊಲೀಸರ ವ್ಯವಸ್ಥೆಯಲ್ಲಿ ನಂಬಿಕೆಯು ಹೋಗುವಂತಹ ಪರಿಸ್ಥಿತಿಯು ನಿರ್ಮಾಣವಾಗಿದೆ. ಅದರ ಬಗ್ಗೆ ಸರ್ಕಾರ ಸ್ವಲ್ಪ ಗಮನವನ್ನು ಹರಿಸಬೇಕು. ಇನ್ನು ಮುಂದಾದರೂ ಇಂತಹ ಘಟನೆಗಳು ಆಗದೆ ಇರುವಹಾಗೆ ನೋಡುವಂತಹದ್ದನ್ನು ಮಾಡಬೇಕು. ಹಿಂದಿನ ಎರಡು ಸದನದಲ್ಲಿ ಮಾನ್ಯ ಗೃಹ ಸಚಿವರ ಗಮನಕ್ಕೆ ತಂದಿದ್ದೆ, ನಮ್ಮಲ್ಲಿ ಒಂದು ಫೋರೆನ್ಸಿಕ್ ಲ್ಯಾಬೋರೇಟರಿ ಇದೆ, ಅಲ್ಲಿ ಸ್ಕಲ್ ಡಿಟೆಕ್ಟರ್ ಎಂದು ಒಂದು ಇದೆ, ಅದು 1996ನೇ ಇಸವಿಯಿಂದ ಇವತ್ತಿನವರೆವಿಗೂ ದುರಸ್ತಿಯಾಗಿಲ್ಲ. ಇತ್ತೀಚೆಗೆ ಅದರ ದುರಸ್ತಿಯಾದ ನನಗೆ ಗೊತ್ತಿಲ್ಲ. 1996ನೇ ಇಸವಿಯಲ್ಲಿ ಬಳ್ಳಾರಿಯಲ್ಲಿ ಒಬ್ಬ ಯುವಕ ನೀರಿಗೆ ಬಿದ್ದು ಸತ್ತಂತಹ ಘಟನೆ ಅವನು ನನ್ನ ಕ್ಷೇತ್ರದವನು ಅದರ ಬಗ್ಗೆ ಮೊನ್ನೆಯವರೆವಿಗೆ ಕೇಳಿದರೆ ತನಿಖೆಯು ಇನ್ನು ಪ್ರಾರಂಭವಾಗಿಲ್ಲ. ಏಕೆಂದರೆ, ಆ ಸ್ಕಲ್ ಡಿಟೆಕ್ಟರ್ ಇನ್ನು ದುರಸ್ತಿಯಾಗಿಲ್ಲ ಫೋರೆನ್ಸಿಕ್ ಲ್ಯಾಬೋರೇಟರಿಯಿಂದ ರಿಪೋರ್ಟ್ ಬಂದಿಲ್ಲವೆಂದು ಹೇಳುತ್ತಾರೆ. ಆದರೆ ಇಷ್ಟು ವರ್ಷಗಳ ಕಾಲ ಒಂದು ಸ್ಕಲ್ ಡಿಟೆಕ್ಟರ್ ದುರಸ್ತಿಯಾಗದೆ ಒಂದು ಕೊಲೆ ಅಥವಾ ಅವನು ಆತ್ಮಹತ್ಯೆ ಮಾಡಿಕೊಂಡ ಘಟನೆ ಗಮನಕ್ಕೆ ಬರದೇ ಇದ್ದರೆ ಅದರಿಂದಾಗಿ ತನಿಖೆಯು ಮಾಡುವುದಕ್ಕೆ ಸಾಧ್ಯವಾಗದೆ ಇದ್ದರೆ ಫೋರೆನ್ಸಿಕ್

ಲ್ಯಾಬೋರೇಟರಿ ಇರುವುದು ಏತಕ್ಕಾಗಿ? ಅಲ್ಲಿ ಏನಾಗುತ್ತಿದೆ, ಅಲ್ಲಿಯ ಆಗುಹೋಗುಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಅದರ ಬಗ್ಗೆ ಸ್ವಲ್ಪ ಗಮನಹರಿಸಬೇಕು. ಹೊಸ ಮೆಷಿನ್‌ನ್ನು ಪರ್ಚೆಸ್ ಮಾಡಿದ್ದಾರೆ. ಯಾವುದು ಅಗತ್ಯವಿಲ್ಲ, ಆ ಹೊಸ ಮೆಷಿನ್‌ನ್ನು ಪರ್ಚೆಸ್ ಮಾಡಿದ್ದಾರೆ. ಆದರೆ ಸ್ಕಲ್‌ಡಿಟೆಕ್ಟರನ ಅಗತ್ಯವಿದೆ, ಅದು ಇವತ್ತಿನವರೆವಿಗೂ ದುರಸ್ಥಿಯಾಗಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ, ಅದರ ಬಗ್ಗೆ ಮಾನ್ಯ ಗೃಹಸಚಿವರ ಗಮನಕ್ಕೆ ತರುತ್ತೇನೆ, ಆದಷ್ಟು ಬೇಗ ಅದನ್ನು ದುರಸ್ಥಿ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

6.10 ಪಿ.ಎಂ

ಮತ್ತೆ ನಮ್ಮ ಊರಿಗೆ ಹೋಗುವಾಗ ಅಲ್ಲಿ ಚನ್ನರಾಯಪಟ್ಟಣದಲ್ಲಿ ಬಂದು ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನವರು ಜ್ಯೂಬಿಲಿ ಔಟ್‌ಲೆಟ್ ಎಂದು ಮಾಡಿದ್ದಾರೆ ಬಹಳ ವ್ಯವಸ್ಥಿತವಾಗಿ ಒಂದು ಪೆಟ್ರೋಲ್ ಬಂಕ್‌ನಲ್ಲಿ ರೆಸ್ಟೋರೆಂಟ್ ಮತ್ತು ಶೌಚಾಲಯ ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದಾರೆ. ಪ್ರಯಾಣ ಮಾಡುವ ಸಾರ್ವಜನಿಕರಿಗೆ ಅದರಲ್ಲೂ ಬಹಳ ಮುಖ್ಯವಾಗಿ ಮಹಿಳೆಯರಿಗೆ ರಾತ್ರಿವೇಳೆ ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ಇದರಿಂದ ಬಹಳ ಅನುಕೂಲವಾಗುತ್ತದೆ. ಈ ಶೌಚಾಲಯ ವ್ಯವಸ್ಥೆಯಿಂದ ಮಹಿಳೆಯರಿಗೆ ಅನುಕೂಲವಾಗಿದೆ. ಆದರೆ ಇವತ್ತು ಪೋಲೀಸಿನವರು ಕೆಲವು ತಿಂಗಳಿಂದ ಅದನ್ನು ಬಂದ್ ಮಾಡಿದ್ದಾರೆ. ಅದನ್ನು ಅಲ್ಲಿ ರಾತ್ರಿ ಹೊತ್ತು ತೆಗೆಯುವುದಕ್ಕೆ ಬಿಡುತ್ತಿಲ್ಲ. ಏಕೆಂದರೆ ಸುತ್ತಮುತ್ತ ಡಕಾಯತಿಗಳು ಆಗುತ್ತಿವೆಯಂತೆ. ಆದ್ದರಿಂದ ಅದನ್ನು ತೆಗೆಯುವುದಕ್ಕೆ ಬಿಡುತ್ತಿಲ್ಲ ಎಂದು ಅವರು ಹೇಳುತ್ತಾರೆ. ಡಾಬಾದಲ್ಲಿ ಪೊಲೀಸರು ಬಸ್ಸುಗಳನ್ನು ನಿಲ್ಲಿಸುವುದಕ್ಕೆ ಬಿಡುತ್ತಾರೆ. ಆದರೆ ಜ್ಯೂಬಿಲಿ ಔಟ್‌ಲೆಟ್‌ನಲ್ಲಿ ಬಸ್ಸು ನಿಲ್ಲಿಸಿದರೆ ಡಕಾಯತಿ ಆಗುತ್ತದೆಯಂತೆ. ಇದು ಯಾವ ನ್ಯಾಯ? ಹಾಗಾದರೆ ಪ್ರಯಾಣ ಮಾಡುವ ಸಾರ್ವಜನಿಕರಿಗೆ ಸಹಾಯವಾಗುವಂಥ ವ್ಯವಸ್ಥೆಯನ್ನು ನಿಲ್ಲಿಸುವಂತಿದ್ದರೆ, ರಾತ್ರಿ ಹೊತ್ತು ಡಾಬಾಗಳನ್ನೂ ಕೂಡ ನಿಲ್ಲಿಸಿ. ಇದರಿಂದ ಎಷ್ಟೋ ಜನ ಬಸ್ಸುಗಳಲ್ಲಿ, ಕಾರುಗಳಲ್ಲಿ ಓಡಾಡುವವರಿಗೆ ಬಹಳ ಅನಾನುಕೂಲವಾಗುತ್ತಿದೆ. ಏಕೆಂದರೆ ನಾವು ರಾತ್ರಿ ಬಸ್ಸಿನಲ್ಲಿ ಹೋಗುವವರು ಮತ್ತು ನಮಗೆ ಇದರ ಸಮಸ್ಯೆ ಗೊತ್ತಾಗುತ್ತದೆ ಅದಕ್ಕೋಸ್ಕರ ಇದನ್ನು ತೆಗೆಸುವ ವ್ಯವಸ್ಥೆ ಮಾಡಬೇಕೆಂದು ನಾವು ತಮಗೂ ಸಹ ಪತ್ರ ಬರೆದಿದ್ದೇನೆ. ತಾವು ಜಿಲ್ಲಾ ಸಚಿವರು ಆಗಿದ್ದು, ಇದರ ಬಗ್ಗೆ ನೋಡಬೇಕು. ನಾನು ಎಸ್.ಪಿ. ಹತ್ತಿರ ಮಾತನಾಡಿದರೆ ಅವರು ಹೇಳುತ್ತಾರೆ ಏನೆಂದರೆ ಡಕಾಯತಿ ಆಗುತ್ತದೆ ಎಂದು. ಇದರ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹೆಗಡೆಯವರೇ, ಶ್ರೀಮಾನ್ ಶ್ರೀಕಂಠಯ್ಯ ಸಾಹೇಬರ ಗಮನಕ್ಕೆ ಬರದೆ ಅದನ್ನು ಯಾರು ನಿಲ್ಲಿಸಿದ್ದಾರೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ನಮ್ಮ ಶಾಸಕರು ಇದರ ಬಗ್ಗೆ ಮಾತನಾಡಬೇಕು. ಏಕೆಂದರೆ ಅವರು ಆ ಭಾಗದಲ್ಲಿ ಓಡಾಡುವವರು. ಇದರ ಬಗ್ಗೆ ಸ್ವಲ್ಪ ಗಮನಿಸಿ. ಇದರ ಬಗ್ಗೆ ಅವರೂ ಕೂಡ ಸ್ವಲ್ಪ ಗಮನಿಸಬೇಕು. ರಾತ್ರಿ ಹೊತ್ತು ಬೇರೆ ಡಾಬಾಗಳಲ್ಲಿ ಶೌಚಾಯಲಯಗಳು ಇರುವುದಿಲ್ಲ. ಇದರಿಂದ ಮಹಿಳೆಯರಿಗೆ ಬಹಳ ತೊಂದರೆಯಾಗುತ್ತಿದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಅದನ್ನು ಮೊದಲು ತೆಗೆಸುವ ವ್ಯವಸ್ಥೆಯನ್ನು ಮಾಡಬೇಕು. ಇನ್ನು, ರೈತರಿಗಾಗಿ 'ಯಶಸ್ವಿನಿ' ಎಂಬ ಆರೋಗ್ಯ ಯೋಜನೆಯನ್ನು ಏನು ಪ್ರಸ್ತಾಪ ಮಾಡಿದ್ದಾರೆ.

ಇದು ಒಳ್ಳೆಯ ಕಾರ್ಯಕ್ರಮ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಅವರೊಟ್ಟಿಗೆ ಕಾರ್ಮಿಕರನ್ನೂ ಕೂಡ ಸ್ವಲ್ಪ ಸೇರಿಸಿಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು ಎಂಬುದು ನನ್ನ ಅಭಿಪ್ರಾಯ. ಕೃಷಿಕಾರ್ಮಿಕರು, ಟೈಲರಿಂಗ್ ಮಾಡುವವರು, ಕಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು ಇವರೆಲ್ಲರನ್ನೂ ಕೂಡ ಈ ಯೋಜನೆಯಡಿಯಲ್ಲಿ ತಂದರೆ ಅವರಿಗೆ ಬಹಳ ಸಹಾಯವಾಗುತ್ತದೆ. ಇನ್ನು 'ಸ್ತ್ರೀಶಕ್ತಿ' ಇದು ಒಳ್ಳೆಯ ಕಾರ್ಯಕ್ರಮ. ಆದರೆ ಸರ್ಕಾರದಿಂದ ಸಿಗತಕ್ಕಂಥ ಅನುದಾನ ಅವರಿಗೆ ಸರಿಯಾಗಿ ಸಿಗುತ್ತಿಲ್ಲ. ನಮ್ಮಲ್ಲಿ ಸಾಧಾರಣ 401 ಸ್ತ್ರೀಶಕ್ತಿ ಸಂಘಟನಾ ಗುಂಪುಗಳು ಇವೆ. ಆದರೆ ಹಣಸಿಗುತ್ತಿರುವುದು. ಕೇವಲ ನುರು ನೂರಿಪ್ಪತ್ತಕ್ಕೆ ಐದು ಸಾವಿರ ರೂಪಾಯಿ ಕೊಟ್ಟಿದ್ದಾರೆ ಇನ್ನುಳಿದವರು ನಮ್ಮಲ್ಲಿ ಪ್ರತಿಯೊಂದು ಕಡೆ ಅವರು ಆದಷ್ಟು ಬೇಗ ತಮಗೆ ಸಿಗುವಂತಹ ಹಣ ಕೊಡಿಸಿ ಎಂದು ಕೇಳುತ್ತಾರೆ. ಆದ್ದರಿಂದ ತಾವು ಸ್ತ್ರೀಶಕ್ತಿ ಗುಂಪುಗಳಿಗೆ ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಪಂಚಾಯತ್‌ರಾಜ್ ವ್ಯವಸ್ಥೆ ಬಗ್ಗೆ ಹೇಳಬೇಕು ಎಂದರೆ ಇದು ಸರಿಯಾಗಿ ಜಾರಿಗೆ ಬಂದಿದ್ದು ನಮ್ಮ ಕಾಲದಲ್ಲಿ ಇದರ ನಿಜವಾದ ಕ್ರೆಡಿಟ್ ಹೋಗಬೇಕಾದದ್ದು ದಿವಂಗತ ನಜೀರ್‌ಸಾಬ್ ಅವರಿಗೆ. ಆದರೆ ಇವತ್ತು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪಂಚಾಯತ್ ವ್ಯವಸ್ಥೆಯಲ್ಲಿ ಹೆಚ್ಚಿನ ಅಧಿಕಾರವನ್ನು ಕೊಟ್ಟಿಲ್ಲ. ಆದರೆ ಒಂದಾಗಿದೆ. ಕೊಟ್ಟಂಥ ಅಧಿಕಾರದಲ್ಲಿ ಜನ ಪ್ರತಿನಿಧಿಗಳು ಗುತ್ತಿಗೆದಾರರು ಆಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಸರ್ಕಾರ ಸ್ವಲ್ಪ ಗಮನವನ್ನು ಹರಿಸಬೇಕಾಗುತ್ತದೆ. ಎಲ್ಲರ ಬಗ್ಗೆಯೂ ನಾನು ಆಪಾದನೆ ಮಾಡುವುದಿಲ್ಲ. ಏಕೆಂದರೆ ಸಾರಾಸಗಟಾಗಿ ಪ್ರತಿಯೊಬ್ಬ ಜನಪ್ರತಿನಿಧಿ, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಅಥವಾ ಗ್ರಾಮಪಂಚಾಯತಿಯವರು ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಆದರೆ ಕೆಲವು ಆಪಾದನೆಗಳನ್ನು ನಾನು ಸಚಿವರ ಗಮನಕ್ಕೆ ತಂದಿದ್ದೆ. ಕೆಲವು ಜನ ಪ್ರತಿನಿಧಿಗಳು, ಅವರವರ ಮನೆಯವರೇ, ಹೆಂಡತಿ ಮೆಂಬರ್ ಆಗಿದ್ದರೆ, ಗಂಡ ಗುತ್ತಿಗೆದಾರ ಆಗಿರುವಂಥಾದ್ದು ಇದೆ. ಕೇವಲ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಹಣ ಮಾತ್ರವಲ್ಲ ಸ್ಥಳೀಯರಿಂದ ವಂತಿಕೆಯನ್ನೂ ಕೂಡ ತೆಗೆಲುಕೊಳ್ಳುತ್ತಿದ್ದಾರೆ ಇದರ ಬಗ್ಗೆ ತಾವು ಹರಿಸಬೇಕಾಗುತ್ತದೆ. ಈಗ ಜನರಿಂದ ಹಣ ವಸೂಲು ಮಾಡುವಂಥಾದ್ದು ಮತ್ತು ಪಂಚಾಯತ್ ವ್ಯವಸ್ಥೆಯಿಂದಲೂ ಹಣ ಪಡೆಯುವಂಥಾದ್ದು ನಡೆದಿದೆ. ಇವೆರಡನ್ನೂ ಮಾಡಿ ಯಾವುದಾದರೂ ಒಂದು ಶಾಲಾ ಮೈದಾನವನ್ನು ಮಾಡುವುದಕ್ಕೆಂದು ತೆಗೆದ ಮಣ್ಣನ್ನು ತೆಗೆದುಕೊಂಡು ಹೋಗಿ ಬೇರೆ ಕಡೆ ಉಪಯೋಗಿಸುವುದು. ಇದು ಟ್ರಿಪಲ್ ಬೆನಿಫಿಟ್ ಸ್ಕೀಂ ಆಗುತ್ತದೆ. ಇದನ್ನು ಸ್ವಲ್ಪ ಸರಿಮಾಡದೇ ಇದ್ದರೆ, ಖಂಡಿತವಾಗಿ ಜನಪ್ರತಿನಿಧಿಗಳೆಲ್ಲಾ ಗುತ್ತಿಗೆದಾರರಾಗುವ ಪರಿಸ್ಥಿತಿ ನಿರ್ಮಾಣವಾಗಬಹುದು. ಈಗ ಕೆಲವರು ಮಾತ್ರ ಹೀಗೆ ಆಗಿದ್ದಾರೆ. ಮುಂದೆ ಇದೇ ರೀತಿ ಮುಂದುವರೆದರೆ ಎಲ್ಲರೂ ಕೂಡ ಗುತ್ತಿಗೆದಾರರಾಗುವಂಥ ಪರಿಸ್ಥಿತಿ ನಿರ್ಮಾಣವಾಗಹುದು. ಆದ್ದರಿಂದ ಇದರ ಬಗ್ಗೆ ಗಮನಹರಿಸಬೇಕೆಂದು ನಾನು ಹೇಳುತ್ತೇನೆ. ಈಗ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಂದಿದೆ. ಗ್ರಾಮ ಸಡಕ್ ಯೋಜನೆಗೂ ರಾಜ್ಯಸರ್ಕಾರಕ್ಕೂ ಯಾವ ಸಂಬಂಧವೂ ಇಲ್ಲವೆಂದು ಎಲ್ಲರಿಗೂ ಗೊತ್ತಿದೆ. ಏಕೆಂದರೆ ಇದು

ಕೇಂದ್ರದಿಂದ ಬರತಕ್ಕಂಥ ಅನುದಾನ ಆದರೆ ಇವತ್ತು ಶಾಸಕರು ಕೊಟ್ಟಂಥ ಪಟ್ಟಿ ಪ್ರಕಾರ ಏನೂ ಆಗುತ್ತಿಲ್ಲ. ಪುನಃ ಲೋಕಸಭಾ ಸದಸ್ಯರೇ ಆ ಪಟ್ಟಿಯನ್ನು ಕೊಡಬೇಕೆಂದು ಅಲ್ಲಿಂದ ಆದೇಶ ಬಂದಿದೆ. ಆದ್ದರಿಂದ ಶಾಸದಕರಿಗೂ ಮತ್ತು ಪ್ರಧಾನಮಂತ್ರಿಗಳ ಗ್ರಾಮಸಡಕ್ ಯೋಜನಾ ಯಾವುದೇ ಸಂಬಂಧ ಇಲ್ಲ. ಇದು ಈ ಭಾಷಣದಲ್ಲಿ ಬರುವಂಥ ಅವಶ್ಯಕತೆ ಇರಲಿಲ್ಲ ಎಂಬುದು ನನ್ನ ಅಭಿಪ್ರಾಯ. ಮತ್ತೆ ನಿನ್ನೆ ದಿವಸ ಬಹಳಷ್ಟು ಚರ್ಚೆಯಾಯಿತು, ಇವತ್ತೂ ಕೂಡ ಚರ್ಚೆಯಾಗಿದೆ. ಅದು ಈ ಅಭಿವೃದ್ಧಿ ಮಂಡಳಿಗಳ ಬಗ್ಗೆ. ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಅಭಿವೃದ್ಧಿ ಆಗಬೇಕಾದರೆ, ಡಾ॥ ನಂಜುಂಡಪ್ಪ ಅವರ ವರದಿ ಜಾರಿಗೆ ತರಬೇಕಾದರೆ ಪ್ರಾಯಶಃ ನಾನು ಅದಕ್ಕೆ ವಿರೋಧ ಮಾಡುವುದಿಲ್ಲ. ಆದರೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಕಳೆದ ಮೂರು ವರ್ಷಗಳಿಂದ ಮಾಡಿದ ಕಾಮಗಾರಿಗಳಿಗೆ ದುಡ್ಡು ಕೊಟ್ಟಿಲ್ಲ. ಯಾವ ಗುತ್ತಿಗೆದಾರರ ಹತ್ತಿರ ನೀವು ಕೆಲಸ ಮಾಡಿ ಎಂದರೆ ಅವರು ನಮ್ಮ ಮುಖ ನೋಡಿದ ಕೂಡಲೇ ಓಡಿ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಕೆಲಸ ಮಾಡಿದವರಿಗೇ ಹಣ ಸಿಗದೇ ಇರುವಾಗ, ನಾವು ಕೆಲಸ ಮಾಡಿ ಈ ಹಾಳು ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಳ್ಳುವುದು ಬೇಡ ಎಂದು ಅವರು ಭಾವಿಸುತ್ತಾರೆ. ಇದರ ಬಗ್ಗೆ ನಾನು ಏನು ಬೇಡಿಕೆ ಇಡುತ್ತಿದ್ದೇನೆ ಎಂದರೆ ಈ ಬೋರ್ಡ್‌ನ್ನೇ ಅಬಾಲಿಶ್ ಮಾಡಿಬಿಡಿ. ಏಕೆಂದರೆ ಎರಡು ವರ್ಷದ ಹಿಂದೆ ನಾನು ಫೈನಾನ್ಸ್ ಸಬ್ಜೆಕ್ಟ್ ಕಮಿಟಿಯಲ್ಲಿದ್ದಾಗ ಅಲ್ಲಿ ನಾವು ಒಂದು ಶಿಫಾರಸ್ಸನ್ನು ಕೊಟ್ಟಿದ್ದೆವು. ಈ ಬೋರ್ಡ್ ಮತ್ತು ಕಾರ್ಪೋರೇಷನ್‌ಗಳನ್ನು ಬಂದ್ ಮಾಡಿ ಆ ಹಣವನ್ನು ಶಾಸಕರ ನಿಧಿ ಮುಖೇನ ಖರ್ಚು ಮಾಡಬೇಕೆಂದು ಹೇಳಿದ್ದೆವು. ಏಕೆಂದರೆ ಶಾಸಕರ ನಿಧಿಯನ್ನು ಕೊಟ್ಟರೆ ಅದು ಡಿ.ಸಿ. ಮೂಲಕ ಹೋಗಿ ಸ್ಥಳೀಯ ಜೆಡ್.ಪಿ. ಇಂಜಿನಿಯರಿಂಗ್ ಡಿವಿಜನ್ ಮೂಲಕ ಕೆಲಸ ಮಾಡುವುದಕ್ಕೆ ಬಹಳ ಸುಲಭವಾಗುತ್ತದೆ. ಇವತ್ತು ಏನಾಗುತ್ತಿದೆ ಎಂದರೆ, ಇವತ್ತು ನಾವು ಇಂತಹ ಕೆಲಸ ಆಗಬೇಕು ಎಂದು ಕೆಟ್ಟಿರುವಂಥಾದ್ದು, ಅದು ಅಲ್ಲಿಯ ಇಂಜಿನಿಯರಿಂಗ್ ಡಿವಿಜನ್‌ನಿಂದ ಶಿವಮೊಗ್ಗದ ಆಫೀಸಿಗೆ ಹೋಗಿ ಅಂದರೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಹೋಗಿ ಅಲ್ಲಿಂದ ರಾಜ್ಯಸರ್ಕಾರಕ್ಕೆ ಬಂದು ವಾಪಸ್ಸು ಹೋಗುವಂಥಾದ್ದು ಇದೆ. ಅಲ್ಲೂ ಸಹ ರಾಜ್ಯಸರ್ಕಾರದ ಒಳಗೆ ಕೆಲಸ ಯಾವ ರೀತಿ ಆಗುತ್ತದೆ ಎಂಬುದು ನಮಗೆ ಗೊತ್ತಾಗಿದೆ. ಒಬ್ಬ ಇಂಜಿನಿಯರ್ ಒಂದು ಇಲಾಖೆಯಿಂದ ಮಲೆನಾಡು ಅಭಿವೃದ್ಧಿ ಮಂಡಳಿಗೆ ಬಂದು ಅದಕ್ಕೆ ಸ್ಯಾಂಕ್ಷನ್ಸ್ ಮಾಡಿಸಿಕೊಂಡು ಹೋಗುವುದಕ್ಕೆ ಬೇರೆಯೇ ವ್ಯವಸ್ಥೆ ಇದೆ. ಸರ್ಕಾರಿ ಇಲಾಖೆಗಳಲ್ಲಿ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಯಲ್ಲಿ ಎಸ್ಟಿಮೇಟ್ಸ್ ಪಾಸ್ ಮಾಡಿಸಿಕೊಮಡು ಹೋಗುವುದಕ್ಕೆ ಅಲ್ಲಲ್ಲಿ ಹಣ ಕೊಡದಿದ್ದರೆ ಕೆಲಸ ಆಗುತ್ತಿಲ್ಲ. ಅದನ್ನು ಸ್ವಲ್ಪ ತಾವು ತನಿಖೆ ಮಾಡಬೇಕಾಗುತ್ತದೆ. ಎಂ.ಎ.ಡಿ.ಬಿ.ಗೆ ಹೋದರೆ ಹಣ ಕೊಡಬೇಕು. ಬೇರೆ ಬೇರೆ ಇಲಾಖೆಗಳಿಂದ ಬರುವಂಥ ಅಂದಾಜುಪಟ್ಟಿಗಳು, ಪ್ರಾಯಶಃ ಇವತ್ತು ಮಾರ್ಚ್ 31ನೇ ತಾರೀಖಿಗೆ ವರ್ಷದ ಅಕೌಂಟ್ಸ್ ಅಂತ್ಯವಾಗುತ್ತದೆ. ಅಲ್ಲಿ ಹೋಗಿ ಹಣ ಬಿಡುಗಡೆಯಾಗಬೇಕಾಗುತ್ತದೆ. ಎಲ್ಲಾ ಇಲಾಖೆಗಳಲ್ಲೂ ಬಹಳ ತರಾತುರಿಯಿಂದ ಕೆಲಸ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಇಲಾಖೆಯ ಅಧಿಕಾರಿಗಳು ಮತ್ತು ಇನ್ನೊಂದು ಇಲಾಖೆಯ ಅಧಿಕಾರಿಗಳು ಹೊಂದಾಣಿಕೆಯಿಂದ ಕೆಲಸ

ಮಾಡುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ನಿರ್ಮಾಣ ಆಗಿರುವುದನ್ನು ಸ್ವಲ್ಪ ಗಮನಿಸಬೇಕಾಗುತ್ತದೆ. ಅದನ್ನು ನಿಲ್ಲಿಸುವ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ಮತ್ತೆ ಎಂ.ಎಲ್‌ಎ. ಗ್ರಾಂಟ್ಸ್ ಬಗ್ಗೆ ಹೇಳಬೇಕು ಎಂದರೆ ನಮ್ಮ ಜಿಲ್ಲೆಯನ್ನು ಬರ ಇರುವ ಜಿಲ್ಲೆಗಳ ಪಟ್ಟಿಯಲ್ಲಿ ಸೇರಿಸಿಲ್ಲ. ನಮ್ಮ ಜಿಲ್ಲೆಯಲ್ಲಿ ಬರ ಬಾರದೇ ಇರುವುದಕ್ಕೆ ನಾವು ಸಂತೋಷಪಡುತ್ತೇವೆ. ಆದರೆ ನಮ್ಮಲ್ಲಿ ಶಾಸಕರ ನಿಧಿಯೆಂದು ನಲ್ವತ್ತು ಲಕ್ಷ ರೂಪಯಿಗಳೆಂದು ಹೇಳಿದ್ದರಲ್ಲಿ ಇದುವರೆಗೆ ಕೊಟ್ಟಿದ್ದು ಕೇವಲ ಹತ್ತು ಲಕ್ಷ ರೂಪಾಯಿಗಳು ಮಾತ್ರ ಮಂಗಳೂರು, ಮಡಿಕೇರಿ ಮತ್ತು ಉಡುಪಿ ಈ ಮೂರು ಜಿಲ್ಲೆಗಳಲ್ಲಿ ಬರವಿಲ್ಲವೆಂದು ಹೇಳಿದ್ದಾರೆ. ಆದರೆ ಮೂವತ್ತು ಲಕ್ಷ ರೂಪಾಯಿ ಬಾಕಿ ಏನು ಕೊಡಬೇಕಿತ್ತು ಆ ಹಣವನ್ನು ಕೊಟ್ಟಿಲ್ಲ. ಇವತ್ತು ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುತ್ತದೆ. ಅದಕ್ಕಾದರೂ ಈ ಹಣವನ್ನು ಉಪಯೋಗ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮಗೆ ಕಾಳು ಕೊಟ್ಟರೆ ಖಂಡಿತ ಅಲ್ಲಿ ಉಪಯೋಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಣವನ್ನು ಕೊಟ್ಟರೆ, ತಕ್ಷಣದಲ್ಲಿ ಈ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಏನು ಸಮಸ್ಯೆ ಉದ್ಭವವಾಗುತ್ತದೆ, ಅದಕ್ಕೆ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ನಲ್ವತ್ತು ಲಕ್ಷ ರೂಪಾಯಿಳನ್ನು ಶಾಸಕರಿಗೆ ಕೊಟ್ಟಿದೆ ಎಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ಬಿಟ್ಟರೆ ಕೊಟ್ಟಿರುವುದು ಹತ್ತು ಲಕ್ಷ ಮಾತ್ರ ನಮ್ಮ ಊರಿಗೆ ಹೋದರೆ ಜನ ನಮ್ಮನ್ನು ಕೇಳುತ್ತಾರೆ, ನಲ್ವತ್ತು ಲಕ್ಷ ರೂಪಾಯಿಗಳನ್ನು ನೀವು ಏನು ಮಾಡಿದ್ದೀರಿ ಎಂದು. ಇದಕ್ಕೆ ಉತ್ತರವನ್ನು ನಾವು ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಒಂದೋ ನೀವೇ ಉತ್ತರವನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಉಳಿದ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕಾಗುತ್ತದೆ. ಇಷ್ಟು ಮಾಡಬೇಕೆಂದು ಹೇಳುತ್ತಾ, ಮತ್ತೆ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನ್ನು ಜಾರಿಗೆ ತಂದು ನಮ್ಮಲ್ಲಿ ಒಂದು ಟೌನ್ ಪಂಚಾಯತಿ ಇದೆ. ಅಲ್ಲಿ ಇದನ್ನು ಜಾರಿಗೆ ತರದೇ ಇದ್ದರೆ ಸರ್ಕಾರದಿಂದ ಅನುದಾನ ಬಿಡುಗಡೆ ಆಗುವುದಿಲ್ಲ. ಇದನ್ನು ಜಾರಿಗೆ ತರಬೇಕು ಎಂದು ಮೀಟಿಂಗ್‌ನಲ್ಲಿ ಇಟ್ಟು ಪಾಸ್ ಮಾಡುವುದಕ್ಕೆ ಹೋದರೆ ನಿಮ್ಮ ಪಕ್ಷಕ್ಕೆ ಸೇರಿದ ಪ್ರತಿನಿಧಿಗಳು ಏನಿದ್ದಾರೆ, ಅವರೇ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿ ವಾಕ್‌ಔಟ್ ಮಾಡುತ್ತಾರೆ. ಇದೊಂದು ವಿಪರ್ಯಾಸ, ಸರ್ಕಾರ ತಂದ ಕಾನೂನನ್ನು ಜಾರಿಗೆ ತರಬೇಕು, ಅದರಿಂದ ಬೇರೆ ಅನುದಾನ ಬರಬೇಕೆಂದು ಹೇಳಿ ಆಲೋಚನೆ ಮಾಡಿ ಅದನ್ನು ಜಾರಿಗೆ ತರಬೇಕೆಂದು ಪ್ರಯತ್ನವನ್ನು ಮಾಡಿದರೆ ಸರ್ಕಾರದ ಆಡಳಿತ ಸದಸ್ಯರು ಸಭಾತ್ಯಾಗ ಮಾಡುವಂಥಾದ್ದು ಇದೊಂದು ವಿಪರ್ಯಾಸವಾಗಿದೆ. ಅವರಿಗೆ ತಾವು ಯಾವ ಪಕ್ಷದಿಂದ ಚುನಾವಣೆಯಲ್ಲಿ ನಿಂತಿದ್ದೇವೆ, ಸರ್ಕಾರ ಏನು ಕಾನೂನು ಮಾಡಿದೆ ಎಂದು ಅದನ್ನು ತಿಳಿದುಕೊಳ್ಳುವಂಥ ಆಲೋಚನಾ ಶಕ್ತಿ ಇಲ್ಲದಿದ್ದರೆ ಅಂತಹ ಜನ ಪ್ರತಿನಿದಿಗಳನ್ನು ಅಲ್ಲಿ ಇಟ್ಟುಕೊಂಡು ಕೆಲಸ ಮಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಜೊತೆಗೆ ಹನ್ನೊಂದನೇ ಫೈನಾನ್ಸ್‌ದ್ದು ಮಾನ್ಯ ಕುಮಾರ ಬಂಗಾರಪ್ಪನವರು ಇಲ್ಲೆ ಇದ್ದಾರೆ. ಈಗ ಹನ್ನೊಂದನೆ ಫೈನಾನ್ಸ್‌ದ್ದು ಹಣಬಿಡುಗಡೆ ಮಾಡಬೇಕೆಂದು ಹೇಳಿದ್ದೇವೆ 'ಏಕೆಂದರೆ ಅಲ್ಲಿ ಹೋದಾಗ ಜನ ನಮ್ಮನ್ನು ಕೇಳುತ್ತಾರೆ. ತಾವು ಮಾಡಿದ್ದರೆ ನಮಗೆ ಸಂತೋಷ ಏಕೆಂದರೆ, ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಾವು ಕಾಮಗಾರಿಗಳನ್ನು ಮಾಡಿದಿದ್ದರೆ ಮಾಡಬೇಕಾಗುತ್ತದೆ. ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಕುಮಾರ್ ಎಸ್. ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾಡಿ ಆಗಿದೆ. ಇನ್ನೂ ರೀಚ್ ಆಗಿಲ್ಲ. ಮಾನ್ಯ ಅಧ್ಯಕ್ಷರೇ, ಎಲ್ಲಾ ಟೌನ್ ಪಂಚಾಯತ್‌ಗಳಿಗೆ ಪಟ್ಟಣ ಪಂಚಾಯತ್‌ಗಳಿಗೆ ಡೈರೆಕ್ಷನ್ಸ್ ಕೊಟ್ಟಿದೆ. ಯಾವ ಯಾವ ಪಂಚಾಯತಿಗೆ ಎಷ್ಟೆಷ್ಟು ದುಡ್ಡು ಎಂದು ಐಡೆಂಟಿಫೈ ಮಾಡಿ ಅವರಿಗೆ ಡೈರೆಕ್ಷನ್ಸ್ ಸಹ ಕೊಟ್ಟಿದೆ. ಆಕ್ಷನ್ ಪ್ಲಾನ್ ಕಳುಹಿಸಿದ ತಕ್ಷಣವೇ ನಾವು ಶುರು ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾನ್ಯ ಅಧ್ಯಕ್ಷರೇ ಧನ್ಯವಾದಗಳು. ಹಾಗೆಯೇ ಬೆಂಗಳೂರು ನಗರದ ಸುತ್ತಮುತ್ತಲೂ ಇರುವ ಉದ್ಯಾನವನಗಳು ಇದರ ಜೀರ್ಣೋದ್ಧಾರದ ಬಗ್ಗೆ, ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಒಂದು ಅಲಸೂರು ಕೆರೆ ಹೂಳನ್ನು ಎತ್ತುವಂಥಾದ್ದು, ದಿನನಿತ್ಯ ನಾನು ಆ ಕಡೆ ಹೋಗುವಾಗ ನೋಡುತ್ತೇನೆ. ಬಹಳ ಸಂತೋಷ. ಒಳ್ಳೆಯ ಕೆಲಸ ಆಗುತ್ತಿದೆ. ಆದರೆ ಈ ಕೆಲಸವನ್ನು ಹಿಂದೊಮ್ಮೆ ಮಾನ್ಯ ಮುಖ್ಯಮಂತ್ರಿಗಳು ಅದರ ಎಲ್ಲಾ ಕಸ ಕಡ್ಡಿಗಳನ್ನು ತೆಗೆಸುವಂತಹ ಕಾರ್ಯಕ್ರಮ ಹಾಕಿಕೊಂಡು ಬಹಳ ಸ್ವಚ್ಛ ಮಾಡಿಸಿದರು. ಆದರೆ ಮಾರನೆಯ ದಿವಸವೇ ಆ ಕೆರೆಯ ಸುತ್ತಮುತ್ತಲೂ ಇದ್ದವರು ಕಸವನ್ನು ತಂದು ಅಲ್ಲಿ ಹಾಕುವಂಥಾದ್ದು ಸಹ ನಾನು ನೋಡುತ್ತಿದ್ದೇನೆ. ಆದರೆ ಕಾರ್ಪೋರೇಷನ್‌ನವರು ಅಥವಾ ಅದಕ್ಕೆ ಸಂಬಂಧ ಪಟ್ಟ ಸಮಿತಿ ಏನಾದರೂ ಇದ್ದರೆ ಒಂದೆರಡು ದಿವಸ ಅಲ್ಲಿ ಕಾವಲು ನಿಂತು ಅವರನ್ನು ಹಿಡಿದು ಅವರ ಮೇಲೆ ದಂಡ ಹಾಕಿ ಕಠಿಣ ಶಿಕ್ಷೆಯನ್ನು ವಿಧಿಸಿದರೆ ಮುಂದಿನ ದಿನಗಳಲ್ಲಿ ಅವರು ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲ, ಅವರು ಮತ್ತೆ ಆ ತಪ್ಪನ್ನು ಮಾಡುವುದಿಲ್ಲ ಏಕೆಂದರೆ ಈ ಮನೆಯನ್ನು ಒಡೆದು ಆ ಡೆಬರೀಸನ್ನು ತೆಗೆದುಕೊಂಡು ಬಂದ ಆ ಕೆರೆಯ ಪಕ್ಕದ ರಸ್ತೆಯಲ್ಲಿ ಹಾಕಿಕೊಂಡು ಹೋಗುತ್ತಾರೆ. ಕಾರ್ಪೋರೇಷನ್‌ನವರು ಬಂದು ಇನ್ನೊಂದು ದಿವಸ ಅದನ್ನು ತೆಗೆದುಕೊಂಡು ಹೋಗುವಂಥಾದ್ದು, ನಾನು ಅದನ್ನು ನೋಡುತ್ತಿದ್ದೇನೆ, ಮಾನ್ಯ ಬಚ್ಚೇಗೌಡರೂ ಸಹ ಅದನ್ನು ನೋಡುತ್ತಿರುತ್ತಾರೆ. ಆದರೆ ಆ ಕಸವನ್ನು ತಂದು ಅಲ್ಲಿ ಹಾಕುವಾಗಲೇ ನಿಲ್ಲಿಸುವಂತಹ ಪ್ರಯತ್ನ ಮಾಡುವುದು ಒಳ್ಳೆಯದು, ಅದು ಬಿಟ್ಟು ಕಸ ಹಾಕಿದ ಮೇಲೆ ಅದನ್ನು ತೆಗೆಯುವಂತಹ ಕೆಲಸ ಮಾಡಿ ಇನ್ನಷ್ಟು ಹಣ ಖರ್ಚು ಮಾಡುವಂತಹ ಕೆಲಸ ಮಾಡಲಿಕ್ಕೆ ಹೋಗಬಾರದು. ಅದನ್ನು ಸ್ವಲ್ಪ ನೋಡಬೇಕು ಮತ್ತೆ ಹೆಬ್ಬಾಳ ಕೆರೆಯ ಪಕ್ಕದ ಜಾಗದ ಬಗ್ಗೆ ಬಹಳ ಕೆಟ್ಟ ಸುದ್ದಿಯನ್ನು ಕೇಳುತ್ತಿದ್ದೇನೆ. ಏನು ಅಂದರೆ ಅಲ್ಲಿಯ ಜಮೀನು ಒತ್ತುವರಿಯಾಗಿದೆ. ಬೇರೆಯವರಿಗೆ ಅದನ್ನು ಪರಬಾರೆ ಮಾಡಿದ್ದಾರೆ. ಪರಬಾರೆ ಮಾಡಿದ್ದು ಹೌದೋ ಅಲ್ಲವೋ ಎನ್ನುವುದನ್ನು ಸರ್ಕಾರ ಸದನಕ್ಕೆ ಹೇಳಬೇಕಾಗುತ್ತದೆ. ಏಕೆಂದರೆ ಹೆಬ್ಬಾಳ ಕೆರೆ ಬಹಳ ಸುಂದರವಾಗಿದೆ. ಅಲ್ಲಿ ಸಹ ಒಳ್ಳೆಯ ರೀತಿಯಿಂದ ಸ್ವಚ್ಛವನ್ನು ಮಾಡಿ ನಿರ್ವಹಣೆ ಮಾಡುತ್ತಿದ್ದರು. ಪರಭಾರೆ ನಿಲ್ಲಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ, ಈ ಬೆಂಗಳೂರು ನಗರವನ್ನು ಸಿಂಗಪುರ ಮಾಡಲು ಹೊರಟಂತಾದ್ದು, ಬಹಳ ಸಂತೋಷ. ಸಿಂಗಪುರ ಆದರೆ ಬಹಳ ಸಂತೋಷ. ಆದರೆ ಅದು ಸಾಧ್ಯವಾಗದಿದ್ದರೆ ಬೆಂಗಳೂರು ಆಗಿ ಉಳಿಸಿಕೊಂಡರೆ ಸಾಕು. ಅದನ್ನು ನಮಗೆ, ಅಂದರೆ ಹಾಸನಕ್ಕೆ ಹೋಗುವಾಗಲೂ ಸಹ ಒಂದು ಸಿಂಗಪುರ ಸಿಗುತ್ತದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):- ಅದು ಸಿಂಗಪುರ ಅಲ್ಲ. ಸಿಂಗಾಪುರ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ಆ ಸಿಂಗಾಪುರ ಆಗಬಾರದು. ಈಗ ಕಾರ್ಪೋರೇಷನ್‌ಗೆ ಬೇರೆ ಬೇರೆ ಇಲಾಖೆಯಿಂದ ಡೆಪ್ಯುಟೇಶನ್ ಮೇಲೆ ಹೋದವರ ಸಂಬಳದ ಒಂದು ಪಟ್ಟಿಯನ್ನು ಮಾಡಬೇಕಾಗುತ್ತದೆ. ಕೆಲವು ಡ್ರೈವರ್ಸ್ ಸಂಬಳ ಐ.ಎ.ಎಸ್. ಅಧಿಕಾರಿಗಳಿಗಿಂತ ಜಾಸ್ತಿ ಇದೆ ಎಂದು ನಾನು ಕೇಳಿದ್ದೇನೆ. ಅದರ ಬಗ್ಗೆ ಸ್ವಲ್ಪ ವಿಚಾರಣೆಯನ್ನು ಮಾಡಬೇಕಾಗುತ್ತದೆ. ಈಗ ಕೆ ಪಿ ಟಿ ಸಿ ಎಲ್ ನಿಂದ ಕೆಲವು ಡ್ರೈವರ್ಸ್ ಅಲ್ಲಿಗೆ ಡೆಪ್ಯುಟೇಶನ್ ಮೇಲೆ ಹೋಗಿರುವಂಥಾದ್ದು ಬೇರೆ ಬೇರೆ ಇಲಾಖೆಯಿಂದ ಹೋಗಿರುತ್ತಾರೆ. ಏಕೆಂದರೆ ಅವರು ಹೊರಗೆ ಹೋಗಬಾರದು, ಬೆಂಗಳೂರಿನಲ್ಲಿಯೇ ಉಳಿದುಕೊಳ್ಳಲು ಕೆಲವು ಡೆಪ್ಯುಟೇಶನ್ಸ್ ಆಗುತ್ತವೆ. ಅಂಥಾದ್ದನ್ನು ಮಾಡಬಾರದು ಅಧಿಕಾರಿಗಳಿಗೋಸ್ಕರ ಸರ್ಕಾರ ಇರಬಾರದು. ಸರ್ಕಾರಕೋಸ್ಕರ ಅಧಿಕಾರಿಗಳು ಇರಬೇಕು. ಎಲ್ಲೆಲ್ಲಿ ಅಧಿಕಾರಿಗಳ ಅವಶ್ಯಕತೆ ಇದೆ ಅಲ್ಲಿಗೆ ಮಾತ್ರ ಡೆಪ್ಯುಟೇಶನ್ ಮೇಲೆ ಹಾಕಬೇಕು. ಇನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ ಎರಡು ವರ್ಷದಲ್ಲಿ ಬಹಳಷ್ಟು ಪಟ್ಟಬದ್ಧಹಿಂತಾಶಕ್ತಿಗಳೂ ಏನು, ಲ್ಯಾಂಡ್ ಮಾಫಿಯಾದವರು ಜಾಗವನ್ನು ಏನು ಒಳಗೆ ಹಾಕಿಕೊಂಡಿದ್ದರು ಅದನ್ನು ಪತ್ತೆ ಮಾಡಿ ತಮ್ಮ ವಶಕ್ಕೆ ತೆಗೆದುಕೊಳ್ಳುವಂತಹ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಜಾಗಗಳನ್ನು ಒಳ ಹಾಕಿದ್ದನ್ನು ತಪ್ಪಿಸಿದ್ದೀರಿ. ಇನ್ನೊಂದು ಕಡೆಯಲ್ಲಿ ಪುನಃ ಸುತ್ತಮುತ್ತ ಸ್ವಾಧೀನ ಮಾಡಿಕೊಳ್ಳುವಂಥಾದ್ದನ್ನು ಕೇಳಿದ್ದೇನೆ. ಇವತ್ತು ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದರು. ಕಂದಾಯ ಇಲಾಖೆಯ ಜಾಗಗಳನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸ್ವಾಧೀನ ಮಾಡಿಕೊಂಡು ಅವರ ಹೆಸರಿಗೆ ಮಾಡಿಕೊಳ್ಳುವಂಥಾದ್ದನ್ನು, ಪ್ರಾಯಶಃ ಮಾಡುವಾಗಲೇ ಅಧಿಕಾರಿಗಳಿಗೆ ಗೊತ್ತಿರುತ್ತದೆ. ಗೊತ್ತಿದ್ದು ಕ್ರಮ ತೆಗೆದುಕೊಳ್ಳದೇ ಇರುವ ಅಧಿಕಾರಿಗಳ ಮೇಲೆ ತಾವು ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ? ಈಗ ಮಾನ್ಯ ಕಂದಾಯ ಸಚಿವರು ಹೇಳಿದರು. ನಾನು ಅದನ್ನು ಸರ್ಕಾರದ ಸ್ವಾಧೀನಕ್ಕೆ ವಾಪಸ್ಸು ತೆಗೆದುಕೊಳ್ಳುತ್ತೇನೆಂದು; ಅದು ಒಂದು ಆಯಿತು, ಆದರೆ ಅದನ್ನು ಯಾರು ಪಟ್ಟಭದ್ರಹಿತಾಶಕ್ತಿಗಳು ಸ್ವಾಧೀನ ಮಾಡಿಕೊಳ್ಳುವಾಗ ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತಿದ್ದ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ ಇನ್ನು ನಮ್ಮ ರಾಜ್ಯದಲ್ಲಿ ಪ್ರಥಮಭಾರಿಗೆ ನಮ್ಮ ಪಕ್ಷದ ಸರ್ಕಾರವಿದ್ದಾಗ ಈ ಅರಣ್ಯವು ಸಂರಕ್ಷಣೆಗೆ ಮತ್ತು ಬಂಜರು ಭೂಮಿ, ಬೀಳು ಭೂಮಿಗಳಲ್ಲಿ ಕಾಡನ್ನು ಬೆಳೆಸುವ ಯೋಜನೆಯನ್ನು ಹಾಕಿಕೊಂಡಿತ್ತು ಅದು ಮುಂದುವರಿದುಕೊಂಡು ಹೋಗಿದೆ. ಆದರೆ ಇವತ್ತು ದೊಡ್ಡ ಸಮಸ್ಯೆ ನಮ್ಮ ಭಾಗದ ರೈತರನ್ನು ಎದುರಿಸುತ್ತಿರುವಂಥಾದ್ದು ಈ ಒತ್ತುವರಿ ಮಾಡಿಕೊಂಡ ಸಣ್ಣ ಸಣ್ಣ ಹಿಡುವಳಿದಾರರು. ಅವರಿಗೆ ಗೊತ್ತಿರಲಿಲ್ಲ ಇದು ಅರಣ್ಯ ಭೂಮಿ ಎಂದು. ಕಾರಣ ಕಂದಾಯ ಇಲಾಖೆಯ ಆರ್.ಟಿ. ಸಿ. ಯಲ್ಲಿ ಏನಿದೆ ಆಂದರೆ ಸರ್ಕಾರ ಎಂದು ಇತ್ತು. ಅರಣ್ಯ ಎಂದು ಇರಲಿಲ್ಲ. ಅವರು ಒತ್ತುವರಿ ಮಾಡಿಕೊಳ್ಳುವಾಗ ಇದ್ದಂತಾದ್ದು ಕಂದಾಯ ಭೂಮಿ ಎಂದು ಇತ್ತು. ನಂತರ ಅದನ್ನು ಆರ್.ಟಿ.ಸಿಯಲ್ಲಿ ಬದಲಾವಣೆ ಮಾಡಿ ಸರ್ಕಾರ ಎಂದು ಇದ್ದದ್ದನ್ನು ಅರಣ್ಯ ಎಂದು ಮಾಡಿದ್ದು ಅದು ಆ ರೈತರ ತಪ್ಪಲ್ಲ. ಪುನಃ ಅರಣ್ಯ ಇಲಾಖೆಯವರು ಮತ್ತು ಕಂದಾಯ ಇಲಾಖೆಯವರು ಇಬ್ಬರೂ ಸೇರಿ ಅದನ್ನು ಬದಲಾವಣೆಯನ್ನು ಮಾಡಿದ್ದಾರೆ. ಇದನ್ನು ಈ ಹಿಂದೆಯೇ ಮಾಡಬೇಕಾಗಿತ್ತು. ಆದರೆ ರೈತರಿಗೆ ಹಕ್ಕುಪತ್ರ ಸಿಕ್ಕಿ ಅವರ ಅನುಭವದಲ್ಲಿ ಇದ್ದ ಮೇಲೆ ಅವರನ್ನು ಎಬ್ಬಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಆ ಮುಗ್ಧ ಜನ ಏನಿದ್ದಾರೆ

ಹೆಚ್ಚಾಗಿ ಪರಿಶಿಷ್ಟ ಜಾತಿಯವರು ಮತ್ತು ಪರಿಶಿಷ್ಟ ಪಂಗಡದವರು 50 ಸೆಂಟ್ಸ್ 20 ಸೆಂಟ್ಸ್ ಜಾಗದಲ್ಲಿ ಕುಳಿತವರು. ನಾನು ಮೊನ್ನೆ ಮಾನ್ಯ ಅರಣ್ಯ ಸಚಿವರ ಜೊತೆ ಸಹ ಚರ್ಚೆ ಮಾಡುತ್ತಿದ್ದೆ. ಈಗ ಯಾರ್ಯಾರು ದೊಡ್ಡ ದೊಡ್ಡ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ, ಅವರು ಸರಿಯಾಗಿ ನೋಡಿ ಕಂದಾಯ ಭೂಮಿ ಯಾವುದು, ಅರಣ್ಯ ಭೂಮಿ ಯಾವುದು, ಸರ್ಕಾರಿ ಭೂಮಿಯಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ. ಯಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಪಾಪದವರು ಇದ್ದಾರೆ ಅವರು ಯಾವ ಜಾಗ ಎಂದು ಗೊತ್ತಿಲ್ಲದೆ ಕುಳಿತಂಥವರು ದೊಡ್ಡ ದೊಡ್ಡ ಹಿಡುವಳಿಯನ್ನು ಮಾಡಿಕೊಂಡವರು ತುಂಬ ಶ್ರೀಮಂತರು. ನಾನು ಹೇಳಿದ್ದನ್ನು ತಾವು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):- ನಾನು ಕೇಳಿಸಿಕೊಂಡೆ. ಒತ್ತುವರಿ ಬಗ್ಗೆ ಹೇಳುತ್ತಿದ್ದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮಾಡಿದ್ದಾರೆ. ಸಣ್ಣವರು ಎಂದು ಸಣ್ಣವರು ಮಾಡಿದ್ದಾರೆ. ಹೆಚ್ಚು ಜನ ಸಣ್ಣವರೇ ಮಾಡಿರುವುದು. ಆದರೆ ಪರಿಶಿಷ್ಟ ವರ್ಗದವರು ಮತ್ತು ಪರಿಶಿಷ್ಟ ಪಂಗಡದವರು ಮಾಡಿರುವುದು ನಿಮಗೆ ಪಾಯಿಂಟ್ ಜೀರೋ ಜೀರೋ ಸಮ್ ಥಿಂಗ್ ಬರಬಹುದು ಟೋಟಲ್ ಎನ್‌ಕ್ರೋಚ್‌ಮೆಂಟ್‌ನಲ್ಲಿ ಅವರ ಧಾಮಾಶ:

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಒತ್ತುವರಿಯಲ್ಲಿ ಮತ್ತೊಂದು ಸಮಸ್ಯೆ ಏನೆಂದರೆ ನಾನು ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಬೆಟ್ಟಳ್ಳಿ ಕಾವಲು ಎಂದು ಒಂದು ಊರು ಇದೆ.

ಶ್ರೀ ಕೆ.ಹೆಚ್. ರಂಗನಾಥ್:- ಒಂದು ನಿಮಿಷ. ನಾನು ಇಂಟರ್‌ವೆನ್‌ಷನ್. ಆಗಿದ್ದಕ್ಕೆ ಕ್ಷಮಿಸಿ. ವೆಸ್ಟರ್ನ್ ಗಾರ್ಟ್ಸ್ ಆ ಭಾಗದ್ದು, ನಿಮ್ಮ ಭಾಗದ್ದು ಎಲ್ಲಿಯಾದರೂ ಒಂದು ಆಗಿರಬಹುದು.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಅಧಿಕೃತ ವರದಿ ತರಿಸಿಕೊಳ್ಳಿ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಾಡಿನಲ್ಲಿ ಬುಟ್ಟಿ ಹೆಣೆಯುವವರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಜಾಸ್ತಿ ಎನ್‌ಕ್ರೋಚ್‌ಮೆಂಟ್ ಮಾಡಿರುವವರು ಹಿಂದಿನಿಂದಲೂ ಇದ್ದಾರೆ ಈಗ ಎಂದು ಅಲ್ಲ. ಅದು ಎನ್‌ಕ್ರೋಚ್‌ಮೆಂಟ್ ಅಂತ ಅಲ್ಲ. ತಾವು ಹೇಳಿದ ಹಾಗೆ ಹೊಸ ಎನ್‌ಕ್ರೋಚ್‌ಮೆಂಟ್ ಎಂದು ಅಲ್ಲ. ಅನಾದಿ ಕಾಲದಿಂದಲೂ ಅವರು ಕಾಡಿನಲ್ಲಿ ವಾಸ ಮಾಡಿಕೊಂಡು ಬುಟ್ಟಿ ಹೆಣೆದುಕೊಂಡು ಇರುವವರು. ಆ ಭಾಗದಲ್ಲಿ ಶೇಕಡ 50ಕ್ಕಿಂತ ಜಾಸ್ತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರೇ ಆ ಬೆಳ್ತಂಗಡಿ ಭಾಗದಲ್ಲಿರುವವರು.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ಈ ಪತ್ರಿಕೆಯವರು ಮತ್ತು ಮಾನ್ಯ ಸದಸ್ಯರು ಇನ್‌ಡಿಸ್‌ಕ್ರಿಮಿನೇಟ್ ಆಗಿ ಎನ್‌ಕ್ರೋಚ್‌ಮೆಂಟ್, ಎನ್‌ಕ್ರೋಚ್‌ಮೆಂಟ್ ಎನ್ನತಕ್ಕಂಥ ಪದವನ್ನು ಬಳಸಿರುವುದರಿಂದ ಅದು ದೊಡ್ಡ ವ್ಯಾಪಕವಾಗಿದೆ. ಇವತ್ತು ಮಲೆನಾಡು ಜಿಲ್ಲೆಗಳು ಮತ್ತು ವೆಸ್ಟರ್ನ್‌ಗಾರ್ಟ್ಸ್‌ನಲ್ಲಿರತಕ್ಕಂಥ ಜಿಲ್ಲೆಗಳು ಈಗ ಕಾರವಾರ ಜಿಲ್ಲೆ ತಾವು ಅದಕ್ಕೆ ಹತ್ತಿರದಲ್ಲಿರತಕ್ಕಂಥವರು ವೆಸ್ಟರ್ನ್‌ಗಾರ್ಟ್ಸ್ ಬಾರ್ಡರ್‌ನಲ್ಲಿ ಇರತಕ್ಕಂಥವರು ಮಾನ್ಯ ಉಪಾಧ್ಯಕ್ಷರು. ಅಲ್ಲಿ 6 ಡಿವಿಜನ್ಸ್ ಇದೆ. ಒಂದು ಡಿಸ್ಟ್ರಿಕ್ಟ್‌ನಲ್ಲಿ ಒಂದು ವನ್ಯಜೀವಿ ಡಿವಿಜನ್. 5 ರೆಗ್ಯಲರ್ ಫಾರೆಸ್ಟ್ ಡಿವಿಜನ್ಸ್. ಅದು ಸುಮಾರು 80-85 ಪರ್ಸೆಂಟ್ ಫಾರೆಸ್ಟ್ ಲೆಕ್ಕದಲ್ಲಿಯೇ

ಬಂದಿರತಕ್ಕಂಥಾದ್ದು. ಒಬ್ಬನು ಯಾವುೂನೋ ಒಂದು ಗುಡಿಸಲು ಹಾಕಿಕೊಂಡರೆ, ಇನ್ನು ಎಲ್ಲಿ ಹಾಕಿಕೊಳ್ಳಬೇಕು ಅವನು ಬಡವ. ಏನು ಆಕಾಶದಲ್ಲಿ ಹಾಕಿಕೊಳ್ಳಬೇಕಾಗಿತ್ತಾ? ಅವನು ಅಣ್ಣತಮ್ಮಂದಿರು ಇರುತ್ತಾರೆ, ಅವರು ಭಾಗವಾಗುತ್ತಾರೆ ಅವನು ಎಲ್ಲೋ ಒಂದು ಕಡೆ ಬಂದು ಒಂದು ಸಣ್ಣ ಗುಡಿಸಲು ಹಾಕಿಕೊಳ್ಳುತ್ತಾನೆ. ಅದನ್ನು ಒತ್ತುವರಿ ಎಂದು ನಾವು ಕರೆದಿದ್ದೇವೆ. ಅದನ್ನು ಒತ್ತುವರಿ ಎಂದು ಕರೆನು ಸುಪ್ರೀಂ ಕೋರ್ಟ್‌ನವರೂ ಕೂಡ ಇದನ್ನು ಒತ್ತುವರಿ, ಇದು ಎನ್‌ಕ್ರೋಚ್‌ಮೆಂಟ್ ಇದನ್ನು ಮಾಡಬೇಡ ಎಂದು ಹೇಳುತ್ತಾರೆ. ತಾವು ದಿನಬೆಳಗಾದರೆ ಒತ್ತುವರಿ ಒತ್ತುವರಿ ಎಂದು ಹೇಳಿ ಯಾರ ಭೂಮಿ ಒತ್ತುವರಿ? ಅವರ ಅಪ್ಪ ಅಲ್ಲಿಯೇ ಹುಟ್ಟಿದ್ದಾನೆ, ಅವನು ಅಲ್ಲಿಯೆ ಹುಟ್ಟಿದ್ದಾನೆ, ಅವನ ಅಜ್ಜ ಅಲ್ಲಿಯೇ ಹುಟ್ಟಿದ್ದಾನೆ, ಅವನ ಮುತ್ತಾತ ಅಲ್ಲಿಯೇ ಹುಟ್ಟಿದ್ದಾನೆ ಇದನ್ನು ಒತ್ತುವರಿ ಎಂದು ಕರೆಯುತ್ತೀರಾ ನೀವು? ಏಕೆ ನೀವು ಯಾವಾಗಲೂ ಒತ್ತುವರಿ ಒತ್ತುವರಿ ಎಂಬ ಪದವನ್ನು ಉಪಯೋಗ ಮಾಡುತ್ತೀರಿ? ನಾನು ನಿಮ್ಮನ್ನು ಕೇಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ನಾವೂ ಸಹ ಅದನ್ನೇ ಹೇಳಿದ್ದು. ತಾವು ಹೇಳುವುದು ಸರಿ ಇದೆ.

ಶ್ರೀ ಕೆ.ಹೆಚ್. ರಂಗನಾಥ್:- ನಾನು ಹೇಳಿದ್ದು ಸರಿ ಇದ್ದರೆ ಮತ್ತೇ ನೀವು ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಡಿ.ವಿ. ಸದಾನಂದಗೌಡ:- ನಾನು ಹಾಗೆ ಹೇಳಿದ್ದಲ್ಲ. ನಾನು ಏನು ಹೇಳಿದೆ ಅಂದರೆ ತಲೆ ತಲಾಂತರದಿಂದ ಅವರು ಅಲ್ಲಿಯೇ ಕುಳಿತುಕೊಂಡು ಅಲ್ಲೇ ವಾಸವಾಗಿದ್ದವರು. ಅವರ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲ. ಅವರಿಗೆ ಹಕ್ಕುಪತ್ರಗಳು ಮತ್ತೊಂದು ಆಗಲಿಲ್ಲ ಎಂದು ಹೇಳಿದ್ದೇನೆ. ಅದು ಹೊಸ ಎನ್‌ಕ್ರೋಚ್‌ಮೆಂಟ್ ಇತ್ತೀಚಿಗೆ ಆಗಿದ್ದು ಎಂದು ನಾನು ಯಾವುದನ್ನೂ ಹೇಳಲಿಲ್ಲ. ಅವರು ಬಹಳ ಹಿಂದಿನಿಂದಲೂ ಇದ್ದರೆ. ಆದರೆ ಒತ್ತುವರಿ ಪರಿಸ್ಥಿತಿ ಬಂದಾಗ ಅವರನ್ನು ಸಹ ಅದರ ಜೊತೆ ಸೇರಿಸಿಕೊಂಡಿದ್ದಾರೆ ಎನ್ನುವ ಮಾತು ಹೇಳಿದೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಮಂತ್ರಿಗಳು ಬಹಳ ಧೈರ್ಯವಾಗಿ ಹೇಳುತ್ತಿದ್ದಾರೆ. ಅವರು ಒತ್ತುವರಿ ಅಲ್ಲ ಎಂದು ತಮ್ಮ ಇಂಟರ್‌ಪ್ರಿಟೇಶನ್, ತಮ್ಮ ಮನಸ್ಸಿನಲ್ಲಿ ಏನಿದೆ ಈ ಭಾವನೆ ನಿಮ್ಮ ಅಧಿಕಾರಿಗಳಿಗೆ ಹೇಳಿದರೆ ಸಾಕು. ದಿನನಿತ್ಯ ಹೋಗಿ ಅವರ ಒಡ್ಡು ಕಿತ್ತು ಹಾಕುತ್ತಿದ್ದಾರೆ. ಮನೆ ಕಿತ್ತುಹಾಕುತ್ತಿದ್ದಾರೆ ನಮ್ಮ ಮಲೆನಾಡಿನಲ್ಲಿ ಕೆಲವು ಊರುಗಳು ಅರಣ್ಯದಲ್ಲಿವೆ. ಪ್ರತಿನಿತ್ಯ ನಿಮ್ಮ ಇಲಾಖೆಯಿಂದ ಹೆರ್‍ಯಾಸ್‌ಮೆಂಟ್ ಆಗುತ್ತಾ ಇದೆ.

ಅವರು ಸಾವಿರಾರು ಕೇಸುಗಳನ್ನು ಕೋರ್ಟಿಗೆ ಹಾಕಿದ್ದಾರೆ. ಹಾಗಾದರೆ ನೀವೇಕೆ ಅವರಿಗೆ ಹೇಳುವುದಿಲ್ಲ? ಇದೇ ಪರಿಶಿಷ್ಟವರ್ಗದ ಜನ, ಹಿಂದುಳಿದ ವರ್ಗದ ಜನ ಇವರು ಅತ್ಯಂತ ಬಡವರು ಸ್ವಾಮಿ. ತಾವು ಹೆಳುವಹಾಗೆ ಒಳ್ಳೆಯ ಜಮೀನು ಅವರಿಗೆ ಸಿಕ್ಕಲಿಲ್ಲ. ಅದೆಲ್ಲಾ ಬುದ್ಧಿವಂತರ ಕೈಗೆ ಆಯಿತು. ಯಾರು ಗುಡ್ಡಗಾಡಿನಲ್ಲಿ ಸಾಗುವಳಿ ಮಾಡಿಕೊಂಡು ತಲೆತಲಾಂತರದಿಂದ ಬದುಕಿದ್ದಾರೆ, ಅವರು ಅಧಿಕಾರಿಗಳ ಹತ್ತಿರ, ಅಧಿಕಾರ ಇದ್ದವರ ಹತ್ತಿರ ಹೋಗಲಿಕ್ಕೆ ಆಗಲಿಲ್ಲ. ಅವರಿಗೆ ನಮ್ಮ ನಿಮ್ಮ ಹತ್ತಿರ ಬಂದು ಮಾತನಾಡಲಿಕ್ಕೂ ಆಗಲಿಲ್ಲ.

ಅಂತಹವರನ್ನು ಇವತ್ತು ಒಕ್ಕಲೆಬ್ಬಿಸುತ್ತಿದ್ದಾರೆ. ಕೋರ್ಟಿಗೆ ಕೇಸ್ ಹಾಕುತ್ತಿದ್ದಾರೆ. ಅವರ ಒಡ್ಡು, ಬೇಲಿ ಕೀಳಿಸುತ್ತಾ ಇದ್ದಾರೆ. ಅವರ ಜಮೀನುಗಳಲ್ಲಿ ಬೆಳೆದ ಬೆಳೆಯನ್ನು ಜಾನುವಾರುಗಳು ತಿಂದುಹೋಗುವ ಹಾಗೆ ಮಾಡುತ್ತಿದ್ದಾರೆ. ಅವರು ಇವತ್ತು ಕಣ್ಣೀರು ಹಾಕುತ್ತಿದ್ದಾರೆ. ನಿಮ್ಮ ನೇತೃತ್ವದಲ್ಲಿರುವಂಥ ಇಲಾಖೆಯ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಮಲೆನಾಡಿನ ಜಿಲ್ಲೆಗಳಲ್ಲಿ ಈ ಕೆಲಸ ಮಾಡುತ್ತಿದ್ದಾರೆ. ದಯವಿಟ್ಟು ನಿಮ್ಮ ಮನಸ್ಸಿನಲ್ಲೇನಿದೆ, ಅದನ್ನು ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಪೂರ್ತಿ ಪಾಠ ಮಾಡಿ. ಅವರಿಗೆ ಸ್ವಲ್ಪ ಹೇಳಿ. ನೀವು ಅಲ್ಲಿ ಹೋಗಬೇಡಿ, ಕೋರ್ಟಿಗೆ ಕೇಸ್ ಹಾಕಬೇಡಿ ಎಂದು ಹೇಳಿ. ಈಗಾಗಲೇ ಸಾವಿರಾರು ಕೇಸುಗಳಿಗೆ ಎಫ್.ಐ.ಆರ್. ಹಾಕಿದ್ದಾರೆ. ನನ್ನ ಕ್ಷೇತ್ರದಲ್ಲಿ ಚಾರ್ಜಶೀಟ್ ಹಾಕಿದ್ದಾರೆ. ತಮಗೆ ದೂರವಾಣಿ ಮಾಡಿ ಹೇಳಿದ್ದೇನೆ. ಹಾಗಾದರೆ, ಅವರು ಏನು ಮಾಡಬೇಕು ಹೇಳಿ? ಅವರ ಹತ್ತಿರ ಲಾಯರುಗಳಿಗೆ ಕೊಡಲು ದುಡ್ಡು ಇಲ್ಲ. ತಮ್ಮ ನೇತೃತ್ವದಲ್ಲಿ ಅವರನ್ನು ಜೈಲಿಗೆ ಕಳುಹಿಸುತ್ತೀರಾ?

ಶ್ರೀ ಎ.ಆರ್. ಕೃಷ್ಣಮೂರ್ತಿ:- ನಮ್ಮ ಚಾಮರಾಜನಗರದಲ್ಲಿ ಪರಿಸ್ಥಿತಿಯೇ ಬೇರೆ ಆಗಿದೆ. ನಮ್ಮ ಕ್ಷೇತ್ರದ ವ್ಯಾಪ್ತಿಯ ಗಡಿ ಭಾಗ ಏನಿದೆ, ಅಲ್ಲಿ ಹಿಂದೆ 1960ನೇ ಇಸವಿಯಲ್ಲಿ ಸರ್ಕಾರವೇ ಈ ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಲ್ಯಾಂಡನ್ನು ಗ್ರಾಂಟ್ ಮಾಡಿತ್ತು. ಒಂದು ಕುಟುಂಬಕ್ಕೆ ಸುಮಾರು 4 ಎಕರೆ ಮಾಡಿದ್ದಾರೆ. ಈ ರೆಗ್ಯುಲರ್ ಫಾರೆಸ್ಟ್ ಮತ್ತು ವೈಲ್ಡ್ ಲೈಫ್ ಏರಿಯಾ ಎಂದು ಬೌಂಡರಿ ಫಿಕ್ಸ್ ಮಾಡುವ ಸಂದರ್ಭದಲ್ಲಿ without the knowledge of the land grantees ಫಾರೆಸ್ಟ್ ಇಲಾಖೆಯವರು ಟ್ರೆಂಚ್ ಹೊಡೆದಿರುವುದನ್ನು ನಾವು ಕಾಣುತ್ತೇವೆ. ಆ ಟ್ರೆಂಚ್‌ನ್ನು ಏನು ಮಾಡಿದ್ದಾರೆ, ಇವರು ಸರ್ವೆ ಮಾಡಿ, ಬೌಂಡರಿ ಫಿಕ್ಸ್ ಮಾಡದೇ ಮಾಡಿರತಕ್ಕ ಸಂದರ್ಭದಲ್ಲಿ ಆ ಲ್ಯಾಂಡ್ ಗ್ರಾಂಟಿನ ಜಮೀನು ಇವತ್ತು ವೈಲ್ಡ್ ಲೈಫ್ ಏರಿಯಾ ಎಂದು ಅವರೇನು ಬೌಂಡರಿ ಫಿಕ್ಸ್ ಮಾಡಿದ್ದಾರೆ, ಅದರೊಳಗಡೆ ಹೋಗಿಬಿಟ್ಟಿದೆ. ಹಾಗಾಗಿ, ದೇವರಹಳ್ಳಿ, ತಿಮ್ಮೇಗೌಡನಪಾಳ್ಯ ಸರ್ವೆ ನಂ.184 ಚಾಮರಾಜನಗರ ತಾಲ್ಲೂಕಿನಲ್ಲಿ ಏನಾಗಿದೆ ಲ್ಯಾಂಡ್ ಟೈಟಲ್ ಡೀಡ್ ಇದ್ದರೂ ಕೂಡ, ಅವರು ಮಳೆ ಆಶ್ರಯದಲ್ಲಿ ಬೇಸಾಯ ಮಾಡತಕ್ಕ ಸಂದರ್ಭದಲ್ಲಿ ಅವರ ಗಮನಕ್ಕೇ ಬರದೇ ಫಾರೆಸ್ಟ್‌ನವರು ಬೌಂಡರಿ ಫಿಕ್ಸ್ ಮಾಡಿರುವುದು ಅನ್ಯಾಯವಾಗಿದೆ. ಅದನ್ನು ಸರಿಪಡಿಸುವ ದಿಕ್ಕಿನಲ್ಲಿ ಹಿಂದೆ ನಮ್ಮ ಮುಖ್ಯಮಂತ್ರಿಗಳು ಬಿ.ಆರ್. ಹಿಲ್ಸ್‌ನಲ್ಲಿ ಮಂತ್ರಿಗಳ ಸಭೆ ಮಾಡಿದಾಗಲೂ ನಾನು ಇದನ್ನು ಪ್ರಸ್ತಾಪ ಮಾಡಿದ್ದೆ. ಆಗ ಮಾನ್ಯ ಮಂತ್ರಿಗಳೂ ಕೂಡ ಅಲ್ಲಿ ಬಂದಿದ್ದರು. ಆ ಸಂಧರ್ಬದಲ್ಲಿ ಮಾನ್ಯಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟಿದ್ದರು. ನಾನು ಜಾಯಿಂಟ್ ಸರ್ವೆ ಮಾಡಿಸುತ್ತೇನೆ. ರೆವಿನ್ಯೂ, ಫಾರೆಸ್ಟ್ ಸರ್ವೆ ಮಾಡಿದಾಗ ಅದನ್ನು ಸರಿಪಡಿಸಿಕೊಡುತ್ತೇನೆ ಎಂಬ ಮಾತನ್ನು ಹೇಳಿದ್ದರು. ಅದರ ಬಗ್ಗೆ ಇನ್ನೂ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ದಯಮಾಡಿ, ಅದನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗ್ಗಡೆ:- ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ನನ್ನ ರಕ್ಷಣೆಗೆ ಬಂದರು. ಅವರು ಜೀವನ ಮಾಡಿಕೊಂಡು ಬಂದದ್ದೇ ಅರಣ್ಯದಲ್ಲಿ ಎಂದು ಅವರೇ ಹೇಳಿದರು. ಇವತ್ತು ಅರಣ್ಯ ಪ್ರದೇಶವೆಂದು ರೆವಿನ್ಯೂ ಇಲಾಖೆಯಲ್ಲಿ ಬದಲಾವಣೆಯಾಗಿದೆ. ಆದರೆ, ಅವರು ಅನೇಕ ವರ್ಷಗಳಿಂದ ಅಲ್ಲಿ ಜೀವನವನ್ನು ಮಾಡಿಕೊಂಡಿದ್ದರು. ಅವರು ಅಲ್ಲಿ

ಹೋದಾಗ ಅದು ಅರಣ್ಯ ಆಗಿರಲಿಲ್ಲ. ದಾಖಲೆಗಳಲ್ಲಿ ಅರಣ್ಯ ಎಂದೂ ಇರಲಿಲ್ಲ. ನಂತರ ಅರಣ್ಯ ಎಂದು ಬದಲಾವಣೆಯಾಗಿದೆ, ಇದು ಅವರ ತಪ್ಪಲ್ಲ. ಸರ್ಕಾರ ಅಥವಾ ಅಧಿಕಾರಿಗಳು ಮಾಡಿರುವ ತಪ್ಪಿಗೆ, ಅವರು ಯಾವ ರೀತಿ ತಪ್ಪುಗಾರರಾಗುತ್ತಾರೆ? ಅವರನ್ನು ಒಕ್ಕಲೆಬ್ಬಿಸುವ ಕೆಲಸನ್ನು ಸರ್ಕಾರ ಮಾಡಬಾರದು. ಅದಕ್ಕೋಸ್ಕರ ನಾನು ತಮ್ಮ ಹತ್ತಿರ ಕೇಳುವಂಥಾದ್ದು. ದಾಖಲೆ ಏನಿದೆ ಎಂದು ಕೆಲವು ಕಡೆ ಅವರು ಕೇಳುತ್ತಾರೆ. 1978 ಪೂರ್ವದಲ್ಲಿ ಇದ್ದದ್ದಕ್ಕೆ ದಾಖಲೆ ಏನು ಎಂದು ಕೇಳುತ್ತಾರೆ. ಅವರು ದಾಖಲೆಗಳನ್ನು ನಿರ್ಮಿಸುವಂಥ ಶಕ್ತಿ ಇದ್ದಿದ್ದರೆ, ಅವನು ಅರಣ್ಯ ಭೂಮಿಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಸರ್ಕಾರಕ್ಕೆ ನಾನೇನು ಕೇಳಿಕೊಳ್ಳುತ್ತೇನೆಂದರೆ, ತೋಟಗಾರಿಕೆ ಅಧಿಕಾರಿಗಳು ಇದ್ದಾರೆ, ಅವರಿಗೆ ಈ ಮರ ಎಷ್ಟು ವರ್ಷದ್ದು ಎಂದು ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ. ಅವನ ಹತ್ತಿರ ಇಷ್ಟು ವರ್ಷಗಳಿಂದ ಇದ್ದೇವೆ ಎಂಬ ದಾಖಲೆಗಳು ಇದ್ದಿದ್ದರೆ ಇಷ್ಟು ವರ್ಷದ ಮರ ಇದೆ, ಇಷ್ಟು ವರ್ಷದ ಮನೆ ಇದೆ ಇಷ್ಟು ವರ್ಷದ ಬಾವಿ ಇದೆ ಎಂಬ ಗುರುತು ಇದ್ದರೆ ಖಂಡಿತವಾಗಿಯೂ 1978ರ ಪೂರ್ವದ್ದೇ ಈ ಅಕ್ರಮಣವೆಲ್ಲಾ ಆಗಿರುತ್ತದೆ. ಅವರ ಸಹಕಾರಕ್ಕೆ ಸರ್ಕಾರ ಬರಬೇಕು. ಇದರಲ್ಲಿ ಎರಡು ಇಲಾಖೆಗಳು ಅಂದರೆ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಇಬ್ಬರೂ ಕೂತು ಅದನ್ನು ಹೊಂದಾಣಿಕೆ ಮಾಡಬೇಕು. ಏಕೆಂದರೆ, ಆ ಪಾಪದವರ ಮೇಲೆ ಕರುಣೆ ಇರಬೇಕು.

ಶ್ರೀ ಕೆ.ಹೆಚ್. ರಂಗನಾಥ್:- ಪಾಪದವರು ಎಂದರೆ ಯಾರು ಸ್ವಾಮಿ?

ಶ್ರೀ ಕೆ. ಜಯಪ್ರಕಾಶ ಹೆಗ್ಗಡೆ:- ಅರಣ್ಯ ಪ್ರದೇಶದಲ್ಲಿ ಕೂತವರು 5-10 ಎಕರೆ ಅತಿಕ್ರಮಣ ಮಾಡಿಕೊಂಡವರ ಬಗ್ಗೆ ನಾನು ಕೇಳುವುದಿಲ್ಲ. ಆದ್ದರಿಂದ, ಇದರ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕು. ಅವರ ಸಹಾಯಕ್ಕೆ ಬರಬೇಕೆಂದು ಹೇಳುತ್ತೇನೆ. ಮತ್ತೆ ನಮ್ಮ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಇಲ್ಲಿ ಇಲ್ಲ. ಮಾನ್ಯ ಸಿಂಧ್ಯರವರು ಅನೇಕ ಬಾರಿ ಹೇಳುತ್ತಿರುತ್ತಾರೆ. ಎಷ್ಟು ಉದ್ದಿಮೆಗಳು ಕ್ಲೋಸ್ ಆಗಿವೆ, ಎಷ್ಟು ಜನ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಆ ಪರಿಸ್ಥಿತಿ ಉಂಟಾಗಿರುವುದು ಬಿಟ್ಟರೆ, ಬೇರೆ ಏನೂ ಇಲ್ಲ. ಅವರು ನಿನ್ನೆ ದಿವಸ ಒಂದು ಪಟ್ಟಿಯನ್ನು ಕೊಟ್ಟರು. ಎಷ್ಟು ಲಕ್ಷ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಆಗಿದೆ, ಎಂದು ಅವರು ಹೇಳಲಿಲ್ಲ. ಹೂಡಿಕೆಯನ್ನು ಮಾಡುವ ಒಂದು ಅಂದಾಜು ಇದೆ. ಇಷ್ಟು ಜನ ಯುವಕರಿಗೆ ಉದ್ಯೋಗ ಸಿಕ್ಕುವ ಅಂದಾಜು ಇದೆ ಎಂದು ಹೇಳಿದ್ದಾರೆ. ಇನ್‌ವೆಸ್ಟ್‌ಮೆಂಟ್ ಗೊತ್ತಾಗಲಿಲ್ಲ. ಎಂಪ್ಲಾಯ್‌ಮೆಂಟೂ ಗೊತ್ತಾಗಲಿಲ್ಲ. ಏಕೆಂದರೆ, ಇವತ್ತು ಬರುವಂಥ ಹೈಟೆಕ್ ಇಂಡಸ್ಟ್ರೀಸ್‌ನಲ್ಲಿ ಇಲ್ಲವೂ ಕಂಪ್ಯೂಟರ್ ಮುಖೇನ ನಡೆಯುತ್ತದೆ. 5 ಸಾವಿರ ಕೋಟಿ ಬಂಡವಾಳವನ್ನು ಹೂಡಿದ ಒಂದು ಉದ್ದಿಮೆಯವರು ಕೆಲಸ ಕೊಡುವಂಥಾದ್ದು ಕೇವಲ 500 ಜನರಿಗೆ ಮಾತ್ರ ಅದೂ ಸ್ಥಳೀಯರಿಗೆ ಸಿಗುತ್ತಾ ಇಲ್ಲ. ಅವರಿಗೆ ಬೇಕಾದಂಥವರು ಬೇರೆ ಬೇರೆ ಕಡೆಯಿಂದ ದೊಡ್ಡ ದೊಡ್ಡ ಡಿಗ್ರಿಯನ್ನು ತೆಗೆದುಕೊಂಡು ಬರುವಂಥವರಿಗೆ ಕೊಡುವುದನ್ನು ಬಿಟ್ಟರೆ ಸ್ಥಳೀಯರಿಗೆ ಉದ್ಯೋಗ ಸಿಕ್ಕುವಂಥಾದ್ದು ಕಮ್ಮಿಯಾಗಿದೆ. ಅವರ ಅಂದಾಜು ಪಟ್ಟಿಯಲ್ಲಿ ಇಷ್ಟು ಲಕ್ಷ ರೂಪಾಯಿ, ಎಷ್ಟು ಕೋಟಿ ರೂಪಾಯಿ ಹೂಡಿಕೆಯಾಗುವ ಸಂದರ್ಭಗಳು ಇದೆ, ಇಷ್ಟು ಉದ್ಯೋಗಗಳು ಸಿಕ್ಕುತ್ತವೆಂಬುದನ್ನು ಬಿಟ್ಟರೆ, ಉಪಯೋಗಗಳು ಮಾತ್ರ ಕಡಿಮೆ. ಖಂಡಿತವಾಗಿಯೂ ಅವರು ಕೊಡುವಂಥ ಫಿಗರ್ಸ್ ಏನಿವೆ, ಅವು ಸರಿಯಲ್ಲ. ಮುಂದಿನ ದಿನಗಳಲ್ಲಾದರೂ ಹೆಚ್ಚು ಉದ್ಯೋಗವನ್ನು ಒದಗಿಸುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ ಕೊನೆಯದಾಗಿ, ಸಣ್ಣ ಕೈಗಾರಿಕೆಗಳ ಸಬ್ಸಿಡಿ ಬಗ್ಗೆ ಹೇಳುವುದಾದರೆ ಮಾನ್ಯ ಮೊಹಿದ್ದೀನ್‌ರವರು ಸಣ್ಣ ಕೈಗಾರಿಕೆ

ಸಚಿವರಾಗಿದ್ದಾಗ ಎಲ್ಲರಿಗೂ ಒಂದೇಸಲ ಸಬ್ಸಿಡಿಯನ್ನು ಕೊಡುವಂಥ ವ್ಯವಸ್ಥೆ ಮಾಡಿದ್ದರು. ಅದೇ ರೀತಿ ತಾವೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಮಾಡಬೇಕು. ಎಷ್ಟೋ ಜನ ನಿಮ್ಮಸಬ್ಸಿಡಿಗಾಗಿಯೇ ಕಾದಿರುತ್ತಾರೆ. ಒಂದುವೇಳೆ ಮುಂದಿನ ದಿನಗಳಲ್ಲಿ ನೀವು ಸಬ್ಸಿಡಿಯನ್ನು ಕೊಡುವುದಿಲ್ಲ. ನಾವು ಟ್ಯಾಕ್ಸ್ ಹಾಲಿಡೆಯನ್ನು ಕೊಡುತ್ತೇವೆಂದು ಹೇಳಿ. ಕೆಲವೊಂದು ಇದೆ, ಬರೀ ಸಬ್ಸಿಡಿಗಾಗಿಯೇ ಉದ್ದಿಮೆಯನ್ನು ಪ್ರಾರಂಭ ಮಾಡುವಂಥಾದ್ದು ಇದೆ. ಅದನ್ನು ನಿಲ್ಲಿಸಬೇಕಾದರೆ, ನೀವು ಬೇರೆ ಪ್ರೋಗ್ರಾಂ ಹಾಕಿಕೊಳ್ಳಬೇಕು. ಸಬ್ಸಿಡಿಯನ್ನು ಕೊಡುವಂಥಾದ್ದು ನಿಲ್ಲಿಸಿ, ಟ್ಯಾಕ್ಸ್‌ಹಾಲಿಡೆಯನ್ನು ಕೊಡುವಂಥಾದ್ದು ಮಾಡಿದರೆ ಖಂಡಿತ ಆಗುತ್ತದೆಂದು ಹೇಳುತ್ತೇನೆ. ಈ ವರ್ಗಾವಣೆ ನೀತಿಯನ್ನು ಆದಷ್ಟು ಬೇಗ ಸರ್ಕಾರ ಜಾರಿಗೆ ತರಬೇಕೆಂದು ಹೇಳುತ್ತೇನೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಇವತ್ತು ಶಿಕ್ಷಣ ಇಲಾಖೆಯಲ್ಲಿ, ಇದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಆದರೆ ಕಾನೂನು ರೀತಿಯಲ್ಲಿ ನೋಟೀಸನ್ನು ಕೊಡಲಿಕ್ಕೆ ಶುರು ಮಾಡಿದ್ದಾರೆ. ಶಾಸಕರು ಪತ್ರವನ್ನು ಬರೆದದ್ದಕ್ಕೆ ಶಿಕ್ಷಕರಿಗೆ ನೋಟೀಸನ್ನು ಕೊಡಲು ಶುರು ಮಾಡಿದ್ದಾರೆ. ನೀವು ರಾಜಕೀಯ ಒತ್ತಡವನ್ನು ತಂದಿದ್ದೀರಿ, ನಿಮ್ಮ ಮೇಲೆ ಏಕೆ ಕ್ರಮವನ್ನು ಕೈಗೊಳ್ಳಬಾರದು ಎಂದು. ಇದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಕಾನೂನಿನ ಅಡಿಯಲ್ಲಿ ಇದೆ. ಆದರೆ, ಎಲ್ಲಾ ಇಲಾಖೆಗಳಲ್ಲೂ ಇದನ್ನು ಜಾರಿಗೆ ತಂದಿದ್ದರೆ ಸಂತೋಷವಾಗುತ್ತದೆ. ಕೇವಲ ಶಿಕ್ಷಕರಿಗೆ ಮಾತ್ರ ಇದು ಆಗಬಾರದು. ಒಂದುವೇಳೆ ಸರ್ಕಾರದಿಂದ, ಮಂತ್ರಿಗಳಿಂದ ಪತ್ರಗಳು ಬಂದು ಅವರಿಗೆ ವರ್ಗಾವಣೆಯಾಗುವಂಥಾದ್ದು. ಶಾಸಕರು ಪತ್ರವನ್ನು ಬರೆದಿದ್ದರೆ, ಅಂತಹ ಶಿಕ್ಷಕರಿಗೆ ನೋಟೀಸನ್ನು ಕೊಡುವುದು, ಇದು ಆಗಬಾರದು. ಎಲ್ಲರಿಗೂ ಒಂದೇ ಕಾನೂನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಮೀನುಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯಸಚಿವರು ಇದ್ದಿದ್ದರೆ ಚೆನ್ನಾಗಿತ್ತು. ನಾನು ಬಹಳಷ್ಟು ಅವರ ಹೇಳಿಕೆಗಳನ್ನು ಮತ್ತು ಸದನದಲ್ಲಿ ಅವರು ಕೊಟ್ಟಿರುವ ಉತ್ತರಗಳನ್ನು ನೋಡಿದ್ದೇನೆ. ಬಹಳ ಬುದ್ಧಿವಂತಿಕೆಯಿಂದ ಅವರು ಹೇಳಿಕೆಯನ್ನು ಮತ್ತು ಉತ್ತರವನ್ನು ಕೊಡುತ್ತಿದ್ದಾರೆ. ಸಮುದ್ರ ತಡೆಗೋಡೆಗೆ ಸರ್ಕಾರ 50 ಕೋಟಿ ರೂಪಾಯಿ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಿದೆ. ಆಮೇಲೆ ಹೊಸ ನೀತಿಯನ್ನು ಜಾರಿಗೆ ತರುತ್ತದೆ, 500 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಬೇರೆ ಕಾರ್ಯಕ್ರಮಕ್ಕಾಗಿ ಕಳುಹಿಸಿದೆ ಎಂದು ಹೇಳಿದ್ದಾರೆ. ಅಂದರೆ, ತಾವು ಕೊಟ್ಟಿದ್ದು ಎಷ್ಟು ಎಂದು ಹೇಳುವುದಿಲ್ಲ. ಕೇವಲ ರಾಜ್ಯಸರ್ಕಾರದಿಂದ ಪ್ರಸ್ತಾವನೆ ಮಾತ್ರ ಹೋಗಿದೆಯಂತೆ. ಅವರು ಹೇಳಿದ ಪ್ರಕಾರ ಒಂದು ಸಾವಿರ ಕೋಟಿ ಪ್ರಸ್ತಾವನೆ ಹೋಗಿದೆಯೆಂದು ಇಟ್ಟುಕೊಳ್ಳಿ. ಅದರಿಂದ ಎಷ್ಟು ಬರುತ್ತದೆ ಎಂಬ ಉತ್ತರವನ್ನು ಅವರು ಹೇಳಬೇಕಾಗುತ್ತದೆ. ನಮಗೆ ಗೊತ್ತಿದೆ, ಸರ್ಕಾರದ ಪರಿಸ್ಥಿತಿ ಏನಿದೆ, ಮೀನುಗಾರಿಕೆ ಇಲಾಖೆಯ ಅನುದಾನ 22 ಕೋಟಿ ರೂ ಮಾತ್ರ ಅದರಲ್ಲಿಯೂ ಕೊನೇ ಭಾಗದಲ್ಲಿ ಕಡಿತ ಆಗುತ್ತದೆ. ಅವರು ಕೇವಲ ಹೇಳಿಕೆಯನ್ನು ಕೊಡುತ್ತಾ ಹೋದಾಗ, ನಮ್ಮನ್ನು ಈ ಜನ ಕೇಳುತ್ತಾರೆ. ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. 50 ಕೋಟಿ ರೂ ಸಮುದ್ರ ತಡೆಗೋಡೆಗೆ ಕೊಟ್ಟಿದ್ದಾರೆ, 100 ಕೋಟಿ ರೂ ಕೊಟ್ಟಿದ್ದಾರೆ. ಡೀಸೆಲ್‌ನ ಸೇಲ್ಸ್ ಟ್ಯಾಕ್ಸ್ ವಿನಾಯಿತಿ ಬಗ್ಗೆ ಮೊನ್ನೆ ನಾವು ಚರ್ಚೆಯನ್ನು ಮಾಡಿದ್ದೆವು. ಮೇಲ್ಮನೆಯಲ್ಲಿ ಉತ್ತರವನ್ನು ಕೊಟ್ಟರು. ಡೀಸೆಲ್ ಸೇಲ್ಸ್ ಟ್ಯಾಕ್ಸ್ ವಿನಾಯಿತಿಯನ್ನು 10 ಸಾವಿರ ಕಿಲೋಲೀಟರ್‌ಗೆ ಕೊಡುತ್ತೇನೆಂದು ಹೇಳಿದರು. ಅದು ಇವತ್ತಿಗೂ ಜಾರಿಗೆ ಬರಲಿಲ್ಲ. ಅಲ್ಲಿ ಜನ, ಅದನ್ನು ನಂಬಿಕೊಂಡು ಮೀನುಗಾರಿಕರಿಗೆ ಹೋದರು. ಅವರು ಇವತ್ತು ಬಹಳ ಕಷ್ಟ ಅನುಭವಿಸುತ್ತಾ ಇದ್ದಾರೆ. ಅದಕ್ಕೋಸ್ಕರ ಹೇಳಿಕೆಯನ್ನು ಕಡಿಮೆ ಕೊಟ್ಟು, ಕೆಲಸ [illegible]

ಹೇಳಿಕೆಯನ್ನು ಕೊಟ್ಟರೆ ಅದನ್ನು ಒಪ್ಪಬಹುದು ಮತ್ತು ಅದು ಒಳ್ಳೆಯದು ಎಂದು ಹೇಳುತ್ತೇನೆ. ಇನ್ನು ಹೆಚ್ಚಿನ ವಿಷಯಗಳನ್ನು ಬಜೆಟ್‌ನಲ್ಲಿ ಮಾತನಾಡುವಾಗ, ಮೀನುಗಾರಿಕಾ ಸಚಿವರು ಇದ್ದಾಗಲೇ ಹೇಳುತ್ತೇನೆಂದು ಹೇಳುತ್ತಾ, ಈ ಅವಕಾಶವನ್ನು ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸುತ್ತಾ, ಈ ರಾಜ್ಯಪಾಲರ ಭಾಷಣದಲ್ಲಿ ಕೇವಲ ಆಶ್ವಾಸನೆ ಕುರುಳಿಲ್ಲದ ಭಾಷಣ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

6.40 ಪಿ.ಎಂ

ಉಪಾಧ್ಯಕ್ಷರು:- ಈಗ unparliamentary pressions ಬಗ್ಗೆ ಹಿಂದೆ ಕೊಟ್ಟಂತಹ ಒಂದು ರೂಲಿಂಗ್‌ಅನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ Prostitution: Prostitution or Vyabhichara unparliamentary if it is used with bad motives. On 7th October 1963 while speaking on motion of no confidence, the member Sri V M Deo has said Vyabhichara or prostitution is seen in all the activities, the Hon. Speaker observed, if an hon. member says that prostitution has increased there is nothing unparliamentary. But if that word is used with a bad motive it is unparliamentary.

Sri K. Srinivasa Gowda Kuduvanahalli:- Whatever you said I have not used that word with that motive.

ಉಪಾಧ್ಯಕ್ಷರು:- ಯಾಕೆ ಬಂತು ಆ ವಿಷಯ ಅಂದರೆ ಈ ತರಹ online lottery ಮಾಡುವುದಕ್ಕಿಂತ ವ್ಯಭಿಚಾರ ಮಾಡುವುದು ಲೇಸು ಎಂಬ ಅರ್ಥದಲ್ಲಿ ವ್ಯಂಗ್ಯವಾಗಿ ಮಾತನಾಡಿದ ಧಾಟಿ ಇತ್ತು. ಅದಕ್ಕೋಸ್ಕರ unparliamentary ಎಂಬ ಪದವನ್ನು...

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ):- ನಾನು ಹೇಳಿದ್ದು online lottery ಯನ್ನು ನೀವು recretation ಎಂಬ ಅರ್ಥದಲ್ಲಿ ಉಳಿಸಿಕೊಳ್ಳುವುದಾದರೆ ಇದೂ recretion ಅಲ್ಲವಾ ಎಂದು ನಾನು ಹೇಳಿದ್ದು ಅದನ್ನು unparliamentary world ಎಂದು ಹೇಳಿಬಿಟ್ಟರೆ.........

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಉಪಾಧ್ಯಕ್ಷರೇ, ನನು ನಿಮ್ಮ ತೀರ್ಮಾನವನ್ನು ಪ್ರಶ್ನೆ ಮಡುತ್ತಾ ಇಲ್ಲ. ಅದು ಅಂತಿಮವಾದುದು, ನೀವು ಮಾಡಬಹುದು. ಆದರೆ ವೇಶ್ಯಾವಾಟಿಕೆ ಎಂಬ ಪದ ಏನಿದೆ ಅದು unparliamentary ಅಲ್ಲ

ಉಪಾಧ್ಯಕ್ಷರು:- ಇದು ನಾನು ಹೇಳಿದ್ದಲ್ಲ. ಹಿಂದೆ observation ಮಾಡಿದ್ದನ್ನು ಓದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ತಾವು ಆಲಿಸಬೇಕು. ಈಗ ಅಲ್ಲಿ ಹೇಳಿರುವ ಉದಾಹರಣೆ ಏನಿದೆ ಅದಕ್ಕೆ interpretation ಎರಡೂ ರೀತಿಯಲ್ಲಿ ಕೊಡಬಹುದು. ನಮ್ಮ ಅಭಿಪ್ರಾಯದಲ್ಲಿ ಏಕೆಂದರೆ ನಾವು ಹೋಗಿ ನೋಡಿರುವವರು coffee shop ಗಳನ್ನು ಬ್ಯಾಂಕಾಕ್ ನಲ್ಲಿ ತಾವು ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ, ಬ್ಯಾಂಕಾಕಿಗೆ ನಾನು ಹೋಗಿದ್ದ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ಇವತ್ತು ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿಗಳಾಗಿರುವ ಬಿಎಸ್ ಪಾಟೀಲರು ನನ್ನ ಜೊತೆ ಬಂದಿದ್ದರು. It was a governmental delegation for which I was also a member among the 17 members ನಾವು Asian Development Bank ನಿಂದ

ಸಾಲ ತರಲು ಒಂದು ಸೈನ್ ಮಾಡಬೇಕೆಂದು ಹೋಗಿದ್ದ ಸಂದರ್ಭ ಅದು. ಆಗ ಬ್ಯಾಂಕಾಕಿನಲ್ಲಿ ಎಲ್ಲಾ ಕಡೆಗೂ coffee shop ಎಂದು ಬೋರ್ಡ್ ಹಾಕಿದ್ದರು ಇದೇನು coffee shop ಎಂದು ಕಾಫಿ ಕುಡಿಯೋಣವೆಂದು ಕಾರ್ಯದರ್ಶಿಗಳಾಗಿದ್ದ ಬಿ ಎಸ್. ಪಾಟೀಲರನ್ನು ನಡೆಯಪ್ಪ ಎಂದು ನಾನು ಕರೆದುಕೊಂಡು ಹೋದರೆ ಆ coffee shop ಗಳಲ್ಲಿ mini stadium ಗಳಿವೆ ರೋಷನ್ ಬೇಗ್ ಬಹುಶಃ ನೋಡಿರಬಹುದು. mini stadium ಅಂದರೆ it is closed, A.C. ಹೆಣ್ಣುಮಕ್ಕಳು ಎಲ್ಲ ಒಂದೊಂದು ನಂಬರ್ ಹಾಕಿಕೊಂಡು ಕುಳಿತುಕೊಂಡಿರುತ್ತಾರೆ. ಅವರ ನಂಬರನ್ನು ಪ್ರೆಸ್ ಮಾಡಿದರೆ computer ನಲ್ಲಿ ಅವರ ವಯಸ್ಸು doctor certificate ಮತ್ತೊಂದು ಎಲ್ಲವೂಸೈತ ಇದೆ. ಇದರ ಬಗ್ಗೆ ಅಲ್ಲಿನ ಸರ್ಕಾರದವರನ್ನು ನಾವು ಯಾಕೆ ಇದೆಲ್ಲಾ ಮಾಡುತ್ತೀರಾ ಎಂದು ಕೇಳಿದಾಗ it is a resource mobilization for us ಎಂದು ಹೇಳಿದರು. ಇದು ನನ್ನ interpretation.

ಉಪಾಧ್ಯಕ್ಷರು: ಅದನ್ನೆ ಈಗ parliamentary - unparliamentary ಎಂದು ಮಾತನಾಡುತ್ತಿದ್ದೇವಲ್ಲಾ ಅದಕ್ಕೋಸ್ಕರ ಅದನ್ನು ಈ ವಿಚಾರದಲ್ಲಿ ತೆಗೆದುಕೊಂಡರೆ ಅದು unparliamentary ಆಗುತ್ತದೆ ಎಂಬುದನ್ನು ನಿಮಗೆ ಸ್ಪಷ್ಟಪಡಿಸಿದೆ ಅಷ್ಟೇ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುಬನಹಳ್ಳಿ):- ನಿಮ್ಮ ನಿರ್ಣಯಕ್ಕೆ ನಾವು ತಲೆಬಗ್ಗಿಸುತ್ತೇವೆ, ಆದರೆ ಪುನರ್‌ಪರಿಶೀಲಿಸಿ, ನಾನು ಮಾತನಾಡಿದ ರೀತಿಯೇ ಬೇರೆ, ಸಿಂಧ್ಯಾ ಅವರು ಹೇಳಿದಂತೆ ಬೇರೆ ದೇಶಗಳಲ್ಲಿ ಅದೊಂದು industry ಆಗಿದೆ. ನಮ್ಮ ದೇಶದಲ್ಲಿ ಲೈಸೆನ್ಸ್ ಕೊಡುತ್ತಾರೆ. ಹೀಗಾಗಿ ನಾನು ಹೇಳಿದ ಅರ್ಥವೇ ಬೇರೆ. ಆದ್ದರಿಂದ ದಯಮಾಡಿ ಪುನರ್‌ಪರಿಶೀಲಿಸಿ.

ಉಪಾಧ್ಯಕ್ಷರು: ಇಂದಿನ ಸಭೆ ಮುಕ್ತಾಯಗೊಂಡು ನಾಳೆ ಬೆಳಿಗ್ಗೆ ಪುನಃ ಹನ್ನೊಂದು ಗಂಟೆಗೆ ಸೇರಲಿದೆ.

(ಸದನವು ಸಂಜೆ 6 ಗಂಟೆ 44 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 19.3.2003ರಂದು ಬೆಳಿಗ್ಗೆ 11.00 ಕ್ಕೆ ಸೇರಲು ನಿರ್ಧರಿಸಿತು.)

ಸೂಳ್ಯ ನಗರದಲ್ಲಿ ಒಳಚರಂಡಿ ಯೋಜನೆ

1292 (1728) ಶ್ರೀ ಅಂಗಾರ.ಎಸ್. (ಸೂಳ್ಯ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ನಗರದಲ್ಲಿ ಕೊಳಚೆ ನೀರು ಹರಿದು ಹೋಗಲು ಅವಕಾಶ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸುಳ್ಯಕ್ಕೆ ಈಗಾಗಲೇ ಒಳಚರಂಡಿ ಯೋಜನೆ ಮಂಜೂರಾಗಿದೆಯೇ; ಯೋಜನೆಯ ಅಂದಾಜು ವೆಚ್ಚ ಎಷ್ಟು; ಯೋಜನೆಯ ಕಾಮಗಾರಿ ಎಂದು ಪ್ರಾರಂಭಿಸಲಾಗುವುದು? (ವಿವರ ನೀಡುವುದು?)

ಇ) ಸದರಿ ಯೋಜನೆ ಕಾರ್ಯಗತ ಮಾಡಲು ಸ್ಥಳವನ್ನು ಗುರುತಿಸಲಾಗಿದೆ? ಯಾವ ಸ್ಥಳವನ್ನು ಗುರುತಿಸಲಾಗಿದೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಬಂದಿದೆ

ಆ) ಮಂಜೂರಾಗಿದೆ. ಈ ಯೋಜನೆಯ ಅಂದಾಜು ವೆಚ್ಚ 287.07 ಲಕ್ಷಗಳು. ಈಗಾಗಲೇ ಈ ಕಾಮಗಾರಿಯ ಟೆಂಡರ್ ಕರೆದು, ಗುತ್ತಿಗೆದಾರರನ್ನು ನೇಮಿಸಲಾಗಿದೆ. ಕಾಮಗಾರಿಯನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.